prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಮಿತ್ ವಿದಾಯ

ಭಾರತ ತಂಡದ ಅನುಭವಿ ಲೆಗ್ ಸ್ಪಿನ್ನರ್ ಅಮಿತ್ ಮಿಶ್ರಾ ಅವರು ಗುರುವಾರ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದರು

ಶಿಕ್ಷಕರ ದಿನಾಚರಣೆಯ ಶುಭಾಶಯಗಳು

ಸೆನ್ಸೆಕ್ಸ್ 80,718 | ನಿಫ್ಟಿ 24,734 | $/₹ 88.12 | ಚಿನ್ನ (Std. 10g) ₹1,10,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,30,200 (ಬೆಂಗಳೂರು)

ಪ್ರತ್ಯೇಕ ಮತ ಪಟ್ಟಿ, ಬ್ಯಾಲಟ್ ಪೇಪರ್

- ಜಿಬಿಎ, ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆ ಚುನಾವಣೆ
- ಮತ ಕಳ್ಳತನದ ಆರೋಪದ ಬೆನ್ನಲ್ಲೇ, ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ವ್ಯಾಪ್ತಿಯಲ್ಲಿರುವ ನಗರ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬದಲು ಮತ ಪತ್ರ (ಬ್ಯಾಲಟ್ ಪೇಪರ್) ಬಳಕೆ ಹಾಗೂ ರಾಜ್ಯ ಚುನಾವಣಾ ಆಯೋಗದ ನೇತೃತ್ವದಲ್ಲಿ ಪ್ರತ್ಯೇಕ ಮತದಾರರ ಪಟ್ಟಿ ಸಿದ್ಧಪಡಿಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮುಂದಾಗಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಹಾಗೂ ಕೇಂದ್ರ ಚುನಾವಣಾ ಆಯೋಗದ ವಿರುದ್ಧ 'ಮತಕಳ್ಳತನ'ದ ಆರೋಪ ಹೊರಿಸಿರುವ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದೇಶವ್ಯಾಪಿ ಹೋರಾಟ ನಡೆಸುತ್ತಿದ್ದಾರೆ. ತಮ್ಮ ಪಕ್ಷದ ನೇತಾರನ ಮಹಾ ಸಮರಕ್ಕೆ ಬೆಂಬಲ ಸೂಚಿಸುವ ರೀತಿಯೊಳಗೆ, ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್, ಕೇಂದ್ರಕ್ಕೆ ಸಡ್ಡು ಹೊಡೆಯುವತ್ತ ಹೊಸ ಹೆಜ್ಜೆ ಇಟ್ಟಿದೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವೂ ಸೇರಿದಂತೆ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳಿಗೆ ಹೊಸ ಮತದಾರರ ಪಟ್ಟಿ ಸಿದ್ಧಪಡಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಲು ಸರ್ಕಾರ ತೀರ್ಮಾನಿಸಿದೆ ಎಂದರು.

ಈ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರ (ಇವಿಎಂ) ಬದಲಿಗೆ ಮತ ಪತ್ರ (ಬ್ಯಾಲಟ್ ಪೇಪರ್) ಬಳಸಿ ಮತ ಚಲಾಯಿಸುವ ವ್ಯವಸ್ಥೆಯನ್ನು ಜಾರಿ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಇವೆರಡೂ ವಿಷಯಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಲಾಗುವುದು. ಮತದಾರರ ಪಟ್ಟಿ ಪರಿಷ್ಕರಿಸಿ, ಹೊಸ ಪಟ್ಟಿ ತಯಾರಿಸಲು ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ಮಾಡಿ ಹೊಸ ನಿಯಮಾವಳಿಗಳನ್ನು ರೂಪಿಸಲಾಗುವುದು' ಎಂದರು.

▶7

ಶಾಲಾ ಶಿಕ್ಷಕರ ಬಡ್ತಿಗೆ ಅಸ್ತು

ಬೆಂಗಳೂರು: ಪದವಿ, ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣಪತ್ರ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ಬಾರಿ ವೇತನ ಬಡ್ತಿ ಹಾಗೂ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತರಲು ಗುರುವಾರ ನಡೆದ ಸಂಪುಟ ಸಭೆ ಸಮ್ಮತಿಸಿದೆ.

▶7

'ಕಾಂಗ್ರೆಸ್ ಭವನ'ಕ್ಕೆ ನಿವೇಶನ ಪ್ರಸ್ತಾವಕ್ಕೆ ಅಸ್ತು

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಕೊಪ್ಪಳ ಜಿಲ್ಲೆಯ ಕೊಪ್ಪಳ ಗ್ರಾಮದಲ್ಲಿ 'ಕಾಂಗ್ರೆಸ್' ಭವನ ನಿರ್ಮಿಸಲು ನಾಗರಿಕ ಸೌಲಭ್ಯದ ನಿವೇಶನವನ್ನು ಬೆಂಗಳೂರಿನ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರು ಮಾಡುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಬಾದಾಮಿ ನಗರ ಯೋಜನಾ ಪ್ರಾಧಿಕಾರದ 613 ಚದರ ಮೀಟರ್ ಜಾಗ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ (ಕೊಪ್ಪಳ ಗ್ರಾಮ) 3,749.85 ಚದರ ಮೀಟರ್ ಜಾಗ, ಪುತ್ತೂರು ತಾಲ್ಲೂಕಿನ ಪುತ್ತೂರು ಕಸಬಾ ಗ್ರಾಮದಲ್ಲಿ ಎಂಟು ಸೆಂಟ್ಸ್ ಜಾಗವನ್ನು ಹಂಚಿಕೆ ಮಾಡುವ ಪ್ರಸ್ತಾವಕ್ಕೆ ಸಭೆಯು ಒಪ್ಪಿಗೆ ನೀಡಿದೆ.

ಮುಡಾ ಪ್ರಕರಣ: ಸಿ.ಎಂಗೆ ಕ್ಲೀನ್ ಚಿಟ್

'ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದವರ ತಪ್ಪು ಇಲ್ಲ ಎಂದು ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕ ಸದಸ್ಯ ಆಯೋಗ ನೀಡಿರುವ ವರದಿಯನ್ನು ಸಂಪುಟ ಒಪ್ಪಿಕೊಂಡಿದೆ' ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

'ಈ ವರದಿಯಲ್ಲಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬದವರ ಮೇಲೆ ಯಾವುದೇ ಆರೋಪಗಳಿಲ್ಲ. ಅವರಿಗೆ ಕ್ಲೀನ್ ಚಿಟ್ ಸಿಕ್ಕಿದೆ. ಅಧಿಕಾರಿಗಳಿಂದ ಲೋಪಗಳು ಆಗಿರುವುದನ್ನು ವರದಿ ಬೊಟ್ಟು ಮಾಡಿದ್ದು, ಅದಕ್ಕೆ ಕ್ರಮ ತೆಗೆದುಕೊಳ್ಳಲು ಶಿಫಾರಸು ನೀಡಿದೆ. ಇದಕ್ಕೆ ಸಂಪುಟ ಒಪ್ಪಿಗೆ ನೀಡಿದೆ' ಎಂದರು.

ವರದಿಯ ಮುಖ್ಯ ಅಂಶಗಳು

- ಕೇರ್ಗಳ್ಳಿ ಗ್ರಾಮದ ಸ.ನಂ 115/22 ಮತ್ತು 115/42 ಜಮೀನಿಗೆ ಸಂಬಂಧಿಸಿದಂತೆ ಡಿನೋಟಿಫೈ ಮಾಡಲಾಗಿದ್ದರೂ ಮುಡಾದಿಂದ ಬಳಸಿಕೊಳ್ಳಲಾದ ಜಮೀನುಗಳ ಮಾಲೀಕರಿಗೆ ಪರಿಹಾರವಾಗಿ ನಿವೇಶನ ಹಂಚಿಕೆ ಮತ್ತು ಕೆಸರೆ ಗ್ರಾಮದ ಸ.ನಂ 464ರ ಜಮೀನಿನ ವಿಷಯದಲ್ಲಿ ಅಕ್ರಮ ಆಗಿದೆ ಎಂದು ಹೇಳಲು ಆಗುವುದಿಲ್ಲ
- ಡಿನೋಟಿಫೈ ಆದ ಜಮೀನುಗಳನ್ನು ಬಳಸಿಕೊಂಡ ಸಂದರ್ಭದಲ್ಲಿ ನಿವೇಶನ ರೂಪದಲ್ಲಿ ಪರಿಹಾರ ಪಾವತಿಗಾಗಿ ಮುಡಾ ಅನುಸರಿಸಿದ ವಿಧಾನಗಳನ್ನು ಕಾನೂನುಬಾಹಿರ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಡಿನೋಟಿಫೈ ಆದ ಜಮೀನುಗಳ ಮೇಲೆ ಮುಡಾಕ್ಕೆ ಯಾವುದೇ ಹಕ್ಕು ಮತ್ತು ಕಾನೂನುಬದ್ಧ ಸ್ವಾಧೀನವಿರುವುದಿಲ್ಲ
- ಮುಡಾ ಅಧಿಕಾರಿಗಳು ಸ್ವಾಧೀನಪಡಿಸಿಕೊಳ್ಳದ ಭೂಮಿಯನ್ನು ಬಳಸುವಾಗ ಮಾಡಿದ ವಿನ್ಯಾಸಗಳು ಮತ್ತು ಸೈಟ್ ರಚನೆಯಲ್ಲಿ ಹಾಗೂ ಡಿನೋಟಿಫೈ ಮಾಡದ ಭೂಮಿಯನ್ನು ಬಳಸುವಾಗ ಮಾಡಿದ ಅಕ್ರಮಗಳಿಂದಾಗಿ ಮುಡಾ ಆರ್ಥಿಕ ನಷ್ಟ ಅನುಭವಿಸಿದೆ. ಆದ್ದರಿಂದ, ಕಾನೂನಿನ ಪ್ರಕಾರ ಕ್ರಮಕೈಗೊಳ್ಳುವುದರ ಜತೆಗೆ ಅಂತಹ ಅಕ್ರಮಗಳಿಗೆ ಕಾರಣರಾದ ಸಂಬಂಧಿತ ಅವಧಿಯಲ್ಲಿ ಕೆಲಸ ಮಾಡಿರುವ ಅಧಿಕಾರಿಗಳಿಂದ ಆರ್ಥಿಕ ನಷ್ಟ ವಸೂಲಿ ಮಾಡಬೇಕು
- ಬಡಾವಣೆಗಳ ರಚನೆಗೆ ಸಂಬಂಧಿಸಿದಂತೆ ಎಂಜಿನಿಯರಿಂಗ್ ವಿಭಾಗದಿಂದ ಯಾವುದೇ ಮೇಲ್ವಿಚಾರಣೆ ಅಥವಾ ನಿಗಾವಹಿಸಿಲ್ಲ. ಇದು ಸ್ವಾಧೀನಪಡಿಸಿಕೊಳ್ಳದೆ ಬಡಾವಣೆ ರಚನೆಗೆ ಜಮೀನು ಬಳಸಿಕೊಳ್ಳಲು ಕಾರಣವಾಗಿದೆ. ರಸ್ತೆಗಳ ರಚನೆಗಾಗಿ ಸ್ವಾಧೀನಪಡಿಸಿಕೊಳ್ಳದೆ ಜಮೀನನ್ನು ಬಳಸಿಕೊಳ್ಳುವ ವಿಚಾರದಲ್ಲೂ ಮುಡಾದ ಸಂಬಂಧಪಟ್ಟ ವಿಭಾಗಗಳಿಂದ ಮೇಲ್ವಿಚಾರಣೆ ಕೊರತೆ ಎದ್ದುಕಾಣುತ್ತದೆ. ಇದು ಮೂರರಿಂದ ನಾಲ್ಕು ದಶಕಗಳ ನಂತರ ಪರಿಹಾರ ಪಾವತಿಗೆ ಕಾರಣವಾಗಿದ್ದು, ಮುಡಾಗೆ ಭಾರಿ ಆರ್ಥಿಕ ನಷ್ಟ ಉಂಟು ಮಾಡಿದೆ

ಗ್ರಾಹಕರಿಗೆ ನೇರವಾಗಿ ಸಾಲ ಪರವಾನಗಿ ಪಡೆದ ಅಮೆಜಾನ್

▶10

₹12 ಲಕ್ಷ ಕೋಟಿ ಹೂಡಿಕೆ ಪ್ರಸ್ತಾವ ಸ್ವೀಕರಿಸಿದ ರಾಜ್ಯ

▶10

ಸಿಹಿ ತಿಂಡಿ ಜತೆ ಮಿಕ್ಸ್ಚರ್ ಸಹ ಅಸುರಕ್ಷಿತ

ಆಹಾರ ಸುರಕ್ಷತೆ ಇಲಾಖೆ ನಡೆಸಿದ ವಿಶ್ಲೇಷಣೆಯಲ್ಲಿ ಕೃತಕ ಬಣ್ಣ ಬಳಕೆ ದೃಢ

• ವರುಣ ಹೆಗಡೆ

ಬೆಂಗಳೂರು: ಮೈಸೂರು ಪಾಕ್‌ನಂತಹ ಸಿಹಿ ತಿಂಡಿಗಳ ಜತೆಗೆ, ಮಿಕ್ಸ್ಚರ್‌ನಂತಹ ಖಾರದ ತಿನಿಸುಗಳಿಗೂ ಕೃತಕ ಬಣ್ಣ ಬಳಕೆ ಮಾಡುತ್ತಿರುವುದು ಆಹಾರ ಸುರಕ್ಷತೆ ಇಲಾಖೆ ನಡೆಸಿದ ವಿಶ್ಲೇಷಣೆಯಿಂದ ದೃಢಪಟ್ಟಿದೆ.

ವಿವಿಧ ತಿನಿಸುಗಳು ಮತ್ತು ಆಹಾರ ಪದಾರ್ಥಗಳಲ್ಲಿ ಅಸುರಕ್ಷಿತ ಹಾಗೂ ನಿಷೇಧಿತ ಕೃತಕ ಬಣ್ಣಗಳ ಬಳಕೆ ಪತ್ತೆಗೆ ಸಂಬಂಧಿಸಿದಂತೆ ಇಲಾಖೆ ವಿಶೇಷ ಅಭಿಯಾನ ನಡೆಸುತ್ತಿದೆ. 2024–25 ಹಾಗೂ 2025–26ನೇ ಸಾಲಿಗೆ 19 ಅಭಿಯಾನಗಳನ್ನು ಇಲಾಖೆ ನಡೆಸಿ, ವಿವಿಧ ಆಹಾರ ತಿನಿಸುಗಳ ಸಾವಿರಾರು ಮಾದರಿಗಳನ್ನು ಸಂಗ್ರಹಿಸಿದೆ. ಈ ಮಾದರಿಗಳನ್ನು ಇಲಾಖೆಯ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಿ, ಅಸುರಕ್ಷಿತ ಮಾದರಿಗಳನ್ನು ಪತ್ತೆ ಮಾಡಲಾಗಿದೆ. ಸಿಹಿ ತಿಂಡಿಗಳಲ್ಲಿಯೇ ಹೆಚ್ಚಾಗಿ ಕೃತಕ ಬಣ್ಣ ಬಳಕೆ ಮಾಡಿರುವುದು ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಟ್ಟಿದೆ.

▶10

ಆಹಾರ ಹಾಗೂ ಪಾನೀಯಗಳು ಸುರಕ್ಷಿತವಾಗಿರಬೇಕು. ಈ ದಿಸೆಯಲ್ಲಿ ಸರ್ಕಾರ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಸತತವಾಗಿ ಆಹಾರ ಪದಾರ್ಥಗಳ ಪರೀಕ್ಷೆ ನಡೆಸಲಾಗುತ್ತಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ವ್ಯಾಪಾರಿಗಳಿಗೆ ತರಬೇತಿ

ಕೃತಕ ಬಣ್ಣಗಳನ್ನು ಬಳಸದಂತೆ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಬಗ್ಗೆ ಅರಿವು ಮೂಡಿಸಲು ಬೀದಿ ಬದಿ ವ್ಯಾಪಾರಿಗಳಿಗೆ ಇಲಾಖೆಯು ತರಬೇತಿ ನೀಡುತ್ತಿದೆ. ಆಹಾರ ಉದ್ದಿಮೆ ಸಂಸ್ಥೆಗಳ ಸಹಯೋಗದಲ್ಲಿ 2024–25ನೇ ಸಾಲಿನಲ್ಲಿ ಸಾವಿರ ಬೀದಿ ಬದಿ ವ್ಯಾಪಾರಿಗಳಿಗೆ ಆಹಾರ ಸುರಕ್ಷತೆ ಬಗ್ಗೆ ತರಬೇತಿ ನೀಡಲಾಗಿದೆ. 2024–25 ಹಾಗೂ 2025–26ನೇ ಸಾಲಿನಲ್ಲಿ ಈವರೆಗೆ 13,585 ಸಣ್ಣ ಉದ್ದಿಮೆದಾರರು ಮತ್ತು 7,506 ಹೋಟೆಲ್ ಉದ್ದಿಮೆದಾರರು ಈ ತರಬೇತಿ ಪಡೆದುಕೊಂಡಿದ್ದಾರೆ.

ಸಿ.ಎಂ ಚಾಲನೆ

ರಾಜ್ಯದಲ್ಲಿ ಸೆ. 15ರಿಂದ ಒಟ್ಟು 45 ಕೆಲಸದ ದಿನ, ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಮತ್ತು 15 ಜಿಲ್ಲೆಗಳಲ್ಲಿ ಮಾಜಿ ದೇವದಾಸಿಯರ ಮರು ಸಮೀಕ್ಷೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು.

▶5

ಅಫ್ಗಾನಿಸ್ತಾನ ಭೂಕಂಪ: ಸಾವಿನ ಸಂಖ್ಯೆ 2,205 ಏರಿಕೆ

ಜಲಾಲಾಬಾದ್ (ಎಪಿ): ಕಳೆದ ವಾರ ಅಫ್ಗಾನಿಸ್ತಾನದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಿಂದ ನಾಶವಾದ ಮನೆಗಳ ಅವಶೇಷಗಳ ಅಡಿಯಲ್ಲಿ ನೂರಾರು ಶವಗಳು ಪತ್ತೆಯಾಗಿವೆ. ಸಾವಿನ ಸಂಖ್ಯೆ 2,200ಕ್ಕೂ ಹೆಚ್ಚಾಗಿದೆ ಎಂದು ತಾಲಿಬಾನ್ ಸರ್ಕಾರ ಗುರುವಾರ ತಿಳಿಸಿದೆ.

ಸಾವಿನ ಸಂಖ್ಯೆಯನ್ನು ತಿಳಿಸಿದ ತಾಲಿಬಾನ್ ವಕ್ತಾರ ಹಮ್ದುಲ್ಲಾ ಫಿತ್ರತ್ ಅವರು, 'ಭೂಕಂಪದಿಂದ ಕುನಾರ್‌ನಲ್ಲಿ ಹೆಚ್ಚು ಸಾವು–ನೋವುಗಳು ಸಂಭವಿಸಿವೆ. ರಕ್ಷಣಾ ಮತ್ತು ಶೋಧ ಕಾರ್ಯಾಚರಣೆ ಮುಂದುವರಿದಿದೆ. ಜನರಿಗಾಗಿ ಡೇರೆಗಳನ್ನು ನಿರ್ಮಿಸಲಾಗಿದ್ದು, ಅಗತ್ಯ ಸಾಮಗ್ರಿಗಳ ವಿತರಣೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಆಗಸ್ಟ್ 31ರ ರಾತ್ರಿ ಅಫ್ಗಾನಿಸ್ತಾನದ ಕೆಲವು ಪ್ರಾಂತ್ಯಗಳಲ್ಲಿ ರಿಕ್ಟರ್ ಮಾಪಕದಲ್ಲಿ 6.0 ತೀವ್ರತೆಯ ಭೂಕಂಪ ಸಂಭವಿಸಿತ್ತು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಪ್ರಮಾಣದಲ್ಲಿ ಮಳೆ ಆಗಲಿದೆ.

'ವೆಂಕಟಪ್ಪ, ಹೆಬ್ಬಾರ್ ಕಲಾಕೃತಿ ಸಂರಕ್ಷಿಸಿ'

ಬೆಂಗಳೂರು: 'ವೆಂಕಟಪ್ಪ ಚಿತ್ರಶಾಲೆಯಲ್ಲಿರುವ ಕೆ. ವೆಂಕಟಪ್ಪ ಹಾಗೂ ಕೆ.ಕೆ. ಹೆಬ್ಬಾರ್ ಅವರ ಕಲಾಕೃತಿಗಳನ್ನು ಸಂರಕ್ಷಿಸುವ ಕಲಸ ತ್ವರಿತವಾಗಿ ನಡೆಯಬೇಕು' ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಅವರು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಆಗ್ರಹಿಸಿದ್ದಾರೆ.

'ವೆಂಕಟಪ್ಪ ಮತ್ತು ಹೆಬ್ಬಾರ್ ಅವರ ಕಲಾಕೃತಿಗಳು ರಾಷ್ಟ್ರದ ಹಾಗೂ ನಾಡಿನ ಕಲಾವಲಯದ ಆಸ್ತಿಯಾಗಿದೆ. ಅವರ ಅಪರೂಪದ ಕಲಾಕೃತಿಗಳು ಶಿಲೀಂಧ್ರದಿಂದ ಹಾಳಾಗುತ್ತಿರುವುದು ನೋವನ್ನುಂಟು ಮಾಡಿದೆ. ಗ್ಯಾಲರಿಯಲ್ಲಿರುವ ಕಲಾಕೃತಿಗಳ ಬಗ್ಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಎಚ್ಚರ ವಹಿಸಬೇಕು' ಎಂದು ಹೇಳಿದ್ದಾರೆ. 'ಕಲಾಕೃತಿಗಳನ್ನು ಸಂಬಂಧ ಪಟ್ಟವರು ಪ್ರತಿನಿತ್ಯ ಗಮನಿಸುತ್ತಿಲ್ಲವೆ ಎಂಬ ಪ್ರಶ್ನೆ ಎದುರಾಗಿದೆ. ಶಿಲೀಂಧ್ರಕ್ಕೆ ಒಳಗಾಗಿರುವ ಕಲಾಕೃತಿಗಳಲ್ಲದೆ, ಇತರ ಕಲಾಕೃತಿಗಳನ್ನೂ ರಕ್ಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಪ.ಸ.ಕುಮಾರ್

ಅಲೆಮಾರಿಗಳಿಗೆ ಪ್ರತ್ಯೇಕ ಒಳ ಮೀಸಲಾತಿ– ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಒಳ ಮೀಸಲಾತಿ ಕಲ್ಪಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಒಕ್ಕೂಟ ಮನವಿ ಸಲ್ಲಿಸಿದೆ.

ಒಕ್ಕೂಟದ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ರಾಜ್ಯ ಸಂಘಟನಾ ಸಂಚಾಲಕ ಇಂದೂಧರ ಹೊನ್ನಾಪುರ, ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ರಾಜ್ಯ ಸಂಯೋಜಕ ವಿ. ನಾಗರಾಜ್ ಅವರು ಈ ಮನವಿ ಸಲ್ಲಿಸಿದ್ದಾರೆ. 'ನಾಗಮೋಹನದಾಸ್ ಆಯೋಗದ ವರದಿ ಆಧರಿಸಿ, ಪರಿಶಿಷ್ಟ ಜಾತಿಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಿ ಒಳ ಮೀಸಲಾತಿ ಹಂಚಿಕೆ ಮಾಡಲಾಗಿದ್ದು, ಈ ವರ್ಗೀಕರಣದ ಪ್ರಕಾರ 'ಸಿ' ಗುಂಪಿ'ನಲ್ಲಿ ಅಲೆಮಾರಿ ಸಮುದಾಯಗಳನ್ನು ಸೇರಿಸಲಾಗಿದೆ. ಆದರೆ, ಅದೇ ಗುಂಪಿನಲ್ಲಿರುವ ಉಳಿದ ಸಮುದಾಯಗಳ ಜೊತೆ ಅಲೆಮಾರಿ ಸಮುದಾಯ ಪೈಪೋಟಿ ನಡೆಸಿ, ತಮ್ಮ ಮೀಸಲಾತಿ ಪಾಲು ಪಡೆದುಕೊಳ್ಳುವುದು ಅತ್ಯಂತ ಕಠಿಣ. ಹೀಗಾಗಿ, ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯ ಆಗದಂತೆ ಪರ್ಯಾಯ ಮಾರ್ಗಗಳನ್ನು ಸರ್ಕಾರ ಕಂಡುಕೊಳ್ಳಬೇಕು' ಎಂದು ಆಗ್ರಹಿಸಿದೆ.

'ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 15 ರಿಂದ ಶೇ 18ಕ್ಕೆ ಹೆಚ್ಚಿಸಬೇಕೆಂದು ಮಾಡಿದ್ದ ಶಿಫಾರಸನ್ನು ಜಾರಿಗೊಳಿಸಿ, ಆ ಹೆಚ್ಚುವರಿ ಶೇ 1 ಮೀಸಲಾತಿಯನ್ನು ಪರಿಶಿಷ್ಟ ಜಾತಿಯ ಸೂಕ್ಷ್ಮ, ಅತಿಸೂಕ್ಷ್ಮ ಮತ್ತು ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ನಿಗದಿಪಡಿಸಿ ಮೊದಲನೆ ಗುಂಪು ರಚಿಸಬೇಕು' ಎಂದು ಒತ್ತಾಯಿಸಿದೆ.

ಯಲಹಂಕದಲ್ಲಿ ಟೌನ್‌ಶಿಪ್

ಭೂಮಾಲೀಕರಿಗೆ 50:50ರ ಪರಿಹಾರ; ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದಲ್ಲಿ ₹2,930 ಕೋಟಿ ವೆಚ್ಚದ ಅತ್ಯಾಧುನಿಕ ಟೌನ್‌ಶಿಪ್ ನಿರ್ಮಾಣ ಸೇರಿ, ನಗರದಲ್ಲಿ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ.

ಯಲಹಂಕ ತಾಲ್ಲೂಕಿನ ವ್ಯಾಪ್ತಿಯ ಜಾಲ-1 ಹೋಬಳಿ, ಚಿಕ್ಕಜಾಲ, ಮೀನುಕುಂಟೆ ಗ್ರಾಮದಲ್ಲಿ ಈಗಾಗಲೇ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡಲಾಗುತ್ತದೆ. ಸದರಿ ಜಮೀನುಗಳ ಮಾಲೀಕರಿಗೆ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಜಮೀನು ನೀಡುವುದು ಮತ್ತು ಉಳಿಕೆ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡಲು ಕರ್ನಾಟಕ ಗೃಹ ಮಂಡಳಿ ಪ್ರಸ್ತಾವ ಸಲ್ಲಿಸಿತ್ತು.

ಉದ್ದೇಶಿತ ಟೌನ್‌ಶಿಪ್ ಪ್ರದೇಶದ ವ್ಯಾಪ್ತಿಯಲ್ಲಿ ರೈತರು 43 ಎಕರೆಯಷ್ಟು ಜಮೀನು ನೀಡಿದ್ದಾರೆ.

ವಸತಿ ಯೋಜನೆಗಳಿಗೆ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳ ಮಾಲೀಕರಿಗೆ 50:50ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಜಮೀನು ನೀಡಲು ಸಂಪುಟವು ಒಪ್ಪಿಗೆ ನೀಡಿದಂತಾಗಿದೆ.

₹2,930 ಕೋಟಿ ವೆಚ್ಚವನ್ನು ಗೃಹಮಂಡಳಿಯೇ ಭರಿಸಿ ಅಥವಾ ಖಾಸಗಿ ನಿರ್ಮಾಣ ಕಂಪನಿಗಳ ಜಂಟಿ ಸಹಭಾಗಿತ್ವದಲ್ಲಿ ಟೌನ್‌ಶಿಪ್ ಅಭಿವೃದ್ಧಿಪಡಿಸಲು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಭೂ-ಉಪಯೋಗ ಬದಲಾವಣೆಗೆ ಅನುಮೋದನೆ ಪಡೆಯಲು ಹಾಗೂ ಈ ವ್ಯವಹಾರಗಳಿಗೆ ಸಲಹಾಕಾರರನ್ನು ನೇಮಕ ಮಾಡಲು ಸಂಪುಟವು ಒಪ್ಪಿಗೆ ನೀಡಿದೆ.

ಪ್ರಮುಖ ಯೋಜನೆಗಳು

- ಮಡಿವಾಳ, ಕಾಡುಬೀಸನಹಳ್ಳಿ, ಕಾಡುಗೋಡಿ, ಕೋರಮಂಗಲ, ಬಸವಪುರ ಮತ್ತು ಬೆಳ್ಳಂದೂರು ಅಮಾನಿಕೆರೆ ವ್ಯಾಪ್ತಿಯಲ್ಲಿ ₹956.67 ಕೋಟಿ ವೆಚ್ಚದಲ್ಲಿ 6 ಕೊಳಚೆ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ
- ಜಲಮಂಡಳಿ ಕ್ರೆಸ್ಟ್ ಲೈನ್ ಜಲಸಂಗ್ರಹಾಗಾರ ಠಾಣೆಯಲ್ಲಿರುವ ಕಲ್ಲಿನ ಸಂಗ್ರಹಾಗಾರವನ್ನು ಕೆಡವಿ, ₹21.65 ಕೋಟಿ ವೆಚ್ಚದಲ್ಲಿ ಆರ್‌ಸಿಸಿ ಟ್ಯಾಂಕ್ ನಿರ್ಮಾಣ
- ಕೆಂಗೇರಿಯಲ್ಲಿರುವ ಕೊಳಚೆ ನೀರು ಸಂಸ್ಕರಣಾ ಘಟಕದ ಸಾಮರ್ಥ್ಯವನ್ನು 60 ಎಂಎಲ್‌ಡಿಯಿಂದ 80 ಎಂಎಲ್‌ಡಿಗೆ ಹೆಚ್ಚಿಸಲು ₹28.88 ಕೋಟಿ ವೆಚ್ಚದ ಕಾಮಗಾರಿಗೆ ಒಪ್ಪಿಗೆ
- ಒಟ್ಟು ₹722.72 ಕೋಟಿ ವೆಚ್ಚದಲ್ಲಿ, ದೊಡ್ಡಬೆಲೆ ಮತ್ತು ಮೈಲಸಂದ್ರದಲ್ಲಿ ತಲಾ 100 ಎಂಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕಗಳ ನಿರ್ಮಾಣ

ನೆಲಮಂಗಲಕ್ಕೆ ಸೋಲೂರು ಸೇರಿಸಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯನ್ನು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಈ ನಿರ್ಧಾರದಿಂದ ಹೋಬಳಿಯಲ್ಲಿ ಆರ್ಥಿಕ, ಶೈಕ್ಷಣಿಕ ಮತ್ತು ಕೈಗಾರಿಕಾ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಮೂರು ಕಡೆ ನೆಲಮಂಗಲ ತಾಲ್ಲೂಕಿನಿಂದ ಸುತ್ತುವರೆದಿರುವ ಸೋಲೂರು ಹೋಬಳಿಯನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸಬೇಕು ಎಂಬುದು ಸ್ಥಳೀಯರ ಮತ್ತು ಸ್ಥಳೀಯ ಜನಪ್ರತಿನಿಧಿಗಳ ಬಹುವರ್ಷಗಳ ಬೇಡಿಕೆಯಾಗಿತ್ತು. ನೆಲಮಂಗಲ ಶಾಸಕ ಎನ್.ಶ್ರೀನಿವಾಸ್ ಅವರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು. 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಲೂರು ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸುವ ವೇಳೆ, ಹೋಬಳಿಯನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸುವ ಪ್ರಸ್ತಾವವನ್ನು ಪರಿಗಣಿಸುತ್ತೇವೆ' ಎಂದಿದ್ದರು.

ಸೇವಾನಿರತ ಶಿಕ್ಷಕರಿಗೆ ಟಿಇಟಿ ಕಡ್ಡಾಯ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (ಟಿಇಟಿ) ಸೇವಾನಿರತ ಶಿಕ್ಷಕರಿಗೂ ಕಡ್ಡಾಯಗೊಳಿಸಿರುವ ಸುಪ್ರೀಂಕೋರ್ಟ್ ತೀರ್ಪಿಗೆ ರಾಜ್ಯದ ಹಲವು ಶಿಕ್ಷಣ ತಜ್ಞರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಯಾವುದೇ ನೀತಿ ಅಥವಾ ಕಾನೂನಿನಲ್ಲಿರುವ ಅಂಶವನ್ನು ಪೂರ್ವಾನ್ವಯ ಜಾರಿಗೊಳಿಸುವುದು ಸಂವಿಧಾನ ಮತ್ತು ಸಹಜ ನ್ಯಾಯ ತತ್ವಕ್ಕೆ ವಿರುದ್ಧವಾಗಿದೆ. 'ಯಾವುದೇ ಶಾಸನದ ಅನುಷ್ಠಾನವನ್ನು ಎಂದಿಗೂ ಕೆಟ್ಟದ್ದೆಂದು ನೋಡಬಾರದು' ಎಂಬ ಕೋರ್ಟ್ ಮಾತು ಒಪ್ಪಬಹುದಾದರೂ ಯಾವುದೇ ಕಾನೂನನ್ನು ಪೂರ್ವಾನ್ವಯಗೊಳಿಸುವುದೂ ಸಹ ನ್ಯಾಯ ಸಮ್ಮತವಲ್ಲ' ಎಂದು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯದ ಸಂಚಾಲಕ ವಿ.ಪಿ.ನಿರಂಜನಾರಾಧ್ಯ ಹೇಳಿದ್ದಾರೆ.

ಎನ್‌ಸಿಟಿಇ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಜಾರಿಗೊಳಿಸುವ ಮುನ್ನವೇ ಸೇವೆಗೆ ಸೇರಿರುವ ಮತ್ತು ಸೇವಾ ಜ್ಯೇಷ್ಠತೆ ಆಧಾರದಲ್ಲಿ ಪದೋನ್ನತಿ ಬಯಸುವ ಶಿಕ್ಷಕರಿಗೆ ಇದನ್ನು ಕಡ್ಡಾಯಗೊಳಿಸುವುದು ಅನ್ಯಾಯವಾಗುತ್ತದೆ. ಸೇವಾನಿರತ ಶಿಕ್ಷಕರ ನೈತಿಕತೆ ಮತ್ತು ಆತ್ಮಸ್ಥೈರ್ಯವನ್ನು ಕುಸಿಯುವಂತೆ ಮಾಡುತ್ತದೆ. ಕಲಿಕಾ ವ್ಯವಸ್ಥೆ ಮತ್ತು ಶಿಕ್ಷಣದ ಗುಣಮಟ್ಟದ ಮೇಲೂ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುತ್ತದೆ ಎಂದಿದ್ದಾರೆ.

'ಶಿಕ್ಷಕರ ಶೈಕ್ಷಣಿಕ ಅರ್ಹತೆ ಮತ್ತು ಅರ್ಹತಾ ಪರೀಕ್ಷೆಯನ್ನು ಸಮೀಕರಿಸಿ ನೋಡುವುದು ಸರಿಯಾದ ಕ್ರಮವಲ್ಲ. ತೀರ್ಪು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ತೊಡಕಾಗುತ್ತದೆ. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ದೇಶದ ಎಲ್ಲ ರಾಜ್ಯಗಳ ಸೇವಾನಿರತ ಶಿಕ್ಷರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಅಖಿಲ ಭಾರತ ಪ್ರಾಥಮಿಕ ಶಿಕ್ಷರರ ಒಕ್ಕೂಟದ ಅಧ್ಯಕ್ಷ ಬಸವರಾಜ ಗುರಿಕಾರ ಒತ್ತಾಯಿಸಿದ್ದಾರೆ.

ಮಿನಿ ಬಸ್ ಪಲ್ಟಿ

ದೊಡ್ಡಬಳ್ಳಾಪುರ: ದೊಡ್ಡಬಳ್ಳಾಪುರ- ಹೊಸಹಳ್ಳಿ ನಡುವಿನ ಗ್ರೀನ್ ವ್ಯಾಲಿ ಸಮೀಪ ಗುರುವಾರ ಸಂಜೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಖಾಸಗಿ ಕಾರ್ಖಾನೆಯ ಮಿನಿ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಪಲ್ಟಿ ಹೊಡೆದಿದೆ. ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

SANSERA
ideas@work

ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್

(CIN: L34103KA1981PLC004542)
ನೋಂದಾಯಿತ ವಿಳಾಸ: ಫಟಕ–7, ಸಂ. 143/ಎ, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು - 560105, ಭಾರತ
ಫೋನ್ ನಂ: +91 80-27839081/82/83; ಫ್ಯಾಕ್ಸ್ ಸಂ.: +91 80 27839309
ಇಮೇಲ್: rajesh.modi@sansera.in ವೆಬ್‌ಸೈಟ್: www.sansera.in

43ನೇ ವಾರ್ಷಿಕ ಮಹಾ ಸಭೆ, ಖಾತೆ ಮುಕ್ತಾಯ ಮತ್ತು ಇ–ಮತದಾನದ ಮಾಹಿತಿಯ ನೋಟಿಸ್

ಈ ಸೂಚನೆಯನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರ ನಿಬಂಧನೆಗಳಿಗೆ ಅನುಸಾರವಾಗಿ ಪ್ರಕಟಿಸಲಾಗಿದೆ.

(A) ವಾರ್ಷಿಕ ಮಹಾ ಸಭೆ ಮತ್ತು ಖಾತೆ ಮುಕ್ತಾಯ:

ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್ ("ಕಂಪನಿ") ಸದಸ್ಯರ 43ನೇ ವಾರ್ಷಿಕ ಮಹಾಸಭೆಯು (ಎಜಿಎಂ) ಶುಕ್ರವಾರ, ಸೆಪ್ಟೆಂಬರ್ 26, 2025 ರಂದು ಬೆಳಗ್ಗೆ 11.00 ಗಂಟೆಗೆ (ಭಾರತೀಯ ಕಾಲಮಾನ) ವೀಡಿಯೋ ಕಾನ್ಫರೆನ್ಸಿಂಗ್ ("ವಿಸಿ") / ಇತರೆ ಧ್ವನಿ–ದೃಶ್ಯ ಮಾಧ್ಯಮಗಳ ("ಒಎವಿಎಂ") ಮೂಲಕ, ವೀಡಿಯೋ ಕಾನ್ಫರೆನ್ಸಿಂಗ್/ಇತರೆ ಧ್ವನಿ–ದೃಶ್ಯ ಮಾಧ್ಯಮಗಳ ಮೂಲಕ ಎಜಿಎಂ ನಡೆಸಲು ಕಂಪನಿಗಳಿಗೆ ಅವಕಾಶ ನೀಡುವ, ಕಾರ್ಪೊರೇಟ್ ಕಚೇರಿಗಳ ಸಚಿವಾಲಯ ಮತ್ತು ಭಾರತೀಯ ಷೇರು ವಿನಿಮಯ ಮಂಡಳಿ ಹೊರಡಿಸಿದ ಸುತ್ತೋಲೆಗಳ ಪ್ರಕಾರ, ಆಗಸ್ಟ್ 11, 2025 ರ ಎಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಿದ ವ್ಯವಹಾರಗಳನ್ನು ಕೈಗೊಳ್ಳಲು ನಡೆಸಲಾಗುತ್ತಿದೆ.

ಸದರಿ ಸುತ್ತೋಲೆಗಳ ಪ್ರಕಾರ, ಎಜಿಎಂ ನೋಟಿಸ್ ಜೊತೆಗೆ ಮಾರ್ಚ್ 31, 2025ಕ್ಕೆ ಇದ್ದಂತೆ ಆಡಿಟ್ ಮಾಡಿದ ಬ್ಯಾಲೆನ್ಸ್ ಶೀಟ್, ಮಾರ್ಚ್ 31, 2025ಕ್ಕೆ ಕೊನೆಗೊಂಡ ವರ್ಷದ ಆಡಿಟ್ ಮಾಡಿದ ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್, ನಗದು ಹರಿವಿನ ಸ್ಟೇಟ್‌ಮೆಂಟ್ ಮತ್ತು ಅವುಗಳ ಮೇಲಿನ ನಿರ್ದೇಶಕರು ಮತ್ತು ಲೆಕ್ಕಪರಿಶೋಧಕರ ವರದಿಗಳನ್ನು, ಶುಕ್ರವಾರ, ಆಗಸ್ಟ್ 29, 2025ಕ್ಕೆ ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳು)/ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಎಮ್‌ಯುಎಫ್‌ಜಿ ಇನ್‌ಟೈಮ್"), ಅಂದರೆ ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್‌ಗಳೊಂದಿಗೆ ಇ–ಮೇಲ್ ಐಡಿಗಳನ್ನು ನೋಂದಾಯಿಸಿದ ಸದಸ್ಯರಿಗೆ ಮಾತ್ರ ಸೆಪ್ಟೆಂಬರ್ 04, 2025 ರಂದು ಕಳುಹಿಸಲಾಗಿದೆ. [illegible]

[illegible]

(B) ರಿಮೋಟ್ ಇ–ವೋಟಿಂಗ್

[illegible] ನಿಬಂಧನೆಗಳು, ಮತ್ತು ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ರೆಗ್ಯುಲೇಷನ್ಸ್, 2015 (ಲಿಸ್ಟಿಂಗ್ ರೆಗ್ಯುಲೇಷನ್ಸ್) ನ ರೆಗ್ಯುಲೇಷನ್ 44 ಮತ್ತು ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಜನರಲ್ ಮೀಟಿಂಗ್ಸ್ ಮೇಲಿನ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ (SS-2) ಗೆ ಅನುಸಾರವಾಗಿ, ಎಜಿಎಂನಲ್ಲಿ ವ್ಯವಹಾರಗಳನ್ನು ನಡೆಸಲು ಕಂಪನಿಯು ತನ್ನ ಸದಸ್ಯರಿಗೆ ಎಜಿಎಂ ಮೊದಲು/ಸಮಯದಲ್ಲಿ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ಈ ಉದ್ದೇಶಕ್ಕಾಗಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತದಾನವನ್ನು ಸುಗಮಗೊಳಿಸಲು ಕಂಪನಿಯು ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅನ್ನು ನೇಮಿಸಿದೆ.

ರಿಮೋಟ್ ಇ–ವೋಟಿಂಗ್‌ನ ವಿವರವಾದ ಸೂಚನೆಗಳನ್ನು 43ನೇ ಎಜಿಎಂನ ನೋಟಿಸ್‌ನಲ್ಲಿ ನೀಡಲಾಗಿದೆ. ಸದಸ್ಯರು ಈ ಕೆಳಗಿನ ಅಂಶಗಳನ್ನು ಗಮನಿಸಲು ವಿನಂತಿಸಲಾಗಿದೆ.

a) ರಿಮೋಟ್ ಇ–ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ:

ಅ.ಸಂ	ವಿವರಗಳು / ಚಟುವಟಿಕೆ	ವಿವರಗಳು
1.	ರಿಮೋಟ್ ಇ–ಮತದಾನದ ಆರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯ	**ಆರಂಭ:** ಮಂಗಳವಾರ, ಸೆಪ್ಟೆಂಬರ್ 23, 2025, ಬೆಳಗ್ಗೆ 9.00 (ಭಾರತೀಯ ಕಾಲಮಾನ) **ಮುಕ್ತಾಯ:** ಗುರುವಾರ, ಸೆಪ್ಟೆಂಬರ್ 25, 2025, ಸಂಜೆ 5:00 ಗಂಟೆಯವರೆಗೆ (ಭಾರತೀಯ ಕಾಲಮಾನ)
2.	ಕಟ್–ಆಫ್ ದಿನಾಂಕ	ಶುಕ್ರವಾರ, ಸೆಪ್ಟೆಂಬರ್ 19, 2025

ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಗುರುವಾರ, ಸೆಪ್ಟೆಂಬರ್ 25, 2025 ರಂದು ಸಂಜೆ 5:00 ರ ನಂತರ ಮತದಾನಕ್ಕಾಗಿ ನಿಷ್ಕ್ರಿಯಗೊಳ್ಳುತ್ತದೆ.

b) ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್ ಅಥವಾ ಡೆಪಾಸಿಟರಿಗಳು ನಿರ್ವಹಿಸುವ ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಯಾರ ಹೆಸರು ದಾಖಲಾಗಿದೆಯೋ ಅಂತಹ ಸದಸ್ಯರು ಮಾತ್ರ ರಿಮೋಟ್ ಇ–ವೋಟಿಂಗ್ / ಎಜಿಎಂ ಸಮಯದಲ್ಲಿ ಇ–ವೋಟಿಂಗ್ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರು ಒಂದು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಅವರು ಅದನ್ನು ನಂತರ ಬದಲಾಯಿಸಲು ಅನುಮತಿಸಲಾಗುವುದಿಲ್ಲ. ಎಲೆಕ್ಟ್ರಾನಿಕ್ ಮೂಲಕ ಮತ ಚಲಾಯಿಸದ ಮತ್ತು ಹಾಗೆ ಮಾಡಲು ಬೇರೆ ಯಾವುದೇ ತಡೆಯಿಲ್ಲದ ಸದಸ್ಯರು ಎಜಿಎಂ ಸಮಯದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸಬಹುದು. ಎಜಿಎಂ ಸಮಯದಲ್ಲಿ ಇ–ವೋಟಿಂಗ್‌ಗೆ ಕಂಪನಿಯು ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತದೆ. ಸಭೆಯ ಮೊದಲು ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು ಸಹ ಎಜಿಎಂನಲ್ಲಿ ಭಾಗವಹಿಸಬಹುದು, ಆದರೆ ಅವರು ಎಜಿಎಂ ಸಮಯದಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

c) ಸಭೆಯಲ್ಲಿ ಮಾತನಾಡುವವರಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಪ್ರಶ್ನೆಗಳನ್ನು ಕೇಳಲು ಬಯಸುವ ಸದಸ್ಯರು, ತಮ್ಮ ನೋಂದಾಯಿತ ಇ–ಮೇಲ್ [illegible] rajesh.modi@sansera.in [illegible]

d) [illegible]

[illegible] https://instameet.in.mpms.mufg.com [illegible] enotices@in.mpms.mufg.com [illegible] 022-4918 6000 [illegible]

ಮಂಡಳಿ ನಿರ್ದೇಶಕರ ಆದೇಶದ ಮೇರೆಗೆ
ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/-
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟೆಂಬರ್ 04, 2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರ ಸೂಚನೆಯ ಮೇರೆಗೆ, ಶ್ರೀ ಬಿ ಎಸ್ ವೆಂಕಟಸುಬ್ಬಯ್ಯ, ಶ್ರೀಮತಿ ಪ್ರೇಮಲೀಲ, ಶ್ರೀ ಬಿ ಎ ವೆಂಕಟೇಶ್, ಶ್ರೀ ಬಿ ಎ ಚರಣ್, ಶ್ರೀ ಬಿ ಎಸ್ ವೆಂಕಟಚಲಪತಿ, ಶ್ರೀ ಬಿ ಎಸ್ ಗೋಪಾಲಕೃಷ್ಣ, ಶ್ರೀ ಬಿ ಜಿ ಚಿದಾನಂದ, ಶ್ರೀಮತಿ ಬಿ ಜಿ ಕೀರ್ತನ (ಮಾಲೀಕರು) ಇವರುಗಳಿಗೆ ಸೇರಿದ ಬೆಂಗಳೂರಿನ ಮಲ್ಲೇಶ್ವರಂನ ಕೊಕೊನಟ್ ಅವೆನ್ಯೂನಲ್ಲಿರುವ ಸ್ಥಿರಾಸ್ತಿ ಸ್ವತ್ತು ನಂ. 165ರಲ್ಲಿ 17,532 ಚದರ ಅಡಿ ವಿಸ್ತೀರ್ಣದ ಜಮೀನು ಮತ್ತು ಅದರ ಮೇಲೆ ನಿರ್ಮಿಸಲಾದ ಒಟ್ಟು 37,835 ಚದರ ಅಡಿ ವಿಸ್ತೀರ್ಣದ ವಾಣಿಜ್ಯ ಕಟ್ಟಡ ("ಷೆಡ್ಯೂಲ್ ಸ್ವತ್ತು") ಹೆಚ್ಚು ವಿವರವಾಗಿ ಕೆಳಗೆ ವಿವರಿಸಲಾಗಿದ್ದು, ಇದರ ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ನಾವು ಪರಿಶೀಲಿಸುತ್ತಿದ್ದೇವೆ ಎಂದು ಈ ಮೂಲಕ ತಿಳಿಸಲಾಗಿದೆ.

ಯಾವುದೇ ವ್ಯಕ್ತಿ/ಗಳಿಗೆ, ಘಟಕ, ಸಂಘ, ಸಂಸ್ಥೆ (ಕಾರ್ಪೊರೇಟ್ ಅಥವಾ ಇತರೆ), ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಗೆ ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ, ಆಸಕ್ತಿ, ಅರ್ಹತೆ, ಶುಲ್ಕ, ಬೇಡಿಕೆಯನ್ನು ಹೊಂದಿರುವ ಯಾವುದೇ ಹಕ್ಕು/ಗಳು ಅಥವಾ ಅದರ ಯಾವುದೇ ಭಾಗ ಮತ್ತು/ಅಥವಾ ಯಾವುದೇ ಶೀರ್ಷಿಕೆ ಪತ್ರಗಳು ಅಥವಾ ದಾಖಲೆಗಳು, ಮಾರಾಟ, ವರ್ಗಾವಣೆ, ನಿಯೋಜನೆ, ಹಂಚಿಕೆ, ವಿನಿಮಯ, ಹಕ್ಕು, ಬಡ್ಡಿ, ಷೇರು, ಪರವಾನಗಿ, ಗುತ್ತಿಗೆ, ಉಪ–ಗುತ್ತಿಗೆ, ಬಾಡಿಗೆ, ಉಪ–ಬಾಡಿಗೆ, ಅಡಮಾನ, ಉಡುಗೊರೆ, ಸ್ವಾಮ್ಯ, ಶುಲ್ಕ, ಹೊರೆ, ಉದ್ಯೋಗ, ಒಡಂಬಡಿಕೆ, ಟ್ರಸ್ಟ್, ನಿರ್ವಹಣೆ, ಸರಾಗಗೊಳಿಸುವಿಕೆ, ಪ್ರೀ–ಎಂಪ್ಷನ್, ಉತ್ತರಾಧಿಕಾರ, ಉಯಿಲು, ಪ್ರೊಬೇಟ್, ಆಡಳಿತ ಪತ್ರಗಳು, ಸ್ವಾಧೀನ, ಬಳಕೆ, ಅಭಿವೃದ್ಧಿ ಹಕ್ಕುಗಳು/ಸಾಮರ್ಥ್ಯ, ಒಪ್ಪಂದ, ಮೊಕದ್ದಮೆ, ಲಿಸ್–ಪೆಂಡೆನ್‌ಗಳು, ಕುಟುಂಬ ವ್ಯವಸ್ಥೆ, ಇತ್ಯರ್ಥ, ತೀರ್ಪು ಅಥವಾ ಯಾವುದೇ ನ್ಯಾಯಾಲಯದ ಆದೇಶ ಅಥವಾ ಯಾವುದೇ ಸ್ವರೂಪ ಅಥವಾ ಯಾವುದೇ ರೀತಿಯಲ್ಲಿ ಇದ್ದಲ್ಲಿ ಅದನ್ನು ಲಿಖಿತವಾಗಿ, ಅದರ ಪೂರಕ ದಾಖಲೆಗಳೊಂದಿಗೆ ಖೈತಾನ್ & ಕಂಪನಿ, ವಕೀಲರು, ಎಂಬಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ಮಗ್ರಾತ್ ರಸ್ತೆ, ಬೆಂಗಳೂರು–560 025 ಹಾಗು ಇಮೇಲ್ ಮೂಲಕ bangalore.publicnotice@khaitanco.comಗೆ (ಶ್ರೀಮತಿ ರಕ್ಕಿ ಕೆ ಇವರ ಗಮನಕ್ಕೆ) ಈ ಪ್ರಕಟಣೆ ಪ್ರಕಟವಾದ 14 (ಹದಿನಾಲ್ಕು) ದಿನಗಳ ಒಳಗೆ ಸಲ್ಲಿಸುವುದು. ತಪ್ಪಿದಲ್ಲಿ ಅಂತಹ ಹಕ್ಕು, ಶೀರ್ಷಿಕೆ, ಆಸಕ್ತಿ, ಪ್ರಯೋಜನ, ಹಕ್ಕು ಅಥವಾ ಬೇಡಿಕೆಯನ್ನು ಮನ್ನಾ ಮಾಡಲಾಗಿದೆ ಮತ್ತು/ಅಥವಾ ಕೈಬಿಡಲಾಗಿದೆ ಅಥವಾ ಅಂತಹವುಗಳನ್ನು ಗಣನಗೆ ತೆಗೆದುಕೊಳ್ಳಲಾಗುವುದಿಲ್ಲವೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತು

ಕರ್ನಾಟಕ–560003, ಬೆಂಗಳೂರು, ಮಲ್ಲೇಶ್ವರಂ, ಕೊಕೊನೆಟ್ ಅವಿನ್ಯೂನಲ್ಲಿರುವ ಖಾತಾ ನಂ. BMP/REV/2019-20/KC/1404264, ಪಿಐಡಿ ನಂ. 6–21–165 ಮತ್ತು ಈ–ಖಾತಾ ನಂ. 7871152668 ಹೊಂದಿರುವ ಸ್ಥಿರಾಸ್ತಿ ಸ್ವತ್ತು ನಂ. 165ರಲ್ಲಿ 17,532 ಚದರ ಅಡಿಗಳ ವಿಸ್ತೀರ್ಣದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಅದರಲ್ಲಿ ನೆಲ ಮಹಡಿಯ 8,485 ಚದರ ಅಡಿ ವಿಸ್ತೀರ್ಣ, ಮೊದಲ ಮಹಡಿಯ 9,635 ಚದರ ಅಡಿ ವಿಸ್ತೀರ್ಣ, ಎರಡನೇ ಮಹಡಿಯ 9,857 ಚದರ ಅಡಿ ವಿಸ್ತೀರ್ಣ, ಮೂರನೇ ಮಹಡಿಯ 9,858 ಚದರ ಅಡಿ ವಿಸ್ತೀರ್ಣ, ಒಟ್ಟಾರೆಯಾಗಿ 37,835 ಚದರ ಅಡಿ ವಿಸ್ತೀರ್ಣದ ಸಂಪೂರ್ಣ ನೆಲಮಾಳಿಗೆಯಿಂದ ಮೂರನೇ ಮಹಡಿಯ ಮೇಲಿನ ಛಾವಣಿಯನ್ನು ಒಳಗೊಂಡ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ : ಸಂಗೀತ ಅಪಾರ್ಟ್‌ಮೆಂಟ್ಸ್
ಪಶ್ಚಿಮಕ್ಕೆ : ಸ್ವತ್ತು ನಂ. 166
ಉತ್ತರಕ್ಕೆ : ಬಿ.ಎಸ್. ವೆಂಕಟಸುಬ್ಬಯ್ಯ ಮತ್ತು ಸಹೋದರರಿಗೆ ಸೇರಿದ ಸ್ವತ್ತು ಮತ್ತು ಸಂಗೀತ ಅಪಾರ್ಟ್‌ಮೆಂಟ್ಸ್
ದಕ್ಷಿಣಕ್ಕೆ : 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ.

ದಿನಾಂಕ: 05, ಸೆಪ್ಟಂಬರ್ 2025
ಸಹಿ/– ರಕ್ಕಿ ಕೆ, ಪಾಲುದಾರ
ಖೈತಾನ್ ಅಂಡ್ ಕಂ. ಎಲ್‌ಎಲ್‌ಪಿ
ಎಂಬೆಸ್ಸಿ ಕ್ವೇಸ್ಟ್, 3ನೇ ಮಹಡಿ, 45/1, ಮ್ಯಾಗ್ರತ್ ರಸ್ತೆ, ಬೆಂಗಳೂರು–560 025. ಫೋನ್: +91 80 4339 7000

ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್

chamundeswari
CIN: U15435KA1970PLC001974
ನೋಂದಾಯಿತ ಕಚೇರಿ: ನಂ. 88/5, ರಿಚ್‌ಮಂಡ್ ರೋಡ್, ಬೆಂಗಳೂರು – 560 025
Phone no: 080 - 2500 2500 Fax: 080 – 2500 2510
Email: complianceofficer@chamundisugars.com Web: www.chamundeswarisugars.in

ಷೇರುದಾರರಿಗೆ ಸೂಚನೆ

ಕಂಪನಿಯ ಸದಸ್ಯರ **ಐವತ್ತೆರಡನೆಯ ವಾರ್ಷಿಕ ಸಾಮಾನ್ಯ ಸಭೆ** ("AGM") ಸೋಮವಾರ, 29 ಸೆಪ್ಟೆಂಬರ್, 2025 ರಂದು ಬೆಳಗೆ 11.00 A.M IST ಗೆ, ವಿಡಿಯೋ ಕಾನ್ಫರೆನ್ಸಿಂಗ್ ("VC") / ಇತರೆ ಆಡಿಯೋ–ವಿಷುಯಲ್ ("OAVM") ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ., ಕಂಪನಿಗಳ ಕಾಯ್ದೆ 2013 ರ ಅನ್ವಯವಾಗುವ ಎಲ್ಲಾ ರೂಪದಲ್ಲಿ ನಿಯಮಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022, ದಿನಾಂಕ 28.12.2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 11/2022 ದಿನಾಂಕ 28.12.2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023 ದಿನಾಂಕ 25.09.2023 ಮತ್ತು ಎಲ್ಲ ಇತರ ಸುತ್ತೋಲೆ ಹೊರಡಿಸಿರುವ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಹೊರಡಿಸಿದೆ ಎಲ್ಲಾ ಇತರ ಸುತ್ತೋಲೆಗಳು AGM ಗೆ ಕರೆ ಮಾಡುವ ಸೂಚನೆಯಲ್ಲಿ ವ್ಯವಹಾರವನ್ನು ವಹಿವಾಟು ಮಾಡಲು, ಸದಸ್ಯರು VC/OAVM ಮೂಲಕ AGM ಗೆ ಹಾಜರಾಗಬಹುದು

ಅನ್ವಯವಾಗುವ ಸುತ್ತೋಲೆಯ ಪ್ರಕಾರ ಆರ್ಥಿಕ ವರ್ಷ 2024-25 ಕ್ಕೆ ಅಂತ್ಯಗೊಂಡಂತೆ ಸಂಬಂಧ ಪಟ್ಟ ಕ್ರೂಡೀಕೃತ ಹಾಗೂ ಪ್ರತ್ಯೇಕ ಆರ್ಥಿಕ ತಖ್ತೆಗಳು ಆಡಳಿತ ಮಂಡಳಿಯ ವರದಿ ಮತ್ತಿತರ ದಾಖಲೆಗಳನ್ನು, 29ನೇ ಆಗಸ್ಟ್, 2025ರ ದಿನಾಂಕದಂದು ಸದಸ್ಯರುಗಳ ನೊಂದಣಿ ಪುಸ್ತಕದಲ್ಲಿರುವ ಸದಸ್ಯರುಗಳಿಗೆ, ಹಾಗೂ ಇ–ಮೇಲ್ ವಿಳಾಸವನ್ನು ಕಂಪನಿ / ಡೆಪಾಸಿಟರಿ ಪಾರ್ಟಿಸಿಪೇಟರಿಯೊಂದಿಗೆ ನೊಂದಾಯಿಸಿಕೊಂಡಿರುವ ಷೇರುದಾರರಿಗೆ, ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿದೆ. ಈ ಮೇಲ್ಕಂಡ ದಾಖಲಾತಿಗಳು ಕಂಪನಿಯ ಅಂತರ್ಜಾಲ ವಿಳಾಸ www.chamundeswarisugars.in ದಲ್ಲೂ ಲಭ್ಯವಿರುತ್ತದೆ.

ವಿದ್ಯುನ್ಮಾನ ಮತಚಲಾವಣೆ (e-voting) ಹಾಗೂ ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮತಚಲಾವಣೆ (e-voting) ಬಗ್ಗೆ ಮಾರ್ಗಸೂಚಿ.

ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಬೇಕಾದ ವಿಷಯಗಳ ಮೇಲೆ ವಿದ್ಯುನ್ಮಾನದ ಮೂಲಕ ಮತಚಲಾಯಿಸುವ (e-voting) ಅವಕಾಶವನ್ನು ಕಲ್ಪಿಸಲಾಗಿದ್ದು ಸದಸ್ಯರುಗಳು ಎನ್.ಎಸ್.ಡಿ.ಎಲ್. ನ ವಿದ್ಯುನ್ಮಾನ ಮತಚಲಾವಣೆ (ರಿಮೋಟ್ ಇ–ಮತಚಲಾವಣೆ) ವ್ಯವಸ್ಥೆಯನ್ನು, ಈ ಕೆಳಗೆ ನಮೂದಿಸಿರುವ ದಿನಾಂಕಗಳಿಂದ ಚಲಾಯಿಸಬಹುದಾಗಿರುತದೆ. ಇದಲ್ಲದೆ ದೂರಸಂವೇದಿ ಮುಖಾಂತರ ಮತಚಲಾಯಿಸದೇ ಇರುವ ಸದಸ್ಯರು ವಾರ್ಷಿಕ ಮಹಾಸಭೆಯ ವೇಳೆಯಲ್ಲಿ (ರಿಮೋಟ್ ಇ–ಮತಚಲಾವಣೆ) https://www.evoting.nsdl.com ಮೂಲಕ ಮತ ಚಲಾಯಿಸಬಹುದಾಗಿರುತ್ತದೆ. ಎನ್.ಎಸ್.ಡಿ.ಎಲ್. ಇವರನ್ನು ವಿದ್ಯುನ್ಮಾನ ಮತಚಲಾವಣೆಗಾಗಿ ನೇಮಿಸಲಾಗಿದೆ.

ಮತಚಲಾವಣೆ ಕುರಿತಂತೆ ಮಾಹಿತಿ ಮತ್ತು ಮಾರ್ಗಸೂಚಿಗಳನ್ನು ಇ–ಅಂಚೆಯ ಮೂಲಕ ಈಗಾಗಲೇ ಕಳುಹಿಸಿದ್ದು ಇದರಲ್ಲಿ ಯೂಸರ್ ಐಡಿ ಮತ್ತು ಪಾಸ್ವರ್ಡ್ ಅನ್ನು ನೀಡಲಾಗಿದೆ. ಸಂವೇದಿ / ಶ್ರಾವ್ಯ ಮತ್ತು ದೃಶ್ಯ ಮಾದ್ಯಮಗಳ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಇದೇ ದಾಖಲೆಗಳನ್ನು ಉಪಯೋಗಿಸತಕ್ಕದ್ದು.

ಇ–ಮೇಲ್ ವಿಳಾಸವನ್ನು ನೀಡದೆ ಇರುವ ದೂರ ಸಂಪರ್ಕ ಇ–ಮತಚಲಾವಣೆ, (e-voting) ಡಿ–ಮ್ಯಾಟ್ ರೂಪದಲ್ಲಿ, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳಿಗೆ ವಿದ್ಯುನ್ಮಾನ ಮತಚಲಾವಣೆ ಮೂಲಕ, ಮಹಾಸಭೆಯ ಸಮಯದಲ್ಲಿ ಮತ ಚಲಾವಣೆ ಮಾಡುವ ಬಗ್ಗೆ ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ವಿವರಗಳನ್ನು ನೀಡಲಾಗಿದ್ದು ಇದೇ ವಿವರಗಳನ್ನು ಅಂತರ್ಜಾಲ ವಿಳಾಸ www.chamundeswarisugars.in ಹಾಗೂ ಎನ್.ಎಸ್.ಡಿ.ಎಲ್. ವಿಳಾಸ https://www.evoting.nsdl.com ನಲ್ಲಿ ಪಡೆಯಬಹುದಾಗಿರುತ್ತದೆ.

ವಿದ್ಯುನ್ಮಾನ ಮತಚಲಾವಣೆ (e-voting) ವ್ಯವಸ್ಥೆಯು ಈ ಕೆಳಕಂಡಂತೆ ಇರುತ್ತದೆ.

ವಿದ್ಯುನ್ಮಾನ ಮತಚಲಾವಣೆಯ ಪ್ರಾರಂಭ	ಗುರುವಾರ ದಿನಾಂಕ 25.09.2025 ಬೆಳಗ್ಗೆ 9:00 ಗಂಟೆಯಿಂದ
ವಿದ್ಯುನ್ಮಾನ ಮತಚಲಾವಣೆಯು ಅಂತ್ಯಗೊಳ್ಳುವ ಸಮಯ:	ಭಾನುವಾರ ದಿನಾಂಕ 28.09.2025 ಸಂಜೆ 5:00 ಗಂಟೆಯವರೆಗೆ

ಈ ಮೇಲ್ಕಂಡ ಮತಚಲಾವಣೆ ಮತ ದಿನಾಂಕ ಹಾಗೂ ಸಮಯಗಳ ನಂತರ ವಿದ್ಯುನ್ಮಾನ ಮತಚಲಾವಣೆ (e-voting) ಮಾಡಲು ಅವಕಾಶವಿರುವುದಿಲ್ಲ ಹಾಗೂ ಎನ್.ಎಸ್.ಡಿ.ಎಲ್. ಈ ವ್ಯವಸ್ಥೆಯನ್ನು ಆ ಸಮಯದ ನಂತರ ಸ್ಥಗಿತಗೊಳಿಸುತ್ತದೆ.

ದಿನಾಂಕ 22.09.2025 ರ ಸೋಮವಾರದ ಒಳಗೆ ಸದಸ್ಯರುಗಳ ನೊಂದಣಿ ಪುಸ್ತಕ ಅಥವಾ ಫಲಾನುಭವಿಯಾಗಿರುವ ವಾರಸುದಾರರ ಪುಸ್ತಕದಲ್ಲಿ ನೊಂದಣಿಯಾಗಿರುವವರು ಮತ್ತು ದೂರಸಂವೇದಿ ವಿದ್ಯುನ್ಮಾನ ಮತಚಲಾವಣೆ, ವಾರ್ಷಿಕ ಮಹಾಸಭೆಯ ವೇಳೆಯಲ್ಲಿ https://www.evoting.nsdl.com ಮುಖಾಂತರ ಮತಚಲಾಯಿಸಬಹುದಾಗಿರುತ್ತದೆ.

ಇ–ಮೇಲ್ ವಿಳಾಸ ನೊಂದಣಿ/ ಅಪ್ಡೇಟ್ ಮಾಡುವ ವಿಧಾನ

1. ಡಿ–ಮ್ಯಾಟ್ ರೂಪದಲ್ಲಿ ಷೇರನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸವನ್ನು ನೊಂದಣಿಮಾಡದೆ ಅಥವಾ ಅಪ್ಡೇಟ್ (ಪರಿಷ್ಕರಣೆ) ಮಾಡಿಸದೆ ಇದ್ದ ಪಕ್ಷದಲ್ಲಿ ಕೊಂಡಿ (ಲಿಂಕ್) https://www/integratedindia.in/emailupdation.aspx ಮೂಲಕ ಮಾಡಬಹುದಾಗಿದೆ.
2. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ರವಾನಿಸಿದ ನಂತರ ಷೇರುದಾರರಾಗಿದ್ದು ಕಟ್–ಆಫ್ ದಿನಾಂಕ ದೊಳಗೆ ಷೇರನ್ನು ಹೊಂದಿದ್ದ ಪಕ್ಷದಲ್ಲಿ ಯುಸರ್ ಐಡಿ ಪಾಸ್ವರ್ಡ್ ಅನ್ನು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ತಿಳಿಸಿರುವಂತೆ ಕಂಪನಿಯು ಅಂತರ್ಜಾಲ ವಿಳಾಸ ಹಾಗೂ NSDL ವಿಳಾಸ https://www.evoting.nsdl.com ದಲ್ಲಿ ಪಡೆಯಬಹುದಾಗಿದೆ.
3. ಅಂತಹ ಸದಸ್ಯರು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ನೀಡಿರುವ ವಿದ್ಯುನ್ಮಾನ ಮತಚಲಾವಣೆ ಮಾರ್ಗಸೂಚಿಗಳನ್ವಯ ಮತ ಚಲಾಯಿಸಬಹುದು.

ಸಂವೇದಿ ವಿದ್ಯುನ್ಮಾನಗಳ ಮೂಲಕ ಮತಚಲಾಯಿಸಿರುವ ಸದಸ್ಯ(ರು) ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬಹುದು. ಆದರೆ ಮತ್ತೆ ಮಹಾಸಭೆಯಲ್ಲಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ವಿದ್ಯುನ್ಮಾನ ಮತ ಚಲಾವಣೆಯ (e-voting) ವಿಷಯದಲ್ಲಿ ಅನುಮಾನಗಳೇನಾದರು ಇದ್ದರೆ ಸದಸ್ಯರುಗಳು, ಪದೇ ಪದೇ ಕೇಳಲಾಗುವ ಪ್ರಶ್ನೆಗಳ ವಿಭಾಗ – https://www.evoting.nsdl.com ವಿದ್ಯುನ್ಮಾನ ಮತಚಲಾವಣೆ (e-voting) ಇದರ ಸಹಾಯ ವಿಭಾಗದಿಂದ ಅಥವಾ helpdesk.evoting@nsdl.in ನಿಂದ ಪಡೆಯಬಹುದು.

ವಿದ್ಯುನ್ಮಾನ ವಿಧಾನದಿಂದ ಮತಚಲಾಯಿಸುವ ಬಗ್ಗೆ ಏನಾದರು ಕುಂದು ಕೊರತೆ ಅಥವಾ ಪ್ರಶ್ನೆಗಳಿದ್ದರೆ ಅಂತಹ ಸದಸ್ಯರು **M/s Integrated Registry Management Services Private Limited** ಇವರನ್ನು ಇ–ಮೇಲ್ ಐಡಿ giri@integratedindia.in ಮೂಲಕ ಸಂಪರ್ಕಿಸಬಹುದು.

ಮಂಡಳಿಯ ಆದೇಶದ ಮೇರೆಗೆ
ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ. ಪರವಾಗಿ
ಸಹಿ/–
ಪ್ರಿಯಾ ಅರ್ವತ್
ಕಂಪನಿ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ : 05ನೇ ಸೆಪ್ಟೆಂಬರ್ 2025

TENDERING OF REGIMENTAL SHOPS

1. Sealed tenders are invited from interested War Widow/ Widows of def pers killed while on duty/ Disabled Soldiers/ ESM & Spouses/ Widows of ESM subject to license pd of 3 years (extn upto 5 years) for running of Regt Shop at ASC Centre (South), Agram Post, Bengaluru -560007:-

S. No	Name of Shop	No of Shop	Area Sqft	Loc	EMD
1.1	Photo Studio Shop	01	300	Shopping Complex ASC Centre (South)	1,500/-

2. Application form incl terms & conditions can be obtained from ASC Centre (South) at the cost of Rs 100/- each as under :-
   2.1. Collection of Form - **08 Sep 2025 to 22 Sep 2025**
   2.2. Last date of submission - **By 1230hrs on 23 Sep 2025**
3. Queries, if any, may be clarified on **Tele No 080-29900365.**

Published by ASC Centre (South)

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (ಡಬ್ಲ್ಯುಡಿಆರ್‌ಎ) ಸಂಸ್ಥೆಯಲ್ಲಿ ಕೃಷಿ ಮತ್ತು ಕೃಷಿಯೇತರ ಸರಕುಗಳನ್ನು ಸಂಗ್ರಹಿಸುವ ಉಗ್ರಾಣಗಳ ನೋಂದಣಿ

ಉಗ್ರಾಣ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 2007ರ ಅಡಿಯಲ್ಲಿ 26ನೇ ಅಕ್ಟೋಬರ್ 2010 ರಂದು ಸ್ಥಾಪನೆಗೊಂಡಿರುವ ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (ಡಬ್ಲ್ಯುಡಿಆರ್‌ಎ) ಎಂಬ ಸಂಸ್ಥೆಯು, ವೈಜ್ಞಾನಿಕ ಸಂಗ್ರಹಣೆಗಾಗಿ ಮತ್ತು ಇಲೆಕ್ಟ್ರಾನಿಕ್ ನೆಗೊಶಿಯೇಬಲ್ ವೇರ್‌ಹೌಸ್ ರೆಸೀಪ್ಟ್ (ಇಎನ್‌ಡಬ್ಲ್ಯುಆರ್) ಸಿಸ್ಟಮ್‌ನ್ನು ವ್ಯಾಪಾರ ಮತ್ತು ಸದೃಢ ಆರ್ಥಿಕತೆಗೆ ಪ್ರಮುಖ ಸಾಧನವನ್ನಾಗಿಸಿಕೊಳ್ಳುವ ಉದ್ದೇಶದಿಂದ ಉಗ್ರಾಣ ಅಭಿವೃದ್ಧಿ ಹಾಗೂ ನಿಯಂತ್ರಣಕ್ಕೆ ಮುಂದಾಗಿದೆ. ಕನಿಷ್ಠ ಮೂಲಸೌಕರ್ಯಗಳ ಮಾನದಂಡಗಳನ್ನು ಹೊಂದಿರುವ ಮತ್ತು ನಿಗದಿತ ಕಾರ್ಯಾಚರಣೆ ಪ್ರಕ್ರಿಯಾ ಮಾನದಂಡಗಳನ್ನು ಅನುಸರಿಸಬಲ್ಲ ಉಗ್ರಾಣಗಳು ಮಾತ್ರ ಡಬ್ಲ್ಯುಡಿಆರ್‌ಎ ಜೊತೆಗೆ ನೋಂದಣಿ ಮಾಡಿಕೊಳ್ಳಬಹುದು. ಈ ನೋಂದಣಿ ಪ್ರಕ್ರಿಯೆಯು ಒಂದು ಸಮರ್ಪಿತ ಪೋರ್ಟಲ್ (https://wdra.gov.in) ಮುಖಾಂತರ ಸಂಪೂರ್ಣ ಆನ್‌ಲೈನ್ ವಿಧಾನದಲ್ಲಿ ನೆರವೇರುತ್ತದೆ.

ಡಬ್ಲ್ಯುಡಿಆರ್‌ಎ ಸಂಸ್ಥೆಯು, ಕೃಷಿ ಸರಕುಗಳನ್ನು ಸಂಗ್ರಹಿಸುವ ಉಗ್ರಾಣಗಳ ನೋಂದಣಿ ಮಾಡಿಕೊಳ್ಳುತ್ತದೆ. ಇದೀಗ ಈ ಸಂಸ್ಥೆಯು, ಕೃಷಿ ಸರಕುಗಳ ಜೊತೆಗೆ ಕಬ್ಬಿನದ ಅದಿರು, ಸೀಸ, ಅಲ್ಯುಮಿನಿಯಂ, ಹಿತ್ತಾಳೆ, ಉಕ್ಕು, ತಾಮ್ರ, ನಿಕ್ಕೆಲ್, ಸತು ಮತ್ತು ತವರಗಳಂತಹ ಕೃಷಿಯೇತರ ಸರಕುಗಳನ್ನು ಸಂಗ್ರಹಿಸುವ ಉಗ್ರಾಣಗಳ ನೋಂದಣಿಯನ್ನು ಪ್ರಾರಂಭಿಸಿದೆ. ತಮ್ಮ ಉಗ್ರಾಣಗಳನ್ನು ಡಬ್ಲ್ಯುಡಿಆರ್‌ಎ ಸಂಸ್ಥೆಯ ಜೊತೆಗೆ ನೋಂದಣಿ ಮಾಡಿಕೊಳ್ಳಲು ಬಯಸುವ ಉಗ್ರಾಣಗಳ ಮಾಲೀಕರು, ಡಬ್ಲ್ಯುಡಿಆರ್‌ಎ ವೆಬ್‌ಸೈಟ್‌ಗೆ ಭೇಟಿ ನೀಡಿ, ಆನ್‌ಲೈನ್ ನೋಂದಣಿಗಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು.

ಪ್ರಭಾರಿ ನಿರ್ದೇಶಕರು (ತಾಂತ್ರಿಕ)
CBC 08109/11/0007/2526
011–49092987, 44789495

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಬಾಗೇಪಲ್ಲಿ

ಶ್ರೀ ಸಾಯಿ ಕಾಂಪ್ಲೆಕ್ಸ್, ಷಾದಿ ಮಹಲ್ ಎದುರು, ಡಿ.ವಿ.ಜಿ.ರಸ್ತೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ. ದೂರವಾಣಿ ಸಂಖ್ಯೆ:08150–295055,
ಇ–ಮೇಲ್:cdpooffice_bagepalli@yahoo.in

ಸಂ:ಶಿಅಯೋ:ಬಾಪಲ್ಲಿ:ಇ–ಟೆಂಡರ್:2025–26/231 ದಿನಾಂಕ:26.08.2025

ಟೆಂಡರ್ ಪ್ರಕಟಣೆ

Tender No: DWCD/2025-26/SE0568, Dt: 26.08.2025
Tender No: DWCD/2025-26/SE0569, Dt: 26.08.2025

ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಬಾಗೇಪಲ್ಲಿ ಇಲ್ಲಿಗೆ 2025–26ನೇ ಸಾಲಿಗೆ ಕಚೇರಿ ಉಪಯೋಗಕ್ಕಾಗಿ ಹೊರಗುತ್ತಿಗೆ ಮೂಲಕ ವಾಹನ ಬಾಡಿಗೆ ಪಡೆಯಲು ಹಾಗೂ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ಹೊರಗುತ್ತಿಗೆ ಆಧಾರದಲ್ಲಿ ಒಂದು ಕಂಪ್ಯೂಟರ್ ಆಪರೇಟರ್ ಹಾಗೂ ಒಂದು ಮೆಸೆಂಜರ್ ಸೇವೆಯನ್ನು ಪಡೆಯಲು ಇ–ಟೆಂಡರ್ ಆಹ್ವಾನಿಸಿದ್ದು **ದಿನಾಂಕ: 26.08.2025 ರಿಂದ ದಿನಾಂಕ: 15.09.2025ರ ಸಂಜೆ 5:30 ಗಂಟೆಯುವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಅರ್ಜಿ ಸಲ್ಲಿಸಲು ಅವಕಾಶವಿದ್ದು ಅರ್ಹ ಸಂಸ್ಥೆ/ಏಜೆನ್ಸಿಗಳು ದ್ವಿ–ಲಕೋಟೆ ಪದ್ಧತಿ ಪ್ರಕಾರ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಬಾಗೇಪಲ್ಲಿ ಇಲ್ಲಿ ಕಚೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ:08150–295055ರಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:185/ಕೆಎಸ್ಎಂ.ಸಿ.ಎ/2025–26

ಕರ್ನಾಟಕ ಸರ್ಕಾರ
ರಾಜ್ಯ ಅಭಿಯಾನ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ನಗರ)
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080– 22867172 / 22866302, ಫ್ಯಾಕ್ಸ್: 080–22863576/22861665
ಇ–ಮೇಲ್: smdsbmkar@gmail.com, smmcelldma@gmail.com

ಸಂಖ್ಯೆ: 1288225/DMA/SWM/SBM/3/2024 ದಿನಾಂಕ: 04.09.2025

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ 2.0 (ನ) ಯೋಜನೆಯಡಿ ರಾಜ್ಯ ಅಭಿಯಾನ ನಿರ್ದೇಶನಾಲಯದ ಕಛೇರಿಯ ಕೆಲಸಗಳಿಗೆ ಅವಶ್ಯವಿರುವ 04 ಸಂಖ್ಯೆಯ Sedan ವಾಹನಗಳನ್ನು ಬಾಹ್ಯ ಮೂಲ (Out-source)ಗಳಿಂದ ಪಡೆಯಲು, ಅರ್ಹ ಏಜೆನ್ಸಿಯನ್ನು ಟೆಂಡರ್ (INDENT NO:DMA/2025-26/SE5880) ಮೂಲಕ ಆಯ್ಕೆ ಮಾಡಲು ರಾಜ್ಯ ಅಭಿಯಾನ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ನ) ವತಿಯಿಂದ ಕೆಟಿಪಿಪಿ ಆಕ್ಟ್ 1999 & ನಿಯಮ 2000ರಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಆಸಕ್ತ ಬಿಡ್ಡುದಾರರು ಟೆಂಡರನ್ನು ಕೆಪಿಪಿ ಪೋರ್ಟಲ್ ಮೂಲಕವೇ ಸಲ್ಲಿಸಬೇಕಾಗಿದ್ದು, ಮುಂಗಡ ಠೇವಣಿ ಮತ್ತು ಪ್ರೊಸೆಸ್ಸಿಂಗ್ ಫೀನ್ನು ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕಿರುತ್ತದೆ ಹಾಗೂ ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ: **04.09.2025** ರಿಂದ **19.09.2025**ವರೆಗೆ ಪಡೆಯಬಹುದು, ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:**19.09.2025** ಸಂಜೆ **05.30** ಗಂಟೆಯ ವರೆಗೆ, ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ:**22.09.2025**, ಬೆಳಿಗ್ಗೆ **11.00** ಗಂಟೆಯ ನಂತರ, ತಾಂತ್ರಿಕ ಬಿಡ್ ಅನುಮೋದನೆಗೊಂಡ ತದನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು, ಮೇಲಿನ ಟೆಂಡರ್ ನಿಯಮ ಮತ್ತು ವೇಳಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಯನ್ನು ಕೆಪಿಪಿಪಿ ಮೂಲಕ ಮಾತ್ರ ತಿಳಿಸಲಾಗುವುದು ಮತ್ತು ಯಾವುದೇ ವಾರ್ತಾ/ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು
ವಾಸಾಸಂಇ/ವಾಪ್ರ/2642/ಎಸ್‌ಎಸ್‌ಸಿ/2025–26



ಕ್ಷೇಮನಿಧಿ ಸ್ಥಾಪಿಸುವಂತೆ ವಿತರಕರ ದಿನಾಚರಣೆಯಲ್ಲಿ ಸರ್ಕಾರಕ್ಕೆ ಆಗ್ರಹ

‘ಪತ್ರಿಕಾ ವಿತರಕರಿಗೆ ಸೌಲಭ್ಯ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಿಕಾ ವಿತರಕರಿಗಾಗಿ ಕ್ಷೇಮನಿಧಿ ಸ್ಥಾಪಿಸಿ ₹10 ಕೋಟಿ ಮೀಸಲಿಡಬೇಕು ಎಂದು ವಿತರಕರು ಆಗ್ರಹಿಸಿದರು.

ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ವಿಜಯನಗರ ಮತ್ತು ಮೆಜೆಸ್ಟಿಕ್‌ನಲ್ಲಿ ಕೇಕ್ ಕತ್ತರಿಸಿ, ಸಿಹಿ ವಿತರಿಸಲಾಯಿತು. 70 ವರ್ಷ ಆಗಿರುವ ಪತ್ರಿಕಾ ವಿತರಕರಿಗೆ ₹5 ಸಾವಿರ ಪಿಂಚಣಿ ನೀಡಬೇಕು. ವಾಯು ಮಾಲಿನ್ಯ ತಡೆಗಟ್ಟಲು ರಿಯಾಯಿತಿ ಬೆಲೆಯಲ್ಲಿ ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಒದಗಿಸಬೇಕು. ವಿತರಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಬಡ್ಡಿ ರಹಿತ ಧನ ಸಹಾಯ ನೀಡಬೇಕು. ಸರ್ಕಾರಿ ವಸತಿ ಯೋಜನೆಗಳಲ್ಲಿ ವಿತರಕರಿಗೆ ಶೇ 25ರಷ್ಟು ಮೀಸಲು ಇಡಬೇಕು. ಪತ್ರಿಕೆ ಹಂಚುವ ಸಮಯದಲ್ಲಿ ಅಪಘಾತಕ್ಕೀಡಾದರೆ ಚಿಕಿತ್ಸಾ ವೆಚ್ಚ ಭರಿಸ ಬೇಕು. ಮೃತಪಟ್ಟಲ್ಲಿ ₹5 ಲಕ್ಷ ಪರಿಹಾರ ನೀಡಬೇಕು. ಇಎಸ್‌ಐ, ಇಪಿಎಫ್ ಒದಗಿಸಬೇಕು ಎಂದು ಆಗ್ರಹಿಸಿದರು. ವಿತರಕರಾದ ಎಂ.ಟಿ.ಗೋಪಾಲ್, ವಿನೋದ್ ಕುಮಾರ್, ಕೆ.ಶಂಭುಲಿಂಗ, ಮಂಜುನಾಥ್ ಎಂ.ಎಂ, ಶ್ರೀನಿವಾಸ್, ಕಾರ್ತಿಕ್, ಮುತ್ತಣ್ಣ, ಹೇಮಂತ್ ರಾಜು, ಮಲ್ಲಿಕಾರ್ಜುನ, ಚಂದ್ರಶೇಖರ್ ಉಪಸ್ಥಿತರಿದ್ದರು.

ವಿಶ್ವ ಪತ್ರಿಕಾ ವಿತರಕರ ದಿನದ ಅಂಗವಾಗಿ ವಿಜಯನಗರದಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು

₹39,41 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಆ.23ರಿಂದ ಸೆ.4ರ ವರೆಗೆ 14,02,717 ಪ್ರಕರಣಗಳು ಇತ್ಯರ್ಥ-ಗೊಂಡಿವೆ. ₹39.41 ಕೋಟಿ ದಂಡ ಸಂಗ್ರಹವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡ ಪಾವತಿಸಲು ರಿಯಾಯಿತಿ ನೀಡಿ ಆದೇಶಿಸಲಾಗಿತ್ತು.

ಈ ಆದೇಶವು ಆ.23ರಿಂದ ಜಾರಿಗೆ ಬಂದಿದ್ದು, ಸೆ.12ರ ವರೆಗೆ ರಿಯಾಯಿತಿ ಇರಲಿದೆ ಎಂದು ಸಂಚಾರ ಪೊಲೀಸರು ಹೇಳಿದರು.

CAUTION NOTICE

It is hereby informed to the general public that the council of Trustees of B M Sreenivasiah Educational Trust, Basavanagudi, Bangalore in its meeting held on 22.08.2025, have resolved that any seat vacancies that may arise after various rounds of counselling for the academic year 2025-26 either in CET or COMED-K will be handed over to the CET or COMED-K authorities respectively. The management has decided not to fill up such vacant seats through management quota and these seats will be surrendered to the concerned authorities.

The management has also written to the CET and COMED-K authorities vide letter ET/053/2025-26 dated 22.08.2025 and ET/052/2025-26 dated 22.08.2025 respectively requesting them to fill any such seats that may fall vacant by conducting additional counselling rounds if required.

The public is cautioned not to deal with any third party/parties with regard to admission into any of the BMS institutions for any such vacant seats that may arise post CET/ COMED-K counselling.

Sd/-
Donor trustee, BMSET
Life trustee, BMSET
Dated: 02.09.2025

BOLDEST FILM EVER

Z5 Z CINEMA A Z STUDIOS WORLDWIDE RELEASE (A) Z MUSIC CO.
through Raikar Ventures in Karnataka.

PVR FORUM MALL - Koramangala : 10.10 am, 3.00 & 10.10 pm | ORION MALL - Yashwantpur : 1.20 & 9.50 pm | VAISHNAVI MALL - Yashwantpur : 10.00 pm | BHARTIYA CINEMA -Thanisandra : 9.50 pm | IMAX - VEGA CITY : 11.35 am & 6.25 pm | PHOENIX MARKET CITY - Whitefield : 11.55 am & 10.10 pm | VR MALL : 2.50 & 6.25 pm | REX DIRECTOR CUT - M.G. Road : 10.10 pm | FIZA MALL - Mangalore : 10.05 pm | GLOBAL MALL - Mysore Road : 10.00 pm | FALCON CITY - Kankapura Road : 3.45 & 9.50 pm | FORUM MALL - Mysore : 10.10 pm | MSR ELEMENTS MALL - Nagavara : 2.30 & 9.50 pm.

INOX CENTRAL, JP Nagar : 10.00 pm | GARUDA MALL - Magrath Road : 3.00 pm | LIDO - Ulsoor : 6.15 pm | Manipal : 3.30 pm | M5 ECITY MALL : 10.15 pm | MANTRI MALL- Malleshwaram : 5.55 pm | VALUE MALL - Whitefield : 10.30 pm | GARUDA MALL - Yelahnka : 3.00 pm | RMZ MALL - Yelahnka : 9.50 pm | SBR HORIZON : 9.50 pm | MALL OF ASIA : 9.05 am, 3.35, 6.25 & 9.40 pm | S MALL - Tumkur : 10.05 pm | CENTRAL - Mysore : 10.10 pm | SATHYAM CINEPEX - Mysore : 4.05 & 10.20 pm.

cinépolis ROYAL MEENAKSHI : 1.45 & 10.20 pm | ORION EAST MALL : 12.35 & 10.30 pm | SJR SPECTRUM : 9.40 am & 6.30 pm | SHANTINIKETAN MALL - ITPL Whitefield : 9.45 am, 4.05 & 10.25 pm | SHOBHA LULU MALL : 12.50 & 10.30 pm | ETA - NAMMA MALL - Binnypet : 8.50 am, 12.50 & 10.30 pm | CITY CENTRAL MALL - Mangalore : 9.00 am, 3.25 & 10.15 pm.

GOPALAN CINEMAS LEGECY MALL : 6.20 pm | GRAND MALL : 12.40 pm Bannerghatta Road : 3.30 pm

Bharath Cinemas Manipal : 6.45 pm. | Shimoga : 4.00 & 9.45 pm. Manglore : 1.15, 6.45 & 10.00 pm.

CINEPHILE HSR LAYOUT 9.15 am & 3.35 pm

MOVIETIME RR Nagar : 6.30 & 10.30 pm SLN MALL - Bellary : 5.30 & 9.30 pm Davanagere : 10.30 pm

INNOVATIVE MULTIPLEX Marathahalli : 9.50 am, 1.45, 5.45 & 9.30 pm

DRC CINEMA - Mysore : 4.00 & 6.35 pm | NEW FANGLED MULTIPLEX - MG Road : 11.00 am, 3.30, 6.00& 10.30 pm | CINEMAX 1 SOUL SPACE SPIRIT MALL - Bellandur : 10.15 pm | SAPNA THEATRE - Gandhi Nagara : 4.15 & 8.00 pm | THE CINEMA - GT WORLD - Magadi Road : 10.20 pm | ROCKLINE - Jalahalli : 1.30 & 8.35 pm | RR MULTIPLEX - Bellary : 11.00 am, 2.00, 5.00 & 8.00 pm | VASANTHA - Davangere : 3.30 & 9.30 pm | and other cinemas.

For Bulk Booking Contact +91 97696 27921

PARAS

ನಗರದಲ್ಲಿ ಇಂದು

ವಾರ್ಷಿಕೋತ್ಸವ ಸಮಾರಂಭ, ಗಾನ ಯಾತ್ರೆ ಕಲಾ ಸಂಭ್ರಮ: ಉದ್ಘಾಟನೆ: ಸಾವಿತ್ರಮ್ಮ ಎಸ್., ಮುಖ್ಯ ಅತಿಥಿಗಳು: ರಾಘವೇಂದ್ರ ರಾವ್, ರಾಗಿಣಿ ಸನತ್, ಲಲಿತಾ ಆರ್., ಆಯೋಜನೆ: ಸಂಯೋಗ ಕಲಾ ಶಾಲೆ, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 8.30

ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಮಧು ಬಂಗಾರಪ್ಪ, ಎಂ.ಸಿ. ಸುಧಾಕರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10

‘ಅಂತರಿಕ್ಷ ಹೊಂಗಿರಣ’ ಸಾಮಾಜಿಕ ಸೇವಾ ಕಾರ್ಯಕ್ರಮಕ್ಕೆ ಚಾಲನೆ: ಅತಿಥಿಗಳು: ಆರ್. ಅಶೋಕ, ತೇಜಸ್ವಿ ಸೂರ್ಯ, ಉಪಸ್ಥಿತಿ: ಆರ್.ಕೆ. ಪದ್ಮನಾಭ, ದೀಪಾ ಫಡ್ಕೆ, ಆಯೋಜನೆ: ವಾಸುಕಿ ಆಚಾರ್ಯ, ಶುಭಾ ವಾಸುಕಿ, ಸ್ಥಳ: ಶಾಸಕರ ಭವನ, ಆರ್. ಅಶೋಕ ಸಭಾಂಗಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಸಂಸ್ಥಾಪನಾ ದಿನ ಮತ್ತು ಶಿಕ್ಷಕರ ದಿನದ ಸಂಭ್ರಮಾಚರಣೆ: ಅತಿಥಿ: ಡಾ. ವಿಜಯಲಕ್ಷ್ಮಿ ದೇಶಮಾನೆ, ಅಧ್ಯಕ್ಷತೆ: ವಿಷ್ಣು ಭರತ್ ಅಲಂಪಲ್ಲಿ, ಆಯೋಜನೆ: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್, ಸ್ಥಳ: ಎಪಿಎಸ್ ಕಾಲೇಜು, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

ಡಾ. ವಿಜಯಲಕ್ಷ್ಮಿ ದೇಶಮಾನೆ

ಶಿಕ್ಷಕರ ದಿನಾಚರಣೆ ಹಾಗೂ ಎಚ್.ಆರ್. ಲಕ್ಷ್ಮಮ್ಮ ಮತ್ತು ಎ.ಬಿ. ಮಾರೇಗೌಡ ಸ್ಮರಣಾರ್ಥ ‘ಸಾವಿತ್ರಿಬಾಯಿ ಫುಲೆ ಹಾಗೂ ಜ್ಯೋತಿಬಾ ಫುಲೆ’ ಪ್ರಶಸ್ತಿ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಉಪನ್ಯಾಸ: ರಾಜಶೇಖರ ಮಠಪತಿ, ಮುಖ್ಯ ಅತಿಥಿ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಪ್ರಶಸ್ತಿ ಪುರಸ್ಕೃತರು: ಕೆ. ಖಾದ್ರಿ ನರಸಿಂಹಯ್ಯ, ಆಶಯ ನುಡಿ: ಎಂ. ಪ್ರಕಾಶಮೂರ್ತಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಸದ್ಭಾವನಾ ಚಾವಡಿ, 40 ಅಡಿ ರಸ್ತೆ, ಕೆಂಪೇಗೌಡನಗರ, ಬ್ಯಾಡರಹಳ್ಳಿ ಉತ್ತರ ಬಡಾವಣೆ, ಮಾಗಡಿ ಮುಖ್ಯರಸ್ತೆ, ಸಂಜೆ 5

ಶಿಕ್ಷಕರ ದಿನಾಚರಣೆ ಪ್ರಯುಕ್ತ ‘ಕುರುಕ್ಷೇತ್ರ’ ಪೌರಾಣಿಕ ನಾಟಕ ಪ್ರದರ್ಶನ: ನಿರ್ದೇಶನ: ಎನ್. ಬೋರೇಗೌಡ, ತಂಡ: ಗಾಯತ್ರಿ ಡ್ರಾಮಾ ಸೀನರಿ, ಅತಿಥಿ: ಎಲ್.ಎನ್. ಮುಕುಂದರಾಜ್, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾಳಗಾಳ, ನಾಗರಬಾವಿ 2ನೇ ಹಂತ, ಸಂಜೆ 5

ಕಲಾಮಿಲನ: ಕೊಳಲು ವಾದನ: ದುಶ್ಯಂತ್ ಗೋಖಲೆ, ಭರತನಾಟ್ಯ ಪ್ರದರ್ಶನ: ಸಂಜನಾ ಗೋಗಟೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 5

ಈದ್ ಮಿಲಾದ್ ಅಂತರರಾಷ್ಟ್ರೀಯ ಸಮಾವೇಶ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಜಮೀರ್ ಅಹ್ಮದ್, ಆಯೋಜನೆ: ಜಂಟಿ ಮಿಲಾದ್ ಸಮಿತಿ, ಸ್ಥಳ: ಅರಮನೆ ಮೈದಾನದ ಗೇಟ್ ಸಂಖ್ಯೆ-01, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಹಲ್ಲುಗಳು ಸುಲಭವಾಗಿ ಬರಲು ಸೂಕ್ತ ಹೋಮಿಯೋಪತಿ ಮಾತ್ರೆಗಳು

ಡೆನ್ ಟಾನಿಕ್®
ನಕಲಿ ಬಗ್ಗೆ ಎಚ್ಚರದಿಂದಿರಿ
Mfg.: Homoeo Laboratories
SS:B.R.Ent, Mumbai.
Mobile 8652756688 / 7219731618
Sumit Pharma, Bangalore : 8379019941
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Saneha, Mysore : 8212432796
Deepak Pharma Agency, Mysore : 988672264
For Product information contact :
Bhargavi Bhatt : 6363477044

ಭಾರತ ಸರ್ಕಾರ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಚಾಲನಾ ಪರವಾನಗಿ ಹೊಂದಿರುವವರು ಮತ್ತು ನೋಂದಾಯಿತ ವಾಹನಗಳ ಮಾಲೀಕರು, ವಾಹನ ಮತ್ತು ಸಾರಥಿ ಪೋರ್ಟಲ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಬೇಕೆಂದು ಆಗ್ರಹಿಸಲಾಗಿದೆ. ಇದರಿಂದಾಗಿ, ನಿಮ್ಮ ವಿವರಗಳು ಪರಿಪೂರ್ಣ, ನಿಖರ ಮತ್ತು ಅಪ್–ಟು–ಡೇಟ್ ಆಗಿವೆ ಎಂಬುದು ಖಚಿತವಾಗುತ್ತದೆ. ಆರ್‌ಟಿಒ ಕಚೇರಿಗಳಿಗೆ ಭೇಟಿ ನೀಡದೆಯೆ, ಪೋರ್ಟಲ್‌ನಲ್ಲಿಯೇ ಮೊಬೈಲ್ ನಂಬರ್ ಅಪ್ಡೇಟ್ ಮಾಡುಕೊಳ್ಳಲು ಆನ್‌ಲೈನ್ ಸೌಲಭ್ಯ ಕಲ್ಪಿಸಲಾಗಿದೆ.

https://vahan.parivahan.gov.in/mobileupdate/
https://sarathi.parivahan.gov.in/sarathiservice/mobNumUpdpub.do

ಹೆಚ್ಚಿನ ವಿವರಗಳಿಗಾಗಿ ಪರಿವಹನ https://parivahan.gov.in/ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು helpdesk-vahan(at)gov(dot)in helpdesk-sarathi(at)gov(dot)in ಇಮೇಲ್ ಐಡಿಗಳಿಗೆ ಬರೆಯಿರಿ.

CBC 37101/13/0010/2526

ರಾಷ್ಟ್ರೀಯ ಹೆದ್ದಾರಿ: ಅಪಘಾತಕ್ಕೆ ರಹದಾರಿ

ನೆಲಮಂಗಲ– ದಾಬಸ್‌ಪೇಟೆ ನಡುವೆ ಹೆದ್ದಾರಿಯೂ ಗುಂಡಿಮಯ, ವಾಹನಗಳ ಸಂಚಾರ ತ್ರಾಸದಾಯಕ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು–ಪುಣೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–48 ಅಪಘಾತ ವಲಯವಾಗಿ ಮಾರ್ಪಟ್ಟಿದೆ. ನೆಲಮಂಗಲದಿಂದ ಹಳೇ ನಿಜಗಲ್ಲು-ವರೆಗೆ ಹೆದ್ದಾರಿಯ ಸ್ಥಿತಿ ಹದಗೆಟ್ಟಿದ್ದು, ಈ ಮಾರ್ಗದಲ್ಲಿ ಪ್ರತಿನಿತ್ಯ ಅಪಘಾತ ಸಂಭವಿಸಿ ಸಾವು–ನೋವಿಗೆ ಕಾರಣವಾಗುತ್ತಿದೆ.

ನೆಲಮಂಗಲ ಜಂಕ್ಷನ್, ಹನುಮಂತಪುರ, ಕುಲವನಹಳ್ಳಿ, ಟಿ.ಬೇಗೂರು, ತಿಪ್ಪಗೊಂಡನಹಳ್ಳಿ, ರಾಯರಪಾಳ್ಯ, ಎಡೇಹಳ್ಳಿ, ಹಳೇ ನಿಜಗಲ್ಲು ಬಳಿ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ. ವಾರದಲ್ಲಿ ನಾಲ್ಕೈದು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹೆದ್ದಾರಿಯ ಪಕ್ಕದಲ್ಲೇ ಹಲವು ಗ್ರಾಮಗಳಿವೆ. ಜಮೀನಿಗೆ ತೆರಳಲು ಹೆದ್ದಾರಿ ದಾಟುವ ಸಂದರ್ಭದಲ್ಲಿ ವೇಗವಾಗಿ ಬರುವ ವಾಹನಗಳು ಡಿಕ್ಕಿ ಹೊಡೆದು ಕೃಷಿಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಕಳೆದ ಒಂದು ತಿಂಗಳಲ್ಲಿ 20ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಈ ಮಾರ್ಗವನ್ನು ಹತ್ತುಪಥದ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುತ್ತಿದ್ದು, ಕಾಮಗಾರಿ ಆಮೆವೇಗದಿಂದ ಸಾಗುತ್ತಿದೆ. ಅಲ್ಲದೇ ಧುತ್ತೆಂದು ಎದುರುಗೊಳ್ಳುವ ಗುಂಡಿಗಳು, ಅಪಾಯಕಾರಿ ತಿರುವುಗಳು ಸಹ ವಾಹನ ಚಾಲಕರು ಹಾಗೂ ಪ್ರಯಾಣಿಕರ ಜೀವಕ್ಕೆ ಸಂಚಕಾರ ತಂದೊಡ್ಡುತ್ತಿವೆ. ಸಂಚಾರವೂ ತ್ರಾಸದಾಯಕವಾಗಿದೆ.

ಎಡೇಹಳ್ಳಿ ಬಳಿ ಕೈಗಾರಿಕಾ ಪ್ರದೇಶವಿದೆ. ಸರಕು ಕೊಂಡೊಯ್ಯಲು ಈ ಪ್ರದೇಶಕ್ಕೆ ಬೃಹತ್ ಕಂಟೈನರ್‌ಗಳು, ಲಾರಿಗಳು ಬರುತ್ತವೆ. ವೇಗವಾಗಿ ಬರುವ ಕಂಟೈನರ್‌ಗಳು ಉರುಳಿ ಅನಾಹುತ ಸೃಷ್ಟಿಸುತ್ತಿವೆ.

ನೆಲಮಂಗಲದಿಂದ ಆಪೆ ಆಟೊಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತಿದೆ. ವೇಗವಾಗಿ ಸಾಗುವ ಭರದಲ್ಲಿ ಆಪೆ ಆಟೊಗಳು ಉರುಳಿ ಬಿದ್ದು, ಪ್ರಯಾಣಿಕರ ಜೀವಕ್ಕೆ ಆಪತ್ತು ತರುತ್ತಿವೆ ಎಂದು ಸ್ಥಳೀಯರಾದ ರಾಜೇಶ್ ಹೇಳಿದರು.

ನೆಲಮಂಗಲ ಜಂಕ್ಷನ್ ಕಥೆ ವ್ಯಥೆ: ಬೆಂಗಳೂರು– ಮಂಗಳೂರು ಹೆದ್ದಾರಿ 75 ಹಾಗೂ ಬೆಂಗಳೂರು –ಪುಣೆ ಹೆದ್ದಾರಿ 48 ಅನ್ನು ಸಂಪರ್ಕಿಸುವ ನೆಲಮಂಗಲ ಜಂಕ್ಷನ್ ಸಹ ಕಿರಿದಾಗಿದ್ದು, ಜಂಕ್ಷನ್ ದಾಟಲು ವಾಹನ ಸವಾರರು ನಿತ್ಯ ಪರದಾಡುತ್ತಿದ್ದಾರೆ. ಅದರಲ್ಲೂ ವಾರಾಂತ್ಯ ಹಾಗೂ ಸರಣಿ ರಜೆಗಳಿದ್ದಾಗ ಸ್ವಂತ ವಾಹನಗಳಲ್ಲಿ ಪ್ರವಾಸಕ್ಕೆ ತೆರಳುವವರ ಸಂಖ್ಯೆ ಹೆಚ್ಚು. ಆಗ, ಈ ಜಂಕ್ಷನ್‌ನಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

‘ಹೆದ್ದಾರಿಯಲ್ಲಿ ಸಾಗುವ ವಾಹನಗಳ ವೇಗಕ್ಕೆ ಕಡಿವಾಣ ಬಿದ್ದಿಲ್ಲ. ಸರಕು ಸಾಗಣೆ ಲಾರಿಗಳು, ಕಂಟೈನರ್‌ಗಳು ಹೆದ್ದಾರಿಯ ಎಡಬದಿಯಲ್ಲಿ ಚಲಿಸಬೇಕೆಂಬ ನಿಯಮವಿದೆ. ಆದರೆ, ಬಹುತೇಕ ಕಂಟೈನರ್‌ಗಳ ಚಾಲಕರು ಆ ನಿಯಮವನ್ನು ಪಾಲನೆ ಮಾಡುತ್ತಿಲ್ಲ.

ನೆಲಮಂಗಲದಿಂದ ಜಿಂದಾಲ್ ಟೋಲ್ ವರೆಗೂ ಹೆದ್ದಾರಿಯ ಮಧ್ಯದ ಪಥದಲ್ಲೇ ಲಾರಿಗಳು ಸಂಚರಿಸುತ್ತಿವೆ. ಬೇರೆ ಜಿಲ್ಲೆಗಳಿಂದ ನಗರಕ್ಕೆ ಬರುವ ಆಂಬುಲೆನ್ಸ್‌ಗಳು ಮುಂದಕ್ಕೆ ಸಾಗಲೂ ಅವಕಾಶ ಸಿಗುವುದಿಲ್ಲ.

ನೆಲಮಂಗಲದಿಂದ ದಾಬಸ್‌ಪೇಟೆ ವರೆಗೆ ಹಲವು ಡಾಬಾಗಳಿದ್ದು, ಹೆದ್ದಾರಿ ಪಕ್ಕದಲ್ಲೇ ಲಾರಿ ಹಾಗೂ ಕಂಟೈನರ್‌ಗಳನ್ನು ಅವೈಜ್ಞಾನಿಕವಾಗಿ ನಿಲುಗಡೆ ಮಾಡಲಾಗುತ್ತಿದೆ. ವೇಗವಾಗಿ ಬರುವ ವಾಹನಗಳು ನಿಲುಗಡೆ ಮಾಡಿದ್ದ ಲಾರಿಗಳಿಗೆ ಡಿಕ್ಕಿಯಾಗಿ ಅನಾಹುತಗಳು ಸಂಭವಿಸುತ್ತಿವೆ’ ಎಂದು ಸ್ಥಳೀಯರು ಹೇಳುತ್ತಾರೆ.

ಗುಂಡೇನಹಳ್ಳಿ ಬಳಿ ಅಪಾಯಕಾರಿ ತಿರುವಿದ್ದು ದುರಸ್ತಿ ಸರಿಪಡಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಎನ್‌ಎಚ್–48ರ ಗುಂಡೇನಹಳ್ಳಿ ಬಳಿ ಲಾರಿ ಹಾಗೂ ಬಸ್ ನಡುವೆ ಸಂಭವಿಸಿದ್ದ ಅಪಘಾತ

ಬಿಐಇಸಿ ಎದುರು ತಪ್ಪದ ಸಂಕಟ

ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದ (ಬಿಐಇಸಿ) ಎದುರು ಯಾವಾಗಲೂ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಪ್ರಯಾಣಿಕರು ಹಾಗೂ ವಾಹನ ಸವಾರರು ಪರದಾಡುತ್ತಿದ್ದಾರೆ.

ದಟ್ಟಣೆ ಅವಧಿಯಲ್ಲಿ ಟ್ರಕ್‌ಗಳಿಗೆ ನಗರಕ್ಕೆ ಪ್ರವೇಶ ಇರುವುದಿಲ್ಲ. ಸರ್ವೀಸ್ ರಸ್ತೆಯಲ್ಲೇ ನಿಂತಿರುತ್ತವೆ. ಇದರಿಂದ ದಟ್ಟಣೆ ಉಂಟಾಗುತ್ತಿದೆ ಎಂದು ಸ್ಥಳೀಯರು ನೋವು ತೋಡಿಕೊಂಡಿದ್ದಾರೆ. ‘ವಾಹನ ದಟ್ಟಣೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಕೆಲವು ದಿನಗಳ ಹಿಂದೆ ಸಭೆ ನಡೆಸಿದ್ದರು. ಆದರೆ, ಸಮಸ್ಯೆಗೆ ಪರಹಾರ ಮಾತ್ರ ಸಿಕ್ಕಿಲ್ಲ’ ಎಂದು ಮಂಜುನಾಥ್ ನಗರದ ನಿವಾಸಿ ವಿಷ್ಣು ಹೇಳಿದರು.

ಕಂಟೈನರ್‌ಗಳು ತಂದ ದುರಂತ

ಏಪ್ರಿಲ್ 10ರಂದು ದಾಬಸ್‌ಪೇಟೆ ಬಳಿ ಕಾರಿನ ಮೇಲೆ ಕಂಟೈನರ್ ಉರುಳಿ ಉದ್ಯಮಿ ಸೇರಿ ಆರು ಮಂದಿ ಮೃತಪಟ್ಟಿದ್ದರು. ಜೂನ್ 17ರಂದು ಎನ್‌ಎಚ್–75ರ ನೆಲಮಂಗಲ–ಕುಣಿಗಲ್ ಬೈಪಾಸ್‌ನಲ್ಲಿ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ, ಇಬ್ಬರು ನೃತ್ಯ ಕಲಾವಿದರು ಮೃತಪಟ್ಟಿದ್ದರು.

ಆಗಸ್ಟ್ 16ರ ರಾತ್ರಿ ಎನ್‌ಎಚ್– 48ರ ಗುಂಡೇನಹಳ್ಳಿ ಬಳಿ ಮೇಕೆ, ಕುರಿಗಳನ್ನು ತುಂಬಿದ್ದ ಲಾರಿ ಹಾಗೂ ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದರು. ಆಗಸ್ಟ್ 25ರಂದು ಹನುಮಂತಪುರ ಗೇಟ್ ಬಳಿ, ಬೈಕ್ ಮತ್ತು ಕ್ಯಾಂಟರ್ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಅರಣ್ಯ ರಕ್ಷಕ ಸೇರಿ ಇಬ್ಬರು ಮೃತಪಟ್ಟಿದ್ದರು.

ಸುದ್ದಿ 2 ನಿಮಿಷ

‘ಅಕ್ರಮ ಗಣಿಗಾರಿಕೆ: ನಷ್ಟ ವಸೂಲಿಗೆ ಕ್ರಮವಹಿಸಿ’

ಮೈಸೂರು: ‘ಅಕ್ರಮ ಗಣಿಗಾರಿಕೆಯಿಂದ ರಾಜ್ಯಕ್ಕೆ ಆಗಿರುವ ನಷ್ಟ ಭರ್ತಿ ಸೇರಿ 12 ಶಿಫಾರಸುಗಳನ್ನು ಮಾಡಿರುವ ಸಚಿವ ಎಚ್.ಕೆ.ಪಾಟೀಲ್ ಅಧ್ಯಕ್ಷತೆಯ ಸಂಪುಟ ಉಪಸಮಿತಿಯ ವರದಿಯನ್ನು ರಾಜ್ಯ ಸರ್ಕಾರ ಶೀಘ್ರ ಅನುಷ್ಠಾನಗೊಳಿಸಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ವರದಿ ಅನುಷ್ಠಾನಕ್ಕೆ ಪ್ರಾಮಾಣಿಕ ಅಧಿಕಾರಿಯನ್ನು ನೇಮಿಸಬೇಕು. ತಪ್ಪಿತಸ್ಥರನ್ನು ಶಿಕ್ಷಿಸಲು ತ್ವರಿತಗತಿಯ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಮುಖ್ಯವಾಗಿ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಗಣಿ ಪ್ರದೇಶಗಳ ಹರಾಜು ಪ್ರಕ್ರಿಯೆ ನಡೆಸಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರನ್ನು ಬದಲಿಸಿ, ಪ್ರಾಮಾಣಿಕರನ್ನು ಸಚಿವರನ್ನಾಗಿ ನೇಮಿಸಬೇಕು. ಇದರಿಂದ ಮಾತ್ರ ವರದಿಯ ಉದ್ದೇಶ ಈಡೇರುತ್ತದೆ’ ಎಂದರು. ‘ಉಪಸಮಿತಿಯ ವರದಿಯನ್ನು ಬೆಂಬಲಿಸುತ್ತೇವೆ.



ಜನಾಂದೋಲನ ಮಹಾಮೈತ್ರಿ, ಗಣಿಬಾಧಿತ ಪರಿಸರ– ಜನ ಬದುಕು ಪುನಶ್ಚೇತನ ಹೋರಾಟ ಸಮಿತಿ, ರಾಷ್ಟ್ರೀಯ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣಾ ಸಮಿತಿ (ಎನ್‌ಸಿ-ಪಿಎನ್‌ಆರ್) ಹೋರಾಟದ ಫಲವಿದು. ಇದು ವ್ಯರ್ಥವಾಗದಂತೆ ರಾಜ್ಯ ಸರ್ಕಾರವು ಜಾರಿಗೊಳಿಸಬೇಕು’ ಎಂದು ಮನವಿ ಮಾಡಿದರು. ಜನಾಂದೋಲನ ಮಹಾಮೈತ್ರಿಯ ಉಗ್ರ ನರಸಿಂಹೇಗೌಡ, ಅಭಿರುಚಿ ಗಣೇಶ್ ಹಾಜರಿದ್ದರು.

23 ಮನೆಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ವಿದೇಶಿ ಪ್ರಜೆಗಳಿಂದ ಸರಿಯಾದ ದಾಖಲಾತಿಗಳನ್ನು ಪಡೆಯದ ಹಾಗೂ ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಸಿ-ಫಾರಂ ಸಲ್ಲಿಸದೇ ಮನೆಗಳನ್ನು ಬಾಡಿಗೆಗೆ ನೀಡಿದ್ದ 23 ಮಾಲೀಕರ ವಿರುದ್ಧ ಈಶಾನ್ಯ ವಿಭಾಗದ ಒಂಬತ್ತು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಈಶಾನ್ಯ ವಿಭಾಗ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಅವಧಿ ಮೀರಿ ವಾಸವಾಗಿರುವ ವಿದೇಶಿಯರ ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ವೀಸಾ ಅವಧಿ ಮುಕ್ತಾಯವಾದ ಮೇಲೂ ವಿದೇಶಿಯರು ನಗರದಲ್ಲಿ ನೆಲಸಿರುವುದು ಪತ್ತೆಯಾಗಿದೆ. ಯಾವುದೇ ದಾಖಲಾತಿಗಳನ್ನು ಪಡೆದುಕೊಳ್ಳದ ಮನೆಯ ಮಾಲೀಕರ ವಿರುದ್ಧ ರಿಜಿಸ್ಟ್ರೇಷನ್ ಆಫ್ ಫಾರಿನರ್ಸ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಮೃತಹಳ್ಳಿ, ಬಾಗಲೂರು, ಸಂಪಿಗೆಹಳ್ಳಿ, ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ತಲಾ ಒಂದು, ಚಿಕ್ಕಜಾಲ ಹಾಗೂ ಕೊಡಿಗೆಹಳ್ಳಿಯಲ್ಲಿ ಎರಡು, ಯಲಹಂಕ ನ್ಯೂಟೌನ್ ಠಾಣೆಯಲ್ಲಿ ಮೂರು, ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಐದು, ಯಲಹಂಕ ಪೊಲೀಸ್ ಠಾಣೆಯಲ್ಲಿ ಏಳು ಪ್ರಕರಣಗಳು ದಾಖಲಾಗಿವೆ.

‘ಈಶಾನ್ಯ ಸೇರಿದಂತೆ ನಗರದ ಎಲ್ಲ ವಿಭಾಗಗಳಲ್ಲೂ ಕಾರ್ಯಾಚರಣೆ ಮುಂದುವರಿಸಲಾಗುವುದು. ನಿಯಮಮೀರಿ ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆಗೆ ನೀಡಿದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾವುದು’ ಎಂದು ಪೊಲೀಸರು ಎಚ್ಚರಿಸಿದ್ದಾರೆ.

ತಂದೆ ಕೊಲೆ: ಪುತ್ರ ಸೇರಿ ಏಳು ಮಂದಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿಗಾಗಿ ತಂದೆಯ ಹತ್ಯೆಗೆ ಸುಪಾರಿ ಕೊಟ್ಟಿದ್ದ ಹಾಗೂ ಹತ್ಯೆ ಮಾಡಿದ್ದ ಅಪರಾಧಿಗಳಿಗೆ ಎಫ್‌ಟಿಎಸ್‌ಸಿ ಒಂದನೇ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

2020ರ ಫೆಬ್ರುವರಿ 14ರಂದು ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಏಳು ಅಪರಾಧಿಗಳಿಗೆ ಶಿಕ್ಷೆ ಪ್ರಕಟಿಸಿದೆ.

ಠಾಣಾ ವ್ಯಾಪ್ತಿಯ ಗುಬ್ಬಲಾಳ ಮುಖ್ಯ ರಸ್ತೆಯ ಮಂತ್ರಿ ಟ್ರಾಂಕ್ವಿಲ್ ಅಪಾರ್ಟ್‌ಮೆಂಟ್ ಪಕ್ಕದ ರಾಯಲ್ ಫಾಮ್ ಗೇಟ್ ಬಳಿ ಸಿಂಗನಮಲ್ಲೆ ಮಾಧವ ಅವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಮಾಧವ ಅವರ ಸಂಬಂಧಿಕರೊಬ್ಬರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸಿಂಗನಮಲ್ಲೆ ಮಾಧವ ಅವರಿಗೆ ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ಸ್ಟೀಲ್ ಆ್ಯಂಡ್ ಅಲೈಸ್ ಕಂಪನಿ ಹಾಗೂ ಬಳ್ಳಾರಿ ಸ್ಟೀಲ್ ರೋಲಿಂಗ್ ಮಿಲ್ ಇತ್ತು. ಇನ್ನಿತರ ಪ್ರದೇಶಗಳಲ್ಲೂ ಮಾಧವ ಅವರು ಆಸ್ತಿ ಹೊಂದಿದ್ದರು. ಆಸ್ತಿಯಲ್ಲಿ ಪಾಲು ಕೊಡದ ವಿಚಾರಕ್ಕೆ ಕಿರಿಯ ಪುತ್ರ ಹರಿಕೃಷ್ಣ ತಂದೆಯೊಂದಿಗೆ ಮುನಿಸಿಕೊಂಡಿದ್ದ. ಸಿಂಗನಮಲ್ಲೆ ಮಾಧವ ಅವರ ಸಹೋದರ ಶಿವರಾಮ್ ಪ್ರಸಾದ್ ಜತೆಗೆ ಸೇರಿ ತಂದೆ ಕೊಲೆಗೆ ಸಂಚು ರೂಪಿಸಿದ್ದ.

ತಂದೆಯನ್ನು ಕೊಲೆ ಮಾಡಲು ರಿಯಾಜ್ ಅಹಮದ್ ಶೇಖ್ ಅಲಿಯಾಸ್ ಗೋವಾ ರಿಯಾಜ್ (39), ಶಹಬಾಜ್ ನಾಸಿರ್ ಅಲಿಯಾಸ್ ಗೋಲ್ಡನ್ ಶಹಬಾಜ್ (28), ಶಾರುಖ್ ಮನ್ಸೂರಿ ಅಲಿಯಾಸ್ ಗೋವಾ ಶಾರುಖ್ (28), ಆದಿಲ್ ಖಾನ್ ಅಲಿಯಾಸ್ ಆದಿಲ್ (33), ಸೈಯದ್ ಸಲ್ಮಾನ್ ಅಲಿಯಾಸ್ ಸಲ್ಲು ಎಂಬುವವರಿಗೆ ಸುಪಾರಿ ಕೊಡಲಾಗಿತ್ತು. ಗುಬ್ಬಲಾಳದ ಬಳಿ ತೆರಳುತ್ತಿದ್ದ ಮಾಧವ ಅವರನ್ನು ಅಪರಾಧಿಗಳು ಕೊಲೆ ಮಾಡಿ ಪರಾರಿ ಆಗಿದ್ದರು. ಬಳಿಕ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದರು.

ಹಿಂದಿನ ಇನ್‌ಸ್ಪೆಕ್ಟರ್‌ಗಳಾದ ರಾಮಪ್ಪ ಗುತೇರ್, ಜಿ.ಸಿದ್ದರಾಜು ಹಾಗೂ ತನಿಖಾ ಸಹಾಯಕರಾದ ಪುಟ್ಟ ಮಾದಯ್ಯ, ಶರತ್ ಕುಮಾರ್ ತನಿಖೆ ನಡೆಸಿದ್ದರು. ವಿವಿಧ ಐಪಿಸಿ ಕಲಂಗಳ ಅಡಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಪ್ರಕರಣದಲ್ಲಿ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶೆ ಸರಸ್ವತಿ ಅವರು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ನೀಡಿ ಆದೇಶಿಸಿದ್ದಾರೆ.

ಮೊದಲ ಅಪರಾಧಿಗೆ ₹5 ಲಕ್ಷ, ಎರಡನೇ ಅಪರಾಧಿಗೆ ₹4.50 ಲಕ್ಷ, ಉಳಿದ ಅಪರಾಧಿಗಳಿಗೆ ತಲಾ ₹50 ಸಾವಿರ ದಂಡ ವಿಧಿಸಿದ್ದಾರೆ. ಸರ್ಕಾರಿ ವಕೀಲರಾಗಿ ಅಲುಮೇಲು ವಾದ ಮಂಡಿಸಿದ್ದರು.

ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರಿಂದ ಕಾರ್ಯಾಚರಣೆ

ಪಿ.ಜಿಗೆ ನುಗ್ಗಿ ಅನುಚಿತ ವರ್ತನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಬಿಟಿಎಂ ಒಂದನೇ ಹಂತದ ಗಂಗೋತ್ರಿ ವೃತ್ತದಲ್ಲಿರುವ ಪೇಯಿಂಗ್ ಗೆಸ್ಟ್‌ಗೆ(ಪಿ.ಜಿ) ನುಗ್ಗಿ ಯುವತಿಯೊಂದಿಗೆ ಅನುಚಿತ ವರ್ತನೆ ತೋರಿದ್ದ ಆರೋಪಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ನರೇಶ್ ಪಟ್ಯಂ

ಆಂಧ್ರಪ್ರದೇಶದ ಮದನಪಲ್ಲಿ ನಿವಾಸಿ ಕೆ.ನರೇಶ್ ಪಟ್ಯಂ ಬಂಧಿತ ಆರೋಪಿ.

ಬಂಧಿತನಿಂದ ₹1,500 ನಗದು ಹಾಗೂ ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದ ಆರೋಪಿ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿ ವಿರುದ್ಧ ಮದನಪಲ್ಲಿ ಠಾಣೆಯಲ್ಲೂ ಮೊಬೈಲ್ ಕಳ್ಳತನ ಪ್ರಕರಣಗಳು ದಾಖಲಾಗಿವೆ ಎಂಬುದು ಗೊತ್ತಾಗಿದೆ. ಆಗಸ್ಟ್ 29ರಂದು ನಸುಕಿನ ಜಾವ 3 ಗಂಟೆ ಸುಮಾರಿಗೆ ಮಹಿಳಾ ಪಿ.ಜಿಗೆ ಆರೋಪಿ ನುಗ್ಗಿದ್ದ. ಆತನ ಚಲನವಲನಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆ ಆಗಿದ್ದವು. ದೃಶ್ಯಾವಳಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ದೃಶ್ಯ

ಪಿ.ಜಿಗೆ ನುಗ್ಗಿದ್ದ ಆರೋಪಿ ಎಲ್ಲ ರೂಮ್‌ಗಳ ಬಾಗಿಲುಗಳನ್ನು ಹೊರಗಿನಿಂದ ಲಾಕ್ ಮಾಡಿದ್ದ. ನಂತರ, ಯುವತಿಯೊಬ್ಬಳ ಕೊಠಡಿ ನುಗ್ಗಿದ್ದ. ಯುವತಿಯ ಮೈಕೈ ಮುಟ್ಟಿ ದೌರ್ಜನ್ಯ ಎಸಗಿದ್ದ. ಆರೋಪಿಯನ್ನು ಕಂಡು ಆತಂಕಗೊಂಡು ಯುವತಿ ಜೋರಾಗಿ ಕೂಗಿದ್ದರು. ಚಾಕು ತೋರಿಸಿ ಬೆದರಿಸಿದ್ದ. ಈ ವೇಳೆ ಪ್ರತಿರೋಧವೊಡ್ಡಿದ ಯುವತಿಯ ಮೇಲೆ ಹಲ್ಲೆ ನಡೆಸಿ ಎಳೆದಾಡಿದ್ದ. ನಂತರ, ಕೊಠಡಿಯಲ್ಲಿದ್ದ ₹2,500 ನಗದು ಕಳವು ಮಾಡಿಕೊಂಡು ಪರಾರಿಯಾಗಿದ್ದ. ಯುವತಿಯ ಚೀರಾಟ ಕೇಳಿ ಪಕ್ಕದ ಕೊಠಡಿಯ ಯುವತಿಯರು ಎಚ್ಚರಗೊಂಡು ವಿಚಾರಿಸಿದಾಗ ಕೃತ್ಯ ಗೊತ್ತಾಗಿತ್ತು. ನಂತರ, ಯುವತಿ ಪೊಲೀಸರಿಗೆ ದೂರು ನೀಡಿದ್ದರು.

₹5.60 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿದ ವಿವೇಕನಗರ ಠಾಣೆಯ ಪೊಲೀಸರು, ಇಬ್ಬರನ್ನು ಬಂಧಿಸಿ 13 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ. ಜಪ್ತಿ ಮಾಡಿಕೊಂಡ ಗಾಂಜಾದ ಮೌಲ್ಯ ₹5.60 ಲಕ್ಷ ಎಂದು ಅಂದಾಜಿಸಲಾಗಿದೆ.

ಒಡಿಶಾದ ಗೋಪಿನಾಥ್ ಸಮಲ್ (43) ಹಾಗೂ ಬಿಹಾರದ ಬಿರೇಂದರ್ ಪಾಂಡೆ ಬಂಧಿತರು.

ಬಿರೇಂದರ್ ಪಾಂಡೆ ಎಂಬಾತ ಠಾಣಾ ವ್ಯಾಪ್ತಿಯ ಆಸ್ಟಿನ್‌ಟೌನ್‌ನ ನೀಲಸಂದ್ರ ಚೋರ್‌ಪಾರ್ಕ್ ಬಳಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ. ಆತನನ್ನು ಬಂಧಿಸಿ ₹60 ಸಾವಿರ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ. ಗೋಪಿನಾಥ್ ಸಮಲ್ ಎಂಬಾತ ಎಎಸ್‌ಸಿ ಸೆಂಟರ್ ಮಿಲ್ಟ್ರಿ ಕಾಂಪೌಂಡ್ ಪಕ್ಕದ ಪಾದಚಾರಿ ಮಾರ್ಗದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ. ಆತನಿಂದ ₹5 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಖಚಿತ ಮಾಹಿತಿ ಆಧರಿಸಿ, ಎರಡೂ ಕಡೆ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

ಬಿರೇಂದರ್ ಪಾಂಡೆ



ಗೋಪಿನಾಥ್ ಸಮಲ್

ಆರೋಪಿಗಳು ಹೊರರಾಜ್ಯದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಕೊಲೆ ಯತ್ನ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದು ಕೊಲೆಗೆ ಯತ್ನಿಸಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಫಾರ್ದೀನ್ (24), ಮೊಹಮ್ಮದ್ ಅಫಾನ್ (26), ಮೊಹಮ್ಮದ್ ರಾಯನ್ (21) ಹಾಗೂ ಎಂ.ಸಮೀರ್ (24) ಬಂಧಿತರು.

ಬಾಬುರ್ ರಾಯನ್ ಎಂಬುವವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ‘ಕೊಲೆ ಮಾಡುವ ಉದ್ದೇಶದಿಂದ ಮಾರಕಾಸ್ತ್ರ ಹಿಡಿದು ಬಂದಿದ್ದ ಆರೋಪಿಗಳು, ನನ್ನ ಹಾಗೂ ಅಫ್ರಿನ್ ಮೇಲೆ ಹಲ್ಲೆ ನಡೆಸಿದ್ದರು ಎಂದು ರಾಯನ್ ದೂರು ನೀಡಿದ್ದರು.

₹50 ಸಾವಿರ ಲಂಚ: ಹೆಡ್‌ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ ದೂರುದಾರರನ್ನೇ ಸಾಕ್ಷಿ ಎಂದು ಪರಿಗಣಿಸಲು ₹50,000 ಲಂಚ ಪಡೆಯುತ್ತಿದ್ದ ವೇಳೆ ವೈಯಾಲಿಕಾವಲ್ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ದಯಾನಂದ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿ ನಿವಾಸಿ ರಾಘವೇಂದ್ರ ಆರ್. ಅವರು ಗಲಾಟೆ ವಿಚಾರವೊಂದರಲ್ಲಿ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆ ಪ್ರಕರಣದಲ್ಲಿ ರಾಘವೇಂದ್ರ ಅವರನ್ನೇ ಸಾಕ್ಷಿಯಾಗಿ ಪರಿಗಣಿಸಲು ದಯಾನಂದ ಅವರು ₹1 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಈ ಬಗ್ಗೆ ರಾಘವೇಂದ್ರ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲೋಕಾಯುಕ್ತ ಎಸ್‌ಪಿ ಶಿವಪ್ರಸಾದ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು.

ಅದರಂತೆ ದೂರುದಾರರು ದಯಾನಂದ ಅವರು ತಿಳಿಸಿದ್ದ ಸ್ಥಳಕ್ಕೆ ತೆರಳಿ, ₹50,000 ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಅವರನ್ನು ಬಂಧಿಸಲಾಗಿದೆ. ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

COLLATERALS/ JOINT VENTURES/ Finance for big Projects/ Take Overs/ Buying/ Selling/ Any Other Good Projects. Vamshadhara Projects And Services. Dr.Swamy Naidu:- 9342247637.

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

General

WE_BUY INDUSTRIES, Industrial Metal Scraps, Copper, Alluminium, Building Dismantle/ Demolition contract in and around Bengaluru and Karnataka immediate payment. Call Verna_Metals, Barton_Centre, MG_Road. 9620253180.

RENTAL PROPERTIES

Accommodation Available

Commercial

14K SQ.FT commercial building available for rent in jayanagar 7th block contact 9845010485

OLD MADRAS Road, Opposite RMZ Infinity, 500 Mtr from Byapanahalli Metro-Station, 1700sft Office Space. Rent-9901255400

REAL ESTATE SELLING

Commercial Land

Mysore

For Sale NEAR MYSORE LAND 2.5 ACRES FRONTAGE OVER 300 FT. On Main Road, Mallinathapura, Bilikere - Hobli, Hunsur Taluka. CONTACT: 9383007171 9383007373 Send your offers to dugartc@dugar.in

Sites

Anjanapura

COMMERCIAL SITE FOR SALE Site no.685 Anjanapura 8th block , north facing 50*80. call: 6362874644.

Devanahalli

SITE FOR Sale 1080 sqft Nakshatri Madhura Meadows Prasannahalli Devanahalli Near Akash Hospital 9880499991, 9986770076

Nagarabhavi

RESIDENTIAL SITE FOR SALE 30x40 at 2nd-Block Nagadevanahalli, Gnanabarthi Layout, Bangalore East facing contact:- 9845666872/ 9845099221

REAL ESTATE BUYING

Industrial & Factory

Multiple Locations

WANTED CITY Limits Private Industrial Land from 10,000sq.ft. upto 2 Acres and KIADB Land measuring 10,000sq.ft. to 4 Acres in Bangalore Urban & Rural District. Call Verna Developers, Barton Center, MG Road, BLR. 9353128035/ 9916310226.

Resedential/ Commercial

Multipal Locations

WANTED RESIDENTIAL Property 1200 to 10,000sft in Jayanagar, Basavanagudi, Chamrajpet, JP_Nagar, Banashankari 2nd Stage, Koramangala and Indiranagar. Call Verna_Developers, Barton Centre, MG_Road. 9916310226/ 9353128035. (Brokers Excuse)

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

General

WANTED TELE CALLERS Experienced female. Accommodation also available. Basaveshwaranagara Bangalore. 8217593354/ 9964617174

PERSONAL

Change of Name

I, SIRI RAMANA GOUD PATIL residing at No.301, Prakruthi Krishna Apartment, Vaishnavi Layout, Vidyaranyapura, Bangalore-560097, have changed my name to SIRI PATIL vide affidavit dated 02-09-2025 before Notary, K.C.Pemmaiah, Bangalore. Henceforth I shall be called SIRI PATIL only in all documents.

I, NAGESH CHANNAPPA, R/@ Devanahalli Taluk, Ilathore, Bengaluru- 562110 have changed my name to NAGESH, vide affidavit dated- 04/09/2025

I, SHANTHARAJU N.S. S/O.SHIVAKUMAR R/a#16/19, Platinum Arch,1st`Cross, 1st`Main,Old Gurappanapalya Main Road,BTM 1st`Stage Bengaluru-29, have changed name MUHAMMAD HATIM S/O.SHIVAKUMAR vide`affidavit 13.08.2025 before`Notary Hemalatha, Bengaluru.

CHANGE OF NAME
I, Vinay Gopaul, residing at No. 516, Nethravathi Cross, New BEL Road, Near Shirdi Sai Hospital, Devasandra, Bengaluru-560054 have changed my name to VINAY GOPAUL Y vide affidavit dated 04.09.2025 before notary Hemalatha P, Bengaluru. Henceforth I shall be called VINAY GOPAUL Y only

I, VENKATESHAN.P, R/at No.33/A, 1st Cross, 2nd Main, Rajiv Gandhi Nagar, Laggere, Peenya Small Industries, Bangalore-560058 have changed my name to P.VENKATESAN vide affidavit dated: 4/9/2025 Before Notary Onkarappa N.R Bangalore

CHANGE OF NAME
I, Shwetha C S, residing at # 150/1, Vinayaka Nagar, 5th Ward, Hebbagodi, Anekal Taluk, Bengaluru-560099, have changed my name to SHWETHA REDDY vide affidavit dated 11.08.2025 before notary Amaranarayanareddy, Anekal, Bengaluru. Henceforth I shall be called SHWETHA REDDY only

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331 | 080-45557163/164

CONNECT

Boot Camps India — B-cube
LEARN AI SKILLS
FOR BUSINESS GROWTH, CAREER SUCCESS & FREELANCE INCOME
NOT ONLINE. HANDS-ON CLASSROOM COACHING
Learn to Master AI Tools – Fast & Easy
Whether you run a business or work in a professional role, AI can help you work smarter and earn more.
- Create websites, product catalogues, YouTube videos, Facebook and Instagram posts, reels, and more—in just minutes.
- Start your own AI Marketing Agency or Sell AI Tools & Services and earn full-time or part-time income
- Build custom AI Assistants and Chatbots, and offer them to clients or use them to streamline your own work.
- Set up time-saving automations and workflows in just 30 minutes.

You will Learn How to
- Use 26+ AI Tools like ChatGPT, Gemini, Leonardo, n8n, make etc.
- Build and Sell AI Tools & AI Agents for Marketing & Sales, HR, Finance.
- Earn by offering No-code Automations for Businesses.
- Work on Freelance AI Projects for Clients Globally.

Who Should Attend: Business Owners & Solopreneurs, Employees, Freelancers & Digital Marketers, Students & Homemakers.
Attend the Free 2 Hour Seminar Today or Tomorrow at 6:20 PM
Hotel Paraag, Raj Bhavan Rd, opp GPO, B'lore-01
Call to Register: 9403893162
www.bootcampsindia.com
Scan to Register

EDUCATION
To Place your Classified Ads Contact: 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಡಬ್ಬಲ್ ಡೆಕರ್‌ಗೆ ₹9700 ಕೋಟಿ

ಮೆಟ್ರೊ 3ನೇ ಹಂತ ● ಈ ಸಾಲಿನಲ್ಲೇ ₹4,000 ಕೋಟಿ ವೆಚ್ಚಕ್ಕೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ಯೋಜನೆಯ ಮೂರನೇ ಹಂತದ ಕಾರಿಡಾರ್‌–1 ಮತ್ತು ಕಾರಿಡಾರ್‌–2ರಲ್ಲಿ ಡಬ್ಬಲ್ ಡೆಕರ್ ರೈಲು ಮತ್ತು ಎತ್ತರಿಸಿದ ರಸ್ತೆ ಮಾರ್ಗ ನಿರ್ಮಾಣಕ್ಕೆ ₹9,700 ಕೋಟಿ ವೆಚ್ಚ ಭರಿಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಕಾರಿಡಾರ್‌–1ರ ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳದವರೆಗೆ ಮತ್ತು ಕಾರಿಡಾರ್‌–2ರ ಹೊಸಹಳ್ಳಿಯಿಂದ ಕಡಬಗೆರೆಯವರೆಗೆ ಒಟ್ಟು 44.65 ಕಿ.ಮೀ.ನಷ್ಟು ಉದ್ದದ ಮೆಟ್ರೊ ರೈಲು ಮಾರ್ಗ ನಿರ್ಮಾಣವಾಗಲಿದೆ. ಈ ಮಾರ್ಗದ ಜತೆಗೆ ಡಬ್ಬಲ್ ಡೆಕರ್ ಮಾದರಿಯಲ್ಲಿ ಒಟ್ಟು 37.121 ಕಿ.ಮೀ.ನಷ್ಟು ಉದ್ದದ ಎತ್ತರಿಸಿದ ರಸ್ತೆ ನಿರ್ಮಿಸಲು ಸಂಪುಟ ಅನುಮೋದನೆ ನೀಡಿದೆ.

ಎತ್ತರಿಸಿದ ರಸ್ತೆಯ ಜತೆಗೆ, ಅಲ್ಲಲ್ಲಿ ಪ್ರವೇಶ ಮತ್ತು ನಿರ್ಗಮನ ರ‍್ಯಾಂಪ್‌ಗಳನ್ನು ನಿರ್ಮಿಸಲಾಗುತ್ತದೆ. ನಿರ್ಮಾಣ ವೆಚ್ಚ, ಹೆಚ್ಚುವರಿ ಭೂಸ್ವಾಧೀನ ವೆಚ್ಚ, ಈಗಾಗಲೇ ಇರುವ ಕೆಲ ಮೇಲ್ಸೇತುವೆಗಳ ತೆರವು ಕಾಮಗಾರಿ ಸೇರಿ ಒಟ್ಟು ₹9,700 ಕೋಟಿ ವೆಚ್ಚವಾಗಲಿದೆ. ಪ್ರಸ್ತಕ ಹಣಕಾಸು ವರ್ಷದಲ್ಲಿ ಮೆಟ್ರೊ ಕಾಮಗಾರಿಗಾಗಿ ₹4,000 ಕೋಟಿ ತೆಗೆದಿರಿಸಿದ್ದು, ಅದನ್ನು ಈ ಯೋಜನೆಗೆ ಬಳಕೆ ಮಾಡಲು ಒಪ್ಪಿಗೆ ನೀಡಲಾಗಿದೆ.

ಮೆಟ್ರೊ ರೈಲು ಮಾರ್ಗದ ನಿರ್ಮಾಣ ವೆಚ್ಚವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ ಸಿಎಲ್) ಭರಿಸಲಿದೆ. ಮುಂದಿನ ಹಣಕಾಸು ವರ್ಷಗಳಲ್ಲೂ ಅಗತ್ಯ ಅನುದಾನವನ್ನು ಒದಗಿಸಲಾಗುತ್ತದೆ. 2030ರ ಅಂತ್ಯದ ವೇಳೆಗೆ ಯೋಜನೆ ಯನ್ನು ಸಾರ್ವಜನಿಕರ ಬಳಕೆಗೆ ಮುಕ್ತವಾಗಿಸುವ ಗುರಿ ಹಾಕಿಕೊಳ್ಳಲಾಗಿದೆ.



ಹಳದಿ ಮಾರ್ಗದಲ್ಲಿ ನಿರ್ಮಿಸಲಾದ ಎತ್ತರಿಸಿದ ರಸ್ತೆಯಲ್ಲಿ 3 ಕಿ.ಮೀ. ಅಂತರದಲ್ಲಿ ಯಾವುದೇ ಪ್ರವೇಶ ಅಥವಾ ನಿರ್ಗಮನ ರ‍್ಯಾಂಪ್‌ಗಳಿಲ್ಲ. ಕಾರಿಡಾರ್‌–1 ಮತ್ತು 2ರ ಎತ್ತರಿಸಿದ ಮಾರ್ಗದಲ್ಲಿ ಅಲ್ಲಲ್ಲಿ ರ‍್ಯಾಂಪ್‌ಗಳ ನಿರ್ಮಾಣ

ಈ ಎರಡೂ ಕಾರಿಡಾರ್‌ಗಳಲ್ಲಿ ಹಲವು ಮೇಲ್ಸೇತುವೆಗಳು ಮತ್ತು ಗ್ರೇಡ್ ಸಪರೇಟರ್‌ಗಳು ಇವೆ. ಅವುಗಳನ್ನು ಉಳಿಸಿಕೊಂಡೇ ಡಬ್ಬಲ್ ಡೆಕರ್ ಮಾರ್ಗ ವಿನ್ಯಾಸ ಮಾಡಲಾಗುತ್ತದೆ

ಹಳೆಯ ಮೇಲ್ಸೇತುವೆ ಬಳಿ ಡಬ್ಬಲ್ ಡೆಕರ್ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನದ ವೆಚ್ಚ ಹೆಚ್ಚಾದರೆ, ಮೇಲ್ಸೇತುವೆ ತೆರವು ಮಾಡಲು ಅನುಮತಿ ನೀಡಲಾಗಿದೆ

ಅಪಾರ್ಟ್‌ಮೆಂಟ್, ಪಿಜಿಗಳ ಹೊರೆ ತಗ್ಗಿಸಿದ ಜಲಮಂಡಳಿ

ಕಾವೇರಿ ನೀರು ದರ: ಕೊಂಚ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಕಳೆದ ಏಪ್ರಿಲ್‌ನಲ್ಲಿ ಕಾವೇರಿ ನೀರು ಹಾಗೂ ಒಳಚರಂಡಿ ಸ್ವಚ್ಛತೆಯ ದರವನ್ನು ಏರಿಕೆ ಮಾಡಿತ್ತು. ಆದರೆ, ಇದಕ್ಕೆ ವಿರೋಧ ವ್ಯಕ್ತವಾದ ಕಾರಣ ಅಪಾರ್ಟ್‌ಮೆಂಟ್ ಹಾಗೂ ಪೇಯಿಂಗ್ ಗೆಸ್ಟ್‌ಗಳಿಗೆ(ಪಿಜಿ) ನಿಗದಿ ಪಡಿಸಿರುವ ದರದಲ್ಲಿ ಕೊಂಚ ಇಳಿಕೆ ಮಾಡಿದೆ.

ಹೊಸ ಆದೇಶದ ಪ್ರಕಾರ ಈ ತಿಂಗಳಿನಿಂದ 2,000 ಮನೆಗಳಿಗಿಂತ ಕಡಿಮೆ ಇರುವ ಅಪಾರ್ಟ್‌ಮೆಂಟ್‌ಗಳಿಗೆ ನೀರಿನ ದರ ತಗ್ಗಲಿದೆ. 2,000ಕ್ಕಿಂತ ಹೆಚ್ಚು ಮನೆಗಳಿರುವ ಅಪಾರ್ಟ್‌ಮೆಂಟ್‌ಗಳ ನೀರಿನ ದರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅಪಾರ್ಟ್‌ಮೆಂಟ್‌ಗಳಲ್ಲಿ ಪ್ರತಿಯೊಂದು ಮನೆಯವರು ನಿತ್ಯ 200 ಲೀಟರ್‌ವರೆಗೆ ಕಿಲೋ ಲೀಟರ್‌ಗೆ ₹32ರಂತೆ ದರ ಪಾವತಿಸಬೇಕಾಗುತ್ತದೆ. 200 ಲೀಟರ್‌ಗಿಂತ ಹೆಚ್ಚು ಬಳಸಿದರೆ ಆಗ ಕಿಲೋ ಲೀಟರ್‌ಗೆ ದರ ₹55 ಆಗಲಿದೆ.

ಪಿಜಿ ಮಾಲೀಕರ ಸಂಘದ ಮನವಿ ಮೇರೆಗೆ ಸ್ವಚ್ಛತಾ ಶುಲ್ಕವನ್ನು ಶೇ 60 ಕಡಿಮೆ ಮಾಡಲಾಗಿದೆ. 20ಕ್ಕಿಂತ ಹೆಚ್ಚು ಕೊಠಡಿಗಳು ಇರುವ ಪಿಜಿಗಳಿಗೆ ₹7500 ಮಾಸಿಕ ಶುಲ್ಕ ಪಾವತಿಸುವಂತೆ ಸೂಚಿಸಲಾಗಿತ್ತು, ಈಗ ₹3 ಸಾವಿರಕ್ಕೆ ಇಳಿಕೆ ಮಾಡಲಾಗಿದೆ. ಮೊದಲು ಈ ಶುಲ್ಕ ₹1 ಸಾವಿರ ಮಾತ್ರ ಇತ್ತು.

‘ಮೊದಲು ದರ ನಿಗದಿಪಡಿಸಿದಾಗ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗಳ ಸಂಖ್ಯೆಯನ್ನು ಪರಿಗಣಿಸಿರಲಿಲ್ಲ. ಬಳಿಕ ಒಕ್ಕೂಟದಿಂದ ಮಂಡಳಿಗೆ ಮನವಿ ಸಲ್ಲಿಸಿ ಕಡಿಮೆ ಮನೆಗಳಿರುವ ಅಪಾರ್ಟ್‌ಮೆಂಟ್‌ಗಳ ಮೇಲೆ ವಿಧಿಸಿರುವ ನೀರಿನ ಶುಲ್ಕ ತಗ್ಗಿಸಲು ಕೋರಿದ್ದೆವು. ಸದ್ಯ 2000ಕ್ಕಿಂತ ಹೆಚ್ಚು ಮನೆಗಳಿರುವ ಬೃಹತ್ ಅಪಾರ್ಟ್‌ಮೆಂಟ್‌ಗಳಿಗೆ ಹೆಚ್ಚಿನ ಬಿಲ್ ಬರಬಹುದು. ಬೇರೆ ಅಪಾರ್ಟ್‌ಮೆಂಟ್‌ಗಳಿಗೆ ಹೊರೆಯಂತೂ ತಗ್ಗಲಿದೆ’ ಎಂದು ಬೆಂಗಳೂರು ಅಪಾರ್ಟ್‌ಮೆಂಟ್ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅರುಣ್‌ಕುಮಾರ್ ತಿಳಿಸಿದರು.

‘ನಮ್ಮ ಮನವಿಗೆ ಸ್ಪಂದಿಸಿ ಜಲಮಂಡಳಿ ಸ್ವಚ್ಛತಾ ದರ ಕಡಿಮೆ ಮಾಡಿರುವುದು ಸಂತಸ ತಂದಿದೆ’ ಎಂದು ಪಿಜಿ ಮಾಲೀಕರ ಹಿತರಕ್ಷಣಾ ಸಂಘದ ಅಧ್ಯಕ್ಷ ಡಿ.ಟಿ.ಅರುಣ್‌ಕುಮಾರ್ ತಿಳಿಸಿದರು.

ACHARYA PATHASALA EDUCATIONAL TRUST®
FOUNDER'S DAY
PROF. N. ANANTHACHAR, FOUNDER
A.P.S. GROUP OF INSTITUTIONS
N.R.Colony, Bengaluru-560019
(5-9-1910 to 21-4-1976)
On this auspicious occasion of TEACHER'S DAY
The 115th Birthday Anniversary of our Founder Prof. N. Ananthachar is being celebrated along with Teacher's Day
The APS Trust, Trustees, Teaching & Non-Teaching Staff, all the Students and the Alumni pay deep respect and rich tributes to him
CA.Dr.Vishnu Bharath Alampalli
President
Prof.A.Prakash
General Secretary

ಎನ್‌ಇಎಫ್, ಎನ್‌ಎಚ್‌ವಿಪಿಎಸ್‌ನ 25ನೇ ವರ್ಷಾಚರಣೆ

ಸದ್ಗುರು ಜೊತೆ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಎಜುಕೇಶನ್ ಫೌಂಡೇಷನ್ (ಎನ್‌ಇಎಫ್) ಮತ್ತು ನ್ಯಾಷನಲ್ ಹಿಲ್‌ವ್ಯೂ ಪಬ್ಲಿಕ್ ಸ್ಕೂಲ್ (ಎನ್‌ಎಚ್‌ವಿಪಿಎಸ್) ಸಂಸ್ಥೆಗಳ 25 ವರ್ಷದ ಸಂಭ್ರಮಾಚರಣೆ ಅಂಗವಾಗಿ ಈಶಾ ಫೌಂಡೇಷನ್‌ನ ಸದ್ಗುರು (ಜಗ್ಗಿ ವಾಸುದೇವ) ಅವರೊಂದಿಗೆ ಸಂವಾದ ಆಯೋಜಿಸಲಾಗಿತ್ತು.

25ನೇ ವಾರ್ಷಿಕೋತ್ಸವದಲ್ಲಿ ಶಿಕ್ಷಕ ಸಮುದಾಯಕ್ಕೆ ಗೌರವ ಸಲ್ಲಿಸುವ ಮೂಲಕ ರಾಜ್ಯದಾದ್ಯಂತ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಚಿಂತನಶೀಲ ನಾಯಕರನ್ನು ಒಟ್ಟುಗೂಡಿಸಿ ಕಾರ್ಯಕ್ರಮ ನಡೆಸಲಾಯಿತು.

‘ಕೃತಕ ಬುದ್ಧಿಮತ್ತೆ (ಎಐ) ಮತ್ತು ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನದ ಯುಗದಲ್ಲಿ, ತಲೆಯಲ್ಲಿ ಸಂಗ್ರಹವಾಗಿರುವ ಮಾಹಿತಿ ಶೀಘ್ರದಲ್ಲೇ ತನ್ನ ಪ್ರಸ್ತುತತೆ ಕಳೆದುಕೊಳ್ಳುತ್ತದೆ. ನೀವು ಮಕ್ಕಳಿಗಿಂತ ಹೆಚ್ಚು ಸಂತೋಷವಾಗಿರಬೇಕು, ಹೆಚ್ಚು ಚುರುಕಾಗಿರಬೇಕು, ಹೆಚ್ಚು ಉತ್ಸಾಹದಿಂದ ಇರಬೇಕು. ಆಗ ಅವರು ನಿಮ್ಮಂತೆ ಆಗಲು ಅಪೇಕ್ಷಿಸುವರು.

ಸದ್ಗುರುವಿನೊಂದಿಗೆ ಐಶ್ವರ್ಯಾ ಡಿ.ಕೆ.ಎಸ್‌.ಹೆಗ್ಡೆ ಅವರು ಸಂವಾದ ನಡೆಸಿದರು

ನಿಮ್ಮ ತಲೆಯಲ್ಲಿ ಪುಸ್ತಕಗಳಿವೆ. ಆದರೆ, ಇನ್ನು ಮೂರರಿಂದ ಐದು ವರ್ಷಗಳಲ್ಲಿ, ತಲೆಯಲ್ಲಿರುವ ಪುಸ್ತಕಕ್ಕೆ ಏನೂ ಅರ್ಥ ಇರುವುದಿಲ್ಲ. ಆದ್ದರಿಂದ, ಅದಕ್ಕೂ ಮೊದಲು, ನೀವು ಮಕ್ಕಳಿಗೆ ಸ್ಫೂರ್ತಿಯ ಶಕ್ತಿಕೇಂದ್ರಗಳಾಗುವಂತಹ ರೀತಿಯಲ್ಲಿ ರೂಪಾಂತರಿಸಿಕೊಳ್ಳಬೇಕು’ ಎಂದು ಸದ್ಗುರು ಅವರು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಉಪ ಮುಖ್ಯಮಂತ್ರಿ ಮತ್ತು ಎನ್‌ಇಎಫ್‌ನ ಮಾಜಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು, ‘ಈ ಸಂಸ್ಥೆಯನ್ನು ಸಂಪೂರ್ಣವಾಗಿ ಶಿಕ್ಷಣದ ಮೇಲಿನ ಅಭಿರುಚಿಯಿಂದಲೇ ನಡೆಸಲಾಗುತ್ತಿದೆ. ಬೆಂಗಳೂರಿಗೆ ಹೆಮ್ಮೆ ತಂದ ಶಿಕ್ಷಕರಾದ ನಿಮ್ಮೆಲ್ಲರಿಗೂ ನಾನು ನಮಸ್ಕರಿಸುತ್ತೇನೆ’ ಎಂದರು.

ಎನ್‌ಇಎಫ್ ಟ್ರಸ್ಟಿ- ಕಾರ್ಯದರ್ಶಿ ಐಶ್ವರ್ಯಾ ಡಿ.ಕೆ.ಎಸ್. ಹೆಗ್ಡೆ ಮಾತನಾಡಿ, ‘ಸಂಸ್ಥೆಗಳನ್ನು ನಿರ್ಮಿಸುವುದಷ್ಟೇ ಅಲ್ಲ, ಮೌಲ್ಯಗಳು, ಧೈರ್ಯ ಮತ್ತು ಕರುಣೆಯಲ್ಲಿ ಬೇರೂರಿದ ಸಮುದಾಯವನ್ನು ನಿರ್ಮಿಸುವುದು ನಮ್ಮ ಉದ್ದೇಶವಾಗಿದೆ. ಶಿಕ್ಷಣದ ಉದ್ದೇಶ ಕೇವಲ ಜ್ಞಾನಾರ್ಜನೆ ಅಲ್ಲ, ಮಾನವೀಯ ಮೌಲ್ಯಗಳನ್ನು ರೂಪಿಸುವುದಾಗಿದೆ’ ಎಂದರು.

ಬಿಕ್ಲು ಶಿವ ಕೊಲೆ: ಆರೋಪಿ ಕಸ್ಟಡಿ ವಿಸ್ತರಣೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನನ್ನು ಮತ್ತೆ 5 ದಿನ ಸಿಐಡಿ ಕಸ್ಟಡಿಗೆ ನೀಡಿ ಒಂದನೇ ಎಸಿಜೆಎಂ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಭಾರತಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜುಲೈ 15ರಂದು ಶಿವಪ್ರಕಾಶ್ ಅವರ ಕೊಲೆ ನಡೆದಿತ್ತು.

ಈ ಪ್ರಕರಣದ ತನಿಖೆಯನ್ನು ಸರ್ಕಾರವು ಸಿಐಡಿಗೆ ವಹಿಸಿತ್ತು. ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಜಗದೀಶ್‌ನನ್ನು ದೆಹಲಿಯಲ್ಲಿ ಸಿಐಡಿ ಪೊಲೀಸರು ಬಂಧಿಸಿದ್ದರು. ಕಸ್ಟಡಿ ಅವಧಿ ಗುರುವಾರಕ್ಕೆ ಮುಕ್ತಾಯವಾಗಿತ್ತು. ವಿಚಾರಣೆ ಬಾಕಿ ಇರುವುದನ್ನು ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಮಾಡಿ, ಇನ್ನೂ ಹತ್ತು ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಕೋರಿದರು. ನ್ಯಾಯಾಲಯವು ಐದು ದಿನ ಸಿಐಡಿ ಕಸ್ಟಡಿಗೆ ನೀಡಿ ಆದೇಶಿಸಿತು.

‘ಎಂಎಸ್‌ಎಂಇಗೆ ಉತ್ತೇಜನ’

ಬೆಂಗಳೂರು: ಜಿಎಸ್‌ಟಿ ದರ ಪರಿಷ್ಕರಣೆಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ಬೆಂಬಲ ನೀಡುವ ಉದ್ದೇಶ ಹೊಂದಿದೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಬಿ.ಆರ್. ಗಣೇಶ್ ರಾವ್ ಹೇಳಿದ್ದಾರೆ.

ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳನ್ನು ‘ಕಾಸಿಯಾ’ ಸ್ವಾಗತಿಸುತ್ತದೆ. ಇದು ಎಂಎಸ್‌ಎಂಇಗಳಿಗೆ ಉತ್ತೇಜನ ನೀಡಲಿದೆ. ವ್ಯವಹಾರಗಳನ್ನು ಸುಲಭಗೊಳಿಸಲಿದೆ. ಪರಿಷ್ಕೃತ ಜಿಎಸ್‌ಟಿ ದರಗಳು ರೈತರು, ಕುಟುಂಬಗಳು ಮತ್ತು ಉದ್ಯಮಗಳಿಗೆ ಅನುಕೂಲಕರವಾಗಿವೆ. ಅಗತ್ಯ ವಸ್ತುಗಳು, ಶಿಕ್ಷಣ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ಮೇಲಿನ ತೆರಿಗೆ ಹಂತ ಸರಳಗೊಳಿಸಿರುವುದರಿಂದ ಗ್ರಾಹಕರ ಮೇಲಿನ ಹೊರೆ ಕಡಿಮೆ ಆಗುತ್ತದೆ ಎಂದು ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ಸೆಮಿಕಾನ್ ಇಂಡಿಯಾದಲ್ಲಿ ಬೆಂಗಳೂರಿನ ರಾಮಯ್ಯ ಆನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ (ಆರ್‌ಯುಎಎಸ್) ಮತ್ತು ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ (ಎಸ್‌ಯುಎನ್‌ವೈ) ನಡುವೆ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ತಂತ್ರಜ್ಞಾನ ವಿನಿಮಯ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಯಿತು. ಆರ್‌ಯುಎಎಸ್‌ನ ಕುಲಾಧಿಪತಿ ಎಂ.ಆರ್. ಜಯರಾಂ, ಎಸ್‌ಯುಎನ್‌ವೈನ ಅಧ್ಯಕ್ಷ ಹವಿದನ್ ರೋಡ್ರಿಗಜ್, ಸಂಶೋಧನೆ ಮತ್ತು ಆರ್ಥಿಕ ಅಭಿವೃದ್ಧಿ ವಿಭಾಗದ ಉಪಾಧ್ಯಕ್ಷ ಥೆನ್ ಕುರುಸ್ಸಿ (ಕೇಶ್) ಕೇಶವದಾಸ್, ಆರ್‌ಯುಎಎಸ್‌ನ ಕುಲಪತಿ ಕೆ.ಕೆ. ರೈನಾ ಉಪಸ್ಥಿತರಿದ್ದರು

ವಾಗ್ದೇವಿ ವಿಲಾಸ ಶಾಲೆಗೆ ಸೇನಾಧಿಕಾರಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧನ ಶಾಂತಿಯ ಸಂದೇಶದೊಂದಿಗೆ ಬೈಕ್ ರ‍್ಯಾಲಿ ಕೈಗೊಂಡಿರುವ ಭಾರತೀಯ ಸೇನಾಧಿಕಾರಿಗಳು, ನಗರದ ವಾರಾಣಸಿ ಆನಂದಪುರದಲ್ಲಿರುವ ವಾಗ್ದೇವಿ ವಿಲಾಸ ಶಾಲೆಗೆ ಬುಧವಾರ ಭೇಟಿ ನೀಡಿ, ವಿದ್ಯಾರ್ಥಿಗಳ ಜತೆಗೆ ಸಂವಾದ ನಡೆಸಿದರು.

ಸೇನಾಧಿಕಾರಿಗಳಾದ ಬ್ರಿಗೇಡಿಯರ್ ದೀಪಕ್ ಗೌರ್, ಲೆಫ್ಟಿನೆಂಟ್ ಕರ್ನಲ್ ನೀಲೇಶ್ ತಿವಾರಿ, ಲೆಫ್ಟಿನೆಂಟ್ ಕರ್ನಲ್ ವಿಶಾಲ್ ಛೋಪ್ರಾ, ಲೆಫ್ಟಿನೆಂಟ್ ಕಮಾಂಡರ್ ಅವಿನಾಶ್ ಪ್ರಸಾದ್, ವಿಂಗ್ ಕಮಾಂಡರ್ ವಿ.ಪಿ. ಭಟ್, ಕಮಾಂಡರ್ ಸಂಜೀತ್ ಥಾಕ ಹಾಗೂ ಸ್ಕ್ವಾಡ್ರನ್ ಲೀಡರ್ ನವನೀತ್ ಶರ್ಮಾ ಅವರು ಉಪಸ್ಥಿತರಿದ್ದರು. ಇವರು ಮೂರು ದೇಶಗಳ ನಡುವೆ (ಭಾರತ,ಶ್ರೀಲಂಕಾ, ನೇಪಾಳ) ಶಾಂತಿಯ ಸಂದೇಶ ಸಾರಲು ಬೈಕ್ ರ‍್ಯಾಲಿ ಕೈಗೊಂಡಿದ್ದು, ಸಂಸ್ಥೆಯ ಅಧ್ಯಕ್ಷ ಕೆ. ಹರೀಶ್ ಅವರು ಸೇನಾಧಿಕಾರಿಗಳನ್ನು ಸ್ವಾಗತಿಸಿದರು.

ಎಲ್ಲ ಸೇನಾಧಿಕಾರಿಗಳೂ ವಿದ್ಯಾರ್ಥಿಗಳ ಜತೆಗೆ ಮುಕ್ತವಾಗಿ ಸಂವಾದದಲ್ಲಿ ಪಾಲ್ಗೊಂಡು, ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಭಾರತೀಯ ಸೇನೆಯಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡರು.

ಬೈಕ್ ಯಾತ್ರೆ ಸಂಚಾಲಕ ರಾಹುಲ್ ಪಾಟೀಲ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ್ ಹಿರೇಮನಿ ಇದ್ದರು.

ಭಾವಪೂರ್ಣ ಶ್ರದ್ಧಾಂಜಲಿ

ವಿ. ಲವಕುಮಾರ್
ಜನನ 1/6/1970 – ನಿಧನ 4/9/2025
ಮನ್ನಾರಾಯನಪಾಳ್ಯ.
ನೀವು ಬಾಳಿ ಬದುಕಿದ ರೀತಿ–ನೀತಿ, ನಮ್ಮಲ್ಲಿ ತೋರಿಸಿದ ಪ್ರೀತಿ, ನಮಗೆಂದೂ ಸ್ಫೂರ್ತಿ. ನಯ–ವಿನಯದ ಸಾಕಾರಮೂರ್ತಿಯಾಗಿ ಬದುಕಿನಲ್ಲಿ ಶಿಸ್ತು, ಆದರ್ಶ, ಮೌಲ್ಯಗಳೊಂದಿಗೆ ಸರ್ವರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ, ಸಾರ್ಥಕ ಬದುಕನ್ನು ಬಾಳಿ, ನಮ್ಮನ್ನಗಲಿ ಪರಮಾತ್ಮನಲ್ಲಿ ಐಕ್ಯ ಹೊಂದಿದ ನಿಮ್ಮ ಆತ್ಮಕ್ಕೆ ಭಗವಂತ ಚಿರಶಾಂತಿ, ಸದ್ಗತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ ನಾವೆಲ್ಲರೂ ಅರ್ಪಿಸುವ ಭಾವಪೂರ್ಣ ಶ್ರದ್ಧಾಂಜಲಿ.
ಇವರ ಅಂತ್ಯಕ್ರಿಯೆ 5/9/2025, ಮಧ್ಯಾಹ್ನ 2 ಗಂಟೆಗೆ ಹೆಬ್ಬಾಳದ ಚಿತಗಾರದಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಕುಟುಂಬ ವರ್ಗ

आयकर विभाग

15ನೇ ಸೆಪ್ಟೆಂಬರ್ 2025
ಹ.ವ. 2025–26ನೇ ಸಾಲಿನ ನಿಮ್ಮ ಆದಾಯ ತೆರಿಗೆ ರಿಟರ್ನ್ (ಐಟಿಆರ್) ಅನ್ನು ಕೊನೆಯ ದಿನಾಂಕದೊಳಗೆ ಫೈಲ್ ಮಾಡುವ ಮೂಲಕ ಅಭಿವೃದ್ಧಿ ಚಕ್ರವನ್ನು ಪೂರ್ಣಗೊಳಿಸಿರಿ
ಕೊನೆಯ ದಿನಾಂಕ ಕಳೆದುಕೊಳ್ಳದಿರಿ
ಸಕಾಲದಲ್ಲಿ ಐಟಿಆರ್ ಸಲ್ಲಿಸಿ
ಅಭಿವೃದ್ಧಿ ವೇಗ ಹೆಚ್ಚಿಸಿ
ದಯವಿಟ್ಟು ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಿ
- ಇ–ಫೈಲಿಂಗ್‌ನ www.incometax.gov.in ಪೋರ್ಟಲ್‌ನಲ್ಲಿ ರಿಟರ್ನ್ಸ್ ಫೈಲ್ ಮಾಡಿರಿ.
- ಇ–ಫೈಲಿಂಗ್ ಪೋರ್ಟಲ್‌ನಲ್ಲಿ ನೋಂದಾಯಿಸಿರುವ ನಿಮ್ಮ ಮೊಬೈಲ್ ನಂಬರ್, ವಿಳಾಸ, ಇಮೇಲ್ ಐಡಿ, ಬ್ಯಾಂಕ್ ಖಾತೆ ವಿವರ ಮುಂತಾದ ಸಂಪರ್ಕ ವಿವರಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಿ.
- ಐಟಿಆರ್ ಸಲ್ಲಿಕೆಗೂ ಮುನ್ನವೇ, ಇ–ಫೈಲಿಂಗ್ ಪೋರ್ಟಲ್‌ನಲ್ಲಿ ನಿಮ್ಮ ಫಾರಂ 26ಎಎಸ್/ಎಐಎಸ್ ಮತ್ತು ಇನ್ನಿತರ ಪ್ರಿ–ಫಿಲ್ಡ್ ಮಾಹಿತಿಯನ್ನು ಪರಿಶೀಲಿಸಿಕೊಳ್ಳಿರಿ.
- ದೋಷಪೂರಿತ ಕಡಿತಗಳನ್ನು ಮತ್ತು ವಿನಾಯಿತಿಗಳನ್ನು ಕ್ಲೇಮ್ ಮಾಡದಿರಿ.
- ಒಂದು ವೇಳೆ, ನೀವು ವಿದೇಶಿ ಬ್ಯಾಂಕ್ ಖಾತೆ, ಸ್ವತ್ತು ಅಥವಾ ಆದಾಯ ಹೊಂದಿದ್ದರೆ, ಅವುಗಳಿಂದ ಬರುವ ನಿಮ್ಮ ಆದಾಯ, ತೆರಿಗೆ ಮಿತಿಗಿಂತ ಕಡಿಮೆಯಾಗಿದ್ದರೂ ಕೂಡ, ನಿಮ್ಮ ಐಟಿಆರ್ ನಮೂನೆಯಲ್ಲಿ ಎಫ್‌ಎ/ಎಫ್‌ಎಸ್‌ಐ ಷೆಡ್ಯೂಲ್ ಭರ್ತಿ ಮಾಡಿರಿ.

CBC 15401/13/0010/2526
ಎಫ್‌ಎ/ಎಫ್‌ಎಸ್‌ಐ ಕುರಿತ ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ
ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ
ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಭೇಟಿ ಕೊಡಿ
www.incometax.gov.in
ಇ–ಫೈಲಿಂಗ್ ಕೈಪಿಡಿಗಾಗಿ
@IncomeTaxIndia @incometaxindia.official @incometaxindiaofficial @Income Tax India @income Tax India Official

ಕಂದಕದಲ್ಲಿ ಸಿಲುಕುತ್ತಿವೆ ವಾಹನಗಳು

ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಏಕಕಾಲದಲ್ಲಿ ಕಾಮಗಾರಿ
• ಜನರ ಓಡಾಟ, ವಾಹನ ಸಂಚಾರಕ್ಕೆ ಸಂಕಷ್ಟ

• ಬಾಲಕೃಷ್ಣ ಪಿ.ಎಚ್.

ಬಸ್ ತಂಗುದಾಣ ಇದೆ ಎಂಬುದು ಗೊತ್ತೇ ಆಗದಂತೆ ಮಣ್ಣು ಸುರಿಯಲಾಗಿದೆ (ಎಡಚಿತ್ರ) ಚಾಮರಾಜಪೇಟೆಯ 5ನೇ ಮುಖ್ಯ ರಸ್ತೆ ಅಗೆದು ಹಾಕಿರುವುದು ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಬೆಂಗಳೂರು: ಚಾಮರಾಜಪೇಟೆಯಲ್ಲಿ 5ನೇ ಮುಖ್ಯರಸ್ತೆಯನ್ನು ವೈಟ್ ಟಾಪಿಂಗ್ ಕಾಮಗಾರಿಗಾಗಿ ಅಗೆಯಲಾಗಿದೆ. ಇದನ್ನು ಸರಿಪಡಿಸುವ ಮೊದಲೇ ಈ ರಸ್ತೆಯನ್ನು ಸಂಪರ್ಕಿಸುವ 6ನೇ ಅಡ್ಡರಸ್ತೆಯಲ್ಲಿಯೂ ಗುಂಡಿ ತೋಡಿರುವುದರಿಂದ ಜನರು ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕಂದಕಗಳಲ್ಲಿ ವಾಹನಗಳು ಸಿಲುಕಿಕೊಳ್ಳುತ್ತಿವೆ.

ಹಲವು ರಸ್ತೆಗಳಲ್ಲಿ ಇಲ್ಲಿ ಏಕಕಾಲಕ್ಕೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಮಳೆ ಬಂದಾಗ ಕೆಸರುಮಯ, ಬಿಸಿಲೇರಿದಾಗ ದೂಳುಮಯವಾಗುತ್ತಿವೆ. ಗುಂಡಿ ತೋಡಿ ಪೈಪ್ ಅಳವಡಿಸಿರುವ ಜಾಗಗಳಲ್ಲಿ ಮಳೆಗೆ ಮಣ್ಣು ಸಡಿಲಗೊಂಡಿದ್ದು, ವಾಹನಗಳು ಸಿಲುಕಿಕೊಳ್ಳುತ್ತಿವೆ. ಎರಡು ದಿನಗಳ ಹಿಂದೆ ಒಂದೇ ದಿನ ಎರಡು ಕಾರುಗಳು ಮತ್ತು ಒಂದು ಟ್ಯಾಂಕರ್ ಸಿಲುಕಿಕೊಂಡಿದ್ದವು. ಚಾಲಕರೊಂದಿಗೆ ಸ್ಥಳೀಯರು ಕೈಜೋಡಿಸಿ ವಾಹನಗಳನ್ನು ಹೊರತೆಗೆದಿದ್ದಾರೆ.

‘ಕೆಲವು ರಸ್ತೆ ಡಾಂಬರೀಕರಣವಾಗಿ ವರ್ಷ ಕೂಡ ಆಗಿಲ್ಲ. ಮತ್ತೆ ಅಗೆದು ಹಾಕಿದ್ದಾರೆ. ಅಗೆಯುವುದಿದ್ದರೆ ಡಾಂಬರ್ ಯಾಕೆ ಹಾಕಬೇಕಿತ್ತು. ಏನು ಮಾಡುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ’ ಎಂದು ಸ್ಥಳೀಯರು ದೂರಿದರು.

‘ನಮ್ಮ ಅಂಗಡಿಯ ಮುಂದೆ ಅಗೆದು ಹಾಕಿ ಹೋಗಿದ್ದರು. ಇಲ್ಲಿ ಹಾಸುಕಲ್ಲುಗಳನ್ನು ಮತ್ತೆ ಅಳವಡಿಸಿ, ಇಲ್ಲದೇ ಇದ್ದರೆ ಅಂಗಡಿಗೆ ಯಾರೂ ಬರುವುದಿಲ್ಲ ಎಂದು ಕೇಳಿಕೊಂಡರೂ ಪ್ರಯೋಜನವಾಗಿಲ್ಲ. ಕೊನೆಗೆ ₹10 ಸಾವಿರ ನೀಡಿ ಹಾಸುಕಲ್ಲು ಹಾಕಿಸಬೇಕಾಯಿತು’ ಎಂದು ಅಂಗಡಿಯವರೊಬ್ಬರು ಅಸಮಾಧಾನ ತೋಡಿಕೊಂಡರು.

ಚಾಮರಾಜಪೇಟೆಯ 5ನೇ ಮುಖ್ಯ ರಸ್ತೆಯನ್ನು ಸಂಪರ್ಕಿಸುವ 6ನೇ ಅಡ್ಡರಸ್ತೆಯಲ್ಲಿಯೂ ಕಾಮಗಾರಿ ನಡೆಯುತ್ತಿದೆ

ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ, ಜಲಮಂಡಳಿಯಿಂದ ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಜೊತೆಗೆ ಮಳೆನೀರು ಚರಂಡಿಯನ್ನೂ ನಿರ್ಮಿಸಲಾಗುತ್ತಿದೆ. ಕಾಮಗಾರಿ ಏಳು ತಿಂಗಳಿನಿಂದ ನಡೆಯುತ್ತಿದೆ. ಇದು ಮುಗಿಯುವ ಲಕ್ಷಣ ಕಾಣುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಒಂದೆಡೆ ದೂಳು ಹಾರುತ್ತಿದ್ದರೆ, ಅದರ ಮಧ್ಯೆಯೇ ನಿಂತು ವ್ಯಾಪಾರಿಗಳು ತರಕಾರಿ, ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ. ಡಾಂಬರನ್ನು ರಸ್ತೆ ಬದಿಯಲ್ಲೇ ಸುರಿಯಲಾಗಿದೆ.

ಗಿಡಮರಗಳನ್ನು ಕಡಿದು ಇಲ್ಲೇ ರಾಶಿ ಹಾಕಲಾಗಿದೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ನಿರ್ಮಿಸಲಾಗಿರುವ ಬಸ್ ತಂಗುದಾಣ ಈ ಕಸದ ರಾಶಿಯ ಮಧ್ಯೆ ಕಾಣದಂತಾಗಿದೆ.

‘ಮುಂದಿನ 30 ವರ್ಷ ಈ ರಸ್ತೆಗಳನ್ನು ಮತ್ತೆ ಅಗೆಯಬಾರದು. ರಸ್ತೆ ಕೆಟ್ಟು ಹೋಗಬಾರದು ಎಂಬ ಉದ್ದೇಶ ಇಟ್ಟುಕೊಂಡು ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಒಳಚರಂಡಿ ಮಂಡಳಿ, ಬೆಸ್ಕಾಂ ಸಹಿತ ವಿವಿಧ ಇಲಾಖೆಗಳು ಸೇರಿ ಯೋಜನೆ ಹಮ್ಮಿಕೊಳ್ಳಲಾಗಿದೆ. ಪ್ರತಿಕೂಲ ಹವಾಮಾನದ ನಡುವೆ ಕೆಲಸ ಮಾಡಲಾಗುತ್ತಿದೆ. ಕಾಮಗಾರಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಕೆಲವೇ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ಸುಸಜ್ಜಿತ ರಸ್ತೆಗಳು ನಿರ್ಮಾಣಗೊಳ್ಳಲಿವೆ’ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಂಜಿನಿಯರ್ ಮತ್ತು ಬಿಬಿಎಂಪಿ ಎಂಜಿನಿಯರ್‌ಗಳು ಪ್ರತಿಕ್ರಿಯಿಸಿದರು.

ಜನ ಏನಂತಾರೆ?

ಮಕ್ಕಳು ಶಾಲೆಗೆ ಹೋಗುವುದು ಹೇಗೆ

ಇಲ್ಲಿ ಶ್ರೀರಾಮ ಶಿಶುವಿಹಾರ, ಶಕುಂತಲಾದೇವಿ ಹಿರಿಯ ಪ್ರಾಥಮಿಕ ಶಾಲೆ, ಲಕ್ಷ್ಮೀದೇವಿ ರಾಮಣ್ಣ ಪ್ರೌಢಶಾಲೆಗಳಿವೆ. ಶಾಲೆಗೆ ಪ್ರವೇಶವೇ ಇಲ್ಲದಂತೆ ಅಗೆದು ಹಾಕಿದ್ದಾರೆ. ಪಕ್ಕದಲ್ಲೇ ಇರುವ ಸಿದ್ದಾರೂಢ ಪ್ರೌಢಶಾಲೆಯ ಬಳಿ ದೊಡ್ಡ ಹೊಂಡವನ್ನೇ ತೋಡಿದ್ದಾರೆ. ಹೀಗೆ ಮಾಡಿದರೆ ಮಕ್ಕಳು, ಶಿಕ್ಷಕರು ಶಾಲೆಗೆ ಬರುವುದು ಹೇಗೆ? ಮಕ್ಕಳನ್ನು ಕರೆದುಕೊಂಡು ಹೋಗಲು ಹೆತ್ತವರು ಬರುವುದು ಹೇಗೆ?

ಗೌರಮ್ಮ, ಸ್ಥಳೀಯರು

ನಡೆದಾಡಲೂ ಕಷ್ಟ

ಒಂದು ಕಡೆ ಅಗೆದು ಪೈಪ್ ಅಳವಡಿಸಿ ಸರಿಯಾಗಿ ಮುಚ್ಚಿ ಮುಂದಕ್ಕೆ ಸಾಗಿದರೆ ಇಷ್ಟು ಸಮಸ್ಯೆ ಆಗುತ್ತಿರಲಿಲ್ಲ. ಎಲ್ಲ ಕಡೆ ಅಗೆದು ಹೋಗಿ ಬಿಡುತ್ತಾರೆ. ಆಮೇಲೆ ಇನ್ನಾವತ್ತೋ ಒಂದು ದಿನ ಬಂದು ಪೈಪ್ ಅಳವಡಿಸುತ್ತಾರೆ. ಸರಿಯಾಗಿ ಮಣ್ಣು ಹಾಕಿ ಮುಚ್ಚುವುದೂ ಇಲ್ಲ. ಮಣ್ಣು ಒಟ್ಟಾರೆ ಹಾಕುವ ಬದಲು ಜೆಸಿಬಿಯಲ್ಲಿ ಸಮತಟ್ಟುಗೊಳಿಸಿ ಅಂದರೂ ಕೇಳುವುದಿಲ್ಲ. ಸಂಚಾರಕ್ಕೆ ತೊಡಕಾಗಿದೆ. ಜನರಿಗೆ ನಡೆದಾಡಲೂ ಕಷ್ಟವಾಗಿದೆ.

ಲೋಕೇಶ್, ಟೈಲರ್

ಅಭಿವೃದ್ಧಿ ವಿರೋಧಿಗಳಲ್ಲ

ನಾವು ಅಭಿವೃದ್ಧಿಯನ್ನು ವಿರೋಧಿಸುತ್ತಿಲ್ಲ. ಆದರೆ, ನಿಧಾನವಾಗಿ ಕಾಮಗಾರಿ ನಡೆಸುತ್ತಿರುವುದರಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳುತ್ತಿದ್ದೇವೆ. ಈ ರೀತಿ ಮಣ್ಣು ಅಗೆದು ಹಾಕಿ ಹೋದರೆ ನಾವೆಲ್ಲ ಅತ್ತಿತ್ತ ಹೋಗುವುದು ಹೇಗೆ? ಮನೆಗಳಿಗೆ, ಅಂಗಡಿಗಳಿಗೆ ಹೋಗದ ಹಾಗೆ ಮಾಡಿದ್ದಾರೆ. ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕು.

ರಾಜು, ವ್ಯಾಪಾರಸ್ಥ

ಸುದ್ದಿ 2 ನಿಮಿಷ

ಹಿರಿಯ ನಾಗರಿಕರಿಗಾಗಿ ಉಚಿತ ಉದ್ಯೋಗ ಮೇಳ 7ರಂದು

ಬೆಂಗಳೂರು: ಹಿರಿಯ ನಾಗರಿಕರಿಗಾಗಿ ಉಚಿತ ಉದ್ಯೋಗ ಮೇಳವನ್ನು ಸೆ.7ರಂದು ನಗರದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ದೇಶದ ಸುಮಾರು 15 ಕೋಟಿ ಹಿರಿಯ ನಾಗರಿಕರಲ್ಲಿ ಶೇ 75 ರಷ್ಟು ಮಂದಿ ತಮ್ಮ ಆರ್ಥಿಕ ಅಗತ್ಯಗಳಿಗಾಗಿ ಇತರರ ಮೇಲೆ ಅವಲಂಬಿತರಾಗಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನೈಟಿಂಗೇಲ್ ಎಂಪವರ್‌ಮೆಂಟ್ ಫೌಂಡೇಷನ್, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಆರ್ಚ್ ಡಯೋಸಿಸ್ ಸಹಯೋಗದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಕಾರ್ಯದರ್ಶಿ ಎಸ್.ಪ್ರೇಮ್ ಕುಮಾರ್ ರಾಜ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಸ್ತುತ ಶೇ 11 ರಷ್ಟು ಹಿರಿಯ ನಾಗರಿಕರು ಸರ್ಕಾರಿ ಉದ್ಯೋಗಗಳಿಂದ ನಿವೃತ್ತರಾದವರು. ಅವರಿಗೆ ಪಿಂಚಣಿ ಸೌಲಭ್ಯಗಳಿವೆ. ಉಳಿದ ಶೇ 89ರಷ್ಟು ಹಿರಿಯ ನಾಗರಿಕರು ಪಿಂಚಣಿಯ ಭದ್ರತೆ ಹೊಂದಿಲ್ಲ ಎಂದರು.

ನೈಟಿಂಗೇಲ್ ಎಂಪವರ್‌ಮೆಂಟ್ ಫೌಂಡೇಷನ್ ಹಿರಿಯ ನಾಗರಿಕರಿಗಾಗಿ 9 ಆವೃತ್ತಿಗಳಲ್ಲಿ ವಿಶೇಷ ಉಚಿತ ಉದ್ಯೋಗ ಮೇಳ ನಡೆಸಿತ್ತು. 8,500ಕ್ಕೂ ಹೆಚ್ಚು ಹಿರಿಯ ನಾಗರಿಕರು ನೋಂದಾಯಿಸಿಕೊಂಡಿದ್ದು, 450ಕ್ಕೂ ಹೆಚ್ಚು ಉದ್ಯೋಗದಾತರು, ಕಂಪನಿಗಳು ಉದ್ಯೋಗಾವಕಾಶಗಳನ್ನು ಒದಗಿಸಿವೆ. ಈವರೆಗೂ 3 ಸಾವಿರಕ್ಕೂ ಹೆಚ್ಚು ಹಿರಿಯ ನಾಗರಿಕರಿಗೆ ಉದ್ಯೋಗ ನೀಡಲಾಗಿದೆ ಎಂದು ಹೇಳಿದರು.

ಎಸ್‌ಬಿಐಯೊಂದಿಗೆ ಬಿಎಂಟಿಸಿ ಒಡಂಬಡಿಕೆ

ಬೆಂಗಳೂರು: ಅಪಘಾತದಲ್ಲಿ ಬಿಎಂಟಿಸಿಯ ನೌಕರರು ಮೃತಪಟ್ಟಲ್ಲಿ ಅವರ ಕುಟುಂಬದವರಿಗೆ ಆರ್ಥಿಕ ಭದ್ರತೆ ಒದಗಿಸಲು ಸಂಸ್ಥೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಈ ಒಡಂಬಡಿಕೆಯು ಮೂರು ವರ್ಷಗಳ ಅವಧಿ ಹೊಂದಿದ್ದು, ಗುರುವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಎಸ್‌ಬಿಐ ಪ್ರಧಾನ ವ್ಯವಸ್ಥಾಪಕ ವಿ.ಎನ್. ಶರ್ಮಾ ಅವರ ಸಮ್ಮುಖದಲ್ಲಿ ಒಡಂಬಡಿಕೆ ಮಾಡಲಾಯಿತು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ಬ್ಯಾಂಕಿಂಗ್ ಹಾಗೂ ಆಪರೇಶನ್ಸ್ ವಿಭಾಗದ ಡಿಸಿಜಿಎಂ ಆಲೋಕ್ ಕುಮಾರ್ ಚತುರ್ವೇದಿ ಉಪಸ್ಥಿತರಿದ್ದರು.

ವೈಯಕ್ತಿಕ ಅಪಘಾತದಲ್ಲಿ ಮೃತಪಟ್ಟರೆ ₹ 1 ಕೋಟಿ, ವಿಮಾನ ಅಪಘಾತದಲ್ಲಿ ಮೃತಪಟ್ಟರೆ ₹ 1 ಕೋಟಿ, ಶಾಶ್ವತ ಪೂರ್ಣ ಅಂಗವೈಕಲ್ಯ ಉಂಟಾದರೆ ₹ 1 ಕೋಟಿ, ಶಾಶ್ವತ ಭಾಗಶಃ ಅಂಗ ವೈಕಲ್ಯ ಉಂಟಾದರೆ ₹ 80 ಲಕ್ಷ ವಿಮಾ ಪರಿಹಾರ ದೊರೆಯಲಿದೆ. ಉಚಿತ ಜೀವ ವಿಮೆ ಪರಿಹಾರ ₹ 6 ಲಕ್ಷ, ₹15,000 ಆಸ್ಪತ್ರೆಯಲ್ಲಿ ನಗದು ಸೌಲಭ್ಯ ಇರಲಿದೆ.

ಅಪಘಾತ ಸಂಭವಿಸಿದ ಸಮಯದಲ್ಲಿ 18 ರಿಂದ 25 ವರ್ಷಗಳ ವಯೋಮಿತಿಯುಳ್ಳ ಹೆಣ್ಣು ಮಕ್ಕಳಿದ್ದರೆ ಅವರ ಮದುವೆಗೆ ಒಬ್ಬರಿಗೆ ₹ 5 ಲಕ್ಷ, ಇಬ್ಬರು ಹೆಣ್ಣುಮಕ್ಕಳಿಗೆ ₹ 10 ಲಕ್ಷ ವರೆಗೆ ದೊರೆಯಲಿದೆ. ಗಂಡು ಮಕ್ಕಳ ಶಿಕ್ಷಣಕ್ಕೆ ₹ 8 ಲಕ್ಷವರೆಗೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ₹ 10 ಲಕ್ಷವರೆಗೆ ಈ ವಿಮಾ ಯೋಜನೆಯಡಿ ದೊರೆಯಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಜಿಬಿಎ ಹೆಸರನ್ನು ಕನ್ನಡೀಕರಿಸಿ: ಆಗ್ರಹ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಹೆಸರನ್ನು ಕನ್ನಡೀಕರಣಗೊಳಿಸುವಂತೆ ಸಹ್ಯಾದ್ರಿ ಸಂಘ ಆಗ್ರಹಿಸಿದೆ.

ಈ ಬಗ್ಗೆ ಸಂಘವು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದೆ. ‘ಗ್ರೇಟರ್ ಬೆಂಗಳೂರು’ ಎಂಬ ಹೆಸರನ್ನು ಕನ್ನಡೀಕರಣಗೊಳಿಸಬೇಕು. ಮಹಾ ಬೆಂಗಳೂರು ಪ್ರಾಧಿಕಾರ, ಉನ್ನತ ಬೆಂಗಳೂರು ಪ್ರಾಧಿಕಾರ ಅಥವಾ ವಿಶಾಲ ಬೆಂಗಳೂರು ಪ್ರಾಧಿಕಾರ ಎಂಬ ಹೆಸರನ್ನು ಇಡಬಹುದಾಗಿದೆ. ಈ ಹೆಸರುಗಳಲ್ಲಿ ಸೂಕ್ತವಾಗಿರುವುದನ್ನು ಆಯ್ಕೆ ಮಾಡಿಕೊಂಡು, ಮುಂದಿನ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕು ಎಂದು ಸಂಘದ ಕಾರ್ಯದರ್ಶಿ ಎಚ್.ಸಿ.ಜಯಪ್ರಕಾಶ್ ಆಗ್ರಹಿಸಿದ್ದಾರೆ.

ಕೃತಿಗಳ ದಾನಕ್ಕೆ ಮನವಿ

ಬೆಂಗಳೂರು: ನಗರದ ಆರ್.ಟಿ. ನಗರದ ತರಳಬಾಳು ಗ್ರಂಥಾಲಯಕ್ಕೆ ಕೃತಿಗಳನ್ನು ದಾನ ಮಾಡುವಂತೆ ಗ್ರಂಥಾಲಯದ ನಿರ್ದೇಶಕ ಪಾ.ಚಂದ್ರಶೇಖರ ಚಡಗ ಮನವಿ ಮಾಡಿದ್ದಾರೆ.

ಲಕ್ಷ್ಮೀ ನಾರಾಯಣ ಚಡಗ ಸ್ಮಾರಕ ಚಾರಿಟಬಲ್ ಟ್ರಸ್ಟ್, ತರಳಬಾಳು ಕೇಂದ್ರ ಮತ್ತು ಶಿವರಾಮ ಕಾರಂತ ವೇದಿಕೆ ಸಹಯೋಗದಲ್ಲಿ ನಡೆಯುತ್ತಿರುವ ಈ ಗ್ರಂಥಾಲಯದಲ್ಲಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು, ಇಂಗ್ಲಿಷ್, ಹಿಂದಿ ಸಾಹಿತ್ಯ, ವ್ಯಕ್ತಿತ್ವ ವಿಕಸನ, ಆಧ್ಯಾತ್ಮಿಕ ಮೊದಲಾದ ವಿಷಯಗಳಲ್ಲಿ 30 ಸಾವಿರಕ್ಕೂ ಹೆಚ್ಚು ಕೃತಿಗಳಿದ್ದು, ಡಿಜಿಟಲೀಕರಣ ಮಾಡುವ ಗುರಿ ಇದೆ. ಹಳೆಯ ಪಠ್ಯ ಪುಸ್ತಕಗಳನ್ನು ಸ್ವೀಕರಿಸುವುದಿಲ್ಲ. ಕೃತಿಗಳನ್ನು ದಾನ ಮಾಡಲು ಇಚ್ಛಿಸುವವರು ಮೊಬೈಲ್: 9343766994 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದಿಂದ ಬಂದು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 85ಕ್ಕಿಂತ ಅಧಿಕ, ಪಿಯುಸಿಯಲ್ಲಿ ಶೇ 80ಕ್ಕಿಂತ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘ ಅರ್ಜಿ ಆಹ್ವಾನಿಸಿದೆ.



ಹೆಸರು, ತಂದೆ–ತಾಯಿಯ ಹೆಸರು, ಹುಟ್ಟಿದ ಜಿಲ್ಲೆ ಸಹಿತ ಎಲ್ಲ ವಿವರಗಳೊಂದಿಗೆ ಸೆ.12ರ ಒಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ 9845694230, 9945517687 ಸಂಪರ್ಕಿಸಬಹುದು ಎಂದು ಸಂಘದ ಅಧ್ಯಕ್ಷ ಚಂದ್ರಕಾಂತ್ ಭಂಡಾರೆ, ಪ್ರಧಾನ ಕಾರ್ಯದರ್ಶಿ ಶರಣಪ್ಪ ಕಾಡದಿ ಕೋರಿದ್ದಾರೆ.

ಹೂವಿನ ಮಾರುಕಟ್ಟೆಯ ಬಗ್ಗೆ ಸೌತ್ ಇಂಡಿಯಾ ಫ್ಲವರ್ ಅಸೋಸಿಯೇಷನ್ ಸ್ಪಷ್ಟನೆ

ಜಿಕೆವಿಕೆಗೂ ಕೆ.ಆರ್. ಮಾರ್ಕೆಟ್‌ಗೂ ಸಂಬಂಧವಿಲ್ಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 5 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಮಾರುಕಟ್ಟೆ
- 900 ಮರಗಳ ಹನನದ ಸುದ್ದಿ ವದಂತಿ

ಬೆಂಗಳೂರು: ಜಿಕೆವಿಕೆಯಲ್ಲಿ ನಿರ್ಮಾಣವಾಗಲಿರುವ ಹೂವು ಮಾರುಕಟ್ಟೆಗೂ ಕೆ.ಆರ್. ಮಾರ್ಕೆಟ್ ಹೂವು ಮಾರುಕಟ್ಟೆ ಸ್ಥಳಾಂತರಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸೌತ್ ಇಂಡಿಯಾ ಫ್ಲವರ್ ಅಸೋಸಿಯೇಷನ್ ಅಧ್ಯಕ್ಷ ಟಿ.ಎಂ. ಅರವಿಂದ್ ಸ್ಪಷ್ಟಪಡಿಸಿದರು.

ಜಿಕೆವಿಕೆಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಮಾರುಕಟ್ಟೆ ದೇಶದ ಹಾಗೂ ವಿಶ್ವದ ಇತರೆ ಭಾಗಗಳಿಗೆ ಕಳುಹಿಸುವ ಕಟ್ ಫ್ಲವರ್ ಮಾರುಕಟ್ಟೆಯಾಗಿದೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರದ ಜಿಕೆವಿಕೆಯಲ್ಲಿ 5 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಹೂವಿನ ಮಾರುಕಟ್ಟೆ ನಿರ್ಮಾಣವಾಗುತ್ತಿದ್ದು, ಇಲ್ಲಿ 900 ಮರಗಳನ್ನು ಹನನ ಮಾಡುತ್ತಿರುವುದಾಗಿ ಸುಳ್ಳು ಸುದ್ದಿಗಳನ್ನು ಹರಡಲಾಗಿದೆ. ಮರಗಳನ್ನು ಉಳಿಸಿಕೊಂಡೇ ಮಾರುಕಟ್ಟೆ ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ ಮರಗಳನ್ನು ಕಡಿಯುತ್ತಿಲ್ಲ. ಸಣ್ಣ ಗಿಡಗಳಿದ್ದರೆ ಅವುಗಳನ್ನು ಸ್ಥಳಾಂತರ ಮಾಡಲಾಗುವುದು. ಪರಿಸರಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆಯಾಗುತ್ತಿಲ್ಲ ಎಂದು ಹೇಳಿದರು.

ಲಕ್ಷಾಂತರ ಹೂವು ಬೆಳೆಗಾರರ ಹಿತ ದೃಷ್ಟಿಯಿಂದ ಹೂವಿನ ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ರೈತರ ಬಹಳ ದಿನಗಳ ಕನಸು ಇದೀಗ ನನಸಾಗುತ್ತಿದೆ. ಬೆಂಗಳೂರು ಸುತ್ತಮುತ್ತ ಶಾಶ್ವತ ಮಾರುಕಟ್ಟೆ ಇಲ್ಲ. ಬೆಂಗಳೂರು, ದೊಡ್ಡಬಳ್ಳಾಪುರ, ಆನೇಕಲ್, ಹೊಸಕೋಟೆ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಕೋಲಾರ ಭಾಗದಲ್ಲಿ ರೈತರು ಬೆಳೆದ ಹೂವುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ. ರೈಲ್ವೆ, ವಾಯುಮಾರ್ಗ, ರಸ್ತೆ ಸಾರಿಗೆ ಎಲ್ಲದಕ್ಕೂ ಜಿಕೆವಿಕೆ ಪ್ರಶಸ್ತ ಸ್ಥಳ ಎಂದರು.

‘ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ಮಾದರಿಯಲ್ಲಿ ರಾಜ್ಯ ಸರ್ಕಾರ, ತೋಟಗಾರಿಕೆ ಇಲಾಖೆ, ಕೃಷಿ ವಿವಿ, ಎಪಿಎಂಸಿ ಸಹಯೋಗದಲ್ಲಿ ಪುಷ್ಪ ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ಹೀಗಾಗಿಯೇ ಸೌತ್ ಇಂಡಿಯಾ ಫ್ಲವರ್ ಅಸೋಸಿಯೇಷನ್, ಎಕ್ಸಾಟಿಕ್ ಫ್ಲವರ್ ಅಸೋಸಿಯೇಷನ್, ಸ್ಮಾಲ್ ಗ್ರೋವರ್ಸ್ ಅಸೋಸಿಯೇಷನ್, ಟ್ರೇಡರ್ ಅಸೋಸಿಯೇಷನ್ ಮನವಿ ಮೇರೆಗೆ ಜಿ.ಕೆ.ವಿ.ಕೆ. ಯಲ್ಲಿ ತೋಟಗಾರಿಕೆಗೆ ಭೂಮಿ ಮಂಜೂರು ಮಾಡಿದ್ದು, ಇನ್ನೂ ಐದು ಎಕರೆ ನೀಡುವಂತೆ ಮನವಿ ಮಾಡಿದ್ದೇವೆ. ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಲಾಗಿದೆ. ವಾಸ್ತವ ತಿಳಿಯದವರು ದಾರಿ ತಪ್ಪಿಸುತ್ತಿದ್ದಾರೆ’ ಎಂದರು.

ಬಿಡಿ ಹೂವು ಮಾರಾಟಗಾರರ ಸಂಘದ ಅಧ್ಯಕ್ಷ ದಿವಾಕರ್ ಮಾತನಾಡಿ, ‘ಕೆ.ಆರ್. ಮಾರ್ಕೆಟ್‌ನಲ್ಲಿ ಮಲ್ಲಿಗೆ, ಸೇವಂತಿಗೆ ಸೇರಿ ಬಿಡಿ ಹೂವು ಮಾರಾಟಗಾರರು ಇರುವುದು. ಜಿಕೆವಿಕೆಯಲ್ಲಿ ಕಟ್ ಫ್ಲವರ್ ಮಾರಾಟ ಮಾಡುವುದಾಗಿದೆ’ ಎಂದರು. ಸುದ್ದಿಗೋಷ್ಠಿಯಲ್ಲಿ ಸೌತ್ ಇಂಡಿಯಾ ಫ್ಲವರ್ ಅಸೋಸಿಯೇಷನ್ ಕಾರ್ಯದರ್ಶಿ ಪಿ.ಜಿ.ರಾಜು ಇದ್ದರು.

ಮೈಸೂರು ರೇಸ್

ಮ್ಯಾಂಡರಿನೊ ಗೆಲ್ಲುವ ನಿರೀಕ್ಷೆ

ಎಚ್.ಎಚ್.ಶ್ರೀ ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಮ್ಯಾಂಡರಿನೊ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನಿಂಬಲ್ ಸ್ಪಿರಿಟ್ 1, ಆರ್ಮಮೆಂಟ್ 5, ಫ್ಯಾಷನಿಸ್ಟ 2
2ನೇ ರೇಸ್: ಸ್ಪ್ಲೆಂಡಿಡ್ ಡ್ರೀಮ್ 7, ಲೆವ್ ರಾನ್ 8, ರಿಪಬ್ಲಿಕನ್ ಸ್ಟಾರ್ 6
3ನೇ ರೇಸ್: ಪವರ್ ಆಫ್ ಗೋಲ್ಡ್ 2, ಕಾರ್ಟರ್ 6, ಆನ್ಕೊರೇಜ್ 9
4ನೇ ರೇಸ್: ಅಕ್ವಾಸ್ಟಿಕ್ 5, ಅನ್‌ಫಾರ್ಗೇಟಬಲ್ ಸ್ಟಾರ್ 12, ವಿನ್‌ಫೀಲ್ಡ್ 8
5ನೇ ರೇಸ್: ಮ್ಯಾಂಡರಿನೊ 3, ಚಾಂಪಿಯನ್ಸ್ ವೇ 2, ಆಫ್ರಿಕನ್ ಗೋಲ್ಡ್ 1
6ನೇ ರೇಸ್: ಡಾನ್ ಕಾರ್ಲೋಸ್ 3, ಮಜಲ್ ಟೋವ್ 5, ಹಿರೊಯಿಸ್ಮ್ 1
7ನೇ ರೇಸ್: ಕ್ಯಾರೆಟ್ ಲವ್ 4, ಏನ್ಸಿಯೆಂಟ್ ಹಿಸ್ಟರಿ 6, ಮಾಂಟೆರಿಯೊ 5

ಉತ್ತಮ ಬೆಟ್: ಡಾನ್ ಕಾರ್ಲೋಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

‘ವೀರಲೋಕ ಬುಕ್ ಪ್ಯಾಕ್’ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು

‘ವೀರಲೋಕ ಬುಕ್ ಬಾಕ್ಸ್’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಗೊರೆ ನೀಡಲು ಅನುಕೂಲವಾಗುವಂತೆ ಪುಸ್ತಕಗಳನ್ನು ಪ್ಯಾಕ್ ಮಾಡಿ ನೀಡುವ ‘ವೀರಲೋಕ ಬುಕ್ ಪ್ಯಾಕ್’ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು.

ವೀರಲೋಕ ಪ್ರಕಾಶನವು ₹10 ಲಕ್ಷ ಹೂಡಿಕೆ ಮಾಡಿ ಒಂದೂವರೆ ವರ್ಷದಲ್ಲಿ ಈ ಯೋಜನೆಯನ್ನು ಸಿದ್ಧಗೊಳಿಸಿದೆ. ಬಟ್ಟೆ, ಡ್ರೈ ಫ್ರೂಟ್ಸ್, ಮೊಬೈಲ್, ಸ್ವೀಟ್ ಇತ್ಯಾದಿಗಳನ್ನು ಉಡುಗೊರೆಯಾಗಿ ನೀಡಲು ತರಹೇವಾರಿ ಉಡುಗೊರೆ ಬಾಕ್ಸ್‌ಗಳಿವೆ. ಆದರೆ ಪುಸ್ತಕಗಳಿಗಾಗಿ ಇದುವರೆಗೂ ಯಾವುದೇ ಉಡುಗೊರೆ ಬಾಕ್ಸ್ ಇರಲಿಲ್ಲ. ಆದರೆ ಈಗ ಅದು ಸಾಧ್ಯವಾಗಿದೆ ಎಂದು ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ಮ್ಯಾಚ್ ಬಾಕ್ಸ್, ತಿಜೋರಿ ಪೆಟ್ಟಿಗೆ, ಮ್ಯಾಗ್ನೆಟಿಕ್ ಬಾಕ್ಸ್, ಬಟರ್ ಫ್ಲೈ ಬಾಕ್ಸ್ ಸೇರಿದಂತೆ ಹತ್ತು ವಿವಿಧ ವಿನ್ಯಾಸಗಳ ಬಾಕ್ಸ್ ಲಭ್ಯವಿವೆ. www.veeralokabooks.com ಮೂಲಕ ಪುಸ್ತಕಗಳನ್ನು ಆರ್ಡರ್ ಮಾಡಬಹುದು. ಮೊಬೈಲ್: 7022122121, 8861212172 ಮೂಲಕವೂ ಉಡುಗೊರೆ ಬಾಕ್ಸ್ ತರಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದ್ದಾರೆ.

‘ಜಿತೋ ಜೇವರ್ ಎಕ್ಸ್‌ಪೋ’ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ವತಿಯಿಂದ ದಕ್ಷಿಣ ಭಾರತದ ಅತಿದೊಡ್ಡ ಆಭರಣ ಮತ್ತು ಮದುವೆ, ವಿಶೇಷ ಜೀವನ ಕುರಿತು ಸೆ.5 ರಿಂದ 7ರವರೆಗೆ ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ‘ಜಿತೋ ಜೇವರ್ ಎಕ್ಸ್ ಪೋ ಆ್ಯಂಡ್ ಬ್ರೈಡಲ್ ಸ್ಟೋರಿ’ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನಿರೂಪಕಿ ಅನುಶ್ರೀ, ರಾಜ್ಯಸಭಾ ಸದಸ್ಯ ಲಹರ್‌ಸಿಂಗ್ ಸಿರೋಯಾ, ಸಂಸದ ಪಿ.ಸಿ.ಮೋಹನ್, ಶಾಸಕರಾದ ಸಿ.ಎನ್. ಅಶ್ವತ್ಥನಾರಾಯಣ, ಎಂ. ಕೃಷ್ಣಪ್ಪ, ಪ್ರಿಯಾಕೃಷ್ಣ ಭಾಗವಹಿಸಲಿದ್ದಾರೆ ಎಂದು ಜೀತೋ ಬೆಂಗಳೂರು ಉತ್ತರ ಅಧ್ಯಕ್ಷ ವಿಮಲ್ ಕಟಾರಿಯಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿತೋ ಅಪೆಕ್ಸ್ ಲೇಡಿಸ್ ವಿಂಗ್, ಜಿತೋ ಕೆಕೆಜಿ ಝೋನ್ ಸಹಯೋಗದಲ್ಲಿ ಮೇಳ ಆಯೋಜಿಸಿದ್ದು, ಒಂದು ಲಕ್ಷ ಚದರಡಿ ಪ್ರದೇಶದಲ್ಲಿ 100ಕ್ಕೂ ಅಧಿಕ ಮಳಿಗೆಗಳನ್ನು ಹಾಕಲಾಗಿದೆ. ದೇಶದ ಪ್ರಮುಖ ಆಭರಣ ಕಂಪನಿಗಳು, ಮದುವೆ ಪರಿಕರ ಪೂರೈಕೆದಾರರು ಒಂದೇ ವೇದಿಕೆಯಲ್ಲಿ ಮದುವೆಗಳಿಗೆ ಅಗತ್ಯವಾಗಿರುವ ಎಲ್ಲ ವಸ್ತುಗಳನ್ನು ಪ್ರದರ್ಶಿಸಲಿದ್ದಾರೆ. ಬಂಗಾರ, ವಜ್ರ, ಪೊಲ್ಕಿ, ಕುಂದನ್, ರತ್ನ, ಬೆಳ್ಳಿಯ ನೂತನ ವಿನ್ಯಾಸಗಳು, ಬ್ರೈಡಲ್ ಉಡುಪುಗಳು – ಲೆಹಂಗಾ, ಸೀರೆ, ಶೇರ್ವಾನಿ, ಫೋಟೋಗ್ರಫಿಗಳನ್ನು ಕೂಡಾ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಪ್ರತಿದಿನ ಲಕ್ಕಿ ಡ್ರಾ ಮಾಡುತ್ತಿದ್ದು, ಅದೃಷ್ಟಶಾಲಿಗಳು ಚಿನ್ನದ ಸರ, ವಜ್ರದ ಉಂಗುರ ಬಹುಮಾನವಾಗಿ ಪಡೆಯಲಿದ್ದಾರೆ. ಕಾರನ್ನು ಬಂಪರ್ ಬಹುಮಾನವಾಗಿ ನೀಡಲಾಗುವುದು ಎಂದರು.

ಜೀತೋ ಪ್ರಧಾನ ಕಾರ್ಯದರ್ಶಿ ವಿಜಯ ಸಿಂಘ್ವಿ ಮಾತನಾಡಿ, ‘ಇದು ಐಶ್ವರ್ಯ, ಸಂಸ್ಕೃತಿ ಮತ್ತು ಕೌಶಲದ ಮಹೋತ್ಸವ. ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ರವರೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ’ ಎಂದು ಹೇಳಿದರು. ಯೋಜನಾ ಸಂಚಾಲಕ ಸುರೇಶ್ ಕುಮಾರ್ ಗನ್ನಾ, ಪದಾಧಿಕಾರಿಗಳು ಉಪಸ್ಥಿತರಿದ್ದರು.

‘ತೇಜಸ್ವಿ’ ಮಹಿಳಾ ಸಮ್ಮೇಳನದಲ್ಲಿ ನಾರಿಯರ ಶಕ್ತಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಫ್ಯಾಮಿಲೀಸ್ ವೆಲ್ಫೇರ್ ಅಸೋಸಿಯೇಷನ್ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ತೇಜಸ್ವಿ’ ಪ್ರಥಮ ರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ನಾರಿಯರ ಶಕ್ತಿ ಅನಾವರಣವಾಯಿತು.

‘ಮನೆ ಹಾಗೂ ಕೆಲಸದ ಸ್ಥಳದಲ್ಲಿ ಪ್ರಕಾಶಿಸುವ ಮಹಿಳೆಯರು’ ಎಂಬ ಶೀರ್ಷಿಕೆಯಡಿ ಈ ಸಮ್ಮೇಳನ ನಡೆಯಿತು. ವೃತ್ತಿಪರ ವಲಯಗಳಲ್ಲಿ ಮಹಿಳೆಯ ಬಹುಮುಖ ಪಾತ್ರಗಳ ಬಗ್ಗೆ ತಿಳಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ವಿಭಾಗದ ಜಂಟಿ ಕಾರ್ಯದರ್ಶಿ ಮನೀಷಾ ಚಂದ್ರ, ದೇಶದ ಪ್ರಗತಿಯಲ್ಲಿ ಎಚ್‌ಎಎಲ್‌ನ ಪಾತ್ರವನ್ನು ಶ್ಲಾಘಿಸಿದರು. ಮನೆ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ವಿವಿಧ ಪಾತ್ರಗಳ ಬಗ್ಗೆ ವಿವರಿಸಿದರು.

ಇದೇ ಸಂದರ್ಭದಲ್ಲಿ ಎಚ್‌ಎಎಲ್ ಫ್ಯಾಮಿಲೀಸ್ ವೆಲ್ಫೇರ್ ಅಸೋಸಿಯೇಷನ್‌ನ 50 ವರ್ಷಗಳ ಸೇವೆಯ ಸ್ಮರಣಾರ್ಥ ವಿಶೇಷ ಸುವರ್ಣ ಮಹೋತ್ಸವ ಅಂಚೆ ಲಕೋಟೆ ಬಿಡುಗಡೆ ಮಾಡಲಾಯಿತು. ಅಸೋಸಿಯೇಷನ್‌ನ ಮುಖ್ಯ ಪೋಷಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶುಭಾ ಸುನಿಲ್ ಉಪಸ್ಥಿತರಿದ್ದರು.

ಕ್ಯಾನ್ಸರ್ ತಜ್ಞೆ ವಿಜಯಲಕ್ಷ್ಮಿ ದೇಶಮಾನೆ, ಅಮೃತ ವಿಶ್ವಪೀಠಂನ ಡೀನ್ ಭವಾನಿ ರಾವ್ ಮತ್ತು ‘ಗುಪ್ತಾ ನಾಯರ್ ಆ್ಯಂಡ್ ಕೋ ಕಂಪನಿ’ಯ ಪಾಲುದಾರೆ ಸತ್ಯಭಾಮಾ ಗುಪ್ತಾ ಅವರು ತಮ್ಮ ವೈಯಕ್ತಿಕ ಅನುಭವಗಳು ಹಾಗೂ ವೃತ್ತಿಪರ ಜೀವನಯಾನದ ಹಾದಿಯನ್ನು ಹಂಚಿಕೊಂಡರು.

ಎಫ್‌ಕೆಸಿಸಿಐಯಲ್ಲಿ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನ

‘ಶಿಕ್ಷಣಕ್ಕೆ ಸಿಎಸ್‌ಆರ್ ನಿಧಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯ ವಲಯದ ಪ್ರಗತಿಗೆ ಹೆಚ್ಚು ಬಳಕೆ ಮಾಡಬೇಕು ಎಂದು ಗೃಹ ಸಚಿವ ಜಿ.ಪರಮೇಶ್ವರ ಸಲಹೆ ನೀಡಿದರು.

‘ವಿಕಸಿತ ಭಾರತ: ಅಂತರ್ಗತ ಬೆಳವಣಿಗೆ, ಸುಸ್ಥಿರ ಭವಿಷ್ಯ’ ಎಂಬ ವಿಷಯದ ಮೇಲೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಆಯೋಜಿಸಿದ್ದ ಸಮಾರಂಭದಲ್ಲಿ ಸಿಎಸ್‌ಆರ್ ಪ್ರಶಸ್ತಿಗಳನ್ನು ಗುರುವಾರ ಪ್ರದಾನ ಮಾಡಿ ಅವರು ಮಾತನಾಡಿದರು.

ಭಾರತದಲ್ಲಿ ಸಿಎಸ್‌ಆರ್ ನಿಧಿ ಬಳಕೆ ವಿಚಾರದಲ್ಲಿ ದಶಕದ ಹಿಂದೆಯೇ ಕಾನೂನು ಜಾರಿಗೊಂಡಿದೆ. ಕಳೆದ ವರ್ಷದಲ್ಲಿಯೇ ಒಟ್ಟು ₹34 ಸಾವಿರ ಕೋಟಿ ಸಿಎಸ್‌ಆರ್ ನಿಧಿ ಬಳಕೆಯಾಗಿದೆ. ಕರ್ನಾಟಕದಲ್ಲಿ ಈ ನಿಧಿಯಲ್ಲಿ ₹2,500 ಕೋಟಿ ಬಳಸಲಾಗಿದೆ. ಇದು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ ಎಂದು ತಿಳಿಸಿದರು.

ಎಫ್‌ಕೆಸಿಸಿಐ ಆಯೋಜಿಸಿದ್ದ ಸಮಾರಂಭದಲ್ಲಿ ಉದ್ಯಮಿಗಳಿಗೆ ಸಿಎಸ್‌ಆರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗೃಹ ಸಚಿವ ಜಿ.ಪರಮೇಶ್ವರ, ಉಮಾ ರೆಡ್ಡಿ, ಎಂ.ಜಿ.ಬಾಲಕೃಷ್ಣ, ಟಿ.ಸಾಯಿರಾಮ್ ಪ್ರಸಾದ್ ಮತ್ತು ಕೀರ್ತನ್ ಕುಮಾರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಕರ್ನಾಟಕವು ಮಾಹಿತಿ ತಂತ್ರಜ್ಞಾನ, ಕೃಷಿ, ಆರೋಗ್ಯ, ಶಿಕ್ಷಣ ವಲಯದಲ್ಲಿ ಮುಂಚೂಣಿಯಲ್ಲಿದೆ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ರೂಪಿಸಿದ ನೀತಿಗಳು ಫಲ ನೀಡಿ ಬೆಂಗಳೂರು ನಗರ ಸಾಫ್ಟ್‌ವೇರ್ ರಫ್ತು ವಲಯದಲ್ಲಿ ಪ್ರಮುಖ ನಗರವಾಗಿ ಹೊರ ಹೊಮ್ಮಿದೆ. ಕಡಿಮೆ ಖರ್ಚಿನಲ್ಲಿ ಆರೋಗ್ಯ ಸೇವೆಗಳು ಲಭಿಸುತ್ತಿವೆ ಎಂದು ಹೇಳಿದರು.

ಉದಾರೀಕರಣ ನೀತಿಗೆ ಭಾರತ ತೆರೆದುಕೊಂಡ ನಂತರ ಭಾರತ ಜಾಗತಿಕ ಮಟ್ಟದಲ್ಲಿ ಸಮರ್ಥವಾಗಿ ಬೆಳೆದಿದೆ. ಹಸಿರು ಕ್ರಾಂತಿಯ ಪರಿಣಾಮವಾಗಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದೆ. ಹಿಂದೆ ಅಮೆರಿಕವನ್ನು ನಾವು ಅವಲಂಬಿಸುವ ಸ್ಥಿತಿಯಿತ್ತು. ಈಗ ಹಾಗಿಲ್ಲ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವ ಸುಂಕದ ವಿಚಾರದಲ್ಲಿ ತಿರುಗೇಟು ನೀಡುವ ಹಂತಕ್ಕೆ ಭಾರತ ಬೆಳೆದಿದೆ. ಇದರಲ್ಲಿ ಉದ್ಯಮ ವಲಯದ ಪಾತ್ರವೂ ಇದೆ ಎಂದು ನುಡಿದರು.

ಸಂಸ್ಥೆ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ, ನಿಯೋಜಿತ ಅಧ್ಯಕ್ಷರಾದ ಉಮಾರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ.ಸಾಯಿರಾಮ್ ಪ್ರಸಾದ್ ಮತ್ತು ಸಿಎಸ್‌ಆರ್ ಸಮಿತಿ ಅಧ್ಯಕ್ಷ ಕೀರ್ತನ್ ಕುಮಾರ್ ಹಾಜರಿದ್ದರು. ಉದ್ಯಮ ವಲಯದಲ್ಲಿ ಉತ್ತಮ ಸಾಧನೆ ಮಾಡಿದ 30ಕ್ಕೂ ಹೆಚ್ಚು ಸಂಸ್ಥೆಗಳಿಗೆ ಸಿಎಸ್‌ಆರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸರ್ಕಾರದಿಂದಲೇ ಎಲ್ಲವನ್ನೂ ಮಾಡಲಾಗದು. ಉದ್ಯಮ ವಲಯದ ಬೆಂಬಲವೂ ಬೇಕಾಗುತ್ತದೆ. ಉದ್ಯಮಿಗಳು ಸಿಎಸ್‌ಆರ್ ನಿಧಿ ಮೂಲಕ ಕೈ ಜೋಡಿಸಬೇಕು.
ಜಿ.ಪರಮೇಶ್ವರ, ಗೃಹ ಸಚಿವ

ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಿಎಸ್‌ಆರ್

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ ಸಂಸ್ಥೆಯು, ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಉದ್ಯಮದ ಸಿಎಸ್‌ಆರ್ ನಿಧಿಯನ್ನು ಬಳಸಿಕೊಳ್ಳುವಂತೆ ಗೃಹ ಸಚಿವರನ್ನು ಕೋರಿತು.

ಸೌರಶಕ್ತಿ ಚಾಲಿತ ಸಂಚಾರ ಸಿಗ್ನಲ್‌ಗಳು, ಶೂನ್ಯ-ತ್ಯಾಜ್ಯ ಪೊಲೀಸ್ ಠಾಣೆಗಳು ಮತ್ತು ಇತರ ಸುಸ್ಥಿರ ಪರಿಹಾರಗಳನ್ನು ಸ್ಥಾಪಿಸಲು ಪೊಲೀಸ್ ಇಲಾಖೆಯು ಸಿಎಸ್‌ಆರ್ ನಿಧಿಯನ್ನು ಬಳಸಬಹುದು ಎಂದು ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಮಾಡಿದ ಮನವಿಗೆ ಗೃಹ ಸಚಿವರು ಸಮ್ಮತಿ ಸೂಚಿಸಿದರು.

₹3,049 ಕೋಟಿಯ 761 ಕಾಮಗಾರಿಗಳಲ್ಲಿ ನ್ಯೂನತೆ

ಬಿಬಿಎಂಪಿಯಲ್ಲಿ ಅಕ್ರಮ • ನ್ಯಾ. ನಾಗಮೋಹನದಾಸ್ ವಿಚಾರಣಾ ಆಯೋಗದ ವರದಿ: ಸಚಿವ ಸಂಪುಟ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019-20ರಿಂದ 2022-23ರ ಅವಧಿಯಲ್ಲಿ ₹3,049.35 ಕೋಟಿ ಮೊತ್ತದ ವೆಚ್ಚದಲ್ಲಿ ಪೂರ್ಣಗೊಂಡಿರುವ 761 ಕಾಮಗಾರಿಗಳಲ್ಲಿ ಯಾವುದಾದರೊಂದು ನ್ಯೂನತೆ ಕಂಡು ಬಂದಿದೆ ಎಂದು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ವಿಚಾರಣಾ ಆಯೋಗ ಪತ್ತೆಹಚ್ಚಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಾಮಗಾರಿಗಳ ಅವ್ಯವಹಾರ/ ಭ್ರಷ್ಟಾಚಾರ ಆರೋಪಗಳ ಕುರಿತ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಗಸ್ಟ್ 30ರಂದು ಆಯೋಗ ಸಲ್ಲಿಸಿತ್ತು. ಈ ವರದಿಯನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿದ್ದು, ಇದನ್ನು ಆಧರಿಸಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಘನತ್ಯಾಜ್ಯ: ಘನತ್ಯಾಜ್ಯ ನಿರ್ವಹಣೆಯ ಏಳು ಕಾಮಗಾರಿಗಳನ್ನು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಇಲ್ಲದೆ ನಿರ್ವಹಿಸಲಾಗಿದೆ. ಮೂರು ಕಾಮಗಾರಿಗಳ ಅಂದಾಜು ಪಟ್ಟಿಗೆ ಅನುಮೋದನೆ ಇಲ್ಲ. ಒಂದು

ಮುಖ್ಯಾಂಶಗಳು

- ಸಲಹೆ, ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ನಿರ್ಧಾರ
- ಅಗತ್ಯ ಕ್ರಮ ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಗೆ ಸೂಚನೆ

ಕಾಮಗಾರಿಗೆ ತಾಂತ್ರಿಕ ವಿವರಣೆ ಇಲ್ಲ. ಎರಡು ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ನಡೆಸಿಲ್ಲ. ನಾಲ್ಕು ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಂಡಿಲ್ಲ. ಒಂದು ಕಾಮಗಾರಿಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆಯಾಗಿಲ್ಲ. ನಾಲ್ಕು ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸದೆ ಬಿಲ್ ಪಾವತಿಸ ಲಾಗಿದೆ. ಮೂರು ಕಾಮಗಾರಿಗಳಲ್ಲಿ ಅನುಷ್ಠಾನ ಪ್ರಮಾಣಕ್ಕಿಂತ ಹೆಚ್ಚು ಪಾವತಿಸಲಾಗಿದೆ. ಮೂರು ಕಾಮಗಾರಿಗಳಲ್ಲಿ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಇಲ್ಲ. ಎಂಟು ಕಾಮಗಾರಿಗಳಲ್ಲಿ ನೋಡಲ್ ಅಧಿಕಾರಿ ವಿವರ ಸಲ್ಲಿಸಿಲ್ಲ. ಒಟ್ಟಾರೆ ₹63.77 ಕೋಟಿ ವೆಚ್ಚದ 21 ಕಾಮಗಾರಿಗಳಲ್ಲಿ ನ್ಯೂನತೆಗಳು ಆಗಿವೆ.

ರಸ್ತೆ ಅಭಿವೃದ್ಧಿ- ಒಎಫ್‌ಸಿ: ನಾಲ್ಕು ಕಾಮಗಾರಿಗಳ ಅನುಷ್ಠಾನ ಪೂರ್ಣಗೊಳ್ಳದಿದ್ದರೂ ದೃಢೀಕರಿಸಲಾಗಿದೆ. 18 ಕಾಮಗಾರಿಗಳ ಅನುಷ್ಠಾನದಲ್ಲಿ ಮೂಲ ಅಂದಾಜು ಪಟ್ಟಿ ಅನುಮೋದನೆಯಾಗಿಲ್ಲ. 13 ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡಿಕೊಂಡಿಲ್ಲ. ಐದು ಕಾಮಗಾರಿಗಳಲ್ಲಿ ನಿರ್ವಹಣಾ ಅವಧಿ ನಿರ್ವಹಿಸಿಲ್ಲ. ಏಳು ಕಾಮಗಾರಿಗಳಲ್ಲಿ ಅನುಮೋದಿತ ವೇರಿಯೇಷನ್ ನಿರ್ವಹಿಸಿಲ್ಲ. ಲೆಕ್ಕಪತ್ರ ವಿಭಾಗವು 22 ಕಾಮಗಾರಿಗಳಲ್ಲಿ ಬಿಲ್ ಪಾವತಿಸುವಾಗ ಶಾಸನಬದ್ಧ ಕಟಾವು ಮಾಡಿಲ್ಲ. 49 ಕಾಮಗಾರಿಗಳ ಭದ್ರತಾ ಠೇವಣಿಯನ್ನು ನಿಗದಿತ ವೇಳೆಯಲ್ಲಿ ಹಿಂದಿರುಗಿಸಿಲ್ಲ. ಒಎಫ್‌ಸಿ ಕೇಬಲ್‌ಗೆ ಅನುಮತಿ ನೀಡುವ ಬಗ್ಗೆ ಆಯೋಗ ಕೋರಿದ ಮಾಹಿತಿಯನ್ನು ನೀಡದೆ, ಬಿಬಿಎಂಪಿ ನಿರ್ಲಕ್ಷ್ಯ ವಹಿಸಿದೆ. ಒಟ್ಟು ₹875 ಕೋಟಿ ವೆಚ್ಚದ ಕಾಮಗಾರಿಗಳಲ್ಲಿ ಲೋಪವಾಗಿದೆ.

ಬೃಹತ್ ನೀರುಗಾಲುವೆ- ನಗರ ಯೋಜನೆ: ಬೃಹತ್ ನೀರುಗಾಲುವೆ ಕಾಮಗಾರಿ ಹಾಗೂ ಕೇಂದ್ರ ವಲಯ ನಗರ ಯೋಜನೆ ವಿಭಾಗಗಳಲ್ಲಿ ನಕ್ಷೆ ಮಂಜೂರು, ಸ್ವಾಧೀನಾನುಭವ ಪತ್ರದ ಪ್ರಕರಣಗಳಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯದ 43 ಕಾಮಗಾರಿ, ಕ್ರಿಯಾಯೋಜನೆ ಅನುಮೋದನೆಯಾಗದ 43 ಕಾಮಗಾರಿ, ಟೆಂಡರ್ ಪ್ರಕ್ರಿಯೆ ನಡೆಸದ 24 ಕಾಮಗಾರಿ, ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಿಯಮಾವಳಿ ಪಾಲಿಸದ 74 ಕಾಮಗಾರಿಗಳು, ಗುಣಮಟ್ಟ ಕಾಪಾಡದ 10 ಕಾಮಗಾರಿಗಳು, ಗುತ್ತಿಗೆ ಕರಾರಿನಂತೆ ಅನುಷ್ಠಾನವಾಗದ 92 ಕಾಮಗಾರಿಗಳು, 1,504 ಅರ್ಜಿಗಳಲ್ಲಿ ಶೇ 4.15ರಷ್ಟು ಮಾತ್ರ ಸ್ವಾಧೀನಾನುಭವಪತ್ರ ನೀಡಿರುವುದು ಸೇರಿದಂತೆ ₹810.12 ಕೋಟಿ ಮೊತ್ತದ ಕಾಮಗಾರಿಗಳಲ್ಲಿ ಹಲವು ನ್ಯೂನತೆಗಳು ಕಂಡುಬಂದಿದೆ. ಇದಕ್ಕೆ ಕಾರಣರಾದ ಎಲ್ಲರ ಮೇಲೆ ಶಿಸ್ತುಕ್ರಮವಾಗಬೇಕು ಎಂದು ಶಿಫಾರಸು ಮಾಡಲಾಗಿದೆ.

ಕೆರೆ ಅಭಿವೃದ್ಧಿ- ಸ್ಮಾರ್ಟ್ ಸಿಟಿ: ಕೆರೆ ಅಭಿವೃದ್ಧಿ, ವಾರ್ಡ್ ಮಟ್ಟದ ಕಾಮಗಾರಿಗಳು ಮತ್ತು ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿಗಳಲ್ಲಿ 305ಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆದಿಲ್ಲ. 300 ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ಇಲ್ಲ. 25 ಕಾಮಗಾರಿಗಳ ಅಂದಾಜುಪಟ್ಟಿ, ತಾಂತ್ರಿಕ ವಿವರಣೆಗೆ ಸರಿಯಾದ ಪ್ರಮಾಣದಲ್ಲಿ ಅಳವಡಿಸಿಲ್ಲ. 137 ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ. 344 ಕಾಮಗಾರಿಗಳಲ್ಲಿ ಟೆಂಡರ್ ದಾಖಲೆಗಳನ್ನು ಪರಿಶೀಲಿಸದೆ, ನಿಯಮಾವಳಿ ಉಲ್ಲಂಘಿಸಲಾಗಿದೆ. 97 ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡಿಲ್ಲ. 217 ಕಾಮಗಾರಿಗಳಲ್ಲಿ ಯೋಜನಾ ಸಮಾಲೋಚಕರ ನಿಯೋಜನೆಯಲ್ಲಿ ಉಲ್ಲಘನೆಯಾಗಿದೆ. 209 ಕಾಮಗಾರಿಗಳಲ್ಲಿ ಪರೀಕ್ಷಾ ವರದಿ ಸಲ್ಲಿಸಿಲ್ಲ. 13 ಕಾಮಗಾರಿಗಳಲ್ಲಿ ಅತಿ ಗಂಭೀರ ನ್ಯೂನತೆಗಳಿವೆ. ₹1,300.08 ಕೋಟಿ ಮೊತ್ತದ ಕಾಮಗಾರಿಗಳಲ್ಲಿ ನ್ಯೂನತೆ ಇದೆ ಎಂದು ಉಲ್ಲೇಖಿಸಲಾಗಿದೆ.

ನಗರದ ಜೆ.ಸಿ ರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿ (ಸಾಂದರ್ಭಿಕ ಚಿತ್ರ)

ಎಲ್ಲಿ ಹೆಚ್ಚು ಅಕ್ರಮ?

ವಿಭಾಗ	ಕಾಮಗಾರಿ ಸಂಖ್ಯೆ	ಮೊತ್ತ
ಕೆರೆ ಅಭಿವೃದ್ಧಿ- ಸ್ಮಾರ್ಟ್ ಸಿಟಿ	528	₹1,300.08 ಕೋಟಿ
ರಸ್ತೆ ಅಭಿವೃದ್ಧಿ- ಒಎಫ್‌ಸಿ	115	₹875 ಕೋಟಿ
ಬೃಹತ್ ನೀರುಗಾಲುವೆ- ನಗರ ಯೋಜನೆ	103	₹810.12 ಕೋಟಿ
ಘನತ್ಯಾಜ್ಯ ನಿರ್ವಹಣೆ	21	₹63.77 ಕೋಟಿ

ಕ್ರಿಮಿನಲ್ ಪ್ರಕರಣಕ್ಕೆ ಶಿಫಾರಸು

‘ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿ, ಎಂಜಿನಿಯರ್, ಲೆಕ್ಕಶಾಖೆ ಸಿಬ್ಬಂದಿ ಬೇರೆ ಇಲಾಖೆಗೆ ವರ್ಗವಾಗಿದ್ದರೂ ಅಥವಾ ನಿವೃತ್ತರಾಗಿದ್ದರೂ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಬೇಕು’ ಎಂದು ಎಚ್.ಎನ್. ನಾಗಮೋಹನದಾಸ್ ವಿಚಾರಣಾ ಆಯೋಗ ಶಿಫಾರಸು ಮಾಡಿದೆ.

‘ಬಿಬಿಎಂಪಿಯ ನಾಲ್ಕು ವಿಭಾಗಗಳ ಕಾಮಗಾರಿಗಳ ತನಿಖೆಯಲ್ಲಿ ಹೆಚ್ಚಿನ ಅಕ್ರಮ ನಡೆದಿರುವುದು ಸ್ಪಷ್ಟವಾಗಿದೆ. ಈ ಅಕ್ರಮದಲ್ಲಿ ಅಧಿಕಾರಿಗಳು ಮತ್ತು ಕೆಲವು ಗುತ್ತಿಗೆದಾರರು ಕೈಜೋಡಿಸಿರುವುದನ್ನು ಅಲ್ಲಗಳೆಯುವಂತಿಲ್ಲ. ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು, ಎಂಜಿನಿಯರ್, ಲೆಕ್ಕಶಾಖೆ ಸಿಬ್ಬಂದಿ, ಯೋಜನಾ ಸಮಾಲೋಚಕರು, ಗುತ್ತಿಗೆದಾರರು, ಕಾಮಗಾರಿ ಅನುಷ್ಠಾನ ಪ್ರಕ್ರಿಯೆಯಲ್ಲಿ ನಿಯಮಬಾಹಿರವಾಗಿ ನಡೆದುಕೊಂಡಿರುವ ಇತರರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಬೇಕು’ ಎಂದು ಶಿಫಾರಸು ಮಾಡಲಾಗಿದೆ.

‘ಕಾರ್ಯಪಾಲಕ ಎಂಜಿನಿಯರ್ ಮತ್ತು ಅದಕ್ಕೂ ಮೇಲಿನ ಹುದ್ದೆಗಳಿಗೆ ಪದೋನ್ನತಿ ನೀಡುವ ಮೊದಲು ಪರಿಶೀಲನೆ ನಡೆಸಬೇಕು. ಅಶಿಸ್ತಿನ ಕ್ರಮಕ್ಕೆ ಅವರು ಒಳಪಟ್ಟಿದ್ದರೆ ಪದೋನ್ನತಿ ನೀಡಬಾರದು. ಕಾರ್ಯದಕ್ಷತೆಯುಳ್ಳ ಅಧಿಕಾರಿಗಳನ್ನು ನೇಮಿಸುವುದು ಸೂಕ್ತ’ ಎಂದು ಸಲಹೆ ನೀಡಲಾಗಿದೆ.

‘ಕ್ರಮವಾಗದಿದ್ದರೆ ವರದಿಗೆ ಅರ್ಥ ಇಲ್ಲ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಲ್ಲಿ ಗಂಭೀರ ನ್ಯೂನತೆಗಳು ಕಂಡುಬಂದಿವೆ. ಹತ್ತಾರು ವರ್ಷಗಳಿಂದ ಸರ್ಕಾರ ತನಿಖಾ ಸಮಿತಿಗಳಿಂದ ಪಡೆದಿರುವ ವರದಿಗಳಲ್ಲಿ ಮಾಡಿರುವ ಶಿಫಾರಸಿನ ಶಿಸ್ತು ಕ್ರಮ, ಮಹಾಲೇಖಪಾಲಕರು ಗಂಭೀರ ನ್ಯೂನತೆ ಗಮನಿಸಿ ಶಿಫಾರಸು ಮಾಡಿರುವ ಶಿಸ್ತುಕ್ರಮ, ಲೋಕಾಯುಕ್ತ– ಇತರೆ ಸಂಸ್ಥೆಗಳು ತನಿಖೆ ನಡೆಸಿ ಮಾಡಿರುವ ಶಿಫಾರಸು, ಸುಧಾರಣಾ ಕ್ರಮಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸದಿದ್ದರೆ, ತನಿಖಾ ಸಂಸ್ಥೆಗಳು ಸಲ್ಲಿಸುವ ವರದಿಗಳು ಅರ್ಥ ಕಳೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಸರ್ಕಾರ ವರದಿಯನ್ನು ಗಂಭೀರವಾಗಿ ಪರಿಗಣಿಸಿ, ಶಿಸ್ತಿನ ಕ್ರಮ ಮತ್ತು ಸುಧಾರಣಾ ಕ್ರಮಗಳನ್ನು ಸಕಾಲದಲ್ಲಿ ತೆಗೆದುಕೊಂಡಲ್ಲಿ ಮಾತ್ರ ಮಹಾನಗರ ಪಾಲಿಕೆ ಆಡಳಿತ ವ್ಯವಸ್ಥೆಯಲ್ಲಿ ಮುಂದಿನ ದಿನಗಳಲ್ಲಿ ಸುಧಾರಣೆ ಕಾಣಬಹುದು’ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಬಿಎ ಮುಖ್ಯ ಆಯುಕ್ತರಿಂದ ನಗರ ಪರಿಚಯ

ಜಿಬಿಎ: ಐದು ನಗರ ಪಾಲಿಕೆಗಳ ಆಯುಕ್ತರಿಗೆ ಪಾಠ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ಆಯುಕ್ತರು, ಹೆಚ್ಚುವರಿ ಆಯುಕ್ತರಿಗೆ ಪಾಲಿಕೆಯಲ್ಲಿ ಕಾರ್ಯ ನಿರ್ವಹಣೆ ಬಗ್ಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅರಿವು ಮೂಡಿಸಿದರು.

ನಗರ ಪಾಲಿಕೆಗಳ ಅಧಿಕಾರಿಗಳೊಂದಿಗೆ ಗುರುವಾರ ನಡೆದ ಸಭೆಯಲ್ಲಿ ಕಂದಾಯ, ಜಾಹೀರಾತು, ಆಸ್ತಿಗಳು, ಆರೋಗ್ಯ, ಪಶುಪಾಲನಾ ವಿಭಾಗ, ಕಲ್ಯಾಣ ಕಾರ್ಯಕ್ರಮಗಳು, ಶಿಕ್ಷಣ, ಅನುದಾನ ಹಂಚಿಕೆ, ಕಾಮಗಾರಿಗಳು, ಕೆರೆಗಳು, ಉದ್ಯಾನಗಳು, ಅರಣ್ಯ ಹಾಗೂ ನಗರ ಯೋಜನೆ ವಿಷಯಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದರು.

‘ನಾಗರಿಕರಿಗೆ ಉತ್ತಮ ಆಡಳಿತ ಹಾಗೂ ಪರಿಣಾಮಕಾರಿಯಾಗಿ ಯೋಜನೆಗಳನ್ನು ಜಾರಿಗೊಳಿಸುವ ಸಲುವಾಗಿ ಜಿಬಿಎ ಜಾರಿಗೆ ತಂದು ಐದು ನಗರ ಪಾಲಿಕೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಹೊಸದಾಗಿ ನೇಮಕಗೊಂಡ ಎಲ್ಲಾ ಅಧಿಕಾರಿಗಳಿಗೂ ಎಲ್ಲಾ ರೀತಿಯ ಸಹಕಾರ ಮತ್ತು ಸೌಲಭ್ಯಗಳನ್ನು ನೀಡಲಾಗುವುದು. ರಸ್ತೆ ಗುಂಡಿ, ಬೀದಿ ದೀಪ ಹಾಗೂ ಕಸದ ಸಮಸ್ಯೆ ನಿವಾರಣೆಗೆ ಮೊದಲ ಆದ್ಯತೆ ನೀಡಬೇಕು’ ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

‘ಸ್ಥಳೀಯ ಸಮಸ್ಯೆಗಳನ್ನು ಅರ್ಥೈಸಿಕೊಂಡು ಕಾಲಮಿತಿಯೊಳಗಾಗಿ

ಮುಖ್ಯಾಂಶಗಳು

- ರಸ್ತೆ ಗುಂಡಿ, ಬೀದಿದೀಪ, ಕಸ ವಿಲೇವಾರಿಗೆ ಆದ್ಯತೆ ಇರಲಿ
- ಜಿಬಿಎಯಿಂದಾಗಿರುವ ಬದಲಾವಣೆ ಜನರಿಗೆ ಅರಿವಾಗಬೇಕು
- ನಗರವನ್ನು ಮೇಲ್ದರ್ಜೆಗೆ ಏರಿಸಲು ಸೂಚನೆ

ಬಗೆಹರಿಸುವ ಕೆಲಸ ಮಾಡಬೇಕು. ರಸ್ತೆ ಗುಂಡಿ ಮುಚ್ಚುವುದು, ಬೀದಿ ದೀಪಗಳ ಅಳವಡಿಕೆ, ತ್ಯಾಜ್ಯ ಸಮಸ್ಯೆ ಪರಿಣಾಮಕಾರಿಯಾಗಿ ಬಗೆಹರಿಸಿದರೆ ಬಹುತೇಕ ಸಮಸ್ಯೆಗಳು ನಿವಾರಣೆಯಾಗಲಿವೆ. ಕಸದ ಸಮಸ್ಯೆ ನಿವಾರಣೆಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತವು (ಬಿಎಸ್‌ಡಬ್ಲ್ಯುಎಂಎಲ್) ನಗರ ಪಾಲಿಕೆಗಳ ಜೊತೆ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಲಿದೆ. ನಗರವನ್ನು ನಾವೆಲ್ಲರೂ ಸೇರಿ ಮೇಲ್ದರ್ಜೆಗೆ ತಂದು ಜನ ಮೆಚ್ಚುವ ಕೆಲಸ ಮಾಡಬೇಕು’ ಎಂದು ಸೂಚಿಸಿದರು.

‘ಅಪಾಯ ಸ್ಥಿತಿಯಲ್ಲಿರುವ ಮರಗಳು, ಒಣಗಿರುವ ಮರಗಳು ಹಾಗೂ ವಿದ್ಯುತ್ ದೀಪಕ್ಕೆ ಅಡ್ಡಲಾಗಿರುವ ಮರದ ರೆಂಬೆ/ ಕೊಂಬೆಗಳನ್ನು ತೆರವುಗೊಳಿಸಬೇಕು. ಕೆರೆಗಳು, ಉದ್ಯಾನಗಳಿಗೆ ಹೋಮ್ ಗಾರ್ಡ್‌ಗಳನ್ನು ನಿಯೋಜಿಸಬೇಕು. ಜಿಬಿಎ ಆದ ಬಳಿಕ ಅಧಿಕಾರಿಗಳು ಮಾಡುವ ಕೆಲಸ-ಕಾರ್ಯಗಳಲ್ಲಿ ಆಗಿರುವ ಬದಲಾವಣೆಗಳನ್ನು ಜನರು ಗಮನಿಸುವಂತಾಗಬೇಕು’ ಎಂದು ಸೂಚಿಸಿದರು.

‘ನಗರದಲ್ಲಿ ಮಳೆಯ ಮುನ್ಸೂಚನೆಯಿದ್ದು, ಜಲಾವೃತವಾಗುವ ಸ್ಥಳಗಳಲ್ಲಿ ಗ್ರೇಟಿಂಗ್‌ಗಳ ಬಳಿ ತ್ಯಾಜ್ಯ ಇರದಂತೆ ಸ್ವಚ್ಛತೆ ಮಾಡಬೇಕು. ರಾಜಕಾಲುವೆಗಳಲ್ಲಿ ನಿರಂತರವಾಗಿ ಸ್ವಚ್ಛತೆ ಕಾಪಾಡಬೇಕು ಹಾಗೂ ವಿಪತ್ತು ನಿರ್ವಹಣೆಗೆ ಸರಿಯಾದ ಯೋಜನೆ ರೂಪಿಸಿಕೊಂಡು ಕೆಲಸ ಮಾಡಬೇಕು’ ಎಂದರು.

ಮಹೇಶ್ವರ್ ರಾವ್ ಮಾತನಾಡಿ, ‘ಜಿಬಿಎ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಿಸುವ ಹಾಗೂ ಇ-ಖಾತಾ ನೀಡುವ ಸಲುವಾಗಿ ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತರು ಪ್ರತಿನಿತ್ಯ ನಡೆಸುವ ವರ್ಚ್ಯುವಲ್ ಸಭೆಯಲ್ಲಿ ನಗರ ಪಾಲಿಕೆಗಳ ಆಯುಕ್ತರು ಪಾಲ್ಗೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಸೂಚಿಸಿದರು.

‘ಯೋಜನಾ ವಿಭಾಗ, ಬೃಹತ್ ನೀರುಗಾಲುವೆ, ವರ್ಲ್ಡ್ ಬ್ಯಾಂಕ್ ಯೋಜನೆ ಕಾಮಗಾರಿಗಳನ್ನು ಆಯಾ ನಗರ ಪಾಲಿಕೆಗಳಿಗೆ ಹಂಚಿಕೆ ಮಾಡಲಾಗಿದೆ. ಆಯಾ ಕಾಮಗಾರಿಗಳನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದರು.

ಜಿಬಿಎ ವಿಶೇಷ ಆಯುಕ್ತ ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್, ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ, ನಗರ ಪಾಲಿಕೆಗಳ ಆಯುಕ್ತರಾದ ಡಿ.ಎಸ್. ರಮೇಶ್, ಕೆ.ಎನ್. ರಮೇಶ್, ಪೊಮ್ಮಲ ಸುನೀಲ್ ಕುಮಾರ್, ಕೆ.ವಿ. ರಾಜೇಂದ್ರ, ಹೆಚ್ಚುವರಿ ಆಯುಕ್ತರಾದ ಲತಾ, ದಿಗ್ವಿಜಯ್ ಬೋಡ್ಕೆ, ಲೊಕಂಡೆ ಸ್ನೇಹಲ್ ಸುಧಾಕರ್ ಉಪಸ್ಥಿತರಿದ್ದರು.

ನಗರ ಪಾಲಿಕೆ ಅರಿಯಲು ವೆಬ್‌ಸೈಟ್

ಜಿಬಿಎ ವ್ಯಾಪ್ತಿಯಲ್ಲಿ ಪ್ರಸ್ತುತ 198 ವಾರ್ಡ್‌ಗಳಂತೆ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ. ನಾಗರಿಕರು ತಮ್ಮ ಪ್ರದೇಶ ಯಾವ ನಗರ ಪಾಲಿಕೆಯ ವ್ಯಾಪ್ತಿಯಲ್ಲಿದೆ ಎಂಬುದನ್ನು ತಿಳಿಯಲು ವೆಬ್‌ಸೈಟ್ (https://BBMP.gov.in/KnowYourNewCorporation) ರಚಿಸಲಾಗಿದೆ. ಈ ಮೂಲಕ ವಾರ್ಡ್ ಸಂಖ್ಯೆ ಅಥವಾ ಹೆಸರು ನಮೂದಿಸಿದಲ್ಲಿ ನಗರ ಪಾಲಿಕೆಯ ಮಾಹಿತಿ ಸಿಗುತ್ತದೆ ಎಂದು ಮುನೀಶ್ ಮೌದ್ಗಿಲ್ ತಿಳಿಸಿದರು.

ಅಧಿಕಾರಿಗಳ ಸಭೆಯಲ್ಲಿ ತುಷಾರ್ ಗಿರಿನಾಥ್ ಅವರು ನಗರ ಪಾಲಿಕೆ ಆಯುಕ್ತರು ಮಾತನಾಡಿದರು

₹6,700 ಕೋಟಿ ತೆರಿಗೆ ಸಂಗ್ರಹದ ಗುರಿ

‘ಜಿಬಿಎ ವ್ಯಾಪ್ತಿಯಲ್ಲಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹6,700 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ’ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದರು.

ಸಭೆಯಲ್ಲಿ ನಗರ ಪಾಲಿಕೆಗಳ ಆಯುಕ್ತರಿಗೆ ತೆರಿಗೆ, ಇ–ಖಾತಾ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಅವರು, ‘ಈವರೆಗೆ ₹3,217 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲಾಗಿದ್ದು, ಇನ್ನೂ ₹3,483 ಕೋಟಿ ವಸೂಲಿಯಾಗಬೇಕಿದೆ. ಇದಲ್ಲದೆ 2.75 ಲಕ್ಷ ಆಸ್ತಿ ಸುಸ್ತಿದಾರರಿಂದ ₹786 ಕೋಟಿ ಸಂಗ್ರಹಿಸಬೇಕಿದ್ದು, ಅವರೆಲ್ಲರಿಗೂ ಎಲೆಕ್ಟ್ರಾನಿಕ್ ಡಿಮಾಂಡ್ ನೋಟೀಸ್ ನೀಡಲಾಗಿದೆ. ಆಯಾ ನಗರ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಹಾಗೂ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರಿಂದ ತ್ವರಿತಗತಿಯಲ್ಲಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು’ ಎಂದು ಸೂಚನೆ ನೀಡಿದರು.

ನಗರದಲ್ಲಿ 25 ಲಕ್ಷ ಆಸ್ತಿಗಳಿದ್ದು, 7.5 ಲಕ್ಷ ಅಂತಿಮ ಇ-ಖಾತಾಗಳನ್ನು ವಿತರಿಸಲಾಗಿದೆ ಎಂದರು.

‘ಪ್ರತಿ ವಿಭಾಗಕ್ಕೆ ಪ್ರತ್ಯೇಕ ಗುತ್ತಿಗೆದಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿ) ವ್ಯಾಪ್ತಿಯಲ್ಲಿರುವ ಪ್ರತಿ ವಿಭಾಗಕ್ಕೂ ಪ್ರತ್ಯೇಕ ಗುತ್ತಿಗೆದಾರರನ್ನು ನೇಮಿಸಿ, ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಸೂಚಿಸಿದರು.

ಮುಖ್ಯ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ಅವರು, ರಸ್ತೆ ಗುಂಡಿಗಳಿಗೆ ಸಂಬಂಧಿಸಿದಂತೆ ವೆಬ್ ಅಥವಾ ಅಪ್ಲಿಕೇಶನ್‌ಗಳಲ್ಲಿ ಯಾವುದೇ ದೂರು ಬಾಕಿ ಇರದಂತೆ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

‘ಸಿಬಿಡಿ ರಸ್ತೆಗಳು, ಟೆಂಡರ್ ಶ್ಯೂರ್ ರಸ್ತೆ, ವೈಟ್ ಟಾಪಿಂಗ್ ರಸ್ತೆಗಳು ಮತ್ತು ಹೈ ಡೆನ್ಸಿಟಿ ಕಾರಿಡಾರ್‌ಗಳನ್ನು ಗುರುತಿಸಿ, ಮಾದರಿ ರಸ್ತೆಗಳನ್ನಾಗಿ ಮಾಡಬೇಕು ಎಂದು ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಸೂಚಿಸಿದರು. ರಸ್ತೆವಾರು ಪ್ರತ್ಯೇಕ ನೋಡಲ್ ಅಧಿಕಾರಿಗಳನ್ನು ನೇಮಿಸಿ, ನಿರ್ವಹಣೆ ಜವಾಬ್ದಾರಿ ವಹಿಸಬೇಕು’ ಎಂದರು.

‘ಮೆಟ್ರೊ ಪಿಲ್ಲರ್‌ಗಳು, ರಸ್ತೆ ಇಕ್ಕೆಲಗಳ ಸೌಂದರೀಕರಣಕ್ಕಾಗಿ ಗಿಡಗಳನ್ನು ನೆಡಬೇಕು. ಅಗತ್ಯ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಿ, ನಿರ್ವಹಣೆಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಪಾದಚಾರಿ ಮಾರ್ಗ ಒತ್ತುವರಿದಾರರಿಗೆ ಒಂದು ದಿನದ ಮುಂಚಿತವಾಗಿ ನೋಟಿಸ್ ನೀಡಿ ಎಚ್ಚರಿಸಿ, ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಸ್ವಚ್ಛತಾ ಅಭಿಯಾನ ನಡೆಸಬೇಕು. ಏಕ ಬಳಕೆ ಪ್ಲಾಸ್ಟಿಕ್ ತಪಾಸಣೆ ನಡೆಸಬೇಕು ಎಂದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಜಂಟಿ ಆಯುಕ್ತ ರಂಗನಾಥ್, ಮುಖ್ಯ ಎಂಜಿನಿಯರ್‌ಗಳಾದ ಸುಗುಣ, ವಿಜಯ ಕುಮಾರ್ ಹರಿದಾಸ್ ಹಾಜರಿದ್ದರು.



ಬಿಸಿಸಿ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದರು

ಕೆರೆಯಲ್ಲಿ ಮುಳುಗಿಸಿ ಮಹಿಳೆ ಕೊಲೆ

ವಿಜಯಪುರ (ದೇವನಹಳ್ಳಿ): ಕುರಿ ಖರೀದಿಸಿದ ಬಾಕಿ ಉಳಿಸಿಕೊಂಡಿರುವ ಹಣ ಕೊಡುವುದಾಗಿ ಹತ್ತು ದಿನದ ಹಿಂದೆ ಮಹಿಳೆಯನ್ನು ಕರೆಸಿಕೊಂಡು ಚಿಕ್ಕನಹಳ್ಳಿ ಕೆರೆಯಲ್ಲಿ ಮುಳುಗಿಸಿ ಸಾಯಿಸಿದ ಆರೋಪಿಯನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ವಿಜಯಪುರದ ಪರಶುರಾಮ ನಗರದ ನಿವಾಸಿ ಮಧು (26) ಕೊಲೆ ಆರೋಪಿ. ಅದೇ ಬಡಾವಣೆಯ ವರಲಕ್ಷ್ಮಿ (49) ಕೊಲೆಯಾದ ಮಹಿಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ನಡೆದ ಬಳ್ಳಾರಿಯ ‘ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಘಟಿಕೋತ್ಸವ’ದಲ್ಲಿ ಗಣಿ ಉದ್ಯಮಿ ಬಾವಿಹಳ್ಳಿ ನಾಗನಗೌಡ, ವೈದ್ಯ ಸಾಹಿತಿ ಡಾ. ವಸುಂಧರಾ ಭೂಪತಿ, ಪ್ರೆಸ್ಟೀಜ್ ಗ್ರೂಪ್‌ನ ಗೌರವಾಧ್ಯಕ್ಷ ಇರ್ಫಾನ್ ರಜಾಕ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾಲಯದ ಕುಲಸಚಿವ ನಾಗರಾಜ್, ಕುಲಪತಿ ಪ್ರೊ. ಎಂ. ಮುನಿರಾಜು, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ದೆಹಲಿಯ ಇಂಟರ್ ಯುನಿವರ್ಸಿಟಿ ಎಕ್ಸಲರೇಟರ್ ಸೆಂಟರ್‌ನ ನಿರ್ದೇಶಕ ಅವಿನಾಶ್ ಚಂದ್ರ ಪಾಂಡೆ, ಕುಲಸಚಿವ ಪ್ರೊ ಎನ್.ಎಂ ಸಾಲಿ ಭಾಗವಹಿಸಿದ್ದರು

30 ಕೆರೆಗಳಿಗೆ ನೀರು

ಬೆಂಗಳೂರು: ಕೆ.ಸಿ ವ್ಯಾಲಿ 2ನೇ ಹಂತದ ಅಡಿಯಲ್ಲಿ ಲಕ್ಷ್ಮೀಸಾಗರ ಪಂಪ್‌ಹೌಸ್‌ನಿಂದ ಕೋಲಾರ ತಾಲ್ಲೂಕಿನ 30 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು.

ಕಾವೇರಿ ನಿವಾಸದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ವರ್ಚ್ಯುವಲ್ ಆಗಿ ಯೋಜನೆಯನ್ನು ಲೋಕಾರ್ಪಣೆ ಮಾಡಿ, ‘ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳ ಅಂತರ್ಜಲ ಅಭಿವೃದ್ಧಿಗೆ ನಮ್ಮ ಹಿಂದಿನ ಸರ್ಕಾರ ಕೈಗೊಂಡ ಯೋಜನೆಗಳು, ಈ ಭಾಗದ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಿವೆ. 250 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ಹರಿಸಲಾಗುತ್ತಿದೆ ಲ ಪಡೆಯುತ್ತಿದ್ದಾರೆ’ ಎಂದರು.

ಬಿಡದಿಯಲ್ಲಿ ದೇಶದ ಮೊದಲ ಎ.ಐ ನಗರ

ಪ್ರಜಾವಾಣಿ ವಾರ್ತೆ

ರಾಮನಗರ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿಡದಿಯಲ್ಲಿ ನಿರ್ಮಾಣವಾಗಲಿರುವ ಬಿಡದಿ ಸಮಗ್ರ ಉಪನಗರ ಯೋಜನೆ ಅಡಿ 'ಕೆಲಸ, ವಾಸ, ಉಲ್ಲಾಸ' ಪರಿಕಲ್ಪನೆ ಅಡಿ ದೇಶದಲ್ಲೇ ಮೊದಲ ಕೃತಕ ಬುದ್ಧಿಮತ್ತೆ (ಎ.ಐ) ನಗರವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ (ಜಿಬಿಐಟಿ) ಲಾಂಛನ ಹಾಗೂ ಮಾಹಿತಿ ಪುಸ್ತಕ ಬಿಡುಗಡೆಗೊಳಿಸಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಮೂರು ವರ್ಷದಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು’ ಎಂದು ತಿಳಿಸಿದರು.

ಯೋಜನೆಗಾಗಿ ಒಂಬತ್ತು ಗ್ರಾಮಗಳ 8,493 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗುವುದು. ಭೂಮಿ ಕೊಟ್ಟವರಿಗೆ 2013ರ ಭೂ ಸ್ವಾಧೀನ ಕಾಯ್ದೆ ಅಡಿ ಪ್ರಸಕ್ತ ಮಾರುಕಟ್ಟೆ ದರದಲ್ಲಿ ಪ್ರತಿ ಎಕರೆಗೆ ₹1.50 ಕೋಟಿಯಿಂದ ₹2.50 ಕೋಟಿವರೆಗೆ ಪರಿಹಾರ ನೀಡಲಾಗುವುದು. ಒಪ್ಪಿಗೆ ಪತ್ರ ಕೊಟ್ಟವರಿಗೆ ಮೂರು ದಿನದಲ್ಲಿ ಪರಿಹಾರದ ಚೆಕ್ ವಿತರಿಸಲಾಗುವುದು ಎಂದು ಭರವಸೆ ನೀಡಿದರು.

‘ಪರಿಹಾರದ ಬದಲು ಯೋಜನೆಯ ಸಹಭಾಗಿತ್ವ ಪಡೆಯಲು ಮುಂದೆ ಬರುವ ರೈತರಿಗೆ, ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ 50:50 ಅನುಪಾತದಲ್ಲಿ ಹಾಗೂ ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವ ಪ್ರದೇಶದಲ್ಲಿ 45:55 ಅನುಪಾತದಲ್ಲಿ ನಿವೇಶನ ಒದಗಿಸಲಾಗುವುದು. ದೇಶದಲ್ಲೇ ಮೊದಲ ಬಾರಿಗೆ ಇಂತಹದ್ದೊಂದು ಐತಿಹಾಸಿಕ ತೀರ್ಮಾನವನ್ನು ನಾವು ಕೈಗೊಂಡಿದ್ದೇವೆ’ ಎಂದು ತಿಳಿಸಿದರು.

ಯೋಜನೆಯ ಅಂತಿಮ ಅಧಿಸೂಚನೆ ದಿನಾಂಕದಿಂದ ಪರಿಹಾರ ನೀಡುವವರೆಗೆ ಹಾಗೂ ಅಭಿವೃದ್ಧಿಪಡಿಸಿದ ಜಾಗವನ್ನು ಮಾಲೀಕರಿಗೆ ಹಸ್ತಾಂತರ ಮಾಡುವವರೆಗೆ ಜೀವನೋಪಾಯದ ಬೆಂಬಲಕ್ಕಾಗಿ ಪ್ರತ್ಯೇಕವಾಗಿ ವಾರ್ಷಿಕ ಪರಿಹಾರ ನೀಡಲಾಗುವುದು. ವರ್ಷಕ್ಕೆ ಪ್ರತಿ ಎಕರೆ ಖುಷ್ಕಿ ಜಮೀನಿಗೆ (ಒಣಭೂಮಿ) ₹30 ಸಾವಿರ, ತರಿಗೆ ಜಮೀನಿಗೆ (ಮಳೆ ಅಥವಾ ನೀರಾವರಿಯಿಲ್ಲದೆ ವ್ಯವಸಾಯ ಮಾಡುವ ಭೂಮಿ) ₹40 ಸಾವಿರ, ಭಾಗಾಯ್ತು ಭೂಮಿಗೆ (ನೀರಾವರಿ ಅಥವಾ ಮಳೆಯಾಶ್ರಿತ ತೋಟ) ₹50 ಸಾವಿರ ಹಾಗೂ ಭೂರಹಿತ ಕುಟುಂಬಕ್ಕೆ ₹25 ಸಾವಿರ ನೀಡಲಾಗುವುದು ಎಂದು ಹೇಳಿದರು.

‘ಅಧಿಸೂಚನೆ ಬಳಿಕ 6,300 ಭೂ ಮಾಲೀಕರಿಗೆ ನೋಟಿಸ್ ನೀಡಿ ಆಕ್ಷೇಪಣೆ ಸ್ವೀಕರಿಸಲಾಗಿತ್ತು. ಈ ಪೈಕಿ ಶೇ 18.12ರಷ್ಟು ಮಂದಿ ಮಾತ್ರ ಭೂಸ್ವಾಧೀನ ಕೈಬಿಡಿ ಎಂದಿದ್ದಾರೆ. ನಾನು ಕಾನೂನು ಚೌಕಟ್ಟಿನಲ್ಲೇ ಕೆಲಸ ಮಾಡಬೇಕಿದೆ. ಹಾಗಾಗಿ, ಅದು ಸಾಧ್ಯವಿಲ್ಲ ಎಂದು ಅವರನ್ನು ನಾನು ಕೈ ಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ’ ಎಂದರು.

ಯೋಜನೆ ರದ್ದುಪಡಿಸಲು ಸಾಧ್ಯವಿಲ್ಲ. ಹಾಗಿದ್ದರೆ, ಎಚ್‌ಡಿಕೆ ಸೇರಿದಂತೆ ಬಿಜೆಪಿಯಿಂದ ಸಿ.ಎಂ ಆಗಿದ್ದವರೇ ರದ್ದುಪಡಿಸಬಹುದಿತ್ತು. ಯೋಜನೆಗೆ ಹೊಸ ರೂಪ ನೀಡಿ ರೈತರಿಗೆ ನ್ಯಾಯಯುತ ಪರಿಹಾರ ನೀಡಲು ಮುಂದಾಗಿರುವೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

‘ಪರಿಹಾರ ಕೋರಿದ ಎಚ್‌ಡಿಕೆ ಪತ್ನಿ, ಪುತ್ರ’

‘ಯೋಜನಾ ಪ್ರದೇಶದ ವ್ಯಾಪ್ತಿಯ ಹೊಸೂರಿನಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಮತ್ತು ಪುತ್ರ ನಿಖಿಲ್ ಕುಮಾರಸ್ವಾಮಿ 28 ಎಕರೆ ಜಮೀನು ಹೊಂದಿದ್ದಾರೆ. ಯೋಜನೆ ಬೆಂಬಲಿಸಿರುವ ಅವರು ಸೂಕ್ತ ಪರಿಹಾರ ನೀಡುವಂತೆ ಅರ್ಜಿ ಕೊಟ್ಟಿದ್ದಾರೆ. ಪರಿಹಾರದ ಮೊದಲ ಚೆಕ್ ಅನ್ನು ಮೊದಲು ಅವರಿಗೇ ಕೊಡಿ’ ಎಂದು ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣ • ಮತ್ತಷ್ಟು ಸಮಯಾವಕಾಶಕ್ಕೆ ಮನವಿ

ಮುಡಾ ಮೇಲ್ಮನವಿ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಅನುಮತಿ ನೀಡಿಕೆಗೆ ಸಮ್ಮತಿ ಮುದ್ರೆ ಒತ್ತಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಮತ್ತು ಜೆ.ದೇವರಾಜು ಸಲ್ಲಿಸಿರುವ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನವೆಂಬರ್ ಎರಡನೇ ವಾರಕ್ಕೆ ಮುಂದೂಡಿದೆ.

ಈ ಸಂಬಂಧ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಮತ್ತು ಜೆ.ದೇವರಾಜು ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆ ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠದಲ್ಲಿ ಗುರುವಾರ ವಿಚಾರಣೆಗೆ ನಿಗದಿಯಾಗಿತ್ತು.

ಬೆಳಿಗ್ಗೆ ಕಲಾಪ ಆರಂಭ ಆಗುತ್ತಿದ್ದಂತೆಯೇ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಈ ಮೇಲ್ಮನವಿಗಳನ್ನು ಅಂತಿಮ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಮತ್ತು ಇನ್ನಷ್ಟು ಸಮಯಾವಕಾಶದ ಅಗತ್ಯವಿದೆ’ ಎಂದೂ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ ಎರಡನೇ ವಾರಕ್ಕೆ ಮುಂದೂಡಿತು.

ಮೇಲ್ಮನವಿಗಳು: ಮುಡಾ ಪ್ರಕರಣದ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿದ್ದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 2024ರ ಸೆಪ್ಟೆಂಬರ್ 24ರಂದು ವಜಾಗೊಳಿಸಿತ್ತು. ರಾಜ್ಯಪಾಲರ ಆದೇಶವನ್ನು ಎತ್ತಿ ಹಿಡಿದಿತ್ತು.

ಸೆಣಬು ಬಳಕೆ: ಸಕ್ಕರೆ ಕಾರ್ಖಾನೆ ಅರ್ಜಿಗಳ ವಜಾ

ಸಕ್ಕರೆಯನ್ನು ಪ್ಯಾಕ್ ಮಾಡಲು ಸೆಣಬಿನ ಚೀಲಗಳನ್ನೇ ಕಡ್ಡಾಯವಾಗಿ ಬಳಸಬೇಕೆಂಬ ಕೇಂದ್ರ ಸರ್ಕಾರದ ಅಧಿಸೂಚನೆ ರದ್ದುಗೊಳಿಸುವಂತೆ ಕೋರಲಾಗಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಸಂಘ ಕರ್ನಾಟಕ (ಸಿಸ್ಮಾ ಕೆ) ಪ್ರತಿನಿಧಿ ಶಂಕರಯ್ಯ ಸಾಲಿಮಠ ಮತ್ತು ಭಾರತೀಯ ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಂಘದ (ಇಸ್ಮಾ) ಪ್ರತಿನಿಧಿ ಭಾರತಿ ಬಾಲಾಜಿ ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಸೆಣಬಿನ ಬ್ಯಾಚಿಂಗ್ ಎಣ್ಣೆಯು ಗಂಭೀರ ಆರೋಗ್ಯ ಅಪಾಯಗಳನ್ನು ಉಂಟುಮಾಡುತ್ತದೆಯೇ ಹೇಗೆ ಎಂಬುದನ್ನು ಪರಿಶೀಲಿಸುವುದು ಸ್ಥಾಯಿ ಸಲಹಾ ಸಮಿತಿಯ ಕರ್ತವ್ಯವೇ ಹೊರತು ನ್ಯಾಯಾಲಯದ್ದಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಸಕ್ಕರೆ ಪ್ಯಾಕಿಂಗ್‌ಗೆ ಶೇ 20ರಷ್ಟು ಸೆಣಬಿನ ಚೀಲ ಬಳಸುವುದನ್ನು ಕಡ್ಡಾಯಗೊಳಿಸಲಾದ ‘ಪ್ಯಾಕಿಂಗ್ ಮಾಡಲಾಗುವ ಸರಕುಗಳಲ್ಲಿ ಕಡ್ಡಾಯವಾಗಿ ಬಳಸುವ ಸಾಮಗ್ರಿಗಳ ಕಾಯ್ದೆ-1987’ರ ಅಡಿಯಲ್ಲಿ ಜವಳಿ ಸಚಿವಾಲಯ ಹೊರಡಿಸಿದ ಅಧಿಸೂಚನೆಗಳನ್ನು ಸಂಘಗಳು ಪ್ರಶ್ನಿಸಿದ್ದವು.

ಸುಪ್ರೀಂ ಕೋರ್ಟ್‌ಗೆ ವರ್ಗಾವಣೆಗೆ ಕೇಂದ್ರ ಸರ್ಕಾರ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ’ ಪ್ರಶ್ನಿಸಿ ಕರ್ನಾಟಕ ಸೇರಿದಂತೆ ಮೂರು ಹೈಕೋರ್ಟ್‌ಗಳಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಕೇಂದ್ರ ಸರ್ಕಾರ ಗುರುವಾರ ಅರ್ಜಿ ಸಲ್ಲಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ. ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠದ ಎದುರು ಈ ಅರ್ಜಿ ಸಲ್ಲಿಸಲಾಗಿದೆ.

‘ಕಾಯ್ದೆ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ. ಮುಂದಿನ ವಿಚಾರಣೆ ಸೋಮವಾರ ನಿಗದಿಯಾಗಿದೆ. ಸೋಮವಾರವೇ ಅರ್ಜಿ ವಿಚಾರಣೆ ನಡೆಸಬೇಕು‘ ಎಂದು ಕೇಂದ್ರ ಸರ್ಕಾರದ ಪರ ವಕೀಲರು ಮನವಿ ಮಾಡಿದರು.

ಅರ್ಜಿಯನ್ನು ಮುಂದಿನ ವಾರ ವಿಚಾರಣೆಗೆ ಪಟ್ಟಿ ಮಾಡಲು ಸಿಜೆಐ ಒಪ್ಪಿಕೊಂಡರು.

ಅರಮನೆ ಮೈದಾನದ ಟಿಡಿಆರ್ ಪ್ರಕರಣ: ಮುಂದಿನ ವಾರ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಅರಮನೆ ಮೈದಾನದ ಟಿಡಿಆರ್ ವಿವಾದದ ವಿಚಾರಣೆಯನ್ನು ಸೆಪ್ಟೆಂಬರ್ 10ರ ನಂತರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ತಿಳಿಸಿದೆ.

15.36 ಎಕರೆಗೆ ₹3,400 ಕೋಟಿಯ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಮೈಸೂರಿನ ರಾಜವಂಶಸ್ಥರಿಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿರುವ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದೆ. ಮುಖ್ಯ ಸಿವಿಲ್ ಮೇಲ್ಮನವಿ ವಿಚಾರಣೆಗೆ ಬಾಕಿ ಇದೆ. ವನಜಾಕ್ಷಿ ಎಂಬವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಬೇಕು ಎಂದು ವಕೀಲರು ಕೋರಿದರು.

‘10ರ ನಂತರ ಎಲ್ಲ ಅರ್ಜಿಗಳ ವಿಚಾರಣೆ ನಡೆಸಲಾಗುವುದು’ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ತಿಳಿಸಿತು.

ರಾಜವಂಶಸ್ಥರಿಗೆ ಟಿಡಿಆರ್ ನೀಡಬೇಕೆಂದು ದ್ವಿಸದಸ್ಯ ಪೀಠದ ಆದೇಶವನ್ನು ತ್ರಿಸದಸ್ಯ ಪೀಠವು ಮೇ 29ರಂದು ಅಮಾನತುಗೊಳಿಸಿತ್ತು.

ಏಳುಮಲೆ ಕಥೆ ಮೇಲೆ ನಂಬಿಕೆ

ನಿರ್ದೇಶಕ ಪ್ರೇಮ್ ಆ್ಯಕ್ಷನ್ ಕಟ್ ಹೇಳಿದ್ದ 'ಏಕ್ ಲವ್ ಯಾ' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ನಟಿ ರಕ್ಷಿತಾ ಸೋದರ ರಾಣಾ ಇದೀಗ 'ಏಳುಮಲೆ' ಏರಿದ್ದಾರೆ. ಈ ಸಿನಿಮಾ ಇಂದು(ಸೆ.5) ತೆರೆಕಂಡಿದ್ದು, ತಮ್ಮ ಎರಡನೇ ಸಿನಿಮಾ ಬಗ್ಗೆ ರಾಣಾ ಮಾತಿಗಿಳಿದಾಗ...

• ಅಭಿಲಾಷ್ ಪಿ.ಎಸ್.

• 'ಏಕ್ ಲವ್ ಯಾ' ಸಿನಿಮಾ ಕಲಿಸಿದ ಪಾಠ...

ಆ ಸಿನಿಮಾ ನನ್ನ ಮೊದಲ ಹೆಜ್ಜೆ. ಇದರಿಂದ ಕಲಿತ ಪಾಠ ಹಲವು. ಪ್ರೇಮ್ ಅವರ 'ದಿ ವಿಲನ್'ನಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದೆ. ಸ್ಕ್ರಿಪ್ಟ್‌ನಿಂದ ಹಿಡಿದು ಆ ಸಿನಿಮಾದ ಎಲ್ಲಾ ವಿಭಾಗದಲ್ಲೂ ನಾನು ಕಾರ್ಯನಿರ್ವಹಿಸಿದ್ದೆ. ಆಗ ತಾಂತ್ರಿಕ ತಂಡದಲ್ಲಿದ್ದ ನಾನು ಮೊದಲ ಬಾರಿಗೆ ತೆರೆ ಮೇಲೆ ಕಾಣಿಸಿಕೊಂಡಿದ್ದು 'ಏಕ್ ಲವ್ ಯಾ' ಸಿನಿಮಾದಿಂದಲೇ. ನಾಯಕನಾಗಿ ಬಣ್ಣಹಚ್ಚಿದಾಗ ಎಲ್ಲರ ಗಮನ ನನ್ನ ಮೇಲಿತ್ತು. ಇದು ಜವಾಬ್ದಾರಿಯನ್ನೂ ಹೆಚ್ಚಿಸಿತ್ತು. ಕಲಿಕೆ ಎನ್ನುವುದು ನಿರಂತರ. 'ಏಕ್ ಲವ್ ಯಾ' ವೇದಿಕೆ ಏರಿದಾಗ ಪ್ರೇಮ್ ಅವರಿಂದ ನಟನೆಯ ಹಲವು ವಿಷಯಗಳನ್ನು ಕಲಿತೆ. 'ಏಳುಮಲೆ'ಯಲ್ಲಿ ನಿರ್ದೇಶಕ ಪುನೀತ್, ನಿರ್ಮಾಪಕ ತರುಣ್ ಅವರು ನನಗೆ ಗುರು ಆದರು. ದೃಶ್ಯವೊಂದಕ್ಕೆ ಹಲವು ದೃಷ್ಟಿಕೋನಗಳು ಇರುತ್ತವೆ. ಅವುಗಳೆಲ್ಲವೂ ಕಲಿಕೆಯೇ. ನನ್ನ ಯಾವ ಪ್ರೊಫೈಲ್ ಚೆನ್ನಾಗಿ ಕಾಣುತ್ತದೆ, ಯಾವ ರೀತಿ ಕ್ಯಾಮೆರಾ ಎದುರಿಸಬೇಕು ಎನ್ನುವುದನ್ನು ಮೊದಲ ಸಿನಿಮಾದ ಡಿಒಪಿ ಆಗಿದ್ದ ಮಹೇಂದ್ರ ಸಿಂಹ ಅವರಿಂದ ಕಲಿತೆ.

• ಹೊಸ ಸಿನಿಮಾ ಒಪ್ಪಿಕೊಳ್ಳುವಲ್ಲಿ ವಿಳಂಬ ಯಾಕಾಯಿತು?

'ಏಕ್ ಲವ್ ಯಾ' ಬಳಿಕ ಹಲವು ಕಥೆಗಳನ್ನು ಕೇಳಿದೆ. ಸುಮಾರು ಎರಡು ವರ್ಷ ಹೀಗೆ ಕಳೆಯಿತು. ಸಾಲು ಸಾಲಾಗಿ ಸಿದ್ಧಸೂತ್ರದ ಕಮರ್ಷಿಯಲ್ ಕಥೆಗಳೇ ಬಂದಿದ್ದವು. ನಾಲ್ಕೈದು ಹಾಡು, ಮೂರ್ನಾಲ್ಕು ಫೈಟ್‌ಗಳಿದ್ದರೆ ಅದನ್ನು ಕಮರ್ಷಿಯಲ್ ಮಾಸ್ ಸಿನಿಮಾ ಜಾನರ್ ಎನ್ನುತ್ತಿದ್ದಾರೆ. ನನ್ನ ಪ್ರಕಾರ ಹೆಚ್ಚು ಪ್ರೇಕ್ಷಕರನ್ನು ತಲುಪುವ ಸಿನಿಮಾವೇ ಕಮರ್ಷಿಯಲ್ ಸಿನಿಮಾ. ಸಿದ್ಧಸೂತ್ರದ ಕಮರ್ಷಿಯಲ್ ಸಿನಿಮಾಗಳು ಹತ್ತಿಪ್ಪತ್ತು ವರ್ಷಗಳ ಹಿಂದೆ ನಡೆಯುತ್ತಿತ್ತು. ಈಗ ಕಾಲ ಬದಲಾಗಿದೆ. ಇಂತಹ ಸಿನಿಮಾ ಈಗ ಮಾಡಿದರೆ ಜನಕ್ಕೆ ಕನೆಕ್ಟ್ ಆಗಲು ಸಾಧ್ಯವೇ ಇಲ್ಲ. ಒಟಿಟಿ ಎನ್ನುವುದು ಬಂದ ಬಳಿಕ ಜನರು ಎಲ್ಲಾ ಮಾದರಿಯ ಕಥೆ, ಕಾಂಟೆಂಟ್‌ಗಳನ್ನು ನೋಡಿದ್ದಾರೆ. ಹೀಗಾಗಿ ಅವರಿಗೆ ಹೊಸದೇನಾದರೂ ನೀಡಬೇಕು. ಹೊಸ ಸಿನಿಮಾ ಒಪ್ಪಿಕೊಳ್ಳುವುದಕ್ಕೆ ನನ್ನ ಮೇಲೂ ಒತ್ತಡವಿತ್ತು. ನಿರಂತರವಾಗಿ ಸಿನಿಮಾ ಮಾಡಬೇಕು ಎಂಬ ಸಲಹೆಗಳೂ ಬರುತ್ತಿದ್ದವು. ಈ ಒತ್ತಡದಲ್ಲಿ ಹೆಜ್ಜೆ ಇಟ್ಟು, ಆ ಸಿನಿಮಾಗಳು ಸೋತರೆ ವಿಧಿ ಇಲ್ಲದೇ ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಅವಕಾಶಗಳು ಸಿಗುವುದೇ ವಿರಳ. ಹೀಗಿರುವಾಗಿ ಇಡುವ ಹೆಜ್ಜೆಯನ್ನು ಜಾಗ್ರತೆಯಿಂದ ಇಡಬೇಕು. ಅವಸರದಲ್ಲಿ ಹೆಜ್ಜೆ ಇಡುವುದಕ್ಕಿಂತ ಗಟ್ಟಿಯಾದ ಕಥೆ ಇರುವ ಸಿನಿಮಾಗಾಗಿ ಕಾಯುತ್ತಾ ಮನೆಯಲ್ಲಿ ಇರುವುದು ವಾಸಿಯಲ್ಲವೇ?

ನಾನು ಈ ನಿಟ್ಟಿನಲ್ಲಿ ಒಳ್ಳೆಯ ಕಾಂಟೆಂಟ್ ಇರುವ ಕಮರ್ಷಿಯಲ್ ಸಿನಿಮಾಗಾಗಿ ಕಾಯುತ್ತಿದ್ದೆ. ನಮ್ಮ ಮಣ್ಣಿನ ಕಥೆ–ನಮ್ಮನೆ ಹುಡುಗ ಎಂಬ ಮಾತು ಜನರಿಂದ ಬರಬೇಕು. ಆಗ ಸಿಕ್ಕಿದ್ದು 'ಏಳುಮಲೆ'. ಮೊದಲು ಈ ಕಥೆಯನ್ನು ತರುಣ್ ಅವರು ಪಿಚ್ ಮಾಡಿದ್ದರು. ಬಳಿಕ ಪುನೀತ್ ರಂಗಸ್ವಾಮಿ ಅವರು ಕಥೆ ವಿವರಿಸಿದ್ದರು. ಪ್ರೇಕ್ಷಕನಾಗಿ ಕುಳಿತು ಈ ಸಿನಿಮಾ ಕಥೆ ಕೇಳಿದಾಗ ಅದು ನನಗೆ ಒಪ್ಪಿಗೆಯಾಯಿತು. ಹೀಗಾದಾಗ ನಾನೂ ಆ ಪಾತ್ರವನ್ನು, ಕಥೆಯನ್ನು ಜನರಿಗೆ ಒಪ್ಪಿಸಲು ಸಾಧ್ಯ. ನಿರ್ದೇಶನ, ಸಿನಿಮಾ ನಿರ್ಮಾಣದಲ್ಲೂ ತರುಣ್ ಅವರು ತಮ್ಮನ್ನು ಸಾಬೀತುಪಡಿಸಿಕೊಂಡಿದ್ದಾರೆ. ನನ್ನ ಎರಡನೇ ಹೆಜ್ಜೆಗೆ ಈ ಸಿನಿಮಾ ಸೂಕ್ತವಾಗಿರಲಿದೆ ಎನ್ನುವ ಕಾರಣಕ್ಕೆ ಒಪ್ಪಿಕೊಂಡೆ.

• ಹೊಸಬರನ್ನು ಜನರು ಸ್ವೀಕರಿಸುತ್ತಿರುವ ಬಗೆ...

ಯಾವತ್ತಿದ್ದರೂ ಕಥೆಯೇ ಕಿಂಗ್. ಯಾವುದೇ ದೊಡ್ಡ ನಿರ್ಮಾಣ ಸಂಸ್ಥೆ, ದೊಡ್ಡ ನಿರ್ದೇಶಕ–ನಟರನ್ನು ನೋಡಿಕೊಂಡು ಜನರು ಸಿನಿಮಾ ಗೆಲ್ಲಿಸುವುದಿಲ್ಲ. ಇಂತಹ ಸಿನಿಮಾಗಳು ನಾಲ್ಕೈದು ದಿನ ಓಡಬಹುದಷ್ಟೇ. ಸಿನಿಮಾದ ಕಥೆ ಚೆನ್ನಾಗಿದ್ದರೆ ಅದಕ್ಕೆ ಯಶಸ್ಸು ಖಚಿತ. ಈ ನಿಟ್ಟಿನಲ್ಲಿ 'ಏಳುಮಲೆ'ಯ ಕಥೆ ಮೇಲೆ ನನಗೆ ನಂಬಿಕೆ ಇದೆ. ಇತ್ತೀಚೆಗೆ ಚಿತ್ರಮಂದಿರಗಳ ಸಮಸ್ಯೆಯಾಗುತ್ತಿದೆ, ಒಟಿಟಿ ವಹಿವಾಟು ಆಗುತ್ತಿಲ್ಲ ಎಂದು ಹಲವರು ದೂರುತ್ತಿದ್ದಾರೆ. ಕಾಂಟೆಂಟ್ ದೃಷ್ಟಿಯಿಂದ ಗೆದ್ದ ಸಿನಿಮಾಗಳಿಗೆ ಈ ಸಮಸ್ಯೆಗಳೇ ಆಗಿಲ್ಲ. ಪ್ರೇಕ್ಷಕರು ಸಿನಿಮಾವನ್ನು ಸ್ವೀಕರಿಸಿದರೆ ಉಳಿದ ಸಮಸ್ಯೆಗಳೆಲ್ಲವೂ ತಾನಾಗಿಯೇ ಬಗೆಹರಿಯುತ್ತವೆ. ಸಮುದ್ರದಲ್ಲಿನ ಅಲೆಗಳಂತೆ ಒಳ್ಳೆಯ ಕಥೆಗಳಿರುವ ಸಿನಿಮಾಗಳು ನಿರಂತರವಾಗಿ ಪ್ರೇಕ್ಷಕರಿಗೆ ಬಡಿಯುತ್ತಿರಬೇಕು. ನಮ್ಮ ಸಿನಿಮಾದಲ್ಲೂ ಈ ರೀತಿಯ ಶಕ್ತಿ ಇದೆ.

• ಚಿತ್ರೀಕರಣದ ಸಂದರ್ಭದಲ್ಲಿನ ಸವಾಲುಗಳು ಹಾಗೂ ಪಾತ್ರದ ಬಗ್ಗೆ ವಿವರಣೆ...

ಕರ್ನಾಟಕ ಮತ್ತು ತಮಿಳುನಾಡು ಗಡಿಯಲ್ಲಿ ನಡೆದ ನೈಜ ಕಥೆ ಇದು. ಕಾಲ್ಪನಿಕ ಕಥೆಯ ಮಿಶ್ರಣವೂ ಇದೆ. ಕ್ವಾಲಿಸ್ ಗಾಡಿಯ ಡ್ರೈವರ್ ಆಗಿ ಕೆಲಸ ಮಾಡುತ್ತಿರುವ ಮೈಸೂರು ಹುಡುಗನ ಪಾತ್ರದಲ್ಲಿ ನಾನಿದ್ದೇನೆ. ಪಾತ್ರಕ್ಕೆ ಹೆಚ್ಚಿನ ಆಡಂಬರವಿಲ್ಲ. 2004ರ ಕಾಲಘಟ್ಟದಲ್ಲಿ ನಡೆಯುವ ಕಥೆ ಇದಾಗಿದೆ. ಒಂದು ರಾತ್ರಿಯಲ್ಲಿ ಈ ಸಿನಿಮಾದ ಕಥೆ ಸಾಗುತ್ತದೆ. ಒಂದು ಘಟನೆಯು ಪ್ರೇಮಿಗಳಿಬ್ಬರ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ, ಆ ಒಂದು ರಾತ್ರಿಯಲ್ಲಿ ಏನೇನು ನಡೆಯುತ್ತದೆ ಎನ್ನುವುದು ಕಥಾಹಂದರ. 'ರೇವತಿ' ಎಂಬ ತಮಿಳುನಾಡಿನ ಹುಡುಗಿ ಪಾತ್ರದಲ್ಲಿ ಪ್ರಿಯಾಂಕಾ ನಟಿಸಿದ್ದಾರೆ. ಸಿನಿಮಾದುದ್ದಕ್ಕೂ ಹಲವು ತಿರುವುಗಳಿವೆ. ಚಿತ್ರಕಥೆಯು ಬಹಳ ವೇಗವಾಗಿದೆ. ಇದು ಪ್ರೇಕ್ಷಕರನ್ನು ಸೀಟಿನಂಚಿಗೆ ತಂದು ಕೂರಿಸಲಿದೆ.

ಹಲವು ಸವಾಲುಗಳು ಚಿತ್ರೀಕರಣದ ವೇಳೆ ಎದುರಾಗಿತ್ತು. ಕಾಡಿನಲ್ಲೇ ಕೇವಲ ರಾತ್ರಿಯಲ್ಲಿ ಇಡೀ ಸಿನಿಮಾ ಚಿತ್ರೀಕರಣವಿತ್ತು. ಟ್ರೇಲರ್‌ನ ಆರಂಭದಲ್ಲಿ ನಾನು ನೀರಿನಲ್ಲಿ ಬಿದ್ದಿರುವ ದೃಶ್ಯ ನೋಡಿರಬಹುದು. ಕೆಲ ಸೆಕೆಂಡ್‌ಗಳ ಈ ದೃಶ್ಯಕ್ಕೆ ನಾಲ್ಕೈದು ತಾಸು ನೀರಿನಲ್ಲಿ ನಾನಿದ್ದೆ. ಆ ದಟ್ಟ ಕಾಡು ಹಾಗೂ ನೀರಿನೊಳಗೆ ಏನಿರುತ್ತದೋ ಎನ್ನುವ ಭಯದಿಂದಲೇ ಶೂಟಿಂಗ್ ಮಾಡಿದ್ದೆವು. ಭಿನ್ನವಾದ ಅನುಭವ ಈ ಸಿನಿಮಾದಿಂದ ದೊರೆಯಿತು. ❖

ಹೊಸ ಪ್ರಾಜೆಕ್ಟ್‌ಗಳು ಯಾವುದು?

'ಕಥೆಗಳನ್ನು ಕೇಳುತ್ತಿದ್ದೇನೆ. ಈ ಪೈಕಿ ಮೂರು ಕಥೆಗಳನ್ನು ಅಂತಿಮಗೊಳಿಸಿದ್ದೇನೆ. ಪ್ರೇಮ್ ಅವರ ಸಹ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ಮಂಜು ಅವರ ಕಥೆಯೊಂದಿದೆ. 'KD' ರಿಲೀಸ್ ಆದ ಕೂಡಲೇ ಈ ಸಿನಿಮಾ ಮಾಡೋಣ ಎಂದು ಪ್ರೇಮ್ ಅವರು ಹೇಳಿದ್ದಾರೆ. ಒಂದೆರಡು ಸಿನಿಮಾಗಳನ್ನು ಪ್ರತಿ ವರ್ಷ ಮಾಡುವ ಯೋಜನೆ ನನಗಿದೆ. 'ಏಳುಮಲೆ'ಯ ಫಲಿತಾಂಶವೂ ಮುಂದಿನ ಹೆಜ್ಜೆಗಳಿಗೆ ಮುಖ್ಯವಾಗಲಿದೆ' ಎನ್ನುತ್ತಾರೆ ರಾಣಾ.

ನಮ್ರತಾ ಗೌಡ

'ಮಹಾನ್' ಸಿನಿಮಾಗೆ ನಮ್ರತಾ ಗೌಡ ಪ್ರವೇಶ

ವಿಜಯ ರಾಘವೇಂದ್ರ ನಾಯಕರಾಗಿ ನಟಿಸುತ್ತಿರುವ, ಪಿ.ಸಿ.ಶೇಖರ್ ನಿರ್ದೇಶನದ 'ಮಹಾನ್' ಚಿತ್ರದಲ್ಲಿ ನಮ್ರತಾ ಗೌಡ ನಟಿಸಲಿದ್ದಾರೆ.

'ನಾಗಿಣಿ' ಧಾರಾವಾಹಿಯ ಮೂಲಕ ಖ್ಯಾತಿ ಪಡೆದ ನಮ್ರತಾ ಬಳಿಕ 'ಬಿಗ್‌ಬಾಸ್' ರಿಯಾಲಿಟಿ ಶೋದಲ್ಲಿ ಮಿಂಚಿದ್ದರು. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ನಟ ಮಿತ್ರ, 'ರಂಗಿತರಂಗ' ಖ್ಯಾತಿಯ ನಟಿ ರಾಧಿಕಾ ನಾರಾಯಣ್ ಅವರೂ ನಟಿಸುತ್ತಿದ್ದಾರೆ.

'ಸಿನಿಮಾದಲ್ಲಿ ನಟಿಸುವಂತೆ ನನಗೆ ಅನೇಕ ಸ್ನೇಹಿತರು ಒತ್ತಾಯಿಸುತ್ತಿದ್ದರು. ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೆ. ನಿರ್ದೇಶಕ ಪಿ.ಸಿ.ಶೇಖರ್ ಅವರು ಹೇಳಿದ ಈ ಕಥೆ ಮನಸ್ಸಿಗೆ ಹತ್ತಿರವಾಯಿತು. ರೈತರ ಬದುಕು ಬವಣೆಗಳ ಸುತ್ತ ಹೆಣೆದಿರುವ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿದ್ದೇನೆ. ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದ್ದು, ನೈಜತೆಗೆ ಹತ್ತಿರವಾಗಿರುವ ಕಥೆಯುಳ್ಳ ಚಿತ್ರದಲ್ಲಿ ಅಭಿನಯಿಸುತ್ತಿರುವುದಕ್ಕೆ ಖುಷಿಯಿದೆ' ಎನ್ನುತ್ತಾರೆ ನಮ್ರತಾ ಗೌಡ. ❖

ಸೆ.10ಕ್ಕೆ 'ಕಲ್ಟ್' ಸಿನಿಮಾ ಹಾಡು

ಮಲೈಕಾ

'ಬನಾರಸ್' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟ ಝೈದ್ ಖಾನ್ ನಟನೆಯ 'ಕಲ್ಟ್' ಸಿನಿಮಾದ ಮೊದಲ ಹಾಡು 'ಅಯ್ಯೋ ಶಿವನೇ' ಸೆ.10ರಂದು ತೆರೆಕಾಣಲಿದೆ.

ಈ ಸಿನಿಮಾದಲ್ಲಿ ಝೈದ್ ಖಾನ್‌ಗೆ 'ಉಪಾಧ್ಯಕ್ಷ' ಚಿತ್ರದ ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದು, ನಟಿ ರಚಿತಾ ರಾಮ್ ಹಾಗೂ 'ಉಪಾಧ್ಯಕ್ಷ'ದ ಮೂಲಕ ತಮ್ಮ ಚಂದನವನದ ಪಯಣ ಆರಂಭಿಸಿದ್ದ ಮಲೈಕಾ ಟಿ. ವಸುಪಾಲ್ ನಾಯಕಿಯರಾಗಿ ನಟಿಸಿದ್ದಾರೆ. ಈಗಾಗಲೇ ಫಸ್ಟ್‌ಲುಕ್ ಹಾಗೂ ಟೀಸರ್ ಮೂಲಕ ಸಿನಿಮಾ ಕಾಂಟೆಂಟ್‌ಗಳನ್ನು ಜನರೆದುರಿಗೆ ಇರಿಸಿರುವ ಈ ತಂಡ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಈ ಹಾಡನ್ನು ನಿರ್ದೇಶಕ ಅನಿಲ್ ಕುಮಾರ್ ಅವರೇ ಬರೆದಿದ್ದು, ಜಸ್ಕರಣ್ ಸಿಂಗ್ ಹಾಗೂ ಪೃಥ್ವಿ ಭಟ್ ಹಾಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ಹಾಡಿಗಿದೆ. ಮಲೈಕಾ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ.

ಕೆ.ವಿ.ಎನ್ ಪ್ರೊಡಕ್ಷನ್ಸ್ ಅರ್ಪಿಸುವ, ಲೋಕಿ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾಗೆ ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಸಾಹಸ ನಿರ್ದೇಶನವಿದೆ. ❖

ಡಿಸೆಂಬರ್‌ನಲ್ಲಿ ಸ್ಟಾರ್‌ಗಳ ಮೆರವಣಿಗೆ

'ಸು ಫ್ರಮ್ ಸೋ' ಸಿನಿಮಾದ ಭರ್ಜರಿ ಯಶಸ್ಸಿನಿಂದ 2025ರ ದ್ವಿತೀಯಾರ್ಧ ಆರಂಭವಾಗಿದೆ. ಮುಂದೆ ಪ್ರತಿ ತಿಂಗಳೂ ಬಹುನಿರೀಕ್ಷಿತ ಸಿನಿಮಾಗಳು ಬಿಡುಗಡೆಯಾಗಲು ಸರತಿಯಲ್ಲಿ ಕಾದಿವೆ. ಡಿಸೆಂಬರ್‌ನಲ್ಲಂತೂ ಚಂದನವನದ ತೆರೆಗಳಲ್ಲಿ ಸಿನಿಹಬ್ಬವೇ ಇರಲಿದೆ.

ಅಕ್ಟೋಬರ್ 2ರಂದು ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಪ್ರೀಕ್ವೆಲ್ ರಿಲೀಸ್ ಆಗಲಿದೆ. ಮೇಕಿಂಗ್ ವಿಡಿಯೊ ರಿಲೀಸ್ ಮಾಡುವ ಮುಖಾಂತರವೇ ಪ್ರೇಕ್ಷಕರಲ್ಲಿ ಕುತೂಹಲ ಸೃಷ್ಟಿಸಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ.

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ದರ್ಶನ್ ನಟನೆಯ 'ಡೆವಿಲ್–ದಿ ಹೀರೊ' ಚಿತ್ರವು ಡಿ.12ರಂದು ತೆರೆಕಾಣಲಿದೆ. ಈಗಾಗಲೇ ಈ ಸಿನಿಮಾದ 'ಇದ್ರೆ ನೆಮ್ದಿಯಾಗ್ ಇರ್ಬೇಕ್' ಹಾಡು ಬಿಡುಗಡೆಯಾಗಿದೆ.

ಡಿ.25ಕ್ಕೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಸಿನಿಮಾ ತೆರೆಕಾಣಲಿದೆ. ಮೂರು ಸ್ಟಾರ್ ಹೀರೊಗಳನ್ನು ಹೊಂದಿರುವ ಈ ಸಿನಿಮಾವು ಕಥೆ ಹಾಗೂ ಮೇಕಿಂಗ್‌ನಿಂದ ಸದ್ದು ಮಾಡುತ್ತಿದೆ.

'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ಕೂಡಾ ಡಿ.25ರಂದು ತೆರೆಕಾಣುತ್ತಿದೆ. ಹೀಗೆ ವರ್ಷಾಂತ್ಯದಲ್ಲಿ ಮೂರು ಮುಖ್ಯ ಸಿನಿಮಾಗಳು ತೆರೆಕಾಣಲಿವೆ.

'ಜಂಟಲ್‌ಮ್ಯಾನ್', 'ಗುರುಶಿಷ್ಯರು' ಚಿತ್ರಗಳ ನಿರ್ದೇಶಕ ಹಾಗೂ 'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, ದುನಿಯಾ ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಸಿನಿಮಾವೂ ಅಕ್ಟೋಬರ್–ನವೆಂಬರ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ. ❖

'ಬಿಲ್ಲ ರಂಗ ಬಾಷಾ'ಯಲ್ಲಿ ಹೀಗಿದ್ದಾರೆ ಸುದೀಪ್

ನಟ ಸುದೀಪ್ ಸದ್ಯ ತಮ್ಮ 47ನೇ ಸಿನಿಮಾ 'ಮಾರ್ಕ್'ನ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಿನಿಮಾದ ಶೂಟಿಂಗ್ ಪೂರ್ಣಗೊಂಡ ಬೆನ್ನಲ್ಲೇ ಮತ್ತೆ 'ಬಿಲ್ಲ ರಂಗ ಬಾಷಾ' ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಿದ್ದಾರೆ. ಅವರ ಜನ್ಮದಿನದಂದು ಚಿತ್ರದಲ್ಲಿನ ಅವರ ಪಾತ್ರದ ಹೊಸ ಲುಕ್ ಬಿಡುಗಡೆಯಾಗಿದೆ.

'ರಂಗಿತರಂಗ', 'ರಾಜರಥ' ಹಾಗೂ 'ವಿಕ್ರಾಂತ್ ರೋಣ' ಸಿನಿಮಾ ನಿರ್ದೇಶಿಸಿದ್ದ ಅನೂಪ್ ಭಂಡಾರಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಪ್ಯಾನ್ ಇಂಡಿಯಾ ಸಿನಿಮಾ 2026ರ ವರ್ಷಾಂತ್ಯದಲ್ಲಿ ತೆರೆಕಾಣಲಿದೆ. ಎರಡು ಪಾರ್ಟ್‌ಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಡಿಸೆಂಬರ್‌ನಲ್ಲಿ 'ಬಿಲ್ಲ ರಂಗ ಬಾಷಾ' ಮೊದಲ ಭಾಗದ ಕೊನೆಯ ಹಂತದ ಚಿತ್ರೀಕರಣ ಪುನರಾರಂಭವಾಗಲಿದೆ. ಸಿನಿಮಾಗಾಗಿ ಬೆಂಗಳೂರಿನಲ್ಲಿ ಎಂಟು ಎಕರೆ ಜಾಗದಲ್ಲಿ ಬೃಹತ್ ಸ್ಟುಡಿಯೊ ನಿರ್ಮಾಣ ಮಾಡಲಾಗಿದ್ದು, ಹೊಸ ಪ್ರಪಂಚವನ್ನೇ ಅಲ್ಲಿ ಸೃಷ್ಟಿಸಲಾಗಿದೆ. 2209 ಎ.ಡಿ.ಯಲ್ಲಿ ನಡೆಯುವ ಕಥೆ ಇದಾಗಿದ್ದು ಭವಿಷ್ಯದ ಪ್ರಪಂಚವನ್ನು ಅಲ್ಲಿ ನಿರ್ಮಾಣ ಮಾಡಲಾಗಿದೆ. ಸಿನಿಮಾವನ್ನು ಪ್ರೈಂಶೋ ಎಂಟರ್‌ಟೈನ್‌ಮೆಂಟ್ ಪ್ರಸ್ತುತಪಡಿಸುತ್ತಿದ್ದು, ತೆಲುಗಿನ ಹಿಟ್ ಸಿನಿಮಾ 'ಹನುಮಾನ್' ನಿರ್ಮಾಣ ಮಾಡಿದ್ದ ಕೆ.ನಿರಂಜನ್ ರೆಡ್ಡಿ ಹಾಗೂ ಚೈತನ್ಯ ರೆಡ್ಡಿ ನಿರ್ಮಾಣ ಮಾಡುತ್ತಿದ್ದಾರೆ. ❖

ತೆರೆಗಳಲ್ಲಿ ಸಾಲು ಸಾಲು ಸಿನಿಮಾ

ರಚನಾ ಇಂದರ್

ಚಿತ್ರಮಂದಿರಗಳಲ್ಲಿ ಇಂದು (ಸೆ.5) ಹನ್ನೊಂದು ಸಿನಿಮಾಗಳು ತೆರೆಕಾಣುತ್ತಿವೆ. ಈ ಪೈಕಿ ಕನ್ನಡದ ಏಳು ಸಿನಿಮಾಗಳು ಇವೆ·

ಏಳುಮಲೆ: 'ಕಾಟೇರ' ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ ಸಿನಿಮಾವಿದು. ನಟ ರಾಣಾ, 'ಮಹಾನಟಿ' ರಿಯಾಲಿಟಿ ಶೋ ವಿಜೇತೆ ಪ್ರಿಯಾಂಕಾ ಆಚಾರ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. ಜಗಪತಿ ಬಾಬು, ಟಿ.ಎಸ್. ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ 'ಏಳುಮಲೆ'ಯ ತಾರಾಬಳಗದಲ್ಲಿದ್ದಾರೆ. ಸಿನಿಮಾಗೆ ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ.

ಓಂ ಶಿವಂ: ಅಲ್ವಿನ್ ನಿರ್ದೇಶನದ, ದೀಪಾ ಮೂವೀಸ್ ಲಾಂಛನದಲ್ಲಿ ಕೆ.ಎನ್.ಕೃಷ್ಣ ನಿರ್ಮಿಸಿರುವ ಸಿನಿಮಾ ಇದಾಗಿದೆ. ಭಾರ್ಗವ ಕೃಷ್ಣ ಮತ್ತು ವಿರಾನಿಕ ಶೆಟ್ಟಿ ಜೋಡಿಯಾಗಿ ನಟಿಸಿರುವ ಈ ಸಿನಿಮಾ ರೊಮ್ಯಾಂಟಿಕ್ ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿದೆ. ವಿರೇಶ್ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರ ಸಂಕಲನ, ವಿಜಯ್ ಯಾರ್ಡ್ಲಿ ಸಂಗೀತ ನಿರ್ದೇಶನ, ನಾಗೇಶ್ ನೃತ್ಯ ನಿರ್ದೇಶನ ಹಾಗೂ ಕೌರವ ವೆಂಕಟೇಶ್, ನರಸಿಂಹ, ವೈಲೆಂಟ್ ವೇಲು ಸಾಹಸ ನಿರ್ದೇಶನ ಚಿತ್ರಕ್ಕಿದೆ. ರವಿ ಕಾಳೆ, ಕಾಕ್ರೋಜ್ ಸುಧಿ, ಯಶ್ ಶೆಟ್ಟಿ, ಬಲ ರಾಜವಾಡಿ, ಲಕ್ಷ್ಮೀ ಸಿದ್ದಯ್ಯ, ಅಪೂರ್ವ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಕನ್ನಡದ ಎ.ಹರ್ಷ ನಿರ್ದೇಶನದ ಹಿಂದಿ ಸಿನಿಮಾ 'ಭಾಘಿ-4' ಕೂಡಾ ಇಂದು ತೆರೆಕಂಡಿದೆ. ಈ ಸಿನಿಮಾಗಳ ಜೊತೆಗೆ 'ಕುಡ್ಲ ನಮ್ದು ಊರು', 'ಆಸ್ಟಿನ್ ನ ಮಹಾನ್ ಮೌನ' ಹಾಗೂ 'ನಮೋ ವೆಂಕಟೇಶ' ಸಿನಿಮಾಗಳು ತೆರೆಕಾಣುತ್ತಿವೆ. ಮಲಯಾಳದಲ್ಲಿ ತೆರೆಕಂಡಿದ್ದ ರಾಜ್ ಬಿ.ಶೆಟ್ಟಿ ಹಾಗೂ ಅಪರ್ಣಾ ಬಾಲಮುರಳಿ ನಟನೆಯ 'ರುಧಿರಂ' ಸಿನಿಮಾ ಕನ್ನಡದಲ್ಲಿ ಡಬ್ ಆಗಿ ತೆರೆಕಾಣುತ್ತಿದೆ. ❖

ನಾನು ಮತ್ತು ಗುಂಡ 2

ಈ ಹಿಂದೆ ತೆರೆಕಂಡಿದ್ದ 'ನಾನು ಮತ್ತು ಗುಂಡ' ಸಿನಿಮಾದ ಮುಂದುವರಿದ ಭಾಗವಿದು. ರಘು ಹಾಸನ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಅವರೇ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ರಾಕೇಶ್ ಅಡಿಗ, ರಚನಾ ಇಂದರ್ ಮುಖ್ಯಭೂಮಿಕೆಯಲ್ಲಿದ್ದಾರೆ. ಆರ್.ಪಿ.ಪಟ್ನಾಯಕ್ ಅವರ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಈ ಹಿಂದಿನ ಸಿನಿಮಾದಲ್ಲಿದ್ದ 'ಶಂಕರ' ನಿಧನನಾದ ಮೇಲೆ ಆತನ ಮಗನಿಂದ ಕಥೆ ಮುಂದುವರಿಯುತ್ತದೆ. ರಾಕೇಶ್ ಅಡಿಗ 'ಶಂಕರ'ನ ಮಗನಾಗಿ ನಟಿಸಿದ್ದಾರೆ.

ರುಕ್ಮಿಣಿ ನಟನೆಯ 'ಮದರಾಸಿ'

ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಮೂಲಕ ಕನ್ನಡಿಗರ ನೆಚ್ಚಿನ ನಟಿಯಾಗಿರುವ ರುಕ್ಮಿಣಿ ವಸಂತ್ ನಟನೆಯ ತಮಿಳು ಸಿನಿಮಾ 'ಮದರಾಸಿ' ಇಂದು ತೆರೆಕಂಡಿದೆ. 'ಅಮರನ್' ಖ್ಯಾತಿಯ ಶಿವಕಾರ್ತಿಕೇಯನ್ ನಾಯಕರಾಗಿ ನಟಿಸಿರುವ ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ಎ.ಆರ್. ಮುರುಗದಾಸ್ ನಿರ್ದೇಶಿಸಿದ್ದಾರೆ. ವಿಕೆ ಫಿಲಂಸ್ ಈ ಸಿನಿಮಾವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡುತ್ತಿದೆ.

ರುಕ್ಮಿಣಿ ವಸಂತ್

31 ಡೇಸ್: 'ಜಾಲಿಡೇಸ್' ಖ್ಯಾತಿಯ ನಿರಂಜನ್ ಶೆಟ್ಟಿ ಅಭಿನಯದ ಸಿನಿಮಾವಿದು. ಎನ್ ಸ್ಟಾರ್ ಬ್ಯಾನರ್‌ನಲ್ಲಿ ನಾಗವೇಣಿ ಎನ್. ಶೆಟ್ಟಿ ನಿರ್ಮಾಣ ಮಾಡಿರುವ ಈ ಸಿನಿಮಾವನ್ನು ರಾಜ ರವಿಕುಮಾರ್ ನಿರ್ದೇಶಿಸಿದ್ದಾರೆ. ನಿರಂಜನ್ ಶೆಟ್ಟಿ ಹಾಗೂ ಪ್ರಜ್ವಲಿ ಸುವರ್ಣ ನಾಯಕ–ನಾಯಕಿಯಾಗಿ ನಟಿಸಿರುವ ಸಂಗೀತ ಪ್ರಧಾನ ಸಿನಿಮಾವಿದು. ವಿ.ಮನೋಹರ್ ಸಂಗೀತ ನಿರ್ದೇಶನದ 150ನೇ ಚಿತ್ರವಿದು. ವಿನುತ್ ಕೆ. ಛಾಯಾಚಿತ್ರಗ್ರಹಣ, ಧನು ಕುಮಾರ್, ತ್ರಿಭುವನ್ ನೃತ್ಯ ನಿರ್ದೇಶನ ಸಿನಿಮಾಗಿದೆ.

ನಿರಂಜನ್ ಶೆಟ್ಟಿ, ಪ್ರಜ್ವಲಿ

'ಒಳ್ಳೆಯ ಕೆಲಸಕ್ಕೆ ಸಮಯ ಹಿಡಿಯುತ್ತೆ'

ರಕ್ಷಿತ್ ಶೆಟ್ಟಿ

ನಟ ರಕ್ಷಿತ್ ಶೆಟ್ಟಿ ತೆರೆ ಮೇಲೆ ಕಾಣಿಸಿಕೊಂಡು ಎರಡು ವರ್ಷ ಕಳೆದಿವೆ. 'ಸಪ್ತ ಸಾಗರದಾಚೆ ಎಲ್ಲೋ' ಬಳಿಕ ಅವರ ಸಿನಿಮಾಗಳು ತೆರೆಕಂಡಿಲ್ಲ. ಸದ್ಯ 'ಉಳಿದವರು ಕಂಡಂತೆ' ಸಿನಿಮಾದ ಸರಣಿಯಾದ 'ರಿಚರ್ಡ್ ಆಂಟನಿ' ಪ್ರಿಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿರುವ ರಕ್ಷಿತ್ 'ಒಳ್ಳೆಯ ಕೆಲಸ ಸಮಯ ಹಿಡಿಯುತ್ತದೆ' ಎಂದಿದ್ದಾರೆ.

ಅಮೆರಿಕಾದ ಫ್ಲೋರಿಡಾದಲ್ಲಿ ನಡೆದ ನಾವಿಕ ವಿಶ್ವ ಕನ್ನಡ ಸಮಾವೇಶದಲ್ಲಿ ಮಾತನಾಡಿದ ಅವರ ಮಾತುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. 'ಕೆಲವೊಮ್ಮೆ ನಾವು ಮಾಡುವ ಕೆಲಸ ನಿಧಾನವಾಗಿದೆ ಎಂದೆನಿಸಬಹುದು. ಆದರೆ ದೊಡ್ಡ, ಒಳ್ಳೆಯ ಕೆಲಸ ಮಾಡಬೇಕಾದರೆ ಸಮಯ ಹಿಡಿಯುತ್ತದೆ. ಅದಕ್ಕಾಗಿ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದೇನೆ. ಆದರೆ ನಾನು ಮತ್ತೆ ಬಂದಾಗ, ಚಿತ್ರಮಂದಿರಕ್ಕೆ ಹೋಗದವರು ಚಿತ್ರಮಂದಿರಕ್ಕೆ ಹೋಗುವಂತಹ ಸಿನಿಮಾ ತರುತ್ತೇನೆ' ಎಂದಿದ್ದಾರೆ. ರಕ್ಷಿತ್ ಶೆಟ್ಟಿ ಸಿನಿಮಾ ಯಾವಾಗ ಎನ್ನುವ ಪ್ರಶ್ನೆಗಳಿಗೆ ಈ ಮಾತು ಉತ್ತರದಂತಿದೆ.

2023ರಲ್ಲಿ 'ನಾ ಕಂಡಂತೆ' ಎಂಬ ಯುಟ್ಯೂಬ್ ಚಾನಲ್ ಆರಂಭಿಸಿದ್ದ ರಕ್ಷಿತ್, ಒಂದು ವಿಡಿಯೊ ಅಪ್‌ಲೋಡ್ ಮಾಡಿದ್ದರು. 'ರಿಚರ್ಡ್ ಆಂಟನಿ' ಹಾಗೂ 'ಪುಣ್ಯಕೋಟಿ' ಸಿನಿಮಾಗಳಿಗೆ ಪರಶುರಾಮ ಮತ್ತು ಆತನ ಕೊಡಲಿ ಸ್ಫೂರ್ತಿಯಾಗಿದ್ದು, ಈ ಕಥೆಗಳ ಜೊತೆಗೆ ನಾಲ್ಕು ವರ್ಷ ಕಳೆದಿದ್ದೇನೆ. ಇನ್ನೂ ನಾಲ್ಕು ವರ್ಷ ಕಳೆಯುವುದಿದೆ ಎಂದು ಅದರಲ್ಲಿ ಹೇಳಿದ್ದರು. ಈ ಸಿನಿಮಾಗಳ ಜೊತೆಗೆ 'ಮಿಡ್ ವೇ ಟು ಮೋಕ್ಷ' ಎನ್ನುವ ಸಿನಿಮಾವೂ ರಕ್ಷಿತ್ ಸಿನಿಬ್ಯಾಂಕ್‌ನಲ್ಲಿದೆ. ಇವುಗಳನ್ನು ಪೂರ್ಣಗೊಳಿಸಿಯೇ ಮುಂದಿನದನ್ನು ಯೋಚಿಸುವುದಾಗಿ ಅವರು ಹೇಳಿದ್ದರು. ❖

2 ಸಮೀಕ್ಷೆಗಳಿಗೆ ಸಿ.ಎಂ ಚಾಲನೆ

ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ, ಮಾಜಿ ದೇವದಾಸಿಯರ ಮರು ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೆ. 15ರಿಂದ ಒಟ್ಟು 45 ಕೆಲಸದ ದಿನ, ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಮತ್ತು 15 ಜಿಲ್ಲೆಗಳಲ್ಲಿ ಮಾಜಿ ದೇವದಾಸಿಯರ ಮರು ಸಮೀಕ್ಷೆ ನಡೆಯಲಿದೆ. ದೇಶದಲ್ಲೇ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ನಡೆಯುತ್ತಿರುವುದು ವಿಶೇಷ.

ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಯಲಿರುವ ಈ ಸಮೀಕ್ಷೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು.

ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಿ, ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಈ ಸಮೀಕ್ಷೆಗಳನ್ನು ನಡೆಸಲು ಸರ್ಕಾರ ಉದ್ದೇಶಿಸಿದೆ. ಎರಡೂ ಸಮೀಕ್ಷೆಗಳು ಪ್ರತ್ಯೇಕವಾಗಿ ನಡೆಯಲಿವೆ. ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ 'ಕರ್ಮಣಿ ವೆಬ್ ಅಪ್ಲಿಕೇಷನ್' ಹಾಗೂ ಮಾಜಿ ದೇವದಾಸಿಯರ ಮರು ಸಮೀಕ್ಷೆಗೆ ಸೇವಾ ಸಿಂಧು ಮೂಲಕ 'ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ ವೆಬ್ ಅಪ್ಲಿಕೇಷನ್' ಸಿದ್ಧಪಡಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆಯನ್ನು ಎಲ್ಲ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುವುದು. ಮಾಜಿ ದೇವದಾಸಿಯರ ಮರು ಸಮೀಕ್ಷೆಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುವುದು. ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಯು ಅದೇ ಸಮುದಾಯದವರ ಮೂಲಕವೇ ನಡೆಯಲಿರುವುದು ವಿಶೇಷವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶಮ್ಲಾ ಇಕ್ಬಾಲ್, ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಾಬು ಇದ್ದರು.

ಮಾಜಿ ದೇವದಾಸಿ ಸಮೀಕ್ಷೆ ಎಲ್ಲೆಲ್ಲಿ?

ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಗಳು.

ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಸಮೀಕ್ಷೆಗಳಿಗೆ ಸಿದ್ದರಾಮಯ್ಯ ಚಾಲನೆ ನೀಡಿದರು. ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರೂ ಇದ್ದರು

ಸಮೀಕ್ಷೆಗಳ ವೈಶಿಷ್ಟ್ಯ

- ಮೊಬೈಲ್ ಆ್ಯಪ್ ಬಳಕೆ
- ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಒಳಗೊಂಡ ಸಮಿತಿ
- ಮಾಜಿ ದೇವದಾಸಿಯರ ಮರು ಸಮೀಕ್ಷೆಗೆ ಮಾಜಿ ದೇವದಾಸಿ ಮಹಿಳೆಯರ ಸಂಘಟನೆಗಳ ಪ್ರತಿನಿಧಿಗಳನ್ನು ಸೇರಿಸಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಆಂತರಿಕ ಸಮಿತಿ
- ಜಿಲ್ಲಾಧಿಕಾರಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಂದ ಸಮನ್ವಯ
- ಎರಡೂ ಸಮೀಕ್ಷೆಗಳ ಸಹಾಯವಾಣಿ– 1800 599 2025

41 ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ಕಿರೀಟ

ಬೆಂಗಳೂರು: ಪ್ರಾಥಮಿಕ ಶಾಲೆಯ 20 ಶಿಕ್ಷಕರು ಮತ್ತು ಪ್ರೌಢಶಾಲೆಯ ಒಬ್ಬರು ವಿಶೇಷ ಶಿಕ್ಷಕರನ್ನು ಒಳಗೊಂಡು 11 ಸಹ ಶಿಕ್ಷಕರು, ಪದವಿಪೂರ್ವ ಕಾಲೇಜಿನ ಇಬ್ಬರು ಪ್ರಾಂಶುಪಾಲರು ಹಾಗೂ ಎಂಟು ಉಪನ್ಯಾಸಕರು ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದ್ದು, ಸೆ.5ರಂದು ನಡೆಯುವ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ.

ಕೊಡಗಿನಲ್ಲಿ ಮುಂದುವರಿದ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಗುರುವಾರವೂ ಮಳೆ ಮುಂದುವರಿದಿದೆ. ಮಡಿಕೇರಿಯಲ್ಲಿ ಬೆಳಿಗ್ಗೆ ಬಿರುಸಿನಿಂದ ಮಳೆ ಸುರಿಯಿತು.

ಸಂಪಾಜೆಯಲ್ಲಿ 6 ಸೆಂ.ಮೀ, ಶಾಂತಳ್ಳಿ 5, ಭಾಗಮಂಡಲ 4.6, ಶ್ರೀಮಂಗಲ 4, ಮಡಿಕೇರಿಯಲ್ಲಿ 3 ಸೆಂ.ಮೀ ಮಳೆಯಾಯಿತು.

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಗುತ್ತಿಗೆ ಸಂಖ್ಯೆ : ಮ.ನ.ಪಾ./ಆ.ಶಾ./ಘ.ವ.ನಿ./ಟಿ.ಎನ್.ಡಿ/ಕೆಪಿಪಿಪಿ/05/2025–26 ದಿನಾಂಕ : 04–09–2025

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆ್ಯಕ್ಟ 2000 ನಿಯಮದಂತೆ **ಮಹಾನಗರ ಪಾಲಿಕೆ ಬೆಳಗಾವಿ** ಇವರಿಂದ ವರ್ಷ 2025–26 ನೇ ಸಾಲಿನ 15 ನೇ ಹಣಕಾಸು ಯೋಜನೆಯ ನಿರ್ಬಂಧಿತ ಅನುದಾನದಡಿ ಮಂಜೂರಾದ **ವಿವಿಧ 01 ಕಾಮಗಾರಿಗಳಿಗೆ ಹಾಗೂ ಪಾಲಿಕೆ ನಿಧಿಯಲ್ಲಿ 02 ಕಾಮಗಾರಿಗಳಿಗೆ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ.**

ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 11–09–2025 ರಂದು ಇರುತ್ತದೆ.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪಡೆಯಬಹುದಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/958/ಮಣಿಪಾಲ್/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ
ಕನೀನಿನಿ, ಮಲಪ್ರಭಾ ನೀರಾವರಿ ಉಪವಿಭಾಗ ಸಂ:1
ಅಳಗವಾಡಿ ತಾ. ನವಲಗುಂದ 582208

ಸಂ:ಕನೀನಿ:ಮನೀಉವಿ1:ಸಿ1:ಉಗ್ರಾಣ/ಅ.ಗೈರು/2025–26:210 ದಿನಾಂಕ:03–09–2025

ಎಚ್ಚರಿಕೆ ನೋಟೀಸ್

ವಿಷಯ : ಕಛೇರಿ ಕೆಲಸಕ್ಕೆ ಅನಧೀಕೃತ ಗೈರು ಹಾಜರಿ ಇರುವ ಕುರಿತು.

ಕನೀನಿನಿ ಮಲಪ್ರಭಾ ನೀರಾವರಿ ಉಪವಿಭಾಗ ನಂ.01 ಅಳಗವಾಡಿ ತಾ. ನವಲಗುಂದ ಕಛೇರಿಯ ಸಿಬ್ಬಂಧಿಯಾದ ಶ್ರೀ ರಾಜು ತಿರುಪಾಲ ಗುರಯ್ಯ ದ್ವಿದಸ ನೀವು ದಿನಾಂಕ : 01/10/2022 ರಿಂದ ಇಲ್ಲಿಯವರೆಗೆ ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಿ ಇರುವದರಿಂದ ನೀವು ನಿರ್ವಹಿಸುತ್ತಿದ್ದ ಉಗ್ರಾಣ ಶಾಖೆಯ ಕೆಲಸಗಳು / ಸರ್ಕಾರದ ಕೆಲಸ ಕಾರ್ಯಗಳಿಗೆ ಬಹಳ ತೊಂದರೆ ಆಗಿದೆ. ಈ ಜಾಹಿರಾತು ಎಚ್ಚರಿಕೆ ನೋಟೀಸ್ ಪ್ರಕಟಣೆಗೊಂಡ ದಿನಾಂಕದಿಂದ **15.09.2025** ರೊಳಗೆ ನೀವು ಕಛೇರಿ ಕೆಲಸಕ್ಕೆ ಹಾಜರಾಗಲು ತಿಳಿಸಿದೆ. ಒಂದು ವೇಳೆ ಹಾಜರಾಗದೇ ಇದ್ದಲ್ಲಿ ನಿಮ್ಮ ಮೇಲೆ ಕ.ನಾ.ಸೇ ಹಾಗೂ ಸಿಸಿಎ ನಿಯಮಾವಳಿಗಳನ್ವಯ ಕ್ರಮ ಜರುಗಿಸಲು ಮೇಲಾಧಿಕಾರಿಗಳ ಮುಖೇನ ಮಾತ್ರ ಇಲಾಖೆಗೆ ವರದಿ ಸಲ್ಲಿಸಲಾಗುವದು. ಇದು ಕೊನೆಯ ಎಚ್ಚರಿಕೆ ನೋಟೀಸ್ ತಿಳಿಯಿರಿ.

ಸಹಿ/– ಸಹಾಯಕ ಕಾರ್ಯಪಾಲಕ ಇಂಜಿನೀಯರು,
ಕನೀನಿನಿ ಮನೀ ಉಪವಿಭಾಗ ಸಂ:1 ಅಳಗವಾಡಿ ತಾ: ನವಲಗುಂದ.

ವಾಸಾಸಂಇ/ಗದಗ/ಕೆಎಸ್ಎಂಸಿಎ/266/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ–4/ಐಎಫ್‌ಟಿ–11/2025–26
ದಿನಾಂಕ:02–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (2ನೇ ಕರೆ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಪರಿಶಿಷ್ಟ ಪಂಗಡ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿ

8443 ಠೇವಣಿವಂತಿಕೆ

1. ಸೊರಬ ತಾಲ್ಲೂಕು 1 ಕಾಮಗಾರಿ (ಇ.ನಂ::23295).

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು : ಎಲ್ಲಾ ಕಾಮಗಾರಿಗಳಿಗೆ ದಿನಾಂಕ:03–09–2025 ರಿಂದ 09–09–2025 ರ ವರೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ): 06 ತಿಂಗಳು ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182– 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25–26/07/09/862

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಔರಾದ (ಬಾ)
Email:- ka.aurad.tp@gmail.com Website:- www.auradtown.gov.in

ಸಂ: ಪಪಂಔ/ಟೆಂಡರ/ಸಿಆರ್–/2025–26/186 ದಿನಾಂಕ:02/09/2025

ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ WORK_INDENT 47633/Call-2, WORK_INDENT 47647/Call–2, WORK_INDENT 47833, WORK_INDENT 47846, WORK_INDENT 47819, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ/ ಸರಕು /ಸೇವೆಯ ಟೆಂಡರ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 5)ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಪಾರಂ ಸಲ್ಲಿಸುವ ಅಂತಿಮ ದಿನಾಂಕ **19–09–2025,** 7) ತಾಂತ್ರಿಕ ಬಿಡ್ ಬಿಡ್ ತೆರೆಯುವ ದಿನಾಂಕ **20–09–2025,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಪಟ್ಟಣ ಪಂಚಾಯತ ಕಾರ್ಯಲಯಾ ಔರಾದ(ಬಾ) ಇಮೇಲ್:ka .aurad .tp @ gmail .com , 9) ಅಂತರಜಾಲತಾಣದ ವಿಳಾಸ www .eproc. karnataka.gov.in

ಸಹಿ/–ಮುಖ್ಯಾಧಿಕಾರಿಗಳು,
ಪಟ್ಟಣ ಪಂಚಾಯತ ಔರಾದ,(ಬಾ)

ವಾ.ಸಾ.ಸಂ.ಇ/ಬೀದರ/160/ಕೆ.ಎಸ್.ಎಂ.ಸಿ.&ಎ/2025–26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
ಅಧಿಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್
ನವನಗರ ಪಿ.ಬಿ.ರಸ್ತೆ, ಹುಬ್ಬಳ್ಳಿ–25
mail.ID: seetp.hescom@gmail.com/
seetp@hescom.co.in Phone:9448277602, Fax: 0836-2324307
Corporate Identity Number (CIN): U31401KA2002SGC030437

ಸಂಖ್ಯೆ: ಹುವಿಸಕಂನಿ/ಅಇಂ(ಟಿ&ಪಿ)/ಇ–7/ಎಇಇ–1/2025–26/Cys-5186 ದಿನಾಂಕ: 03–09–2025

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

Sl No.	Particulars	Enq.No.	Date of Publish
1	Manufacture & supply of Hardware and Line materials	HESCOM/2025-26/ IND0095 to IND0117	04-09-2025

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್ ಸೈಟನ್ನು ದಿ: 04–09–2025 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರ್‌ಮೆಂಟ್,
ಹುವಿಸಕಂನಿ, ನವನಗರ ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/
628/ದೇಶಪಾಂಡೆಪಬ್ಲಿಸಿಟಿ/2025–26

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560094 ದೂರವಾಣಿ: 080–2217 2476/2479/2033,
ಫ್ಯಾಕ್ಸ್: 080–2351 3126

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕೆಲಸಕ್ಕೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ತುಮಕೂರಿನಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಕಾಂಪೌಂಡ್ ಗೋಡೆಯ ನಿರ್ಮಾಣ (ಹಂತ–1) – ಸಿವಿಲ್ ಕಾಮಗಾರಿಗಳು
ಇ–ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಜಿ/ಇಸ್ರೋ–ಹೆಚ್‌ಕ್ಯೂ /ಸಿ/ಸಿ/07/ಪಿ/ಟಿಯುಎಂ/2025–26, ದಿನಾಂಕ: 04.09.2025
ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ರೂ. 711.31 ಲಕ್ಷಗಳು
ಪೂರ್ಣಗೊಳಿಸುವ ಅವಧಿ	ಹನ್ನೆರಡು (12) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ	04.09.2025, 18:10 ಗಂಟೆಯಿಂದ 24.09.2025, 23:59 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸುವ ಕಡೆಯ ದಿನಾಂಕ & ಸಮಯ	26.09.2025, 15:30 ಗಂಟೆಯವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್)	29.09.2025, 16:00 ಗಂಟೆಯ ನಂತರ
ಇಎಂಡಿ	ರೂ. 14,22,620/-

ಆಸಕ್ತ ಟೆಂಡರ್‌ದಾರರು ಅರ್ಹತಾ ಅಗತ್ಯತೆಗಳು ಮತ್ತು ಇತರ ವಿವರಗಳಿಗಾಗಿ ಟೆಂಡರ್ ಆಹ್ವಾನ ಪ್ರಕಟಣೆಯನ್ನು ವೆಬ್‌ಸೈಟ್: https://www.isro.gov.in/Tenders.html ಮತ್ತು https://www.tenderwizard.com/ISRO ಗಳಲ್ಲಿನ ಟೆಂಡರ್ ಮುಕ್ತ ವೀಕ್ಷಣೆಯಲ್ಲಿ ಪರಿವೀಕ್ಷಿಸಬಹುದು. ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (ಎನ್ಐಟಿ) ಮತ್ತು ಟೆಂಡರ್ ದಸ್ತಾವೇಜುಗಳನ್ನು ಇ–ಟೆಂಡರಿಂಗ್ ವೆಬ್‌ಸೈಟ್ https://www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯಸ್ಥರು, ಸಿಎಂಡಿ, ಇಸ್ರೋ ಮುಖ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ – 2021) PM-USHA (MERU)
ಕುಲಸಚಿವರ ಕಾರ್ಯಾಲಯ, ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04,
ಭೂತರಾಮನಹಟ್ಟಿ, ಬೆಳಗಾವಿ – 591156. ದೂರವಾಣಿ ಸಂಖ್ಯೆ: 0831–2565237
ಇ–ಮೇಲ್: registrareval@rcub.ac.in ವೆಬ್‌ಸೈಟ್: www.rcub.ac.in

ಸಂಖ್ಯೆ: ರಾಚವಿ/ಬೆಳಗಾವಿ/ಪವಿ/2025–26/3671 ದಿನಾಂಕ: 03–09–2025

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕುಲಸಚಿವರು (ಮೌಲ್ಯಮಾಪನ), ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ **ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು** ನೋಂದಾಯಿತ ಸಂಸ್ಥೆಗಳಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ: 03–09–2025 ರಂದು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ನೋಂದಾಯಿತ ಸಂಸ್ಥೆಗಳು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 17–09–2025 ರಂದು **ಸಂಜೆ 5.00 ಗಂಟೆಯೊಳಗಾಗಿ** ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ನ ಇ.ಎಂ.ಡಿ. ಮೊತ್ತ **ರೂ. 7,89,000/–** ಗಳಾಗಿದ್ದು, ಹೆಚ್ಚಿನ ಮಾಹಿತಿಗಾಗಿ **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ** ವೆಬ್‌ಸೈಟ್: **www.rcub.ac.in** ನಲ್ಲಿ ನೋಡಬಹುದು ಹಾಗೂ **ಪರೀಕ್ಷಾ ವಿಭಾಗದಿಂದ ಪಡೆಯಬಹುದಾಗಿದೆ.**

ಸಹಿ/– ಕುಲಸಚಿವರು (ಮೌಲ್ಯಮಾಪನ)
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/955/ಅಡ್ವರ್ಟೋರ್/2025–26

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

No: KREIS/INFR/KIT/1/2025-ADMN/E-226784 ದಿನಾಂಕ: 04.09.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ವಸತಿ ಶಾಲೆ/ಕಾಲೇಜುಗಳಿಗೆ ನರ್ಸಿಂಗ್ ಕಿಟ್‌ಗಳನ್ನು ಒದಗಿಸಲು** ಇ–ಪೋರ್ಟಲ್ ಮುಖಾಂತರ ಆಹ್ವಾನಿಸಲಾದ ಅಲ್ಪಾವಧಿ ಮರು ಟೆಂಡರ್ ಸಂಖ್ಯೆ: **KREIS/2025-26/IND0084/CALL-2**, ದಿನಾಂಕ: 04.09.2025ರಂದು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, **ಸದರಿ ಟೆಂಡರ್‌ಗಳಿಗೆ ಅಂತಿಮ ದಿನಾಂಕ: 19.09.2025 ರಂದು ನಿಗದಿಪಡಿಸಲಾಗಿದೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ವ.ಶಿ.ಸಂ.ಸಂಘ

DIPR/CP/YC/2659/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.
ದೂರವಾಣಿ ಸಂಖ್ಯೆ: 080–22133370, Email ID: eepwdbngdn@yahoo.com
E-Portal: https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 16/2025–26
ದಿನಾಂಕ: 02.09.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಹೊಸಕೋಟೆ, ದೇವನಹಳ್ಳಿ, ನೆಲಮಂಗಲ, ನಂ.2 ಉತ್ತರ & ಆನೇಕಲ್ ಉಪವಿಭಾಗಕ್ಕೆ ಸಂಬಂಧಿಸಿದಂತೆ 62 ಸಂಖ್ಯೆಯ (ರೂ. 6.00 ರಿಂದ 100.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕ್ರ.ಸಂ. 01 ರಿಂದ 61

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 10.09.2025 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 11.09.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರ.ಸಂ. 62ಕ್ಕೆ

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 18.09.2025 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 19.09.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/2631/ZEN/2025-26

ಕರ್ನಾಟಕ ಸರ್ಕಾರ
ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಹಾಯಕ ನಿರ್ದೇಶಕರ ಕಚೇರಿ, ಜಿಲ್ಲಾ ಕ್ರೀಡಾಂಗಣ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ
ದೂರವಾಣಿ: 08272–2220986 ಇಮೇಲ್: adysskodagu@gmail.com

ಸಂ.: ಸನಿ/ಯುಸಕ್ರೀಇ/ಕೊಡಗು/ಪೊ.ಕ್ರೀ.ವ.ಊ.ಟೆ/2025–26 ದಿ: 04–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಚೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಮಡಿಕೇರಿ ಕೊಡಗು. ಇವರ ಅಧೀನದಲ್ಲಿರುವ ಪೊನ್ನಂಪೇಟೆ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಹಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರನ್ನು ಆಹ್ವಾನಿಸಿದೆ.

ಕ್ರ. ಸಂ.	ಟೆಂಡರ್‌ನ ವಿವರ	ಟೆಂಡರ್‌ನ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
1.	ಕ್ರೀಡಾ ವಸತಿ ನಿಲಯ, ಪೊನ್ನಂಪೇಟೆ ಕೊಡಗು ಜಿಲ್ಲೆ	ರೂ. 46,06,875/–	ರೂ. 92,138/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18–09–2025 ಸಮಯ:ಅಪರಾಹ್ನ: 12.00 ಗಂಟೆ.

ಸಹಿ/– ಸಹಾಯಕ ನಿರ್ದೇಶಕರು, ಯುವ ಸಬಲೀಕರಣ
ಮತ್ತು ಕ್ರೀಡಾ ಇಲಾಖೆ, ಮಡಿಕೇರಿ, ಕೊಡಗು ಜಿಲ್ಲೆ.

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–18/ಎಇ–3/2025–26 ದಿನಾಂಕ:–02.09.2025

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 18/ಎಇ–3/2025–26 ದಿನಾಂಕ: 02.09.2025

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 1 ಕಾಮಗಾರಿಗೆ ಮೊತ್ತ 94.02 ಲಕ್ಷ, 3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 4 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 74.36 ಲಕ್ಷ, ಗರಿಷ್ಟ ಮೊತ್ತ ರೂ. 76.68 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 4059–80–051–0–29–386 – 4059– ಇಲಾಖಾ ಕಟ್ಟಡಗಳಡಿ 1 ಕಾಮಗಾರಿಗೆ ರೂ. 72.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 11.09.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 12.09.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ವಾಸಾಇ/ಡಿವಿಜಿ/316/
ಕೆಎಸ್ಎಂಸಿಎ/2025–26

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಆಯುಕ್ತರ ಕಛೇರಿ, ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಇ–ಮೇಲ್: bcwd.hostels@karnataka.gov.in

ಸಂಖ್ಯೆ: BCWD-12023/1/2025-HOSTEL ದಿನಾಂಕ:04.09.2025

ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಮತ್ತು ಪ.ಜಾ ಮತ್ತು ಪ.ವರ್ಗದ ವೃತ್ತಿಪರ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ

ಪ್ರವರ್ಗ–1, ಎಸ್.ಸಿ & ಎಸ್.ಟಿ	ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, 3ಬಿ	ರೂ.1.00 ಲಕ್ಷ

- ವಿದ್ಯಾರ್ಥಿಗಳು **https://shp.karnataka.gov.in/bcwd** ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **04.10.2025.**
- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ **https://bcwd.karnataka.gov.in** ನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ **bcwdhelpline@gmail.com** ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ / ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆಗಳು : 8050770004 ಮತ್ತು 8050770005

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/2639/2025–26

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಮೂಲಸೌಕರ್ಯ–ಇತರೆ/ಸಿಆರ್–115/2025–26 ದಿನಾಂಕ: 29.08.2025

ಟೆಂಡರ್ ಪ್ರಕಟಣೆ

2025–26ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ **"ಮೂಲಭೂತ ಸೌಕರ್ಯ (ಆಫೀಸ್ ಚೇರ್, ಆಫೀಸ್ ಟೇಬಲ್, ಲೈಬ್ರರಿ ಟೇಬಲ್, ಲೈಬ್ರರಿ ಸ್ಟಡಿ ಚೇರ್, ಅಲ್ಮೇರಾ ಹಾಗೂ ಕ್ಲಾತ್ ಡ್ರೈಯಿಂಗ್ ಸ್ಟಾಂಡ್)ಗಳನ್ನು"** ಸರಬರಾಜುದಾರರಿಂದ ಪೂರೈಸಲು GeM ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	02.09.2025
2.	ಟೆಂಡರ್ ಮೊತ್ತ:	ರೂ.495.00 ಲಕ್ಷಗಳು.
3.	ಇಎಂಡಿ ಮೊತ್ತ	ರೂ.7,42,613/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	09.09.2025 ಬೆಳಿಗ್ಗೆ 11:00 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	03.10.2025 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	06.10.2025 ಬೆಳಿಗ್ಗೆ 10:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	09.10.2025 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535901/902 080–22535918.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ **https://dom.karnataka.gov.in** ಹಾಗೂ GeM ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/2649/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಿತ್ರದುರ್ಗ.

ಸಂ.ಜಿಪಂಚಿ/ಆ(15)ಹೊಸ ಗ್ರಂಥಾಲಯ/ಸಿಆರ್/182/2024–25 ದಿ: 03.09.2025

ಟೆಂಡರ್ ಪ್ರಕಟಣೆ–3ನೇ ಕರೆ

ಕೇಂದ್ರ ಸರ್ಕಾರದ Scheme for Special Assistance to States for Capital Investment" ಯೋಜನೆಯ ಅಡಿಯಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲಾಗುತ್ತಿರುವ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಅನುದಾನ ಮಂಜೂರಾಗಿರುತ್ತದೆ, ಪ್ರಯುಕ್ತ ಒಟ್ಟು ಮೊತ್ತವಾರು ಪೀಠೋಪಕರಣಗಳನ್ನು ಸರಬರಾಜು ಮಾಡಲು ಅರ್ಹಏಜೆನ್ಸಿ/ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಡಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಟೆಂಡರ್‌ದಾರರಿಗೆ ಸೂಚನೆಗಳು:– (1) ಟೆಂಡರ್ ಡಾಕ್ಯೂಮೆಂಟ್‌ನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಅವಧಿ ವಿಸ್ತರಣೆ ಹಾಗೂ ಇತರೆ ಹೆಚ್ಚಿನ ಸೂಚನೆಗಳನ್ನು ಸಂಬಂಧಿಸಿದ ವೆಬ್‌ಸೈಟ್ ಮೂಲಕವೇ ಪಡೆಯುತಕ್ಕದ್ದು ಪ್ರತ್ಯೇಕವಾಗಿ ತಿಳಿಸಲಾಗುವುದಿಲ್ಲ.
(2) ಮೇಲ್ಕಂಡ ಸೇವೆಯನ್ನು ಒದಗಿಸಲು ಆಸಕ್ತರಿರುವ ಸಂಸ್ಥೆಗಳು ಇ–ಗವರ್ನೆನ್ಸ್ ಇಲಾಖೆಯಲ್ಲಿ ನೋಂದಣಿ ಪಡೆದು ಡಿಜಿಟಲ್ ಸಹಿಯನ್ನು ದೃಢೀಕರಣ ಪಡೆಯಬೇಕಾಗಿರುತ್ತದೆ. ಸದರಿ ನೋಂದಣಿ ಹಾಗೂ ದೃಢೀಕರಣ ಪಡೆಯುವ ಸಂಬಂಧ ವಿವರವಾದ ಸೂಚನೆಗಳನ್ನು https://kppp.karnataka.gov.in ಮೂಲಕವೇ ಪಡೆಯಬಹುದಾಗಿರುತ್ತದೆ.
(1) ಟೆಂಡರ್ ಸಂಖ್ಯೆ:–RDPR/2024-25/IND9097/CALL-3
(2) ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊಬಲಗು ರೂ. 1,40,00,000/–
(3) ಟೆಂಡರ್ ಡಾಕ್ಯುಮೆಂಟ್‌ನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ 03.09.2025 ರಿಂದ 03.10.2025 (4) ಟೆಂಡರ್ ಬಿಡ್‌ಗಳನ್ನು ಸಲ್ಲಿಸಲುಕೊನೆಯ ದಿನಾಂಕ (ವೆಬ್‌ಸೈಟ್ ಮೂಲಕ) 03.10.2025 at 5.00 PM (5) ಪೀಠೋಪಕರಣ ಸ್ಯಾಂಪಲ್‌ನ್ನು ಪರಿಶೀಲನೆಗೆ ಒದಗಿಸುವ ಕೊನೆಯ ದಿ: 03.10.2025 at 3.00 PM
(6) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 04.10.2025 at 11.00 AM
(7) ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ಸಂಭಾವ್ಯ ದಿನಾಂಕ 10.10.2025
(8) ಇಎಂಡಿ ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) ರೂ.2,80,000/– ಟೆಂಡರ್ ಡಾಕ್ಯುಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಸಂಬಂಧಿಸಿದ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರನ್ನು ಕಚೇರಿಯ ಅವಧಿಯಲ್ಲಿ ಮೊಬೈಲ್ ಸಂಖ್ಯೆ:9480861001 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಉಪಕಾರ್ಯದರ್ಶಿಗಳು,
ಜಿಲ್ಲಾ ಪಂಚಾಯತ್, ಚಿತ್ರದುರ್ಗ

DIPR/CTA/KSMCA/
325/2025-26

ಕಾರ್ಯಪಾಲಕ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ವಿಭಾಗ, ಎಂ.ಜಿ.ರಸ್ತೆ, ರವೀಂದ್ರ ನಗರ, ಹಾಸನ–573201
ದೂ.ಸಂಖ್ಯೆ: 08172–268708 ಇ–ಮೇಲ್: eehassan708@gmail.com

ಅಲ್ಪವಾಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ – ಪೋರ್ಟಲ್ ಮುಖಾಂತರ)

ಟೆಂಡರ್ ಸಂಖ್ಯೆ:– ಕೆಪಿಪಿಪಿ –ಪೋರ್ಟಲ್‌ನಲ್ಲಿ KUWSDB/2025-25/WT/WORK-INDENT388 ಕಾಮಗಾರಿಯ ಹೆಸರು:– JHA AMRUT-2.0 ಯೋಜನೆಯಡಿ ಬೇಲೂರು ಪಟ್ಟಣದಲ್ಲಿ ಮಲಿನ ನೀರು ಶುದ್ಧೀಕರಣ ಘಟಕದ ಹತ್ತಿರ ಹೊರ ಹರಿವು ಕೊಳವೆ ಮಾರ್ಗ ದುರಸ್ಥಿ, chlorine contact tank ಗೆ ಟೈಲ್ಸ್‌ಗಳನ್ನು ಅಳವಡಿಸುವುದು ಮತ್ತು 5 ಎಮ್.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕಕ್ಕೆ 117 kWp ಸಾಮರ್ಥ್ಯದ ಮೇಲ್ಚಾವಣಿ ಸೋಲಾರ್ ಪವರ್ ಪ್ಲಾಟ್ ಅಳವಡಿಸಿ ಚಾಲನೆಗೊಳಿಸುವ ಕಾಮಗಾರಿ. ಟೆಂಡರ್ ಅಂದಾಜು ಮೊತ್ತ:– ರೂ.62.03 ಲಕ್ಷಗಳು. ಟೆಂಡರ್ ದಾಖಲೆಯ ಬೆಲೆ:– ಕೆಪಿಪಿಪಿ ಪೋರ್ಟಲ್‌ನಂತೆ. ಟೆಂಡರ್ ಭದ್ರತೆ ಮೊತ್ತ:– ರೂ.1.24/– ಟೆಂಡರ್ ಸಂಖ್ಯೆ:– ಕೆಪಿಪಿಪಿ –ಪೋರ್ಟಲ್‌ನಲ್ಲಿ KUWSDB/2025-25/WT/WORK-INDENT389 ಕಾಮಗಾರಿಯ ಹೆಸರು:– JHA AMRUT-2.0 ಯೋಜನೆಯಡಿ ಅರಸೀಕೆರೆ ನಗರದಲ್ಲಿರುವ 12 ಎಮ್.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕದ Electromechanical Equipment ಗಳ ದುರಸ್ಥಿ ಮತ್ತು ಸೇವೆ, online monitoring ಅಳವಡಿಸಿ ಚಾಲನೆಗೊಳಿಸುವುದು ಮತ್ತು 12 ಎಮ್.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕಕ್ಕೆ 50 kWp ಸಾಮರ್ಥ್ಯದ ಮೇಲ್ಚಾವಣಿ ಸೋಲಾರ್ ಪವರ್ ಪ್ಲಾಟ್ ಅಳವಡಿಸಿ ಚಾಲನೆಗೊಳಿಸುವ ಕಾಮಗಾರಿ. ಟೆಂಡರ್ ಅಂದಾಜು ಮೊತ್ತ:– ರೂ.80.97 ಲಕ್ಷಗಳು. ಟೆಂಡರ್ ದಾಖಲೆಯ ಬೆಲೆ:– ಕೆಪಿಪಿಪಿ ಪೋರ್ಟಲ್‌ನಂತೆ. ಟೆಂಡರ್ ಭದ್ರತೆ ಮೊತ್ತ:– ರೂ.1.62/– ಪೂರ್ಣಗೊಳಿಸಿದ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:–ದಿ:11.09.2025 17.30 ಘಂಟೆವರೆಗೆ, ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ:– ದಿ:15.09.2025 11.30 ಘಂಟೆಯ ನಂತರ, ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ:– ದಿ:16.09.2025 11.30 ಘಂಟೆಯ ನಂತರ ಇ–ಟೆಂಡರ್ ವಿಧಾನದಲ್ಲಿ ಭಾಗವಹಿಸಲು ಅಥವಾ ಹೆಚ್ಚಿನ ವಿವರಗಳನ್ನು ಪಡೆಯಲು ವೆಬ್‌ಸೈಟ್ https://kppp.karnatarka.gov.in ಹಾಗೂ ಕೆಳ ಸಹಿದಾರರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರು ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ವಿಭಾಗ, ಹಾಸನ

ವಾಸಾಸಂಇ/ಹಿಸನಿ/ಹಾಸನ/522/ಕೆಎಸ್ಎಂಸಿಎ/2025–26

₹2,000 ಕೋಟಿ ಬೆಟ್ಟಿಂಗ್ ವಹಿವಾಟು

ಶಾಸಕ ವೀರೇಂದ್ರ ಪ್ರಕರಣ • ಭಾರತದಿಂದ ದುಬೈಗೆ ಆನ್‌ಲೈನ್‌ನಲ್ಲಿ, ಅಲ್ಲಿಂದ ಹವಾಲಾ ಮೂಲಕ ಭಾರತಕ್ಕೆ ಹಣ ರವಾನೆ

ಪ್ರಜಾವಾಣಿ ವಾರ್ತೆ

ಶಾಸಕ ಕೆ.ಸಿ. ವೀರೇಂದ್ರ

ಬೆಂಗಳೂರು: ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರ ಕಂಪನಿಗಳು ಬೆಟ್ಟಿಂಗ್‌ಗೆ ಬಳಸಿಕೊಳ್ಳುತ್ತಿದ್ದ ಆನ್‌ಲೈನ್ ಪಾವತಿ ಗೇಟ್‌ವೇ ಒಂದರಲ್ಲಿ, ಕೆಲವೇ ದಿನಗಳಲ್ಲಿ ₹2,000 ಕೋಟಿಗೂ ಹೆಚ್ಚು ವಹಿವಾಟು ನಡೆಸಿವೆ.

ವೀರೇಂದ್ರ ಅವರ ಸೋದರನ ಮಗ ಪೃಥ್ವಿ ಎನ್.ರಾಜ್ 262 ಬೇನಾಮಿ ಖಾತೆಗಳನ್ನು ಮೇಲ್ವಿಚಾರಣೆ ನಡೆಸುತ್ತಿದ್ದರೆ, ಆನ್‌ಲೈನ್ ಬೆಟ್ಟಿಂಗ್ ತಾಣಗಳ ನಿರ್ವಾಹಕರು ಈ ಖಾತೆಗಳ ಮೂಲಕ ವಹಿವಾಟು ನಡೆಸುತ್ತಿದ್ದರು. ಈ ಖಾತೆಗಳನ್ನು ಕಿಂಗ್567, ರಾಜಾ567, ಲಯನ್ 567 ಎಂಬ ಆನ್‌ಲೈನ್ ಬೆಟ್ಟಿಂಗ್ ಜಾಲ ತಾಣಗಳಿಗೆ ಲಿಂಕ್ ಮಾಡಲಾಗಿತ್ತು. ಇಂತಹ ಹತ್ತಾರು ಬೆಟ್ಟಿಂಗ್ ಜಾಲತಾಣಗಳನ್ನು ವೀರೇಂದ್ರ ಅವರ ಕಂಪನಿಗಳು ನಿರ್ವಹಿಸುತ್ತಿವೆ ಎಂದು ಇ.ಡಿ ಮಾಹಿತಿ ನೀಡಿದೆ.

ಈ ಜಾಲತಾಣಗಳ ಮೂಲಕ ಹಣ ಪಡೆಯಲು ಹಲವು ಆನ್‌ಲೈನ್ ಪಾವತಿ ಗೇಟ್‌ವೇಗಳನ್ನು ಆರೋಪಿಗಳು ಹೊಂದಿದ್ದರು. ಈ ಗೇಟ್‌ವೇ ಮೂಲಕವೇ ಹಣ ಪಾವತಿ ಆಗುತ್ತಿತ್ತು. ದುಬೈನಲ್ಲಿ ಕ್ಯಾಸಲ್‌ರಾಕ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸಸ್, ಲ್ಯಾಸಾಕ್ಸ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸಸ್ ಹೆಸರಿನಲ್ಲಿ ಕಂಪನಿಗಳನ್ನು ಆರಂಭಿಸಿ, ಅವುಗಳ ಖಾತೆಗೆ ಹಣ ವರ್ಗಾವಣೆ ಆಗುವಂತೆ ವ್ಯವಸ್ಥೆ ರೂಪಿಸಿಕೊಂಡಿದ್ದರು ಎಂದು ಇ.ಡಿ ವಿವರಿಸಿದೆ.

ಆರೋಪಿಗಳು ಇಂತಹ ಹಲವು ಗೇಟ್‌ವೇಗಳನ್ನು ಬಳಸುತ್ತಿದ್ದು, ಈಗ ಒಂದರ ವಹಿವಾಟಿನ ದತ್ತಾಂಶಗಳು ಮಾತ್ರವೇ ಲಭ್ಯವಾಗಿವೆ. ಇಷ್ಟು ದೊಡ್ಡ ಮಟ್ಟದ ವಹಿವಾಟುಗಳು ಕೆಲವೇ ದಿನಗಳಲ್ಲಿ ನಡೆದಿದ್ದು, ಬೆಟ್ಟಿಂಗ್ ದಂಧೆಯ ಅಗಾಧ ಪ್ರಮಾಣವನ್ನು ತೋರಿಸುತ್ತದೆ. ಇತರ ಎಲ್ಲಾ ಗೇಟ್‌ವೇಗಳ ದತ್ತಾಂಶ ದೊರೆತರೆ, ಎಷ್ಟೆಲ್ಲಾ ಹಣ ಬೆಟ್ಟಿಂಗ್‌ನಲ್ಲಿ ಬಳಕೆಯಾಗಿದೆ ಎಂಬುದು ಗೊತ್ತಾಗಲಿದೆ. ಈ ನಿಟ್ಟಿನಲ್ಲಿ ತನಿಖೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದೆ.

ಪಾಲುದಾರಿಕೆ: ಈ ಕಂಪನಿಗಳನ್ನು ಕೆ.ಸಿ.ವೀರೇಂದ್ರ, ಕೆ.ಸಿ.ತಿಪ್ಪೇಸ್ವಾಮಿ, ಪೃಥ್ವಿ ಎನ್.ರಾಜ್ ಮತ್ತು ಅನಿಲ್ ಗೌಡ ಪಾಲುದಾರಿಕೆಯಲ್ಲಿ ಆರಂಭಿಸಿದ್ದರು. ಬೆಟ್ಟಿಂಗ್‌ನಲ್ಲಿ ಗೆದ್ದವರಿಗೆ ಹಣವನ್ನು 262 ಬೇನಾಮಿ ಖಾತೆಗಳ ಮೂಲಕ ನೀಡಲಾಗುತ್ತಿತ್ತು. ಬೆಟ್ಟಿಂಗ್ ಹಣ ದುಬೈನಲ್ಲಿನ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗುತ್ತಿದ್ದ ಕಾರಣ, ಬಹುತೇಕ ಸಂದರ್ಭದಲ್ಲಿ ಹವಾಲಾ ಮೂಲಕ ಹಣವನ್ನು ಭಾರತಕ್ಕೆ ತರಲಾಗುತ್ತಿತ್ತು ಎಂದು ಇ.ಡಿ ತಿಳಿಸಿದೆ.

ಕಾಂಗ್ರೆಸ್ ನಾಯಕಿ ಕುಸುಮಾ ಹನುಮಂತರಾಯಪ್ಪ ಅವರ ಸೋದರ ಅನಿಲ್ ಗೌಡ ಮನೆಯಲ್ಲೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದರು. ಬೆಟ್ಟಿಂಗ್ ವ್ಯವಹಾರದಲ್ಲಿ ಇದೇ ಮೊದಲ ಬಾರಿಗೆ ಅನಿಲ್ ಗೌಡ ಅವರ ಪಾಲುದಾರಿಕೆಯನ್ನು ಇ.ಡಿ ಖಚಿತಪಡಿಸಿದೆ.

ಮುಖ್ಯಾಂಶಗಳು

- ಸೋದರನ ಮಗನಿಂದ ಬೇನಾಮಿ ಖಾತೆಗಳ ಮೇಲ್ವಿಚಾರಣೆ
- ಹತ್ತಾರು ಬೆಟ್ಟಿಂಗ್ ಜಾಲತಾಣಗಳ ನಿರ್ವಹಣೆ

ಈವರೆಗಿನ ಮುಟ್ಟುಗೋಲು

- ₹67 ಕೋಟಿ ನಗದು ಮತ್ತು ಬ್ಯಾಂಕ್ ಠೇವಣಿ
- ₹6 ಕೋಟಿ ಮೌಲ್ಯದ ಚಿನ್ನಾಭರಣ
- 10 ಕೆ.ಜಿ ಬೆಳ್ಳಿಯ ವಸ್ತುಗಳು
- 10 ಐಷಾರಾಮಿ ಕಾರುಗಳು

ಶಾಸಕ ವೀರೇಂದ್ರ ಪುನಃ ಇ.ಡಿ ಕಸ್ಟಡಿಗೆ

ಬೆಂಗಳೂರು: 'ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಅಕ್ರಮ ಚಟುವಟಿಕೆ ಆರೋಪದಡಿ ಸದ್ಯ ಜಾರಿ ನಿರ್ದೇಶನಾಲಯದ (ಇ.ಡಿ) ವಶದಲ್ಲಿರುವ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪುನಃ ನಾಲ್ಕು ದಿನಗಳ ಕಾಲ ಇ.ಡಿ ಕಸ್ಟಡಿಯಲ್ಲಿ ಮುಂದುವರಿಸಿ ಆದೇಶಿಸಿದೆ.

ಕಸ್ಟಡಿ ಅವಧಿ ಗುರುವಾರಕ್ಕೆ ಮುಕ್ತಾಯಗೊಂಡಿದ್ದರಿಂದಾಗಿ ವೀರೇಂದ್ರ ಅವರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಮಧ್ಯಾಹ್ನ ಹಾಜರುಪಡಿಸಲಾಯಿತು.

ವಿಚಾರಣೆ ವೇಳೆ ಇ.ಡಿ ಪರ ವಿಶೇಷ ಪ್ರಾಸಿಕ್ಯೂಟರ್ ಐ.ಎಸ್.ಪ್ರಮೋದ್ ಚಂದ್ರ ಅವರು, 'ಆರೋಪಿ ವೀರೇಂದ್ರ ಅವರ ಕಸ್ಟಡಿ ಅವಧಿಯನ್ನು ಪುನಃ 15 ದಿನಗಳ ಕಾಲ ಮುಂದುವರಿಸಿ ಆದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

'ನಮಗೆ ಲಭ್ಯವಿರುವ ಡಿಜಿಟಲ್ ಸಾಕ್ಷ್ಯ ಮತ್ತು ವೆಬ್‌ಸೈಟ್‌ಗಳಲ್ಲಿ ದೊರಕುತ್ತಿರುವ ಬೆಟ್ಟಿಂಗ್ ಪುರಾವೆಗಳ ಬಗ್ಗೆ ವಿವರಣೆ ಪಡೆಯಲು ಆರೋಪಿಯನ್ನು ಮುಖಾಮುಖಿಯಾಗಿ ಇರಿಸಿಕೊಂಡು ವಿಚಾರಣೆ ಮಾಡಬೇಕಿದೆ. ಆದ್ದರಿಂದ, ಕಸ್ಟಡಿ ಅವಧಿ ವಿಸ್ತರಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವೀರೇಂದ್ರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲರಾದ ಎಚ್.ಎಸ್.ಚಂದ್ರಮೌಳಿ ಮತ್ತು ಕಿರಣ್ ಜವಳಿ, 'ಈಗಾಗಲೇ ವೀರೇಂದ್ರ ಅವರು ತನಿಖೆಗೆ ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ. ಹೀಗಿರುವಾಗ ಅವರನ್ನು ಮತ್ತೆ ಕಸ್ಟಡಿಗೆ ಕೇಳುವುದು ಉಚಿತವಲ್ಲ' ಎಂದು ಪ್ರತಿಪಾದಿಸಿದರು. ಅಂತಿಮವಾಗಿ ನ್ಯಾಯಾಧೀಶರು ಆರೋಪಿಯನ್ನು ಪುನಃ ನಾಲ್ಕು ದಿನಗಳ ಕಾಲ ಇ.ಡಿ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು.

ಬೆಂಬಲಿಗರ ಗದ್ದಲ: ವಿಚಾರಣೆ ವೇಳೆ ವೀರೇಂದ್ರ ಅವರನ್ನು ಕೋರ್ಟ್‌ಗೆ ಕರೆತರುವುದು ಕೊಂಚ ತಡವಾಯಿತು. ಈ ವೇಳೆ ವೀರೇಂದ್ರ ನ್ಯಾಯಾಲಯದ ಕೊಠಡಿಯನ್ನು ಪ್ರವೇಶಿಸುವ ಸಂದರ್ಭದಲ್ಲಿ ಚಿತ್ರದುರ್ಗದಿಂದ ಬಂದಿದ್ದ 100ಕ್ಕೂ ಹೆಚ್ಚು ಬೆಂಬಲಿಗರು ಏರುದನಿಯಲ್ಲಿ ಮಾತನಾಡುತ್ತಾ ಗದ್ದಲ ಎಬ್ಬಿಸಿದರು. ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ವೀರೇಂದ್ರ ಅವರನ್ನು ಹಾಜರುಪಡಿಸಲಾಯಿತು.

ಇದೇ ವೇಳೆ, ಮನೆ ಊಟ ನೀಡಲು ಅವಕಾಶ ನೀಡುವಂತೆ ವೀರೇಂದ್ರ ಪರ ವಕೀಲರು ಮಾಡಿದ ಮನವಿಗೆ ಯಾವುದೇ ಸೂಚನೆ ನೀಡದ ನ್ಯಾಯಾಧೀಶರು, 'ಈ ಕುರಿತಂತೆ ಲಿಖಿತ ಅರ್ಜಿ ಸಲ್ಲಿಸದ ಹೊರತು ಸೂಕ್ತ ಆದೇಶ ಹೊರಡಿಸಲು ಆಗದು' ಎಂದು ತಿಳಿಸಿದರು.

ಇ–ಕಾಮರ್ಸ್ ಸೋಗಿನಲ್ಲಿ ವಹಿವಾಟು

ಬೆಟ್ಟಿಂಗ್ ವ್ಯವಹಾರಗಳನ್ನು ಆರೋಪಿಗಳು ಇ–ಕಾಮರ್ಸ್ ಕಂಪನಿಗಳ ಸೋಗಿನಲ್ಲಿ ನಡೆಸುತ್ತಿದ್ದರು ಎಂದು ಇ.ಡಿ ಹೇಳಿದೆ.

ಆರೋಪಿಗಳು ದುಬೈನಲ್ಲಿ ಹೊಂದಿದ್ದ ಕಂಪನಿಗಳು ಆನ್‌ಲೈನ್ ಸೇವೆ ಮತ್ತು ಸರಕುಗಳ ಪೂರೈಕೆ, ಇವೆಂಟ್ ಮ್ಯಾನೇಜ್‌ಮೆಂಟ್ ವಹಿವಾಟು ನಡೆಸುವಂತೆ ಬಿಂಬಿಸಿಕೊಂಡಿದ್ದವು. ಈ ಸೇವೆ ಮತ್ತು ಸರಕುಗಳ ಪೂರೈಸಿದ ನೆಪದಲ್ಲಿ ಈ ಕಂಪನಿಗಳಿಗೆ ಹಣ ಪಾವತಿಯಾಗುತ್ತಿತ್ತು. ಬೆಟ್ಟಿಂಗ್‌ನಲ್ಲಿ ಹೂಡಿಕೆಯಾದ ಹಣವನ್ನು ಈ ದಾಖಲೆಗಳ ಅಡಿಯಲ್ಲಿ ತೋರಿಸುತ್ತಿದ್ದರು ಎಂದು ಮಾಹಿತಿ ನೀಡಿದೆ. ಈಗ ಇಂತಹ ಎರಡು ಕಂಪನಿಗಳ ವಿವರಗಳಷ್ಟೇ ದೊರೆತಿದ್ದು, ಇನ್ನಷ್ಟು ಕಂಪನಿಗಳನ್ನು ಆರೋಪಿಗಳು ನಿರ್ವಹಿಸುತ್ತಿದ್ದಾರೆ. ಅವುಗಳ ವಿವರಗಳನ್ನು ಕಲೆಹಾಕಲಾಗುತ್ತಿದೆ ಎಂದು ವಿವರಿಸಿವೆ.

ಚಿಟಿಕೆ ಸುದ್ದಿ

ಮನೆಗೆ ಬೆಂಕಿ: ವೃದ್ಧೆ ಸಜೀವ ದಹನ

ಬೆಳಗಾವಿ: ಇಲ್ಲಿನ ನಾರವೇಕರ್ ಗಲ್ಲಿಯಲ್ಲಿ ಬುಧವಾರ ರಾತ್ರಿ ಸುಪ್ರಿಯಾ ಬೈಲೂರ (78) ಎಂಬುವರು ಸಜೀವ ದಹನವಾಗಿದ್ದಾರೆ. ಮನೆಯಲ್ಲಿ ಅವರೊಬ್ಬರೇ ವಾಸವಿದ್ದರು.

ಸುಪ್ರಿಯಾ

'ರಾತ್ರಿ 10ರ ಸುಮಾರಿಗೆ ಅಡುಗೆ ಮಾಡುವಾಗ, ಹೊತ್ತಿಕೊಂಡ ಬೆಂಕಿಯಿಂದ ಸುಪ್ರಿಯಾ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಆದರೆ, ಅಷ್ಟರೊಳಗೆ ದಹನವಾಗಿದ್ದರು' ಎಂದು ಖಡೆಬಜಾರ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ದಾಳಿ; ಬೆಸ್ಕಾಂ ಇಇ ಬಂಧನ

ಚಿತ್ರದುರ್ಗ: ಕಾಮಗಾರಿಯ ಕಾರ್ಯಾದೇಶ ನೀಡಲು ವಿದ್ಯುತ್ ಗುತ್ತಿಗೆದಾರರೊಬ್ಬರಿಂದ ₹ 3.50 ಲಕ್ಷ ಲಂಚ ಪಡೆಯುತ್ತಿದ್ದ ಬೆಸ್ಕಾಂ ಕಾರ್ಯಪಾಲಕ ಎಂಜಿನಿಯರ್ ತಿಮ್ಮರಾಯಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿ ಬಂಧಿಸಿದ್ದಾರೆ.

ತಿಮ್ಮರಾಯಪ್ಪ

₹ 35 ಲಕ್ಷ ವೆಚ್ಚದ ಒಟ್ಟು 10 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲು ಶೇ 10ರಷ್ಟು ಹಣವನ್ನು ಲಂಚದ ರೂಪದಲ್ಲಿ ನೀಡಬೇಕು ಎಂದು ತಿಮ್ಮರಾಯಪ್ಪ ಬೇಡಿಕೆಯಿಟ್ಟಿದ್ದರು. ಈ ಕುರಿತು ಹೊಳಲ್ಕೆರೆ ತಾಲ್ಲೂಕು ದುಮ್ಮಿ ಗ್ರಾಮದ ವಿದ್ಯುತ್ ಗುತ್ತಿಗೆದಾರ ಎಸ್.ಆರ್.ಸಂಜಯ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ನಗರದ ಅಮೃತ ಆಯುರ್ವೇದ ಕಾಲೇಜು ಬಳಿ ದೂರುದಾರರಿಂದ ₹ 3.50 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಆರೋಪಿಯನ್ನು ಬಂಧಿಸಿರುವ ಲೋಕಾಯುಕ್ತ ಪೊಲೀಸರು, ಲಂಚದ ಹಣವನ್ನು ಜಪ್ತಿ ಮಾಡಿದರು.

ಲೋಕಾಯುಕ್ತ ಎಸ್‌ಪಿ ವಾಸುದೇವರಾಮ್, ಡಿವೈಎಸ್‌ಪಿ ಮೃತ್ಯುಂಜಯ, ಇನ್‌ಸ್ಪೆಕ್ಟರ್ ಬಸವರಾಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

10ರಂದು ಧರ್ಮಸ್ಥಳಕ್ಕೆ 'ಧರ್ಮಯಾತ್ರೆ'

ಹುಬ್ಬಳ್ಳಿ: 'ನವಗ್ರಹ ತೀರ್ಥ ಕ್ಷೇತ್ರದಿಂದ ಧರ್ಮಸ್ಥಳದವರೆಗೆ ಸೆಪ್ಟೆಂಬರ್ 10ರಂದು ಸಾಧು ಸಂತರ ಧರ್ಮಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ಗುಣಧರನಂದಿ ಮಹಾರಾಜರು ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ಅಂದು ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಗೆ ಮಹಾಪೂಜೆ ಸಲ್ಲಿಸಿ, ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸಲಾಗುವುದು' ಎಂದು ಅವರು ವಿವರಿಸಿದರು.

ಭೇದವಿಲ್ಲ: 'ಹಿಂದೂ ಧರ್ಮದಿಂದ ಜೈನ ಧರ್ಮದ ಮೇಲೆ ಎಂದಿಗೂ ದಬ್ಬಾಳಿಕೆ ನಡೆದಿಲ್ಲ. ಎರಡೂ ಧರ್ಮಗಳ ಧಾರ್ಮಿಕ ವಿಷಯಗಳು ಒಂದೇ ಇವೆ. ವೀರೇಂದ್ರ ಹೆಗ್ಗಡೆಯವರು ಕೂಡ ಎಂದಿಗೂ ಭೇದಭಾವ ಮಾಡದೇ, ಸರ್ವ ಧರ್ಮಗಳ ದೇವಸ್ಥಾನ ಮತ್ತು ಕೆರೆಗಳ ಜೀರ್ಣೋದ್ಧಾರಕ್ಕೆ ಸಹಕರಿಸಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ನಿರ್ದೇಶಕರ ವಿರುದ್ಧ ಕಸಾಪ ಖಂಡನಾ ನಿರ್ಣಯ

ಬೆಂಗಳೂರು: ಅನುದಾನ ಬಿಡುಗಡೆ ಮಾಡದ ಕಾರಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರ ವಿರುದ್ಧ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕಾರ್ಯಕಾರಿ ಸಮಿತಿಯು ಖಂಡನಾ ನಿರ್ಣಯ ಕೈಗೊಂಡಿದೆ.

ಪರಿಷತ್ತಿಗೆ ವಾರ್ಷಿಕ ಅನುದಾನ ಬಿಡುಗಡೆಯಾಗದಿರುವ ಬಗ್ಗೆ ನಗರದಲ್ಲಿ ಬುಧವಾರ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು. ಇದಕ್ಕೆ ಕಾರಣರಾಗಿರುವ ಕೆ.ಎಂ.ಗಾಯಿತ್ರಿ ಅವರ ವಿರುದ್ಧ ಖಂಡನಾ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಈ ನಿರ್ಣಯವನ್ನು ಪರಿಷತ್ತಿನ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿ ಬಿ.ಎಂ.ಪಟೇಲ್‌ಪಾಂಡು ಅವರು ಪತ್ರದ ಮೂಲಕ ಗಾಯಿತ್ರಿ ಅವರ ಗಮನಕ್ಕೆ ತಂದಿದ್ದಾರೆ ಎಂದು ಕಸಾಪ ಮೂಲಗಳು ತಿಳಿಸಿವೆ.

ಖಂಡನಾ ನಿರ್ಣಯ ತಲುಪಿದ ಒಂದು ವಾರದೊಳಗೆ ಗಾಯಿತ್ರಿ ಅವರು ಅನುದಾನ ಬಿಡುಗಡೆ ಮಾಡದಿದ್ದರೆ, ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ನೇತೃತ್ವದಲ್ಲಿ ಕನ್ನಡ ಭವನದ ಎದುರು ಪ್ರತಿಭಟನೆ ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ಪ್ರಸಕ್ತ ಸಾಲಿನ ವಾರ್ಷಿಕ ಆಯವ್ಯಯದಲ್ಲಿ ಕಸಾಪಗೆ ಮಂಜೂರಾಗಿರುವ ವಾರ್ಷಿಕ ಅನುದಾನದ ಮೊದಲ ಕಂತು ₹ 1.25 ಕೋಟಿ, ಇನ್ನೂ ಬಿಡುಗಡೆ ಆಗದಿರುವ ಬಗ್ಗೆ ಇದಕ್ಕೂ ಮೊದಲು ಚರ್ಚಿಸಲಾಯಿತು. ಇದರಿಂದ ಪರಿಷತ್ತಿನ ಸಿಬ್ಬಂದಿಗೆ ವೇತನ, ನಿತ್ಯ ಚಟುವಟಿಕೆಗಳು, ಕನ್ನಡ ಪರ ಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿರುವ ಬಗ್ಗೆ ಕಳವಳ ವ್ಯಕ್ತವಾಯಿತು.

ಯೂಟ್ಯೂಬರ್ ಸಮೀರ್ ಮನೆಯಲ್ಲಿ ಶೋಧ

ಬೆಂಗಳೂರು: ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಯೂಟ್ಯೂಬರ್ ಎಂ.ಡಿ.ಸಮೀರ್ ಅವರು ವಾಸವಾಗಿದ್ದ ಬನ್ನೇರುಘಟ್ಟದ ಹುಲ್ಲಹಳ್ಳಿಯ ಬಾಡಿಗೆ ಮನೆಯ ಮೇಲೆ ಗುರುವಾರ ದಾಳಿ ನಡೆಸಿದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಪೊಲೀಸರು, ಕೆಲವು ಉಪಕರಣಗಳು ಹಾಗೂ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ನ್ಯಾಯಾಲಯದಿಂದ ವಾರಂಟ್ ಪಡೆದು ಮನೆಯಲ್ಲಿ ಶೋಧ ನಡೆಸಿದ್ದಾರೆ ಎಂಬುದು ಗೊತ್ತಾಗಿದೆ.

ಇನ್‌ಸ್ಪೆಕ್ಟರ್ ನಾಗೇಶ್ ಖದ್ರಿ ನೇತೃತ್ವದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವಿಭಾಗದ ಸಿಬ್ಬಂದಿ ಹಾಗೂ ಪೊಲೀಸರು ಸಮೀರ್ ಮನೆಯಲ್ಲಿ ಶೋಧ ನಡೆಸಿದರು.

'ಕೃತಕಬುದ್ಧಿಮತ್ತೆ (ಎಐ) ಆಧರಿಸಿ ಸಮೀರ್ ಅವರು ವಿಡಿಯೊವೊಂದನ್ನು ಮಾಡಿದ್ದರು. ಆ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲೂ ಅಪ್‌ಲೋಡ್ ಆಗಿತ್ತು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡವು ಸಮೀರ್ ಅವರನ್ನು ಎರಡು ಬಾರಿ ವಿಚಾರಣೆ ನಡೆಸಿತ್ತು. ಅವರು ವಿಚಾರಣೆಗೆ ಸಹಕಾರ ನೀಡಿರಲಿಲ್ಲ. ಕಂಪ್ಯೂಟರ್ ಸೇರಿ ಇತರೆ ವಸ್ತುಗಳನ್ನು ತಂದಿರಲಿಲ್ಲ. ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು ಪರಿಶೀಲನೆ ನಡೆಸಲಾಗಿದೆ. ವಿಡಿಯೊ ಎಡಿಟ್ ಮಾಡಲು ಬಳಸಿದ್ದ ಕಂಪ್ಯೂಟರ್ ಮತ್ತು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಸಮೀರ್ ಮನೆಯಲ್ಲಿ ಪರಿಶೀಲನೆ ನಡೆಸಲು ಆಗಸ್ಟ್ 22ರಂದು ಪೊಲೀಸರು ಬಂದಿದ್ದರು. ಅಂದು ಸಮೀರ್ ಇಲ್ಲದ ಕಾರಣ ಪೊಲೀಸರು ವಾಪಸ್ ತೆರಳಿದ್ದರು ಎಂದು ಮೂಲಗಳು ಹೇಳಿವೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯೂಸೆಕ್‌ಗಳಲ್ಲಿ)	
ಕೆ ಆರ್ ಎಸ್ *	124.80	124	22,931	22,710
ಹಾರಂಗಿ	2,859	2,858.47	5,672	6,000
ಕಬಿನಿ	2,284.00	2,283.92	18,693	18,942
ಹೇಮಾವತಿ	2,922	2,921.85	13,552	14,060
ಲಿಂಗನಮಕ್ಕಿ	1,819	1,817.65	19,925	26,097
ಸೂಪಾ (ಮೀ)	564	560	12,484.13	4,110.72
ಮಾಣಿ	595	594.34	5,219	641
ತುಂಗಭದ್ರಾ	1,633	1,625.69	38,330	36,107
ಮಲಪ್ರಭಾ	2,079.5	2,079.50	4,904	4,094
ಘಟಪ್ರಭಾ	2175	2,174.91	8,728	8,409
ಭದ್ರಾ *	186	184.1	12,817	11,613
ಆಲಮಟ್ಟಿ (ಮೀ)	519.6	519.60	59,312	50,365
ನಾರಾಯಣಪುರ (ಮೀ)	492.25	492.11	65,000	68,840

* ನೆಲಮಟ್ಟದಿಂದ

ಎನ್‌ಐಎ ತನಿಖೆ ನಡೆಸಲು ಸಂತರಿಂದ ಮನವಿ

ಧರ್ಮಸ್ಥಳ ಪ್ರಕರಣ: ಕೇಂದ್ರ ಗೃಹ ಸಚಿವ ಶಾ ಅವರನ್ನು ಭೇಟಿಯಾದ ಸ್ವಾಮೀಜಿಗಳ ನಿಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಧರ್ಮಸ್ಥಳ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಮೂಲಕ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಸನಾತನ ಸಂತರ ನಿಯೋಗವು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿತು.

'ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ಇದು ಸನಾತನ ಹಾಗೂ ಜೈನ ಧರ್ಮದ ಮೇಲಿನ ದಾಳಿ. ಇಂತಹ ಕೃತ್ಯ ನಡೆಸುತ್ತಿರುವವರನ್ನು ಕೇಂದ್ರ ಸರ್ಕಾರ ಪತ್ತೆ ಹಚ್ಚಿ ಶಿಕ್ಷಿಸಬೇಕು' ಎಂದು ನಿಯೋಗ ಒತ್ತಾಯಿಸಿದೆ.

ಮುನಿಗಳು, ಆಚಾರ್ಯರು ಹಾಗೂ ಸ್ವಾಮೀಜಿಗಳನ್ನು ಗುರಿಯಾಗಿಸಿಕೊಂಡು ಕೆಲವೊಂದು ಯೂಟ್ಯೂಬರ್‌ಗಳು ಮಾನಹಾನಿಕರ ವಿಡಿಯೊಗಳನ್ನು ಮಾಡುತ್ತಿದ್ದಾರೆ. ಈ ಸಂಬಂಧ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

'ಮಠ, ಮಂದಿರ, ಸಾಧು–ಸಂತರು ಹಾಗೂ ಧರ್ಮಾಧಿಕಾರಿಗಳ ವಿರುದ್ಧದ ಷಡ್ಯಂತ್ರಗಳಿಗೆ ಕಡಿವಾಣ ಹಾಕಲು ಹೊಸ ಕಾನೂನನ್ನು ಜಾರಿಗೆ ತರಬೇಕು' ಎಂದು ನಿಯೋಗ ಆಗ್ರಹಿಸಿದೆ.

ಬಳಿಕ ನಿಯೋಗವು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರಿಗೂ ಮನವಿ ಸಲ್ಲಿಸಿತು.

ನಿಯೋಗದಲ್ಲಿ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಹೊಸದುರ್ಗದ ಪುರುಷೋತ್ತಮಾನಂದ ಸ್ವಾಮೀಜಿ, ಮಂಗಳೂರಿನ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ವರೂರು ದಿಗಂಬರ ಜೈನ ಮಠದ ಧರ್ಮಸೇನ ಸ್ವಾಮೀಜಿ ಮತ್ತಿತರರು ಇದ್ದರು.

ಸಂತರ ನಿಯೋಗವು ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿತು

ಷಡ್ಯಂತ್ರಕ್ಕೆ ಕಾಂಗ್ರೆಸ್ ಕಾರಣ: ಸಿ.ಟಿ. ರವಿ

ಹೊಸಪೇಟೆ (ವಿಜಯನಗರ): 'ಧರ್ಮಸ್ಥಳದ ಹೆಸರು ಕೆಡಿಸುವ ಷಡ್ಯಂತ್ರದಲ್ಲಿ ಕಾಂಗ್ರೆಸ್ ಶಾಮೀಲಾಗಿದೆ. ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಥವಾ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಿದಾಗ, ಮಾತ್ರ ಸತ್ಯಾಂಶ ಗೊತ್ತಾಗಲಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

'ಧರ್ಮಸ್ಥಳದ ವಿರುದ್ಧ ಷಡ್ಯಂತ್ರಕ್ಕೆ ಯೋಜನೆ ರೂಪಿಸಲಾಗುತ್ತಿದೆ ಎಂದು ಗುಪ್ತಚರ ಇಲಾಖೆಯು 2023 ಜುಲೈ ತಿಂಗಳಲ್ಲೇ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಿತ್ತು. ಆದರೆ, ಸರ್ಕಾರವು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಹೀಗಾಗಿ ಷಡ್ಯಂತ್ರಕ್ಕೆ ಕಾಂಗ್ರೆಸ್ಸೇ ಕೇಂದ್ರಬಿಂದು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

> **ಧರ್ಮಸ್ಥಳ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸುವ ಅಗತ್ಯವಿಲ್ಲ. ಸುಖಾಸುಮ್ಮನೆ ರಾಜಕೀಯ ಮಾಡೋದು ಬೇಡ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ದೂರುದಾರನಿಗೆ ಆಶ್ರಯ: ಜಯಂತ್ ವಿಚಾರಣೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ. ಹಾಗೂ ಆತನ ಹೇಳಿಕೆಯ ವಿಡಿಯೊ ಚಿತ್ರೀಕರಿಸಿದ್ದ ಯೂಟ್ಯೂಬರ್ ಅಭಿಷೇಕ್ ಎಂಬುವರನ್ನು ಗುರುವಾರ ವಿಚಾರಣೆಗೆ ಒಳಪಡಿಸಿತು.

ಸಾಕ್ಷಿ ದೂರುದಾರನು ಜಯಂತ್ ಟಿ. ವಾಸವಿದ್ದ ಬೆಂಗಳೂರಿನ ಪೀಣ್ಯದ ಬಾಡಿಗೆ ಮನೆಯಲ್ಲಿ ಕೆಲ ದಿನ ಉಳಿದುಕೊಂಡಿದ್ದ. ಎಸ್‌ಐಟಿ ಅಧಿಕಾರಿಗಳು ಸಾಕ್ಷಿ ದೂರುದಾರನನ್ನು ಈಚೆಗೆ ಆ ಮನೆಗೆ ಕರೆದೊಯ್ದು ಮಹಜರು ನಡೆಸಿದ್ದರು. ಆತನಿಗೆ ಆಶ್ರಯ ನೀಡಿದ ಕುರಿತು ಜಯಂತ್ ಟಿ. ಅವರನ್ನು ಬೆಳ್ತಂಗಡಿ ಕಚೇರಿಗೆ ಕರೆಸಿಕೊಂಡು ಹೇಳಿಕೆ ದಾಖಲಿಸಿಕೊಂಡರು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಕಚೇರಿಗೆ ತೆರಳಿದ್ದ ಜಯಂತ್ ರಾತ್ರಿವರೆಗೂ ಹೊರಗೆ ಬಂದಿರಲಿಲ್ಲ.

'ಯುನೈಟೆಡ್ ಮೀಡಿಯಾ ಯೂಟ್ಯೂಬ್' ಚಾನೆಲ್‌ನ ಅಭಿಷೇಕ್ ಎಂಬುವರನ್ನು ಬುಧವಾರ ತಡ ರಾತ್ರಿವರೆಗೂ ವಿಚಾರಣೆ ನಡೆಸಿದ್ದ ಅಧಿಕಾರಿಗಳು ಗುರುವಾರ ಮತ್ತೆ ವಿಚಾರಣೆಗೆ ಕರೆದಿದ್ದಾರೆ. ಎಸ್‌ಐಟಿ ಕಚೇರಿಗೆ ತೆರಳಿದ್ದ ಆತ, ರಾತ್ರಿವರೆಗೂ ಹೊರಗೆ ಬಂದಿರಲಿಲ್ಲ. ಸಾಕ್ಷಿ ದೂರುದಾರ ಈ ಹಿಂದೆ ನೀಡಿದ್ದ ಸಂದರ್ಶನಗಳು, ಆತನ ಬಂಧನವಾದ ಬಳಿಕ ಕೆಲ ಯೂಟ್ಯೂಬ್ ವಾಹಿನಿಗಳಲ್ಲಿ ಪ್ರಸಾರವಾಗಿವೆ. ಆತ ಹೇಳಿಕೆ ನೀಡುವ ವಿಡಿಯೊವೊಂದನ್ನು ಅಭಿಷೇಕ್ ಚಿತ್ರೀಕರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ ಗ್ರಾಮದ 10ಕ್ಕೂ ಅಧಿಕ ಮಂದಿ ಎಸ್‌ಐಟಿ ಕಚೇರಿಗೆ ತೆರಳಿ ಹೇಳಿಕೆ ದಾಖಲಿಸಿದರು. ಹೇಳಿಕೆ ನೀಡುವ ವೇಳೆ ಸಾಕ್ಷಿ ದೂರುದಾರ ಕೆಲವು ಸ್ಥಳೀಯರ ಹೆಸರುಗಳನ್ನು ಉಲ್ಲೇಖಿಸಿದ್ದ. ಅವರನ್ನೆಲ್ಲ ಕರೆಸಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೌಜನ್ಯಾ ತಾಯಿಯಿಂದ ದೂರು

ಸಾಮಾಜಿಕ ಜಾಲತಾಣದಲ್ಲಿ ತಮ್ಮ ಕುಟುಂಬಕ್ಕೆ ಅವಹೇಳನ ಮಾಡಿದ ಕುರಿತು ಸೌಜನ್ಯಾ ತಾಯಿ ಕುಸುಮಾವತಿಯವರು ಬೆಳ್ತಂಗಡಿ ಪೊಲೀಸ್ ಠಾಣೆಗೆ ಗುರುವಾರ ದೂರು ನೀಡಿದರು. ಸಾಮಾಜಿಕ ಕಾರ್ಯಕರ್ತೆ ಪ್ರಸನ್ನಾ ರವಿ ಜೊತೆಗಿದ್ದರು.

ಕೊಡಗಿನಲ್ಲಿ ನಾಲ್ವರ ವಿರುದ್ಧ ಅರಣ್ಯ ಜಾಗೃತ ದಳದಿಂದ ಮೊಕದ್ದಮೆ

ಕಾಳಿಂಗ ಫೋಟೊ: ಮಹಾರಾಷ್ಟ್ರ ನಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಕಾಳಿಂಗ ಸರ್ಪಗಳನ್ನು ಅಕ್ರಮವಾಗಿ ಬಂಧಿಸಿಟ್ಟು, ಫೋಟೊ ಶೂಟ್ ಮಾಡಿ ಲಕ್ಷಾಂತರ ರೂಪಾಯಿ ವಹಿವಾಟು ನಡೆಸುತ್ತಿರುವ ಅಂತರರಾಜ್ಯ ಜಾಲ ಪತ್ತೆಯಾಗಿದೆ. ನೆರೆಯ ಮಹಾರಾಷ್ಟ್ರದ ಸ್ವಯಂ ಸೇವಾ ಸಂಸ್ಥೆ ಕೊಡಗಿನ ಸಂಸ್ಥೆಗಳ ಜತೆಯಲ್ಲಿ ನಂಟು ಬೆಳೆಸಿ ಈ ಚಟುವಟಿಕೆ ನಡೆಸುತ್ತಿದ್ದುದನ್ನು ಅರಣ್ಯ ಇಲಾಖೆಯ ಜಾಗೃತ ದಳ ಬಯಲು ಮಾಡಿದೆ.

ಕಾಳಿಂಗ ಸರ್ಪ

ಅರಣ್ಯ ಇಲಾಖೆಯ ಜಾಗೃತದಳದ ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಗೆ ಬಂದ ಖಚಿತ ಮಾಹಿತಿ ಆಧರಿಸಿ ಮಡಿಕೇರಿ ಘಟಕದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಒಳಗೊಂಡ ತಂಡ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದೆ.

ಮಹಾರಾಷ್ಟ್ರದ ಸ್ವಯಂ ಸೇವಾ ಸಂಘಟನೆಯ ಇಬ್ಬರು ಹಾಗೂ ಕೊಡಗಿನ ಇಬ್ಬರು ಉರಗ ರಕ್ಷಕರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 35ರ ಅಡಿ ಪ್ರಕರಣ ದಾಖಲಿಸಿ, ತನಿಖೆ ಚುರುಕುಗೊಳಿಸಲಾಗಿದೆ.

ಪ್ರಕರಣದ ಕುರಿತು ಪೊನ್ನಂಪೇಟೆ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪ್ರಾಥಮಿಕ ವರದಿ ಸಲ್ಲಿಸಲಾಗಿದೆ. ವಿಚಾರಣೆ ನಡೆಸಿದ ನ್ಯಾಯಾಲಯವು ಸೆಪ್ಟಂಬರ್ 30ರ ಒಳಗೆ ವಿಸ್ತೃತ ತನಿಖಾ ವರದಿಯನ್ನು ಸಲ್ಲಿಸುವಂತೆ ಅರಣ್ಯ ಇಲಾಖೆಗೆ ಸೂಚನೆ ನೀಡಿದೆ.

'ಕೊಡಗಿನ ಪೊನ್ನಂಪೇಟೆ ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಕಾಳಿಂಗ ಸರ್ಪಗಳನ್ನು ಸೆರೆ ಹಿಡಿದು ಅಮಾನವೀಯ ರೀತಿಯಲ್ಲಿ ಫೋಟೋಶೂಟ್ ಮತ್ತು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ದೂರು ಆಧರಿಸಿ ತನಿಖೆ ಚುರುಕುಗೊಳಿಸಲಾಗಿದೆ' ಎಂದು ಅರಣ್ಯ ಜಾಗೃತದಳದ ಮುಖ್ಯಸ್ಥರಾದ ಶಾಶ್ವತಿ ಮಿಶ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ನಾಟಕದಲ್ಲಿ ನೋಂದಣಿಯಾಗದ, ಮಹಾರಾಷ್ಟ್ರದ ಎನ್.ಎಸ್.ಎಫ್ ಎಂಬ ಸಂಸ್ಥೆಯು ಕೊಡಗಿನಲ್ಲಿ ಉರಗ ರಕ್ಷಣೆ ಹೆಸರಿನ ಉದ್ಯಮದಲ್ಲಿ ತೊಡಗಿಸಿಕೊಂಡಿರುವವರ ಸಂಪರ್ಕಿಸಿ, ಕಾಳಿಂಗ ಸರ್ಪಗಳ ಫೋಟೊ ಶೂಟ್ ಹಾಗೂ ವಿಡಿಯೊ ಚಿತ್ರೀಕರಣವನ್ನು ಮೂರು ವರ್ಷದಿಂದ ಮಾಡುತ್ತಿರುವುದು ತನಿಖೆಯಿಂದ ಗೊತ್ತಾಗಿದೆ.

ಫೋಟೊ ಹಾಗೂ ವಿಡಿಯೊ ದುರುಪಯೋಗ, ಕಾಳಿಂಗ ಸರ್ಪ ಚರ್ಮದ ವಹಿವಾಟು ಮಾಡಿರುವ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಪ್ರಕರಣದಲ್ಲಿ ಸಿಲುಕಿರುವ ಮೂವರನ್ನು ವಿಚಾರಣೆಗೆ ಒಳಪಡಿಸಿದ್ದು, ಒಬ್ಬರು ತಲೆ ಮರೆಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಾಗೃತದಳ ದಾಳಿ ಮಾಡುತ್ತಿದಂತೆ ಮೊಬೈಲ್‌ಗಳಲ್ಲಿ ಸಂಗ್ರಹಿಸಿದ್ದ ಕಾಳಿಂಗ ಸರ್ಪದ ಫೋಟೊ ಹಾಗೂ ವಿಡಿಯೊವನ್ನು ತೆಗೆದು ಹಾಕಿ ಸಾಕ್ಷ್ಯ ನಾಶ ಮಾಡಲಾಗಿದೆ. ಅದನ್ನು ವಾಪಸ್ ಪಡೆದುಕೊಳ್ಳಲು ತಂತ್ರಜ್ಞರ ಮೊರೆ ಹೋಗಲಾಗಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಉರಗ ರಕ್ಷಣೆ ನೆಪದಲ್ಲಿ ಕಾಳಿಂಗ ಸರ್ಪವನ್ನು ಸೆರೆ ಹಿಡಿದು ಒಂದು ಕಡೆ ಇಟ್ಟುಕೊಂಡು ಮಹಾರಾಷ್ಟ್ರದವರನ್ನು ಆಹ್ವಾನಿಸಲಾಗುತ್ತಿತ್ತು. ಅಲ್ಲಿಂದ ಬಂದವರು ಗಂಟೆಗಟ್ಟಲೆ ವಿಡಿಯೊ ಶೂಟ್ ಮಾಡುತ್ತಿದ್ದರು. ಇದಕ್ಕೆ ಇಂತಿಷ್ಟು ಎಂದು ಹಣ ಪಡೆಯಲಾಗುತ್ತಿತ್ತು. ಸಂಸ್ಥೆಯವರು ಇದನ್ನು ಬೇರೆಯವರಿಗೆ ಮಾರಾಟ ಮಾಡಿರುವ ಮಾಹಿತಿಯಿದ್ದು ಎಲ್ಲಾ ಆಯಾಮದಲ್ಲೂ ತನಿಖೆ ನಡೆದಿದೆ ಎಂದು ಹೇಳಿವೆ.

ಮಹಾರಾಷ್ಟ್ರದವರು ಕೊಡಗಿಗೆ ಬಂದಾಗ, ಅವರಿಗೆ ನೆರವಾಗುತ್ತಿದ್ದ ಆಟೋರಿಕ್ಷಾ ಚಾಲಕರನ್ನು ವಿಮಾನದಲ್ಲಿ ಮುಂಬೈಗೆ ಕರೆದೊಯ್ದಿರುವುದು ತನಿಖೆ ವೇಳೆ ಗೊತ್ತಾಗಿದೆ.

ಉರಗ ರಕ್ಷಕರಿಗೆ ಸೂಚನೆ

'ಹಾವುಗಳನ್ನು ಅನಧಿಕೃತವಾಗಿ ಸೆರೆ ಹಿಡಿಯುವುದು, ಇರಿಸಿಕೊಳ್ಳುವುದು, ಪ್ರದರ್ಶನದ ವಸ್ತುವಾಗಿ ಬಳಸಿಕೊಳ್ಳುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ಗಂಭೀರ ಅಪರಾಧ. ಇದಕ್ಕೆ 3 ರಿಂದ 7 ವರ್ಷದವರೆಗೆ ಜೈಲು ಶಿಕ್ಷೆ ಆಗಬಹುದು' ಎಂದು ಜಾಗೃತ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ವಿ.ಗಾನಶ್ರೀ ಹೇಳಿದರು.

'ಜನವಸತಿ ಪ್ರದೇಶದಲ್ಲಿ ಯಾವುದೇ ಜಾತಿಯ ಹಾವುಗಳು ಕಂಡುಬಂದಾಗ ಜೀವಹಾನಿ ತಪ್ಪಿಸಲು, ಹಾವುಗಳನ್ನು ರಕ್ಷಿಸಿ ಸೂಕ್ತ ಜಾಗದಲ್ಲಿ ಬಿಡಲು ಅರಣ್ಯ ಇಲಾಖೆ ಅನುಮತಿ ಬೇಡ. ಆದರೆ, ಉರಗ ರಕ್ಷಕರು ಹಾವನ್ನು ಸೆರೆಹಿಡಿಯುವ ಮತ್ತು ಬಿಟ್ಟಿರುವ ಕುರಿತು 24 ಗಂಟೆ ಒಳಗೆ ಸ್ಥಳೀಯ ಅರಣ್ಯ ಕಚೇರಿಗೆ ಮಾಹಿತಿ ನೀಡಬೇಕು' ಎಂದು ತಿಳಿಸಿದರು.

> **ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಕೊಡಗಿನ ಇಬ್ಬರು, ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳ ಸಂಬಂಧಿಕರು ಎನ್ನುವ ಮಾಹಿತಿ ಇದೆ. ಈ ಕುರಿತು ತನಿಖೆ ನಡೆಸಲಾಗುವುದು**
> **ಶಾಶ್ವತಿ ಮಿಶ್ರ,** ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಾಗೃತದಳ.

ಅನಾಥಾಶ್ರಮ, ವೃದ್ಧಾಶ್ರಮ, ಪೌರಕಾರ್ಮಿಕರ ಪ್ರತಿನಿಧಿಗಳಿಗೆ ಅವಕಾಶ

ದಸರಾ ಕವಿಗೋಷ್ಠಿಯಲ್ಲಿ 'ಪಂಚ ಕಾವ್ಯದೌತಣ'

• ಎಂ.ಮಹೇಶ್

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಕವಿಗೋಷ್ಠಿ'ಗೆ ಈ ಬಾರಿ ಹೊಸತನದ ಸ್ಪರ್ಶ ನೀಡಲಾಗಿದ್ದು, 'ಪಂಚ ಕಾವ್ಯದೌತಣ' ಉಣಬಡಿಸಲು ತಯಾರಿ ನಡೆದಿದೆ.

ಸಿ.ಪಿ. ಕೃಷ್ಣಕುಮಾರ್

'ಪ್ರಭಾತ', 'ಪ್ರಚುರ', 'ಪ್ರಜ್ವಲ' 'ಪ್ರತಿಭಾ' ಹಾಗೂ 'ಪ್ರಬುದ್ಧ' ಶೀರ್ಷಿಕೆಯಲ್ಲಿ ಕವಿಗೋಷ್ಠಿಗಳನ್ನು ವಿನ್ಯಾಸಗೊಳಿಸಲಾಗಿದ್ದು, ಅಂಗವಿಕಲರಿಗೂ ಅವಕಾಶ ನೀಡಲು ನಿರ್ಧರಿಸಲಾಗಿದೆ.

ಸೆ.23ರಿಂದ ಸೆ.27ರವರೆಗೆ ಕವಿಗೋಷ್ಠಿ ನಡೆಯಲಿದೆ. 23ರಂದು ಬೆಳಿಗ್ಗೆ 10.30ಕ್ಕೆ 'ಪಂಚ ಕಾವ್ಯದೌತಣ'ಕ್ಕೆ ಚಾಲನೆ ದೊರೆಯಲಿದ್ದು, ಅಂದು 'ಪ್ರಭಾತ' ಕವಿಗೋಷ್ಠಿಯನ್ನು ಪ್ರೊ.ಅರವಿಂದ ಮಾಲಗತ್ತಿ ಉದ್ಘಾಟಿಸುವರು. 24ರಂದು 'ಪ್ರಚುರ ಕವಿಗೋಷ್ಠಿ'ಯನ್ನು ಗೀತೆ ರಚನೆಕಾರ ಜೋಗಿ ಪ್ರೇಮ್ ಉದ್ಘಾಟಿಸುವರು. 25ರಂದು ಪ್ರಜ್ವಲ ಕವಿಗೋಷ್ಠಿಗೆ ಗೀತ ರಚನೆಕಾರ ಪ್ರಮೋದ್ ಮರವಂತೆ ಚಾಲನೆ ನೀಡಲಿದ್ದಾರೆ. 26ರಂದು ಪ್ರತಿಭಾ ಕವಿಗೋಷ್ಠಿಗೆ ಪ್ರೊ.ನಂಜಯ್ಯ ಹೊಂಗನೂರು ಹಾಗೂ 27ರಂದು ನಡೆಯುವ ಪ್ರಬುದ್ಧ ಕವಿಗೋಷ್ಠಿ ಉದ್ಘಾಟನೆಗೆ ಸಿ.ಪಿ. ಕೃಷ್ಣಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಮುಖ್ಯಾಂಶಗಳು

- ರಾಷ್ಟ್ರಕವಿ ಕುವೆಂಪು ಅವರಿಗೆ ಗೌರವ
- ಸೆ.23ರಿಂದ 26ರವರೆಗೆ ಆಯೋಜನೆ
- ಹಾಸ್ಯಕಾವ್ಯದ ಜುಗಲ್‌ಬಂದಿ ವಿಶೇಷ

ಪ್ರೇಮ್

ಅರವಿಂದ ಮಾಲಗತ್ತಿ

ಪ್ರಮೋದ್ ಮರವಂತೆ

ಪ್ರೊ.ನಂಜಯ್ಯ ಹೊಂಗನೂರು

ಪ್ರಾದೇಶಿಕ ಬದಲಿಗೆ: 'ಈ ಬಾರಿ 'ಪ್ರಾದೇಶಿಕ' ಬದಲಿಗೆ 'ಪ್ರಭಾತ' ಕವಿಗೋಷ್ಠಿಯನ್ನು ನಡೆಸಲಾಗುತ್ತಿದ್ದು, ಒಂದು ಕವನಸಂಕಲನ ಪ್ರಕಟಿಸಿರುವವರನ್ನು ಆಯ್ಕೆ ಮಾಡಿದ್ದೇವೆ. 'ಪ್ರಚುರ' ವಿಭಾಗದಲ್ಲಿ ಕವಿತೆ ರಚಿಸುವ ಅಭಿರುಚಿಯುಳ್ಳ ಅನಾಥಾಶ್ರಮದವರು, ವೃದ್ಧಾಶ್ರಮ ನಿವಾಸಿಗಳು, ಪೌರಕಾರ್ಮಿಕರು, ವಿಶೇಷ ವ್ಯಕ್ತಿಗಳು, ಲಿಂಗತ್ವ ಅಲ್ಪಸಂಖ್ಯಾತರಿಗೆ ಇದೇ ಮೊದಲ ಬಾರಿಗೆ ವೇದಿಕೆ ಕಲ್ಪಿಸಲಾಗುತ್ತಿದೆ. ಹಾಸ್ಯಕಾವ್ಯದ ಜುಗಲ್‌ಬಂದಿ ಹಾಗೂ ಜನಪದ ಕವಿಗೋಷ್ಠಿಯೂ ನಡೆಯಲಿದೆ. ಜಿಲ್ಲಾ ಹಾಗೂ ಭಾಷಾವಾರು ಪ್ರಾತಿನಿಧ್ಯ ಇರಲಿದೆ' ಎಂದು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಹಾಗೂ ಕವಿಗೋಷ್ಠಿ ಉಪ ಸಮಿತಿಯ ಕಾರ್ಯದರ್ಶಿ ಪ್ರೊ.ಎನ್.ಕೆ. ಲೋಲಾಕ್ಷಿ 'ಪ್ರಜಾವಾಣಿ'ಗೆ ಗುರುವಾರ ತಿಳಿಸಿದರು.

ಕಳೆದ ವರ್ಷ 'ಪಂಚ ಕಾವ್ಯೋತ್ಸವ'ದ ಶೀರ್ಷಿಕೆಯಲ್ಲಿ, 'ಪ್ರಾದೇಶಿಕ', 'ವಿಶಿಷ್ಟ', 'ವಿನೋದ', 'ವೈವಿಧ್ಯ' ಹಾಗೂ 'ಸಮಗ್ರ' ಎಂಬ ಐದು ಕವಿಗೋಷ್ಠಿ ನಡೆಸಲಾಗಿತ್ತು.

ನಾಡಗೀತೆ ರಚನೆಯಾಗಿ 100 ವರ್ಷ: ಕುವೆಂಪು ಸಂಸ್ಥೆಯಲ್ಲಿ ಕವಿಗೋಷ್ಠಿ

ನಾಡಗೀತೆ ರಚನೆಯಾಗಿ ನೂರು ವರ್ಷ ತುಂಬಿದ ನೆನಪಿಗಾಗಿ ಕುವೆಂಪು ಅವರಿಗೆ ಗೌರವ ಸಲ್ಲಿಸಲು ಇದೇ ಮೊದಲ ಬಾರಿಗೆ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆವರಣದಲ್ಲಿ ಎಲ್ಲ ಕವಿಗೋಷ್ಠಿಗಳನ್ನೂ ಏರ್ಪಡಿಸಿರುವುದು ವಿಶೇಷ.

ಈ ಹಿಂದೆ, ಪ್ರತಿ ಕವಿಗೋಷ್ಠಿಯೂ ಬೇರೆ ಸಭಾಂಗಣಗಳಲ್ಲಿ ನಡೆಯುತ್ತಿತ್ತು. ಪ್ರಸಿದ್ಧ ಹಿರಿಯ ಕವಿಗಳು ಪಾಲ್ಗೊಳ್ಳುವ ಪ್ರಧಾನ ಕವಿಗೋಷ್ಠಿಯನ್ನು ಜಗನ್ಮೋಹನ ಅರಮನೆ ಸಭಾಂಗಣದಲ್ಲೇ ನಡೆಸಲಾಗುತ್ತಿತ್ತು.

'ಕುವೆಂಪು ಓಡಾಡಿದ ನೆಲದಲ್ಲಿ ಕವನ ವಾಚಿಸಬೇಕೆಂಬ ಕವಿಗಳ ಬಯಕೆ ಈ ಬಾರಿ ಈಡೇರಲಿದೆ. ಅದಕ್ಕಾಗಿ ಬಿಎಂಶ್ರೀ ಸಭಾಂಗಣದ ದುರಸ್ತಿ ನಡೆದಿದೆ. ವೈ–ಫೈ, ಎಲ್‌ಇಡಿ ಪರದೆ ಅಳವಡಿಸಲಾಗುವುದು' ಎಂದು ಪ್ರೊ.ಲೋಲಾಕ್ಷಿ ಮಾಹಿತಿ ನೀಡಿದರು.

ಅಲ್ಪಸಂಖ್ಯಾತರ ಕಾಲೊನಿ ಅಭಿವೃದ್ಧಿಗೆ ₹ 398 ಕೋಟಿ

22 ವಿಧಾನಸಭಾ ಕ್ಷೇತ್ರಗಳಲ್ಲಿ 40 ಕಾಮಗಾರಿಗಳಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಲ್ಪ ಸಂಖ್ಯಾತರು ವಾಸಿಸುತ್ತಿರುವ ನಗರ ಪ್ರದೇಶ ಗಳಲ್ಲಿನ ಅತೀ ಹಿಂದುಳಿದ ಕಾಲೊನಿಗಳಲ್ಲಿ ₹398 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಂಡು 'ಮಾದರಿ ಕಾಲೊನಿ'ಗಳಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಒಟ್ಟು 22 ವಿಧಾನಸಭಾ ಕ್ಷೇತ್ರಗಳಲ್ಲಿ 40 ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಮೂಲಕ ಅನುಷ್ಠಾನ-ಗೊಳಿಸುವ ಪ್ರಸ್ತಾವಕ್ಕೂ ಅನುಮೋದನೆ ನೀಡಲಾಗಿದೆ. 2024–25ನೇ ಸಾಲಿನಲ್ಲಿ ಈ ಕಾಮಗಾರಿಗಳಿಗೆ ₹ 160 ಕೋಟಿ ಬಿಡುಗಡೆ ಮಾಡಲಾಗಿದೆ.

ರಾಗಿ ಹೆಲ್ತ್ ಮಿಕ್ಸ್ ಪುಡಿ ಮಿಶ್ರಣ: ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಪುಡಿಯನ್ನು ಬಿಸಿ ಹಾಲಿನೊಂದಿಗೆ ಮಿಶ್ರಣ ಮಾಡಿ ವಾರದಲ್ಲಿ ಐದು ದಿನ ನೀಡಲು ಅಂದಾಜು ₹27.02 ಕೋಟಿಯ ಪ್ರಸ್ತಾವಕ್ಕೆ ಸಭೆ ಅನುಮೋದನೆ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿ ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ. ಯೋಜನೆಯ ಶೇ 25ರಷ್ಟನ್ನು (ಸಾಗಣೆ ವೆಚ್ಚ ₹6.49 ಕೋಟಿ ಸೇರಿ ₹27.02 ಕೋಟಿ) ರಾಜ್ಯ ಸರ್ಕಾರ ಭರಿಸಲಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಪ್ರತಿ ತಿಂಗಳು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಪಾವತಿಸಬೇಕಾಗಿರುವ ಮಾರುಕಟ್ಟೆ ಶುಲ್ಕ, ಬಳಕೆದಾರರ ಶುಲ್ಕದ ವಂತಿಕೆ ಹಂಚಿಕೆಯನ್ನು ಬದಲಿಸಲು ಸಭೆ ನಿರ್ಧರಿಸಿದೆ. ಒಟ್ಟು 60 ಪೈಸೆಯಲ್ಲಿ ಆವರ್ತ ನಿಧಿಗೆ 10 ಪೈಸೆ, ಕೃಷಿ ಮಾರಾಟ ಮಂಡಳಿಗೆ ವಂತಿಗೆ 5 ಪೈಸೆ, ಪ್ರಾಂಗಣದಲ್ಲಿ ಮೂಲಸೌಕರ್ಯ, ನಿರ್ವಹಣೆ, ಸಮಿತಿ ಆಡಳಿತ ವೆಚ್ಚ 41 ಪೈಸೆ, ರೈತರಿಗೆ ಬೇಕಾದ ಆನ್‌ಲೈನ್ ಸೇವೆ ಒದಗಿಸುವ ರಾಷ್ಟ್ರೀಯ ಇ ಮಾರ್ಕೆಟ್ ಸರ್ವೀಸಸ್ ಪ್ರೈ.ಲಿ (ರೆಮ್ಸ್) ಸಂಸ್ಥೆಗೆ ವಹಿವಾಟು ವೆಚ್ಚ 1 ಪೈಸೆ, ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಗೆ (ಮಾರುಕಟ್ಟೆ ಶುಲ್ಕ ಮತ್ತು ಪರವಾನಗಿ) 3 ಪೈಸೆಯಂತೆ ಹಂಚಿಕೆ ಮಾಡುವ ಪ್ರಸ್ತಾವಕ್ಕೆ ಸಭೆ ಅನುಮೋದನೆ ನೀಡಿದೆ.

ಸಂಪುಟ ಸಭೆಯ ನಿರ್ಣಯಗಳು:

- ಪ್ರಸಕ್ತ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ 'ಶುಚಿ' ಯೋಜನೆಯಡಿ ₹ 71.93 ಕೋಟಿಯಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಖರೀದಿಸಿ, ವಿತರಣೆ
- ಎಲ್ಲ ಜಿಲ್ಲೆಗಳಲ್ಲಿ ಉಚಿತ ಸಮಗ್ರ ನೇತ್ರ ತಪಾಸಣೆ, ಕಣ್ಣಿನ ಶಸ್ತ್ರಚಿಕಿತ್ಸೆ ಮತ್ತು ಕನ್ನಡಕಗಳನ್ನು ವಿತರಿಸುವ 'ಆಶಾ ಕಿರಣ' ಯೋಜನೆ ₹ 52.85 ಕೋಟಿ ವೆಚ್ಚದಲ್ಲಿ ಅನುಷ್ಠಾನ
- ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ರಾಯಚಂದ್ರ ಗ್ರಾಮದಲ್ಲಿ ಹೊಸ ವೈದ್ಯಕೀಯ ಕಾಲೇಜು ಸ್ಥಾಪಿಸಲು ಗೃಹ ಮಂಡಳಿಯಿಂದ ₹ 65 ಕೋಟಿ ಮೊತ್ತದಲ್ಲಿ 25 ಎಕರೆ ಜಮೀನು ಖರೀದಿ ಮತ್ತು ಆರೋಗ್ಯ ವಿಶ್ವವಿದ್ಯಾಲಯದಿಂದ ಗೃಹ ಮಂಡಳಿಗೆ ₹ 39.79 ಕೋಟಿ ಬಿಡುಗಡೆ
- ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಕಾಮಗಾರಿಗಳಿಗೆ ₹ 77.35 ಕೋಟಿ ಮೊತ್ತದಲ್ಲಿ 221 ಎಕರೆ 1.12 ಗುಂಟೆ ಜಮೀನು ಖರೀದಿ
- ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ 107 ಕೆರೆಗಳಿಗೆ ಬೇಡ್ತಿ ನದಿಯಿಂದ ನೀರು ಎತ್ತಿ ತುಂಬಿಸುವ ಯೋಜನೆಗೆ ₹ 179.50 ಕೋಟಿ ವೆಚ್ಚ
- ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯ ಮೂಲಕ ಬ್ಯಾಡಗಿ ಮತ್ತು ಹಾನಗಲ್ ತಾಲ್ಲೂಕಿನ 137 ಕೆರೆ ತುಂಬಿಸುವ ಯೋಜನೆಗೆ ₹ 115.60 ಕೋಟಿ ವೆಚ್ಚ
- ಮುಜರಾಯಿ ಇಲಾಖೆಯಿಂದ ಬೆಂಗಳೂರು ನಗರ ಜಿಲ್ಲೆ ಕೆ.ಆರ್. ವೃತ್ತದಲ್ಲಿರುವ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ 9191 ಚದರ ಮೀಟರ್ ಭೂಮಿಯಲ್ಲಿ ₹ 27.70 ಕೋಟಿಯಲ್ಲಿ 'ಧಾರ್ಮಿಕ ಸೌಧ' ನಿರ್ಮಾಣ
- ಸಿಂದಗಿ, ಸವದತ್ತಿ ಯಲ್ಲಮ್ಮ ಮತ್ತು ಹುಮನಾಬಾದ್ ಪುರಸಭೆ ನಗರಸಭೆಗಳಾಗಿ ಘೋಷಣೆ
- ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ₹ 63.34 ಕೋಟಿ ವೆಚ್ಚದಲ್ಲಿ ಹಾಗೂ ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ₹ 100 ಕೋಟಿ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ
- 14 ಜಿಲ್ಲೆಗಳಲ್ಲಿ ₹ 15.45 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ 20 ವಿದ್ಯಾರ್ಥಿ ನಿಲಯ ನಿರ್ಮಾಣ
- ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಅಡಿಯಲ್ಲಿ ಇ-ಸಮನ್ಸ್‌ಗಳನ್ನು ಜಾರಿ ಮಾಡಲು ಅವಕಾಶ ಮಾಡಿಕೊಡುವ 'ಕರ್ನಾಟಕ ವಿದ್ಯುನ್ಮಾನ ಪ್ರಕ್ರಿಯಾ (ಸೇವಾ ಮತ್ತು ಅನುಷ್ಠಾನ) ನಿಯಮಗಳು-2025' ಅಧಿಸೂಚನೆ
- ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾದ ಸಾಕ್ಷ್ಯಗಳನ್ನು ಇ-ಸಾಕ್ಷ್ಯ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲು ಮತ್ತು ಅದನ್ನು ವೀಕ್ಷಿಸಲು ಅವಕಾಶ ಮಾಡಿಕೊಡುವ 'ಕರ್ನಾಟಕ ಇ-ಸಾಕ್ಷ್ಯ ನಿರ್ವಹಣಾ ನಿಯಮಗಳು–2025'ರ ಸಂಬಮದ ಅಧಿಸೂಚನೆ

62 ಅಪರಾಧ ಪ್ರಕರಣಗಳು ವಾಪಸ್

ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮತ್ತು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿಯಿರುವ 62 ಅಪರಾಧ ಪ್ರಕರಣಗಳನ್ನು ವಾಪಸ್ ಪಡೆಯಲು ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ರಸ್ತೆ ತಡೆ, ಪ್ರತಿಭಟನೆ, ಸರ್ಕಾರಿ ನೌಕರ–ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದಂತಹ ಪ್ರಕರಣಗಳು ಇದರಲ್ಲಿ ಸೇರಿವೆ. ರೈತ ಸಂಘ, ಸರ್ಕಾರಿ ನೌಕರರ ಹೋರಾಟ ಸಮಿತಿಗಳು, ಖಾಸಗಿ ವ್ಯಕ್ತಿಗಳ ವಿರುದ್ಧ ದಾಖಲಾಗಿದ್ದ ಪ್ರಕರಣಗಳ ರದ್ದತಿ ಕೋರಿ ವೈಯಕ್ತಿಕ ಅರ್ಜಿಗಳು ಸಲ್ಲಿಕೆಯಾಗಿದ್ದವು. ಜತೆಗೆ ಹಿಂದಿನ ಗೃಹ ಸಚಿವರು ನೀಡಿದ್ದ ಟಿಪ್ಪಣಿ, ಹಾಗೂ ಜನಪ್ರತಿನಿಧಿಗಳು ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ ಎಂದು ಸಂಪುಟ ಸಭೆಯು ತಿಳಿಸಿದೆ.

ಹಾಲಿ ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಬಾರದು ಎಂಬ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ತೀರ್ಪು, ನಿರ್ದೇಶನಗಳನ್ನು ಪಾಲಿಸಲಾಗಿದೆ ಎಂದೂ ಸಭೆಯು ವಿವರಿಸಿದೆ.

ಕೆಜಿಐಡಿ ಲಾಭಾಂಶ ಘೋಷಣೆ

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಕಡ್ಡಾಯ ಜೀವ ವಿಮಾ ಯೋಜನೆಯ ವಿಮಾದಾರರಿಗೆ 2020–22ರ ದ್ವೈವಾರ್ಷಿಕ ಅವಧಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲ ಪಾಲಿಸಿಗಳಿಗೆ ವಿಮಾ ಮೊತ್ತದ ಮೇಲೆ ಪ್ರತಿ ಸಾವಿರ ರೂಪಾಯಿಗೆ ಪ್ರತಿವರ್ಷಕ್ಕೆ ₹80 ರಂತೆ ಲಾಭಾಂಶ ವಿತರಿಸಲು ಸರ್ಕಾರ ನಿರ್ಧರಿಸಿದೆ.

ಅವಧಿ ಪೂರ್ಣಗೊಂಡ, ವಿಮಾದಾರರ ಮರಣ ಪ್ರಕರಣ ಹಾಗೂ ವಿಮಾತ್ಯಾಗ ಮೌಲ್ಯಗಳಿಂದ 2022ರ ಏಪ್ರಿಲ್ 1ರಿಂದ 2024 ಮಾರ್ಚ್ 31ರವರೆಗಿನ ಅವಧಿಯಲ್ಲಿ ಪ್ರತಿ ಸಾವಿರ ರೂಪಾಯಿಗೆ ಪ್ರತಿವರ್ಷಕ್ಕೆ ₹80 ನಂತೆ ಮಧ್ಯಂತರ ಲಾಭಾಂಶ ಘೋಷಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಗೆ ಸಮ್ಮತಿ

ಶಾಲಾ ಶಿಕ್ಷಕರ ಬಡ್ತಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶಿಕ್ಷಕರ ಎಂಟು ವರ್ಷಗಳ ಹೋರಾಟಕ್ಕೆ ಫಲ
- 1ರಿಂದ 7ನೇ ತರಗತಿ ಬೋಧಿಸಲು ಅವಕಾಶ
- ಒಂದು ಬಾರಿ ವೇತನ ಬಡ್ತಿಗೂ ಸಮ್ಮತಿ

ಬೆಂಗಳೂರು: ಪದವಿ, ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣ ಪತ್ರ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ಬಾರಿ ವೇತನ ಬಡ್ತಿ ಹಾಗೂ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತರಲು ಗುರುವಾರ ನಡೆದ ಸಂಪುಟ ಸಭೆ ಸಮ್ಮತಿಸಿದೆ.

ವೃಂದ ಮತ್ತು ನೇಮಕಾತಿ ನಿಯಮಕ್ಕೆ 2017ರಲ್ಲಿ ತಿದ್ದುಪಡಿ ತರುವುದಕ್ಕೆ ಮೊದಲು ಜಾರಿಯಲ್ಲಿದ್ದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 6 ಮತ್ತು 7ನೇ ತರಗತಿಯವರೆಗೂ ಬೋಧಿಸಲು ಅವಕಾಶ ಸಿಗಲಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಅನುಗುಣವಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾಯಿಸಿ, ಹೊಸ ವೃಂದ ಮತ್ತು ನೇಮಕಾತಿ ನಿಯಮವನ್ನು ರೂಪಿಸಲಾಗಿತ್ತು. ಇದರಿಂದ 1ರಿಂದ 5ನೇ ತರಗತಿಯವರೆಗೆ ಬೋಧಿಸುವ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರನ್ನು ಪದವೀಧರ ಶಿಕ್ಷಕರೆಂದು ಪ್ರತ್ಯೇಕಗೊಳಿಸಲಾಗಿತ್ತು. ಇದರ ಪರಿಣಾಮ 2016ಕ್ಕಿಂತ ಮೊದಲು 1ರಿಂದ 7 ಹಾಗೂ 1ರಿಂದ 8ರ ವೃಂದಕ್ಕೆ ನೇಮಕವಾಗಿದ್ದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು 1ರಿಂದ 5ನೇ ತರಗತಿಗೆ ಸೀಮಿತಗೊಂಡಿದ್ದರು.

ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರ ಹುದ್ದೆ ಹಾಗೂ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗಳ ಬಡ್ತಿಯಲ್ಲೂ ಪದವೀಧರ ಶಿಕ್ಷಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಹಲವಾರು ವರ್ಷಗಳಿಂದ ಕರ್ತವ್ಯ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು, ಇತ್ತೀಚೆಗೆ ಬಂದ ಪದವೀಧರ ಶಿಕ್ಷಕರ ಕೈಕೆಳಗೆ ಕೆಲಸ ಸಲ್ಲಿಸುವಂತಾಗಿತ್ತು. ಹುದ್ದೆಗಳ ಮರುವಿಂಗಡಣೆಯಲ್ಲೂ ಪದವೀಧರ ಶಿಕ್ಷಕರಿಗೆ ಆದ್ಯತೆ ನೀಡಿದ್ದರಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹುದ್ದೆಗಳ ಕೊರತೆ ಎದುರಾಗಿತ್ತು.

ಅನ್ಯಾಯ ಖಂಡಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ 2017ರಿಂದಲೂ ಹೋರಾಟ ನಡೆಸುತ್ತಾ ಬಂದಿತ್ತು. ಇದೇ ಸೆ. 3ರಂದು ತರಗತಿ ಬಹಿಷ್ಕರಿಸಿ, 'ಫ್ರೀಡಂ ಪಾರ್ಕ್ ಚಲೋ' ಚಳವಳಿ ಹಮ್ಮಿಕೊಂಡಿತ್ತು. ಸೆ.5ರಂದು ನಡೆಯುವ ಶಿಕ್ಷಕರ ದಿನಾಚರಣೆಯನ್ನು ಬಹಿಷ್ಕರಿಸಲು ಸಂಘ ನಿರ್ಧರಿಸಿತ್ತು. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸಂಪುಟ ಸಭೆಯ ಮುಂದೆ ಈ ಪ್ರಸ್ತಾವ ತಂದು ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಮಸ್ಯೆ ಅರ್ಥ ಮಾಡಿಕೊಂಡು, ಕಾನೂನು ತೊಡಕುಗಳನ್ನು ನಿವಾರಿಸಿ, ಬಹು ವರ್ಷಗಳ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿರುವೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ವೃಂದ ಮತ್ತು ನೇಮಕಾತಿ ನಿಯಮದ ತಿದ್ದುಪಡಿಗೆ ಸಂಪುಟ ಸಭೆಯು ಸಮ್ಮತಿ ನೀಡಿದ್ದು, ಸುಮಾರು 1.50 ಲಕ್ಷ ಶಿಕ್ಷಕರಿಗೆ ಅನುಕೂಲವಾಗಲಿದೆ. ಎಂಟು ವರ್ಷಗಳ ಹೋರಾಟ ಸಾರ್ಥಕವಾಗಿದೆ

ಚಂದ್ರಶೇಖರ ನುಗ್ಗಲಿ, ಅಧ್ಯಕ್ಷ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ರಾಜ್ಯ ಸರ್ಕಾರ ಕೈಗೊಂಡ ನಿರ್ಧಾರ ಸ್ವಾಗತಿಸಿರುವ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೇರಿದಂತೆ ಸಂಪುಟದ ಎಲ್ಲ ಸಚಿವರು, ಅಧಿಕಾರಿಗಳಿಗೆ ಪ್ರಾಥಮಿಕ ಶಾಲೆಯ ಎಲ್ಲ ಶಿಕ್ಷಕರ ಪರವಾಗಿ ಧನ್ಯವಾದ ಸಲ್ಲಿಸಿದ್ದಾರೆ.

ದಾವಣಗೆರೆಯ ವಿನೋಬನಗರದಲ್ಲಿ ಗುರುವಾರ ವೀರ ವರಸಿದ್ಧಿ ವಿನಾಯಕ ಸ್ವಾಮಿಯ ವಿಸರ್ಜನಾ ಶೋಭಾಯಾತ್ರೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರು ಕಲಾತಂಡಗಳ ನಡುವೆ ತಾಳ ಬಾರಿಸಿದರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಡಿ.ಕೆ ಶಿವಕುಮಾರ್ ದೇಶದ ಎರಡನೇ ಶ್ರೀಮಂತ ಸಚಿವ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇಶದ ಎರಡನೇ ಶ್ರೀಮಂತ ಸಚಿವ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಹೇಳಿದೆ.

ರಾಜ್ಯ ವಿಧಾನಸಭೆಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸಚಿವರು ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿದ ಪ್ರಮಾಣಪತ್ರಗಳನ್ನು ವಿಶ್ಲೇಷಿಸಿ ಎಡಿಆರ್ ಗುರುವಾರ ವರದಿ ಬಿಡುಗಡೆ ಮಾಡಿದೆ. 27 ವಿಧಾನಸಭೆಗಳು, 3 ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರದ 652 ಸಚಿವರ ಪೈಕಿ 643 ಸಚಿವರು ಸಲ್ಲಿಸಿರುವ ಪ್ರಮಾಣಪತ್ರಗಳನ್ನು ವಿಶ್ಲೇಷಿಸಲಾಗಿದೆ.

ಕರ್ನಾಟಕದಲ್ಲಿ ನೂರು ಕೋಟಿಗಿಂತ ಹೆಚ್ಚು ಆಸ್ತಿ ಇರುವ ಎಂಟು ಸಚಿವರು ಇದ್ದಾರೆ. ಆಂಧ್ರ ಪ್ರದೇಶವು ನಂತರದ ಸ್ಥಾನದಲ್ಲಿದೆ.

643 ಸಚಿವರ ಪೈಕಿ 302 ಮಂದಿ (ಶೇ 47) ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. 174 ಸಚಿವರ ವಿರುದ್ಧ (ಶೇ 27) ಗಂಭೀರ ಅಪರಾಧ ಪ್ರಕರಣಗಳಿವೆ. ಈ ಸಚಿವರು ಕೊಲೆ, ಕೊಲೆಯತ್ನ, ಅಪಹರಣ, ಮಹಿಳೆಯರ ವಿರುದ್ಧದ ಅಪರಾಧಗಳು ಸೇರಿದಂತೆ ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಕೇಂದ್ರ ಸಚಿವ ಸಂಪುಟದ 72ರಲ್ಲಿ 29 (ಶೇ 40) ಮಂದಿ ವಿರುದ್ಧ ಪ್ರಕರಣಗಳಿವೆ.

ಯಾವ ಪಕ್ಷ, ಎಷ್ಟು ಪ್ರಕರಣ

ಪಕ್ಷ	ಒಟ್ಟು ಸಚಿವರು	ಅಪರಾಧ ಹಿನ್ನೆಲೆ ಇರುವವರು	ಶೇ
ಬಿಜೆಪಿ	336	136	40
ಕಾಂಗ್ರೆಸ್	61	45	74
ಎಐಟಿಸಿ	40	13	33
ಡಿಎಂಕೆ	31	27	87
ಟಿಡಿಪಿ	23	22	96
ಎಎಪಿ	16	11	69
ಜೆಡಿಯು	14	4	29
ಶಿವಸೇನೆ	13	7	54

ಕುಬೇರ ಸಚಿವರು (₹ಕೋಟಿಗಳಲ್ಲಿ)

ಸಚಿವರು	₹ಕೋಟಿ
ಚಂದ್ರಶೇಖರ ಪೆಮ್ಮಸಾನಿ (ಕೇಂದ್ರ ಸಚಿವ) ಟಿಡಿಪಿ	₹5,705
ಡಿ.ಕೆ. ಶಿವಕುಮಾರ್ (ಕಾಂಗ್ರೆಸ್)	₹1,413
ಚಂದ್ರಬಾಬು ನಾಯ್ಡು (ಟಿಡಿಪಿ)	₹971
ನಾರಾಯಣ ಪೊಂಗೂರು (ಟಿಡಿಪಿ)	₹824
ಸುರೇಶ್ ಬಿ.ಎಸ್ (ಕಾಂಗ್ರೆಸ್)	₹648

ಬಡ ಕುಟುಂಬದ ಮಕ್ಕಳ ಚಿನ್ನದ ಸಾಧನೆ

ಬಳ್ಳಾರಿ: ಇಲ್ಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲ-ಯದಲ್ಲಿ (ವಿಎಸ್‌ಕೆಯು) ಗುರುವಾರ ನಡೆದ ಘಟಿಕೋತ್ಸವದಲ್ಲಿ ವಿದ್ಯಾ-ರ್ಥಿನಿಯರಾದ ಹಂಸಾ 4 ಮತ್ತು ರಾಜೇಶ್ವರಿ 3 ಚಿನ್ನದ ಪದಕ ಪಡೆದು, ಸಂಭ್ರಮಿಸಿದರು.

ರಾಜೇಶ್ವರಿ

ಹಂಸಾ

ಬಡತನದಲ್ಲಿ ಅರಳಿದ ಪ್ರತಿಭೆ: ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯ ಹಂಸಾ ಅವರ ತಾಯಿ ನಾಗಮ್ಮ ತರಕಾರಿ ಮಾರುತ್ತಾರೆ. ಅವರಿಗೆ ಹಂಸಾ ನಾಲ್ಕನೇ ಪುತ್ರಿ. ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುವ ಅವರು, ನಾಲ್ಕು ಚಿನ್ನದ ಪದಕಗಳನ್ನು ಪಡೆದರು.

'ನನಗೆ ಪ್ರಾಧ್ಯಾಪಕಿ ಆಗುವ ಗುರಿಯಿದೆ' ಎಂದು ಹಂಸಾ ತಿಳಿಸಿದರು.

ಸಾಧನೆಗೆ ಗ್ರಾಂಥಾಲಯ ಕಾರಣ: ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರದಲ್ಲಿ ಮೂರು ಚಿನ್ನದ ಪದಕ ಪಡೆದಿರುವ ರಾಜೇಶ್ವರಿ, ತಮ್ಮ ಸಾಧನೆಗೆ ಗ್ರಂಥಾಲಯ ಕಾರಣ ಎಂದಿದ್ದಾರೆ. ವೃತ್ತಿಯಲ್ಲಿ ಅಕ್ಕಸಾಲಿಗರಾದ ಗಿರೀಶ್ ಅವರ ಪುತ್ರಿ ರಾಜೇಶ್ವರಿ ಅವರು ಪ್ರಾಧ್ಯಾಪಕಿ ಆಗುವ ಗುರಿ ಹೊಂದಿದ್ದಾರೆ.

ಮೂವರಿಗೆ ಡಾಕ್ಟರೇಟ್: ವೈದ್ಯ ಸಾಹಿತಿ ಡಾ. ವಸುಂದರಾ ಭೂಪತಿ, ಗಣಿ ಉದ್ಯಮಿ ಬಾವಿಹಳ್ಳಿ ನಾಗನಗೌಡ, ಪ್ರೆಸ್ಟೀಜ್ ಗ್ರೂಪ್‌ನ ಗೌರವಾಧ್ಯಕ್ಷ ಇರ್ಫಾನ್ ರಜಾಕ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಜಯದೇವ: ಡಾ. ದಿನೇಶ್ ಹೊಸ ನಿರ್ದೇಶಕ?

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನೂತನ ನಿರ್ದೇಶಕರ ಹುದ್ದೆಗೆ ಡಾ. ದಿನೇಶ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದ್ದು, ಆ ಕುರಿತು ಹೈಕೋರ್ಟ್‌ಗೆ ವರದಿ ಸಲ್ಲಿಸಿ ನಂತರ ಆದೇಶ ಹೊರಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಆಡಳಿತ ಮಂಡಳಿ ಸಭೆ ನಿರ್ಧರಿಸಿದೆ.

ಆಡಳಿತ ಮಂಡಳಿ ಸಭೆಯು ವಿಧಾನ ಸೌಧದಲ್ಲಿ ಗುರುವಾರ ನಡೆಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಕೂಡ ಇದ್ದರು. ಸಭೆಯಲ್ಲಿ ನಿರ್ದೇಶಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದ 11 ಹಿರಿಯ ವೈದ್ಯರ ಪೈಕಿ 10 ಮಂದಿಯ ಸಂದರ್ಶನ ನಡೆಸಲಾಗಿದೆ.

ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ.ಕೆ. ಎಸ್. ರವೀಂದ್ರನಾಥ್ ಅವರ ಅವಧಿ ಮುಕ್ತಾಯವಾಗುತ್ತಿರುವ ಕಾರಣ ಹೊಸ ನಿರ್ದೇಶಕರ ನೇಮಕ ಮಾಡಬೇಕಿದೆ.

'ರೈಲ್ವೆ ಯೋಜನೆಗೆ ಅಸಹಕಾರ'

ಪ್ರಜಾವಾಣಿ ವಾರ್ತೆ

ಮೈಸೂರು: 'ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಅಗತ್ಯ ಸಹಕಾರ ನೀಡುತ್ತಿಲ್ಲ, ಇಚ್ಛಾಶಕ್ತಿ ಕೊರತೆ ಕಂಡುಬರುತ್ತಿದೆ. ಹಲವು ಬಾರಿ ಮನವಿ ಮಾಡಿದರೂ ಸ್ಪಂದನೆ ದೊರೆಯುತ್ತಿಲ್ಲ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ದೂರಿದರು.

ಇಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಎಲ್ಲ ರಾಜ್ಯಗಳಂತೆ ಕರ್ನಾಟಕದಲ್ಲೂ ರೈಲ್ವೆ ಯೋಜನೆಗಳು ಸಮರ್ಪಕವಾಗಿ ಅನು-ಷ್ಠಾನಗೊಳ್ಳಬೇಕು, ಪ್ರಯಾಣಿಕರಿಗೆ ಸೌಲಭ್ಯಗಳು ದೊರೆಯಬೇಕು ಎಂಬುದು ಕೇಂದ್ರದ ಉದ್ದೇಶ. ಇದಕ್ಕೆ ತಕ್ಕಂತೆ ರಾಜ್ಯ ಸ್ಪಂದಿಸುತ್ತಿಲ್ಲ.ಕ್ಷುಲ್ಲಕ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿದರು.

'ಚಾಮರಾಜನಗರದಿಂದ ತಮಿಳು ನಾಡಿನ ಮೆಟ್ಟುಪಾಳ್ಯಂವರೆಗೆ ರೈಲು ಮಾರ್ಗ ವಿಸ್ತರಿಸುವುದು, ಮೈಸೂರು–ಕುಶಾಲನಗರ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳಿಗೆ ಅಗತ್ಯವಾದ ಭೂಮಿ ಕೊಡುತ್ತಿಲ್ಲ. ಈ ಬಗ್ಗೆ ನವದೆಹಲಿಗೆ ಬಂದಿದ್ದಾಗ ಮುಖ್ಯಮಂತ್ರಿಗೆ, ನಂತರ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಕಾರ್ಯದರ್ಶಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಅವರಿಗೆ ತಿಳಿಸಿದ್ದೆ. ಮನವಿಪತ್ರ ಸಲ್ಲಿಸುವಂತೆ ತಿಳಿಸಿದ್ದರೂ ಸಲ್ಲಿಸಿಲ್ಲ' ಎಂದು ತಿಳಿಸಿದರು.

'ಲೆವೆಲ್ ಕ್ರಾಸಿಂಗ್ ಇಲ್ಲದಂತೆ ಮಾಡುವುದಕ್ಕಾಗಿ ಮೇಲ್ಸೇತುವೆ ಹಾಗೂ ಕೆಳಸೇತುವೆಗಳಿಗೆ ಶೇ 100ರಷ್ಟು ಹಣವನ್ನು ಕೇಂದ್ರದಿಂದಲೇ ಕೊಡುತ್ತಿದ್ದೇವೆ. ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡದಿರುವುದನ್ನು ಮನಗಂಡು ಪ್ರಧಾನಿಯವರೇ ಕೊಡುತ್ತಿದ್ದಾರೆ ಎಂದರು.

ತುಮಕೂರಿನಲ್ಲಿ 50 ವರ್ಷಗಳಲ್ಲಿ ಆಗಬೇಕಾದ ಕೆಲಸಗಳನ್ನೆಲ್ಲಾ ಮಾಡಿಕೊಟ್ಟಿದ್ದೇನೆ. ಮುಂದಿನ ಬಾರಿ ಅಲ್ಲಿ ಸ್ಪರ್ಧಿಸುವುದಿಲ್ಲ. ಬೇರೆ ಕ್ಷೇತ್ರಕ್ಕೆ ಹೋಗಲು ಚಿಂತನೆ ನಡೆಸಿದ್ದೇನೆ

ವಿ.ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ಪ್ರತ್ಯೇಕ ಮತ ಪಟ್ಟಿ, ಬ್ಯಾಲಟ್ ಪೇಪರ್

ಒಂದನೇ ಪುಟದಿಂದ...

ಅಲ್ಲದೇ, ಇನ್ನು 15 ದಿನಗಳಲ್ಲಿ ನಿಯಮಗಳನ್ನು ಅಂತಿಮಗೊಳಿಸಿ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು ಹೇಳಿದರು.

'ಕೇಂದ್ರ ಚುನಾವಣಾ ಆಯೋಗ ತಯಾರಿಸಿರುವ ಮತದಾರರ ಪಟ್ಟಿಯಲ್ಲಿ ವ್ಯಾಪಕ ಅಕ್ರಮವಾಗಿದೆ. 'ಮತ ಕಳ್ಳತನ'ವಾಗಿದೆ ಎಂಬ ಆರೋಪ ಸಾರ್ವಜನಿಕರಿಂದ ಬಂದಿದೆ. ಇತ್ತೀಚೆಗೆ ಕರ್ನಾಟಕದಲ್ಲೂ ಮತದಾರರ ಪಟ್ಟಿಯಲ್ಲಿ ಬಹು ದೊಡ್ಡ ಪ್ರಮಾದ ಆಗಿದೆ ಎಂದು ಜನರು ದೂರಿದ್ದಾರೆ. ಮತದಾರ ಅಲ್ಲದವರನ್ನೂ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ. ಮತಕಳ್ಳತನ ವಿಚಾರವಾಗಿ ವ್ಯಾಪಕ ಚರ್ಚೆ ನಡೆಯುತ್ತಿದೆ' ಎಂದು ಅವರು ವಿವರಿಸಿದರು.

'ದೇಶದಲ್ಲಿ ವಿದ್ಯುನ್ಮಾನ ಮತ ಯಂತ್ರದ (ಇವಿಎಂ) ಬಗ್ಗೆಯೂ ಜನರಲ್ಲಿ ವಿಶ್ವಾಸವಿಲ್ಲ. ಅದರ ವಿಶ್ವಾಸಾರ್ಹತೆಯ ಕೊರತೆಯನ್ನು ಗಮನಿಸಿ, ನಾವು ಜನರ ಮನಃಸ್ಥಿತಿಗೆ ಅನುಗುಣವಾಗಿ ಇವಿಎಂ ಬದಲು ಬ್ಯಾಲಟ್ ವ್ಯವಸ್ಥೆ ಜಾರಿ ತರಲು ತೀರ್ಮಾನಿಸಿದ್ದೇವೆ' ಎಂದು ಹೇಳಿದರು.

ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಅವರು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಸೆಕ್ಷನ್ 35 ಅನ್ನು ಉಲ್ಲೇಖಿಸಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದರು.

ಅದರ ಆಧಾರದ ಮೇರೆಗೆ ಈ ತೀರ್ಮಾನ ತೆಗೆದುಕೊಳ್ಳಲಾ-ಗಿದೆ. ಪಂಚಾಯತ್‌ರಾಜ್ ಕಾಯ್ದೆ, ಮುನಿಸಿಪಾಲಿಟಿ ಕಾಯ್ದೆಯಲ್ಲೂ ಈ ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ, ಕೇಂದ್ರ ಚುನಾವಣಾ ಆಯೋಗದಂತೆ ರಾಜ್ಯ ಚುನಾವಣಾ ಆಯೋಗವೂ ಸ್ವಾಯತ್ತ ಸಂಸ್ಥೆ. ಕೇಂದ್ರ ಚುನಾವಣಾ ಆಯೋಗದಷ್ಟೇ ರಾಜ್ಯ ಚುನಾವಣಾ ಆಯೋಗಕ್ಕೂ ಅಧಿಕಾರ ಇದೆ. ಮತದಾರರ ಪಟ್ಟಿಯನ್ನೂ ಸ್ವತಂತ್ರವಾಗಿ ತಯಾರಿಸಬಹುದಾಗಿದೆ ಎಂದು ಅವರು ಹೇಳಿದರು.

2010 ಮತ್ತು 2015ರಲ್ಲಿ ನಡೆದ ಬಿಬಿಎಂಪಿ ಚುನಾವಣೆಗಳ-ಲ್ಲಿ ಇವಿಎಂಗಳನ್ನು ಬಳಸಲಾಗಿತ್ತು. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಇವಿಎಂಗಳನ್ನು ಬಳಸಲಾಗುತ್ತಿತ್ತು. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮತಪತ್ರ ಬಳಸಲಾಗುತ್ತಿದೆ. ವಿಧಾನಪರಿಷತ್ ಚುನಾವಣೆಗಳಲ್ಲಿ ಮತಪತ್ರಗಳನ್ನು ಬಳಸಲಾಗುತ್ತಿತ್ತು.

ತಿದ್ದುಪಡಿ ಅಧಿಸೂಚನೆಗಳೂ ರದ್ದು

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ 2024ರ ಅಕ್ಟೋಬರ್ 28ರ ನಂತರ ಹೊರಡಿಸಿರುವ ತಿದ್ದುಪಡಿ ಅಧಿಸೂಚನೆಗಳೂ ಸೇರಿದಂತೆ ಎಲ್ಲ ಅಧಿಸೂಚನೆಗಳನ್ನು ರದ್ದುಪಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಅನ್ವಯಿಸಿ ಪರಿಷ್ಕೃತ ರೋಸ್ಟರ್ ಪ್ರಕಟಿಸಲಾಗಿದೆ. ಹೀಗಾಗಿ, ಈ ರೋಸ್ಟರ್ ಪ್ರಕಾರ ಹುದ್ದೆಗಳನ್ನು ನಿಗದಿಪಡಿಸಿ ಹೊಸತಾಗಿ ಅಧಿಸೂಚನೆ ಹೊರಡಿಸಲು ಸಭೆ ತೀರ್ಮಾನಿಸಿದೆ.

ಎನ್‌ಐಆರ್‌ಎಫ್ ಪಟ್ಟಿಯಲ್ಲಿ ಸತತ 10ನೇ ವರ್ಷವೂ ಅಗ್ರಸ್ಥಾನ

ಐಐಎಸ್‌ಸಿ ಅತ್ಯುತ್ತಮ ವಿವಿ

ನವದೆಹಲಿ (ಪಿಟಿಐ): ಕೇಂದ್ರ ಶಿಕ್ಷಣ ಇಲಾಖೆಯು ಬಿಡುಗಡೆಗೊಳಿಸಿದ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಸಮಿತಿ–2025ರ (ಎನ್‌ಐಆರ್‌ಎಫ್) ಪಟ್ಟಿಯಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಸತತ 10ನೇ ವರ್ಷವೂ ಅತ್ಯುತ್ತಮ ವಿಶ್ವವಿದ್ಯಾಲಯ ಎಂಬ ಹಿರಿಮೆಗೆ ಪಾತ್ರವಾಗಿದೆ.

ಎನ್‌ಐಆರ್‌ಎಫ್‌ನ 10ನೇ ಆವೃತ್ತಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಗುರುವಾರ ಪ್ರಕಟಿಸಿದರು.

'ಸಮಗ್ರ' ವಿಭಾಗದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್ (ಐಐಟಿ ಮದ್ರಾಸ್) ಸತತ 7ನೇ ವರ್ಷವೂ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಈ ವಿಭಾಗದಲ್ಲಿ ಬೆಂಗಳೂರಿನ ಐಐಎಸ್‌ಸಿ 2ನೇ ಸ್ಥಾನದಲ್ಲಿದ್ದರೆ, ಐಐಟಿ ಬಾಂಬೆ ಹಾಗೂ ಐಐಟಿ ದೆಹಲಿ ನಂತರದ ಸ್ಥಾನದಲ್ಲಿವೆ.

ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಬೆಂಗಳೂರಿನ ಐಐಎಸ್‌ಸಿ ಅಗ್ರಸ್ಥಾ-ನದಲ್ಲಿದೆ. ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಮೂರನೇ ಸ್ಥಾನದಲ್ಲಿದೆ. ಕರ್ನಾಟಕದ ಈ ಸಂಸ್ಥೆಯು, ಎನ್‌ಐಆರ್‌ಎಫ್ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಸ್ಥಾನ ಪಡೆದ ಮೊದಲ ಖಾಸಗಿ ಶಿಕ್ಷಣ ಸಂಸ್ಥೆಯಾಗಿದೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾ-ಲಯ ಎರಡನೇ ಸ್ಥಾನದಲ್ಲಿದೆ.

ರಾಜ್ಯದ ಕಾಲೇಜುಗಳು

ಕಾಲೇಜು	ಸ್ಥಾನ
ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು	34
ಎಂ.ಎಸ್. ರಾಮಯ್ಯ ಪದವಿ ಕಾಲೇಜು, ಬೆಂಗಳೂರು	67
ಸೇಂಟ್ ಅಲೋಶಿಯಸ್ ಕಾಲೇಜು, ಮಂಗಳೂರು	73
ಸೇಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜು, ಬೆಂಗಳೂರು	98

ರಾಜ್ಯದ ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯ	ಸ್ಥಾನ
ಐಐಎಸ್‌ಸಿ	1
ಎಂಎಎಚ್‌ಇ	3
ಜೆಎಸ್‌ಎಸ್ ಅಕಾಡೆಮಿ	21
ಜೈನ್ ವಿಶ್ವವಿದ್ಯಾಲಯ	62
ಕ್ರೈಸ್ಟ್ ವಿಶ್ವವಿದ್ಯಾಲಯ	63
ಬೆಂಗಳೂರು ವಿಶ್ವವಿದ್ಯಾಲಯ	65
ಮೈಸೂರು ವಿಶ್ವವಿದ್ಯಾಲಯ	71
ನಿಟ್ಟೆ	80
ಕೃಷಿ ವಿಶ್ವವಿದ್ಯಾಲಯ ಬೆಂಗಳೂರು	95

ಕಾಲೇಜುಗಳ ವಿಭಾಗದಲ್ಲಿ ದೆಹಲಿ ವಿಶ್ವವಿದ್ಯಾಲಯದ ಹಿಂದೂ ಕಾಲೇಜು ಮೊದಲ ಹಾಗೂ ಮಿರಾಂಡಾ ಹೌಸ್ ಎರಡನೇ ಸ್ಥಾನದಲ್ಲಿವೆ. ಹಂಸರಾಜ್ ಕಾಲೇಜು ಮತ್ತು ಕಿರೋರಿ ಮಾಲ್ ಕಾಲೇಜು ನಂತರದ ಸ್ಥಾನದಲ್ಲಿವೆ.

ಎಂಜಿನಿಯರಿಂಗ್ ಕಾಲೇಜುಗಳ ಮೊದಲ 10 ಸ್ಥಾನದಲ್ಲಿವೆ 9 ಐಐಟಿಗಳಿವೆ. ಐಐಟಿ ಮದ್ರಾಸ್, ಐಐಟಿ ಬಾಂಬೆ ಹಾಗೂ ಐಐಟಿ ದೆಹಲಿ ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿವೆ. ತಿರುಚನಾಪಳ್ಳಿಯ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯು (ಎನ್‌ಐಟಿ) ಪಟ್ಟಿಯಲ್ಲಿರುವ ಐಐಟಿಯೇತರ ಸಂಸ್ಥೆಯಾಗಿದೆ.

ರಾಜ್ಯದ ಸಂಸ್ಥೆಗಳಿಗೆ ಗೌರವ: ಸುರತ್ಕಲ್ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ, ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರಶಾಸ್ತ್ರ ಸಂಸ್ಥೆ, ಕ್ರಮವಾಗಿ 54ನೇ ಹಾಗೂ 60ನೇ ಸ್ಥಾನ ಗಳಿಸಿವೆ. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಜೆಎಸ್‌ಎಸ್ ಅಕಾಡೆಮಿ 38ನೇ ಮತ್ತು ಕ್ರೈಸ್ಟ್ ವಿಶ್ವವಿದ್ಯಾಲಯ 96ನೇ ಸ್ಥಾನ ಪಡೆದಿವೆ.

ಸರ್ಕಾರಿ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 50ನೇ ಸ್ಥಾನ ಪಡೆದಿದ್ದು, ರಾಜ್ಯದ ಯಾವುದೇ ಸರ್ಕಾರಿ ಕಾಲೇಜು ಟಾಪ್ 100ರಲ್ಲಿ ಸ್ಥಾನ ಪಡೆದಿಲ್ಲ.

ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಇನೋವೇಶನ್ ಸಂಸ್ಥೆಗಳಲ್ಲಿ ಎಂ.ಎಸ್. ರಾಮಯ್ಯ ಟೆಕ್ನಾಲಜಿ, ಕ್ರೈಸ್ಟ್ ವಿಶ್ವವಿದ್ಯಾಲಯ, ಐಐಟಿ ಧಾರವಾಡ, ಮ್ಯಾನೇಜ್ಮೆಂಟ್ ಕಾಲೇಜುಗಳಲ್ಲಿ ಅಲಯನ್ಸ್ ವಿಶ್ವವಿದ್ಯಾಲಯ, ವೈದ್ಯಕೀಯ ಸಂಸ್ಥೆಗಳಲ್ಲಿ ಮಣಿಪಾಲ–ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜುಗಳು, ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಳಗಾವಿಯ ಜೆಎನ್‌ಎಂಸಿ, ಎಂ.ಎಸ್. ರಾಮಯ್ಯ ಕಾಲೇಜು ಸ್ಥಾನ ಪಡೆದಿವೆ.

'ಕೆಲ ವಿಶ್ವವಿದ್ಯಾಲಯಗಳು ಎನ್‌ಐಆರ್‌ಎಫ್‌ಗೆ ಅರ್ಜಿ ಸಲ್ಲಿಸಿಲ್ಲ. ಬೋಧಕ ಸಿಬ್ಬಂದಿ ಕೊರತೆ, ಸಂಶೋಧನಾ ಚಟುವಟಿಕೆಗಳ ಸ್ಥಗಿತದ ಕಾರಣ ಕೆಲವು ಮಾನ್ಯತೆ ಕಳೆದುಕೊಂಡಿವೆ. ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಭಾಗಿಯಾದರೆ ರಾಜ್ಯಕ್ಕೆ ಇನ್ನೂ ಹೆಚ್ಚಿನ ಸ್ಥಾನಗಳು ಲಭಿಸಲಿವೆ' ಎನ್ನುತ್ತಾರೆ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು.

ಪ್ರಮುಖ ವಿಭಾಗಗಳು
- ಮ್ಯಾನೇಜ್‌ಮೆಂಟ್ ಕಾಲೇಜುಗಳ ವಿಭಾಗದಲ್ಲಿ ಅಹಮದಾಬಾದ್‌ನ ಐಐಎಂ ಮೊದಲ ಸ್ಥಾನಲ್ಲಿದ್ದರೆ ಐಐಎಂ ಬೆಂಗಳೂರು 2ನೇ ಸ್ಥಾನದಲ್ಲಿದೆ
- ಕಾನೂನು ವಿಭಾಗದಲ್ಲಿ 'ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿ-ವರ್ಸಿಟಿ'ಯು ಮೊದಲ ಸ್ಥಾನ ಪಡೆದುಕೊಂಡಿದೆ. ದೆಹಲಿಯ ನ್ಯಾಷನಲ್ ಲಾ ಯೂನಿವರ್ಸಿಟಿ ಹಾಗೂ ಹೈದರಾಬಾದ್‌ನ ಎನ್‌ಎಎಲ್‌ಎಸ್‌ಎ-ಆರ್ ಯೂನಿವರ್ಸಿಟಿ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿವೆ
- ಸಂಶೋಧನಾ ಸಂಸ್ಥೆಗಳ ವಿಭಾಗದಲ್ಲಿ ಬೆಂಗಳೂರಿನ ಐಐಎಸ್‌ಸಿ ಮೊದಲ ಹಾಗೂ ಐಐಟಿ ಮದ್ರಾಸ್ 2ನೇ ಸ್ಥಾನದಲ್ಲಿವೆ
- ಮುಕ್ತ ವಿಶ್ವವಿದ್ಯಾಲಯ ವಿಭಾಗದಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿವಿ ಮೊದಲ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿವಿ ಮೈಸೂರು ಎರಡನೇ ಸ್ಥಾನದಲ್ಲಿದೆ

ಗೋಶಾಲೆಯಾದ ಗಢವಾದ ಪೊಲೀಸ್ ಠಾಣೆ

ಗಢವಾ (ಪಿಟಿಐ): ಜಾರ್ಖಂಡ್‌ನ ಗಢವಾದ ಪೊಲೀಸ್ ಠಾಣೆ ಗೋಶಾಲೆಯಾಗಿ ಪರಿವರ್ತನೆಯಾಗಿದೆ. 170 ಜಾನುವಾರುಗಳ ಉಸ್ತುವಾರಿಯ-ನ್ನು ಪೊಲೀಸರು ವಹಿಸಿಕೊಂಡಿದ್ದಾರೆ!

'ರಾಜ್ಯದಲ್ಲಿ ಗೋಹತ್ಯೆ ನಿಷೇಧವಿದ್ದರೂ ಜಾನುವಾರುಗಳ-ನ್ನು ವಧೆ ಮಾಡಲು ಕೊಂಡೊಯ್ಯಲಾಗುತ್ತಿದೆ ಎಂದು ಬಜರಂಗದಳ ಹಾಗೂ ವಿಶ್ವ ಹಿಂದೂ ಪರಿಷದ್ ಸದಸ್ಯರು ಆರೋಪಿಸಿದ್ದರಿಂದ ಅವುಗಳನ್ನು ಠಾಣೆಗೆ ಕರೆದೊಯ್ಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮನ್ ಕುಮಾರ್ ತಿಳಿಸಿದ್ದಾರೆ.

'ಜಾನುವಾರುಗಳನ್ನು ಮಾರಾಟ ಮಾಡಲು ಗಢವಾದ ಪ್ರಸಿದ್ಧ ವಾರದ ಸಂತೆಗೆ ಕರೆದೊಯ್ಯಲಾಗುತ್ತಿತ್ತು ಎಂದು ವ್ಯಾಪಾರಿಗಳು ಹೇಳಿದ್ದಾರೆ. ಎರಡೂ ಕಡೆಯವರ ಹೇಳಿಕೆಗಳ ಬಗ್ಗೆ ತನಿಖೆ ನಡೆಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

CENTRAL INSTITUTE OF PETROCHEMICALS ENGINEERING AND TECHNOLOGY (CIPET)
CENTRE FOR SKILLING & TECHNICAL SUPPORT (CSTS)
Department of Chemicals & Petrochemicals, Ministry of Chemicals & Fertilizers, Govt. of India
No. 437/A, Hebbal Industrial Area, Mysuru - 570 016. Phone: 0821-2511903
Email: mysore@cipet.gov.in Website: https://www.cipet.gov.in

Advertisement No.: CIPET/MYS/ADMIN/Cntr-Manpower/25-26/01 Date: 05-09-2025

ADVERTISEMENT FOR ENGAGEMENT OF MANPOWER ON CONTRACT FOR FIXED PERIOD AT CIPET:CSTS, MYSURU AS LECTURER (MECH ENGG.), ASST. PLACEMENT CONSULTANT, INSTRUCTOR (SKILL DEVELOPMENT) & CONSULTANT TRAINEE (MOBILIZATION)

Central Institute of Petrochemicals Engineering & Technology (CIPET) (formerly known as Central Institute of Plastics Engineering & Technology) is a premier National Institution in the field of Polymer Science & Technology with a focus on Academic, Technology Support and Research & Application Development. CIPET:CSTS, Mysuru offers AICTE approved Diploma Programs in the fields of Plastics Technology, Mould Technology, Mould Design with CAD/ CAM and Plastics Processing & Testing.

CIPET:CSTS–MYSURU is in search of dynamic, result oriented personnel on Contract basis in the area of Academics & Placement as detailed below:

Sl.No.	Position	Remuneration payable per month	No. of positions
1.	Lecturer (Mechanical Engg.)	Rs. 30,000/- to Rs. 35,000/-	01
2.	Asst. Placement Consultant	Rs. 35,000/-	01
3.	Instructor (Skill Development)	Rs. 25,000/- to Rs. 30,000/-	10
4.	Consultant Trainee (Mobilization)	Rs. 20,000/- to Rs. 30,000/-	01

For detailed information on eligibility criteria, educational qualifications & experience, general terms and conditions and application form etc., please visit our **website: www.cipet.gov.in**

Candidate may submit their application in online mode by logging into the link **https://cbtexam.co.in/cipet-Mysuru/**

Date of opening link: 07.09.2025 Date of closing link: 28.09.2025

Sd/-
Principal Director & Head, CIPET:CSTS, Mysuru

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸತ್ಯ ಇದ್ದಲ್ಲಿ ಜ್ಞಾನ ಇರುತ್ತದೆ ಎಂಬುದು ನಿಜವಾದ ಸಂಗತಿ. ಸತ್ಯ ಇಲ್ಲದೆ ನಿಜವಾದ ಅರಿವು, ನಿಜವಾದ ಜ್ಞಾನ ಇರಲು ಸಾಧ್ಯವಿಲ್ಲ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ ವಿತರಣೆ ಉತ್ತಮ ನಡೆ, ಎಲ್ಲೆಡೆ ವಿಸ್ತರಣೆಯಾಗಲಿ

ಆರೋಗ್ಯ ಇಲಾಖೆಯು ಬೆಂಗಳೂರಿನ ಮೂರು ಸರ್ಕಾರಿ ಆಸ್ಪತ್ರೆಗಳ ರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಿಸುವ ಯೋಜನೆಯನ್ನು ಆರಂಭಿಸಿರುವುದು ಒಂದು ಉತ್ತಮ ನಡೆ. ಸರ್ಕಾರದ ಕೆಲವು ಇಲಾಖೆಗಳಾದರೂ ಜನಪರವಾಗಿ ಚಿಂತಿಸುತ್ತಿವೆ ಎನ್ನುವುದಕ್ಕೆ ಈ ಉಪಕ್ರಮವೇ ಸಾಕ್ಷಿ. 'ಒಂದೇ ರೀತಿಯ ಸಾಮಾನ್ಯ ಆಹಾರದ ಬದಲು, ರೋಗಿಗಳಿಗೆ ಅಗತ್ಯ ಪೌಷ್ಟಿಕಾಂಶ ಒದಗಿಸುವ ಆಹಾರವನ್ನು ನೀಡುವುದು ಈ ಯೋಜನೆಯ ಉದ್ದೇಶ. ರೋಗಿಗಳ ಚೇತರಿಕೆಯಲ್ಲಿ ಚಿಕಿತ್ಸೆ ಜತೆಗೆ ಪೌಷ್ಟಿಕ ಆಹಾರದ ಸೇವನೆ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೀಗಾಗಿ, ನಿರ್ದಿಷ್ಟ ಪೌಷ್ಟಿಕಾಂಶದ ಅಗತ್ಯಗಳನ್ನು ಪೂರೈಸುವ ಆಹಾರವನ್ನು ಒದಗಿಸಲಾಗುತ್ತದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ರೋಗಿಗಳ ಆರೋಗ್ಯ ಸ್ಥಿತಿ ಮತ್ತು ವಯಸ್ಸಿಗೆ ಅನುಗುಣವಾಗಿ ಪೌಷ್ಟಿಕಾಂಶದ ಅಗತ್ಯಗಳು ಭಿನ್ನ ಎಂಬುದನ್ನು ಅರಿತುಕೊಂಡಿರುವ ಆರೋಗ್ಯ ಇಲಾಖೆಯು ರೋಗಿಗಳ ವೈದ್ಯಕೀಯ ಅಗತ್ಯಗಳ ಆಧಾರದ ಮೇಲೆ ಆಹಾರವನ್ನು ವಿಂಗಡಿಸಿ, ವಿತರಿಸುವ ವ್ಯವಸ್ಥೆಯನ್ನೂ ಮಾಡಿಕೊಂಡಿದೆ. ಔಷಧ, ಗುಳಿಗೆಗಳ ವಿತರಣೆಯೊಂದಿಗೆ ಆರೋಗ್ಯ ಸುಧಾರಿಸುವುದು ಸಾಧ್ಯವಿದೆ. ಜನರು ಅಗತ್ಯ ಪ್ರಮಾಣದ ಪೋಷಕಾಂಶ ಮತ್ತು ಖನಿಜಾಂಶಯುಕ್ತ ಆಹಾರ ಸೇವಿಸುವುದು ಕೂಡ ಅಷ್ಟೇ ಅಗತ್ಯ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳು ರೋಗನಿರೋಧಕ ಶಕ್ತಿ ವೃದ್ಧಿಸಿಕೊಳ್ಳಲು ವಿಶೇಷ ಪೌಷ್ಟಿಕಾಂಶಗಳನ್ನು ಪಡೆಯುವುದು ಬಹಳ ಮುಖ್ಯ. ಈ ಯೋಜನೆಯು ಇಂಥವರ ಅಗತ್ಯಗಳಿಗೆ ಆದ್ಯತೆ ನೀಡುತ್ತದೆ. ರಕ್ತಹೀನತೆ ಮತ್ತು ಅಪೌಷ್ಟಿಕತೆ ಭಾರತವನ್ನು ದೀರ್ಘಕಾಲದಿಂದ ಕಾಡುತ್ತಿರುವ ಪ್ರಮುಖ ಸಮಸ್ಯೆಗಳು. ಉದಾಹರಣೆಗೆ, 'ಜಾಗತಿಕ ಪೌಷ್ಟಿಕತೆ ವರದಿ-2024' ಅನ್ನೇ ಗಮನಿಸಬಹುದು. ಭಾರತದ ಮಕ್ಕಳ ಪೈಕಿ ಶೇ 40ರಷ್ಟು ಮಕ್ಕಳು ಹಸಿವಿನಿಂದ ಬಳಲುತ್ತಿವೆ. ಕುಟುಂಬದಲ್ಲಿನ ಬಡತನವೇ ಅಪೌಷ್ಟಿಕತೆಗೆ ಮುಖ್ಯ ಕಾರಣವಾಗಿದೆ ಎನ್ನುತ್ತದೆ ವರದಿ. ಆಹಾರ ಸೇವನೆಯಲ್ಲಿ ಅಸಮರ್ಪಕತೆ, ಆಹಾರ ಸೇವನೆಯ ವಾತಾವರಣದಲ್ಲಿನ ಮಾಲಿನ್ಯ ಮತ್ತು ಸ್ವಚ್ಛತೆಯ ಕೊರತೆಯೂ ಆಹಾರ ಸೇವನೆ ಕೂಡ ಅಪೌಷ್ಟಿಕತೆಗೆ ಕಾರಣ. ಆಹಾರದ ಅತಿ ಹೆಚ್ಚಿನ ದರ ಕೂಡ ಹಲವರಿಗೆ ಪೌಷ್ಟಿಕ ಆಹಾರ ದೊರೆಯದಂತೆ ಮಾಡಿದೆ. ಆಸ್ಪತ್ರೆಗೆ ದಾಖಲಾದ ಬಡರೋಗಿಗಳಿಗಂತೂ ಕುಟುಂಬದವರಿಗೆ ಊಟಕ್ಕೆ ಹಣ ಹೊಂದಿಸುವುದು ಸುಲಭವಲ್ಲ. ಅಂಥವರಿಗೆಲ್ಲ ಪೌಷ್ಟಿಕ ಆಹಾರ ವಿತರಿಸುವ ಯೋಜನೆ ವರದಾನವಾಗಿದೆ.

ರಾಜಧಾನಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ ವಿತರಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೂ ಈ ಯೋಜನೆಯನ್ನು ವಿಸ್ತರಿಸಬೇಕು.

ನಮ್ಮ ಊಟದಲ್ಲಿ ಹಾಲಿನ ಉತ್ಪನ್ನಗಳು, ಮೊಟ್ಟೆ, ಮಾಂಸ ಮತ್ತು ಮೀನು, ಧಾನ್ಯಗಳು ಮತ್ತು ಬೀಜಗಳು, ವಿಟಮಿನ್ 'ಎ' ಸಮೃದ್ಧವಾಗಿರುವ ಹಣ್ಣುಗಳು ಮತ್ತು ತರಕಾರಿಗಳು, ಕಾಳು ಮತ್ತು ಗೆಡ್ಡೆಗಳು– ಇವುಗಳನ್ನು ಯಥೇಚ್ಛವಾಗಿ ಬಳಸಬೇಕು ಎನ್ನುವುದು ತಜ್ಞರು ನೀಡುವ ಸಲಹೆ. ವೈವಿಧ್ಯಮಯ ಮತ್ತು ಸಮತೋಲಿತ ಆಹಾರದ ಮಹತ್ವವನ್ನು ಜನರಿಗೆ ಅರ್ಥೈಸುವ ಕೆಲಸವನ್ನೂ ಆರೋಗ್ಯ ಇಲಾಖೆಯು ಮಾಡಬೇಕಿದೆ. ವಿಶೇಷ ಪೌಷ್ಟಿಕ ಆಹಾರ ವಿತರಿಸುವ ಯೋಜನೆಯನ್ನು ರಾಜಧಾನಿಯ ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರ ಸೀಮಿತಗೊಳಿಸದೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೂ ವಿಸ್ತರಿಸಬೇಕು. ಏಕೆಂದರೆ, ಯಾದಗಿರಿ, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಗದಗ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಅಪೌಷ್ಟಿಕತೆ ಹಾಗೂ ರಕ್ತಹೀನತೆಯಿಂದ ಬಳಲುತ್ತಿರುವವರ ಪ್ರಮಾಣ ಹೆಚ್ಚಾಗಿದೆ. ಈ ಭಾಗದಲ್ಲಿ ವಿಶೇಷ ಯೋಜನೆಗಳು ಜಾರಿಯಲ್ಲಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಈ ಸಮಸ್ಯೆಯನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಎಲ್ಲರಿಗೂ ಪೌಷ್ಟಿಕ ಆಹಾರ ತಲುಪುತ್ತಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವಂತಹ ವ್ಯವಸ್ಥೆಯೊಂದನ್ನು ಸರ್ಕಾರ ರೂಪಿಸಬೇಕಿದೆ.

ಪೌಷ್ಟಿಕ ಆಹಾರದ ಖಾತರಿಗಾಗಿ ಕುಟುಂಬದ ಬಡತನದ ಸಮಸ್ಯೆಯನ್ನೂ ಬಗೆಹರಿಸಬೇಕಿದೆ. ಬೇಕಾದಷ್ಟು ಪೌಷ್ಟಿಕತೆಯನ್ನು ಒದಗಿಸಬೇಕಿದ್ದರೆ ಮೂಲಭೂತವಾದ ಆಹಾರವಷ್ಟೇ ಸಾಲುವುದಿಲ್ಲ. ಮಹಿಳೆಯರು, ಹಸುಳೆಗಳು ಮತ್ತು ಮಕ್ಕಳಿಗಾಗಿ ಹಲವಾರು ಯೋಜನೆಗಳನ್ನು ಸರ್ಕಾರ ರೂಪಿಸಿದ್ದರೂ ಅವು ಅಗತ್ಯ ಇರುವವರಿಗೆ ಪೌಷ್ಟಿಕತೆಯನ್ನು ಒದಗಿಸುವಲ್ಲಿ ಯಶಸ್ವಿಯಾಗಿಲ್ಲ. ಉತ್ತಮ ಸ್ಥಿತಿಯಲ್ಲಿರುವ ಕುಟುಂಬಗಳು ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡುವಂತೆ ಜಾಗೃತಿ ಮೂಡಿಸುವುದು ಮತ್ತೊಂದು ಸವಾಲಾಗಿದೆ. ಹಲವು ಕುಟುಂಬಗಳಲ್ಲಿ ಪೌಷ್ಟಿಕತೆ ಕೊರತೆಯ ಮುಖ್ಯ ಕಾರಣ ಸಂಪನ್ಮೂಲದ ಅಲಭ್ಯತೆ ಅಲ್ಲ, ಬದಲಿಗೆ ಜಾಗೃತಿ ಇಲ್ಲದಿರುವುದಾಗಿದೆ. ಹಾಗಾಗಿ ಜಾಗೃತಿ ಮೂಡಿಸುವುದು ಕೂಡ ಬಹಳ ಮುಖ್ಯವಾದ ಕೆಲಸವಾಗಿದೆ. ಆರೋಗ್ಯಪೂರ್ಣ ಸಮುದಾಯವನ್ನು ನಿರ್ಮಿಸುವಲ್ಲಿ ಇಲಾಖೆಯು ಇಟ್ಟಿರುವ ಈ ಹೆಜ್ಜೆಯು ಪುಟ್ಟದಾದರೂ ಪರಿಣಾಮ ಬೀರುವಂಥದ್ದಾಗಿದೆ.

ಜಾಲತಾಣ

ಒಂದೊಳ್ಳೆ ಬದಲಾವಣೆ...

ದೆಹಲಿ ಚುನಾವಣೆ ಬರೋ ಹೊತ್ತಿಗೆ ಆದಾಯ ತೆರಿಗೆ ಸ್ಲ್ಯಾಬ್‌ನಲ್ಲಿ ಒಳ್ಳೆ ಬದಲಾವಣೆ ಆಗುತ್ತೆ. ಬಿಹಾರ ಚುನಾವಣೆ ಬರೋ ಹೊತ್ತಿಗೆ ಜಿಎಸ್‌ಟಿಯಲ್ಲಿ ಒಂದಷ್ಟು ಒಳ್ಳೆ ಬದಲಾವಣೆ ಆಗುತ್ತೆ. ಹಾಗಾಗಿ, ಈ ರೀತಿ ಆಗಾಗ ಬೇರೆ ಬೇರೆ ಸಮಯಗಳಲ್ಲಿ ಚುನಾವಣೆಗಳು ನಡೆಯುತ್ತಾ ಇರಬೇಕು. 'ಒನ್ ನೇಷನ್ ಒನ್ ಎಲೆಕ್ಷನ್' ಎಲ್ಲಾ ಆಗಿಬಿಟ್ಟರೆ ಈ ತರಹದ್ದೆಲ್ಲಾ ಆಗಬಹುದಾ ಹೇಳಿ.

ಆದರ್ಶ ಯು.ಎಂ., 'ಫೇಸ್‌ಬುಕ್'ನಿಂದ

ಕಿಡಿನುಡಿ

ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಪದೇ ಪದೇ ಎಡವಟ್ಟು ಮಾಡುತ್ತಿದೆ. ಧಾರ್ಮಿಕ ಕೆಲಸದ ವಿಚಾರದಲ್ಲಿ ಏನೇ ಮಾಡಿದರೂ ನಡೆಯುತ್ತದೆ ಎಂಬ ಧೋರಣೆ ಸರಿಯಲ್ಲ.

ವಿ. ಸೋಮಣ್ಣ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 5-9-2000

• **ಲಂಕಾದಲ್ಲಿ ಭೀಕರ ಕದನ: 344 ಮಂದಿ ಸಾವು**

ಕೊಲಂಬೊ, ಸೆಪ್ಟೆಂಬರ್ 4 (ಪಿಟಿಐ)– ಶ್ರೀಲಂಕಾ ಸೈನಿಕರು ಹಾಗೂ ಎಲ್‌ಟಿಟಿಇ ಉಗ್ರರ ನಡುವೆ ಇಂದು ನಡೆದ ಭೀಕರ ಕದನದಲ್ಲಿ 114 ಮಂದಿ ಸೈನಿಕರು ಹಾಗೂ 230 ಮಂದಿ ಉಗ್ರರು ಸೇರಿದಂತೆ 344 ಮಂದಿ ಹತ್ಯೆಗೀಡಾಗಿದ್ದಾರೆ.

ಈ ಕದನದಲ್ಲಿ ಒಟ್ಟು 1,100 ಮಂದಿ ಗಾಯಗೊಂಡಿದ್ದಾರೆ. ಶ್ರೀಲಂಕಾದಲ್ಲಿ ಅಕ್ಟೋಬರ್ 10ರಂದು ನಡೆಯುವ ಸಂಸದೀಯ ಚುನಾವಣೆ ಹಿನ್ನೆಲೆಯಲ್ಲಿ ಎಲ್‌ಟಿಟಿಇ ಉಗ್ರರನ್ನು ಉತ್ತರ ಜಾಫ್ನಾದಿಂದ ಹೊರದಬ್ಬಲು ಸೈನಿಕರು ನಡೆಸಿದ ಕಾರ್ಯಾಚರಣೆಯಲ್ಲಿ 230 ಉಗ್ರಗಾಮಿಗಳು ಮೃತಪಟ್ಟಿದ್ದಾರೆ.

• **ಇತರ ಹಿಂದುಳಿದ ಜಾತಿಗಳ ಪಟ್ಟಿಗೆ ಇನ್ನಷ್ಟು ಸೇರ್ಪಡೆ**

ನವದೆಹಲಿ, ಸೆಪ್ಟೆಂಬರ್ 4 (ಪಿಟಿಐ)– ಕರ್ನಾಟಕವೂ ಸೇರಿದಂತೆ 13 ರಾಜ್ಯಗಳಿಗೆ ಅನ್ವಯವಾಗುವ ಕೇಂದ್ರ ಸರ್ಕಾರದ ಇತರ ಹಿಂದುಳಿದ ಜಾತಿಗಳ ಪಟ್ಟಿಗೆ ಇನ್ನಷ್ಟು ಜಾತಿಗಳನ್ನು ಸೇರಿಸಲು ಇಂದು ಕೇಂದ್ರ ಸಚಿವ ಸಂಪುಟ ನಿರ್ಧರಿಸಿತು.

ಹಿಂದುಳಿದ ಜಾತಿಗಳ ರಾಷ್ಟ್ರೀಯ ಆಯೋಗ ಸಲ್ಲಿಸಿರುವ 51 ಸಲಹೆಗಳನ್ನು ಒಪ್ಪಿಕೊಳ್ಳಲಾಗಿದೆ ಎಂದು ತಿಳಿಸಿದ ಸರ್ಕಾರದ ವಕ್ತಾರರು, ಹೊಸದಾಗಿ ಸೇರಿಸಿರುವ ಜಾತಿಗಳ ಹೆಸರುಗಳನ್ನು ನೀಡಲು ನಿರಾಕರಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 5-9-1950

• **ಜಪಾನ್: ಚಂಡಮಾರುತಕ್ಕೆ 250 ಮಂದಿ ಬಲಿ**

ಟೋಕಿಯೊ, ಸೆಪ್ಟೆಂಬರ್ 4– ಪಶ್ಚಿಮ ಜಪಾನ್‌ನಲ್ಲಿ 'ಜೇನ್' ಚಂಡಮಾರುತದ ಅಬ್ಬರಕ್ಕೆ 250 ಮಂದಿ ಮೃತಪಟ್ಟಿದ್ದು, 5 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ.

ನ್ಯಾಷನಲ್ ರೂರಲ್ ಪೊಲೀಸ್ ವಿಭಾಗದಿಂದ ಈ ಮಾಹಿತಿ ಸಂಗ್ರಹಿಸಲಾಗಿದ್ದು, ಚಂಡಮಾರುತದಿಂದ ಮೃತಪಟ್ಟವರು ಮತ್ತು ನಿರಾಶ್ರಿತರಾದವರ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ. ಕಳೆದ 16 ವರ್ಷಗಳಲ್ಲಿ ಪಶ್ಚಿಮ ಜಪಾನ್‌ನಲ್ಲಿ ಚಂಡಮಾರುತವೊಂದು ಸೃಷ್ಟಿಸಿರುವ ಅತಿದೊಡ್ಡ ಅನಾಹುತ ಇದಾಗಿದೆ.

ಕುವೆಂಪು ಪಾಲಿನ ರತ್ನತ್ರಯರು

ವಿಶ್ಲೇಷಣೆ

ವೈ.ಎಸ್.ವಿ. ದತ್ತ

> ಆಧುನಿಕ ಕರ್ನಾಟಕವನ್ನು ಪ್ರಭಾವಿಸಿದ ಮಹನೀಯರಲ್ಲಿ ಕುವೆಂಪು ಮುಖ್ಯರು. ಈ ಮಹಾಚೇತನಕ್ಕೆ ಬಾಲ್ಯದಲ್ಲಿ ಪ್ರೇರಣೆ ಆಗಿದ್ದವರು, ಮೂವರು ಗುರುಗಳು! ಮಲೆನಾಡಿನ ಪುಟ್ಟ ಬಾಲಕನಲ್ಲಿ ವಿಶ್ವಮಾನವ ಪ್ರಜ್ಞೆಯ ಬೀಜಗಳು ರೂಪುಗೊಳ್ಳುವಲ್ಲಿ ಆ ಗುರುತ್ರಯರ ಪಾತ್ರ ಮಹತ್ವದ್ದು.

ಮಲೆನಾಡಿನ ದಟ್ಟ ಕಾಡಿನ, ಜನವಿದೂರವಾದ ಕುಗ್ರಾಮದಲ್ಲಿ, ಸಂಸ್ಕೃತದ ಮಾತಂತಿರಲಿ ಕನ್ನಡ-ಇಂಗ್ಲಿಷ್ ಗಂಧಗಾಳಿಯ ಸೋಂಕೇ ಇಲ್ಲದ ಶೂದ್ರ ಸಮುದಾಯದ ಬಾಲಕನೊಬ್ಬ ಬೆಳೆದ ಪರಿ ಬೆರಗು ಮೂಡಿಸುವಂತಹುದು. ಇಪ್ಪತ್ತನೆಯ ಶತಮಾನದ ಆರಂಭದ ಕಾಲ. ರಾಷ್ಟ್ರೀಯತೆ ಮಡುಗಟ್ಟುತ್ತಾ, ಬಿಡುಗಡೆಗಾಗಿ ಚಡಪಡಿಸುತ್ತಿದ್ದ ಕಾಲ. ಅಂತಹ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯದ ದ್ರಷ್ಟಾರನಾಗಿ, ಕನ್ನಡವನ್ನೂ ಕರ್ನಾಟಕವನ್ನೂ ಕನ್ನಡಿಗರನ್ನೂ ಒಗ್ಗೂಡಿಸಿ ಕಸುವು ತುಂಬಿ ನವೋದಯಕ್ಕೆ ನಾಂದಿ ಹಾಡಿದ ಕುವೆಂಪು ಮುಂದೆ ವಿಶ್ವಪ್ರಜ್ಞೆಯ ಅನಿಕೇತನ ಚೇತನರಾದರು. ಈ ದಿವ್ಯ ಭವ್ಯ ವ್ಯಕ್ತಿತ್ವದ ಬೆಳವಣಿಗೆಗೆ ಅವರ ಬಾಲ್ಯದಲ್ಲಿ ಬುನಾದಿ ಹಾಕಿರಬಹುದಾದ ವ್ಯಕ್ತಿಗಳು ಯಾರಿರಬಹುದು? ಕುತೂಹಲದಿಂದ ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕೃತಿಯ ಪುಟ ತಿರುವತೊಡಗಿದಾಗ ನನಗೆ ಗೋಚರಿಸಿದ ವ್ಯಕ್ತಿಗಳು ಮುಖ್ಯವಾಗಿ ಮೂವರು: ಮೋಸೆಸ್, ಮಂಜಪ್ಪಗೌಡ ಹಾಗೂ ಜೇಮ್ಸ್ ಕಸಿನ್ಸ್.

ಕುವೆಂಪು ತಮ್ಮ ತಂದೆ ವೆಂಕಟಯ್ಯಗೌಡರನ್ನು 'ಅಪ್ಪಯ್ಯ' ಎನ್ನುತ್ತಿದ್ದರು. ಅಪ್ಪಯ್ಯ ಅವರು ತಮ್ಮ ಮಗನ ಅಕ್ಷರಾಭ್ಯಾಸಕ್ಕೆಂದು ವ್ಯವಸ್ಥೆ ಮಾಡಿದ್ದೇ 'ಐಗಳ ಶಾಲೆ'. ಅದು ಮಗನಿಗಾಗಿ ಮಾತ್ರವಲ್ಲ; ತಮ್ಮ ಅವಿಭಕ್ತ ಕುಟುಂಬದ, ತಮ್ಮ ಮಗನ ಓರಗೆಯ ಎಲ್ಲ ಮಕ್ಕಳಿಗಾಗಿ ತಮ್ಮ ಮನೆಯ ಉಪ್ಪರಿಗೆಯಲ್ಲಿ ವ್ಯವಸ್ಥೆ ಮಾಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕರು ಬಂದು ಅಕ್ಷರ ಕಲಿಸಿ, ಕನ್ನಡದಲ್ಲಿ ತುಸು ಬರೆಯಲು ಓದಲು ಕಲಿಸಿಕೊಡುವ ವ್ಯವಸ್ಥೆ ಅದಾಗಿತ್ತು. ಆದರೆ, ಇಂಗ್ಲಿಷ್ ಕಲಿಯಲು ಮಾಡುವುದೇನು? ಹಳ್ಳಿ ಹುಡುಗರಿಗೆ ಇಂಗ್ಲಿಷ್ ಹೇಳಿಕೊಡುವವರು ಯಾರು? ಅದಕ್ಕೂ ವ್ಯವಸ್ಥೆಯಾಯಿತು. ಅದರ ಹಿನ್ನೆಲೆ ಕುವೆಂಪು ಅವರೇ ಹೇಳುವಂತೆ 'ಆಶ್ಚರ್ಯ ವಿಷಾದಾಂಚಿತ'. ಅದನ್ನು ಅವರ ಮಾತಿನಲ್ಲೇ ಕೇಳಿ:

'ಆ ಹಳ್ಳಿಗರು ಇನ್ನೆಷ್ಟು ವರ್ಷ ಕಾಯಬೇಕಿತ್ತೋ ಇಂಗ್ಲಿಷ್ ಕಲಿಯಲು? ಆದರೆ, ಮತ ಪ್ರಚಾರ ಮತ್ತು ಮತಾಂತರ ಉದ್ದೇಶವೇ ಪ್ರಧಾನವಾಗಿದ್ದ ಕ್ರೈಸ್ತ ಮಿಷನರಿಗಳು ಬ್ರಿಟಿಷ್ ಸಾಮ್ರಾಜ್ಯದ ಮತ್ತು ಕ್ರೈಸ್ತ ಧರ್ಮದ ಮುಂಚೂಣಿಯ ದಳಗಳಾಗಿ ಸಹ್ಯಾದ್ರಿಯ ಕಾಡು–ಹಳ್ಳಿಗಳಿಗೂ ಕಾಲಿಟ್ಟರು. ಸ್ಕೂಲು ಆಸ್ಪತ್ರೆಗಳನ್ನು ತೆರೆದರು. ಸಾಧ್ಯವಾದಷ್ಟು ಜನರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಕನ್ನಡ ಭಾಷೆಗೆ ಪರಿವರ್ತಿತವಾಗಿದ್ದ ಬೈಬಲ್ಲನ್ನು ಮ್ಯಾಥ್ಯೂ ಮಾರ್ಕ್ ಲ್ಯಾಕ್ ಜಾನ್ ಮೊದಲಾದ ಕ್ರಿಸ್ತ ಶಿಷ್ಯ ಸಂತರ ಸುವಾರ್ತೆಗಳನ್ನು ಓದಲು ಹಂಚಿದರು. ...ಆ ಎಲ್ಲ ಸ್ನೇಹ ಸೌಹಾರ್ದದ ಸಂಪರ್ಕಗಳ ಪರಿಣಾಮವಾಗಿಯೇ ಕ್ರೈಸ್ತ ಪಾದ್ರಿಗಳು ನಮ್ಮ ಮನೆ ಕುಪ್ಪಳಿಯ ಉಪ್ಪರಿಗೆಯ ವಿದ್ಯಾಸಂಸ್ಥೆಗೂ ಒಬ್ಬ ಇಂಗ್ಲಿಷ್ ಬಲ್ಲ ಕ್ರೈಸ್ತ ತರುಣನನ್ನು ನಮಗೆ ಮೇಷ್ಟ್ರನ್ನಾಗಿ ಕಳಿಸುವ ಕೃಪೆ ಮಾಡಿದರು. ಅವರ ಹೆಸರು ಮೋಸೆಸ್'.

ಮೋಸೆಸ್ ಮೇಷ್ಟರ ವ್ಯಕ್ತಿತ್ವದ ಪ್ರಭಾವಕ್ಕೆ ತಾವು ಒಳಗಾದುದನ್ನು ವರ್ಣಿಸುವ ಕುವೆಂಪುರವರು, ಅವರು ತಮ್ಮಂತಹ ಮಕ್ಕಳನ್ನೂ 'ಗುರು' ತಾನೆಂದು 'ಲಘು'ವಾಗಿ ಪರಿಗಣಿಸದೇ ಅನೇಕ ವಿಷಯಗಳನ್ನು ತಮ್ಮ ಮಿದುಳಿಗೆ ತುಂಬುವ ಪ್ರಯತ್ನ ಮಾಡಿದರು ಎನ್ನುತ್ತಾರೆ. ಪ್ರಾಥಮಿಕ ಹಂತದಲ್ಲಿಯೇ ಪಾಶ್ಚಾತ್ಯ ಪ್ರಭಾವದ ಆಧುನಿಕ ಪ್ರಪಂಚದ ಪರಿಚಯ ಮಾಡಿಸಿದವರೇ ಮೋಸೆಸ್ ಮೇಷ್ಟರು ಎನ್ನುತ್ತಾರೆ. 'ನಮ್ಮ ಮಿದುಳಿನ ವಿಚಾರದಲ್ಲಿ ಅದುವರೆಗೆ ಯಾರೂ ತೋರಿಸದಿದ್ದ ಗೌರವವನ್ನೂ ಹೊಣೆಗಾರಿಕೆಯನ್ನೂ ಹೊರಿಸಿದರು' ಎಂದೆನ್ನುವ ಕುವೆಂಪು, 'ಅದು ತಮ್ಮ ಬದುಕಿಗೆ ಒಂದು ಹೊಸ ಬಾಗಿಲು ತೆರೆದಂತಾಯಿತು, ಒಂದು ವಿಸ್ಮಯಕಾರಕ ನೂತನ ಪ್ರಪಂಚಕ್ಕೆ ಪ್ರವೇಶಿಸಿದಂತಾಯಿತು ನನ್ನ ಪ್ರಜ್ಞೆ' ಎನ್ನುತ್ತಾರೆ.

ಕುವೆಂಪು ತೀರ್ಥಹಳ್ಳಿಯ ಆಂಗ್ಲೊ ವರ್ನಾಕ್ಯುಲರ್ ಶಾಲೆಯಲ್ಲಿ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆ ಕಟ್ಟಿ ತೇರ್ಗಡೆ ಹೊಂದಿದ್ದರು. ಆ ದಿನಗಳಲ್ಲಿ ಕುವೆಂಪುರವರ ಮೇಲೆ ಶಿಕ್ಷಕರಲ್ಲದ ಶಿಕ್ಷಕರಾಗಿ ಪ್ರಭಾವ ಬೀರಿದವರು ಅಡಿಕೆಮಂಡಿ ಹೊಸಮನೆ ಮಂಜಪ್ಪಗೌಡರು. ಈ ಮಂಜಪ್ಪಗೌಡರು ಆ ಕಾಲದಲ್ಲಿಯೇ ಕ್ರೈಸ್ತ ಪಾದ್ರಿಗಳ ಪ್ರಭಾವದಿಂದ ಮೈಸೂರಿನ ಹಾರ್ಡ್ವಿಕ್ ಸಂಸ್ಥೆಯಲ್ಲಿದ್ದುಕೊಂಡು ಎಸ್.ಎಸ್.ಎಲ್.ಸಿ.ವರೆಗೆ ಓದಿದವರಾಗಿದ್ದರು. ನಂತರ ತಮ್ಮ ಊರಾದ ದೇವಂಗಿಗೆ ಬಂದು ಶಿವಮೊಗ್ಗದಲ್ಲಿ ಅಡಿಕೆ ವ್ಯಾಪಾರದಲ್ಲಿ ತೊಡಗಿಸಿಕೊಂಡರು. ಅವರು ಶಿವಮೊಗ್ಗದಿಂದ ದೇವಂಗಿಗೆ ಹೋಗುವಾಗಲೆಲ್ಲ ತೀರ್ಥಹಳ್ಳಿಯ ಮೂಲಕವೇ ಹೋಗಬೇಕಾಗಿತ್ತು. ಹೀಗಾಗಿ, ತೀರ್ಥಹಳ್ಳಿಯಲ್ಲಿ ಓದುತ್ತಿದ್ದ ಕುವೆಂಪು ಅವರನ್ನು ವಿಚಾರಿಸಿಕೊಳ್ಳದೇ ಇರುತ್ತಿರಲಿಲ್ಲ.

'ಮಂಜಪ್ಪಗೌಡರು ವಿದ್ಯಾವಂತರಾಗಿಯೂ ಸುಸಂಸ್ಕೃತರಾಗಿಯೂ ನಯವಿನಯವಂತರಾಗಿಯೂ ನಿರ್ಮಲ ವೇಷಭೂಷಣಗಳಿಂದ ಆಕರ್ಷಕರಾಗಿಯೂ ನನ್ನ ಮೆಚ್ಚುಗೆಗೂ ಗೌರವಕ್ಕೂ ಬಹುಬೇಗ ಪಾತ್ರರಾದರು. ಬಹುಶಃ ನನ್ನಲ್ಲಿಯೂ ಏನೋ ವಿಶೇಷತೆಯನ್ನು ಗುರುತಿಸಿದ ಅವರು, ನನ್ನೊಡನೆ ತುಂಬಾ ವಿಶ್ವಾಸದಿಂದ ವರ್ತಿಸುತ್ತಿದ್ದರು. ತಾವು ಇಂಗ್ಲಿಷ್ ಪುಸ್ತಕಗಳಲ್ಲಿ ಓದಿ ಮೆಚ್ಚಿದ್ದ ವಿಷಯಗಳನ್ನು, ಕ್ರೈಸ್ತ ಉಪಾಧ್ಯಾಯರುಗಳಿಂದಲೂ ಮತ್ತು ಅವರ ಸಂಗಸಮಾಜದಿಂದಲೂ ಕಲಿತು ತಿಳಿದ ವಿಚಾರಗಳನ್ನು ಕುರಿತು ನನ್ನೊಡನೆ ಸಮಾನಸ್ಕಂದ ನೆಂಬಂತೆ ಪ್ರಸ್ತಾಪಿಸಿ ನನ್ನ ಕುತೂಹಲವನ್ನು ಕೆರಳಿಸುತ್ತಿದ್ದರು. ಸ್ಯಾಮ್ಯುಎಲ್ ಸ್ಮೈಲ್ ಎಂಬಾತ ಬರೆದಿದ್ದ ನೀತಿಬೋಧಕ ಗ್ರಂಥಗಳಲ್ಲಿ ನಿದರ್ಶನವಾಗಿರುತ್ತಿದ್ದ ಜಗತ್ತಿನ– ಪಾಶ್ಚಾತ್ಯ ಜಗತ್ತಿನ– ಮಹಾಪುರುಷರ, ಮಹಾಲೇಖಕರ, ಮಹಾಸೇನಾನಿಗಳ, ಮಹಾಕವಿಗಳ ಜೀವನದ ಸಂಗತಿಗಳನ್ನು ಸ್ವಾರಸ್ಯವಾಗಿ ಹೇಳಿ, ನಾವೂ ಅವರಂತೆ ಆಗಬೇಕೆಂದು ಪ್ರೋತ್ಸಾಹಿಸುತ್ತಿದ್ದರು. ನನ್ನ ಅಂತಃಶ್ಚೇತನದ ಪೆಟ್ರೋಲಿಗೆ ಬೆಂಕಿ ತೋರಿಸಿದಂತಾಗುತ್ತಿತ್ತು'.

ಒಮ್ಮೆ ಮಂಜಪ್ಪಗೌಡರು ಕುವೆಂಪುರವರಿಗೆ ತಮ್ಮ ನೆನಪಿನಿಂದಲೇ ಲಾಂಗ್‌ಫೆಲೋ ಕವಿಯ 'ದಿ ಸಾಮ್ ಆಫ್ ಲೈಫ್' ಕವನವನ್ನು ಒಂದೊಂದೇ ಪದ್ಯವನ್ನಾಗಿ ಹೇಳುತ್ತಾ ಸಾಧ್ಯವಾದಲ್ಲಿ ನಿದರ್ಶನಗಳನ್ನು ಕೊಡುತ್ತಾ ಸಾಗಿದರಂತೆ. ಆ ಕವನ, ಮಂಜಪ್ಪಗೌಡರ ವಿವರಣೆ ಎಷ್ಟು ಪರಿಣಾಮಕಾರಿಯಾಗಿತ್ತು ಎಂದು ಹೇಳುವ ಕುವೆಂಪುರವರು, 'ಅದು ನನ್ನ ಆತ್ಮಕ್ಕೆ ಚೈತನ್ಯಪೂರ್ಣವಾದ ಮಂತ್ರದೀಕ್ಷೆಯನ್ನು ಕೊಟ್ಟಿತ್ತು... ಅದನ್ನು ಆಲಿಸುತ್ತಾ ಆಲಿಸುತ್ತಾ ನನ್ನ ಜೀವ ಜ್ವಾಲಾಮಯವಾಯ್ತು. ನನ್ನ ಅಂತಃಶ್ಚೇತನಕ್ಕೊಂದು ಮೊತ್ತ ಮೊದಲನೆಯ 'ಉಪನಯನ'ವಾಯ್ತು!' ಎನ್ನುತ್ತಾರೆ.

ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆಂದು ಕುವೆಂಪು ಮೈಸೂರಿಗೆ ಬಂದು ವೆಸ್ಲಿಯನ್ ಮಿಷನ್ ಹೈಸ್ಕೂಲಿಗೆ ಸೇರಿದರು. ಹೊಸಮನೆ ಮಂಜಪ್ಪಗೌಡರ ಪ್ರಭಾವವೋ, ಅಥವಾ ಕುವೆಂಪುರವರೇ ಹೇಳುವಂತೆ 'ಶೇಕಡ ಅರ್ಧವೋ ಕಾಲೋ ಜನಕ್ಕೆ ಮಾತ್ರ ಆ ಭಾಷೆ ತಿಳಿದಿದ್ದರೂ ಅದಕ್ಕೆ ಅಖಿಲ ಭಾರತೀಯ ವ್ಯಾಪ್ತಿ ಪ್ರಾಪ್ತವಾಯಿತು. ಎಲ್ಲರ ಗೌರವಕ್ಕೂ ಭಾಜನವಾಯಿತು. ಇಂಗ್ಲಿಷ್ ಜನವೆಂತೋ ಅಂತೆ ಇಂಗ್ಲಿಷ್ ಮಾತನಾಡುವವರೂ 'ಪೂಜ್ಯ'ರಾಗಿಬಿಟ್ಟರು. ದೊರೆಗಳಾದರು. ಆ ಕಾರಣದಿಂದಲೋ ಏನೋ ಆ ಭಾಷೆ ನನ್ನಂತಹ ಎಳೆಯರ ಮೇಲೆ ಪ್ರಭುತ್ವಾಧಿಕಾರ ಸ್ಥಾಪಿಸಿ, ಪೂಜ್ಯ ಸ್ಥಾನವನ್ನು ಗಿಟ್ಟಿಸಿಕೊಂಡು ಬಿಟ್ಟಿತು!'

ಈ ಮನಃಸ್ಥಿತಿಯಲ್ಲೇ ಕುವೆಂಪುರವರು ತಮ್ಮ ಹದಿನೆಂಟನೇ ವಯಸ್ಸಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯಾಗಿದ್ದಾಗಲೇ 'ಬಿಗಿನರ್ಸ್ ಮ್ಯೂರ್ಯುಝ್' ಎಂಬ ಹದಿನಾರು ಪುಟದ ಇಂಗ್ಲಿಷ್ ಕವನಗಳ ಸಂಗ್ರಹವನ್ನು ಪ್ರಕಟಿಸಿದರು. ಅಷ್ಟೇ ಅಲ್ಲ, ಅಂದಿನ ದಿಗ್ಗಜರಾದ ಎನ್.ಎಸ್. ಸುಬ್ಬರಾಯರು, ಪ್ರೊ. ಜೆ.ಸಿ. ರಾಲೋ, ಎಂ.ಎಚ್. ಕೃಷ್ಣ ಅಯ್ಯಂಗಾರ್ ಮೊದಲಾದವರಿಗೆ ತೋರಿಸಿ 'ಭೇಷ್' ಅನ್ನಿಸಿಕೊಂಡು ಬಿಟ್ಟರು. ಒಕ್ಕಲಿಗರ ಹುಡುಗನೊಬ್ಬ ಇಂಗ್ಲಿಷ್‌ನಲ್ಲಿ ಕವನ ಬರೆದಿದ್ದಾನೆ ಎಂದು ಹದಿನೆಂಟರ ಪೋರನಿಗೆ ಮಂಡ್ಯದ ಒಕ್ಕಲಿಗರ ಯುವಜನ ಸಭಾದಲ್ಲಿ ಸನ್ಮಾನವೂ ಆಯಿತು. ಇದೆಲ್ಲದರಿಂದ ಉಬ್ಬಿ ಹೋಗಿದ್ದ ಕುವೆಂಪುರವರ ಜೀವನದಲ್ಲಿ ಮಹತ್ತರ ತಿರುವು ನೀಡುವ ಘಟನೆಯೊಂದು ಜರುಗಿತು.

1924ನೇ ಇಸವಿ ಜುಲೈ 2. ಬುಧವಾರ ಎಂ.ಎಚ್. ಕೃಷ್ಣ ಅಯ್ಯಂಗಾರ್ ಅವರು ಕುವೆಂಪು ಅವರಿಗೆ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸಗಳನ್ನು ಕೊಡಲು ಬಂದಿರುವ ಐರಿಷ್ ಕವಿ, ಜೇಮ್ಸ್ ಹೆಚ್. ಕಸಿನ್ಸ್ ಅವರ ವಿಚಾರ ತಿಳಿಸಿ, ಅವರಿಗೆ ಕವನಗಳನ್ನು ತೋರಿಸುವಂತೆ ಹೇಳಿದರು. ಕಸಿನ್ಸ್ ಅವರಿಂದಲೂ ಪ್ರಶಂಸೆಯ ಮಾತುಗಳನ್ನು ನಿರೀಕ್ಷಿಸಿಯೇ ಅವರನ್ನು ಕುವೆಂಪು ಭೇಟಿಯಾದರು. ಸ್ವದೇಶಿ ಚಳವಳಿಯಿಂದ ಪ್ರಭಾವಿತರಾಗಿ ಖಾದಿ ವಸ್ತ್ರಧಾರಿಯಾಗಿದ್ದ ಕುವೆಂಪು ಅವರು, ತಮ್ಮ ಇಂಗ್ಲಿಷ್ ಕವನ ಸಂಗ್ರಹವನ್ನು ಕಸಿನ್ಸ್‌ರ ಕೈಗಿತ್ತರು. ಸ್ವಲ್ಪ ಹೊತ್ತು ಹಾಳೆಗಳನ್ನು ಮಗುಚಿ ಹಾಕಿದ ಕಸಿನ್ಸ್‌ರವರು ಸ್ವಲ್ಪ ಅಸಮಾಧಾನದಿಂದಲೇ 'ಏನಿದೆಲ್ಲಾ ಕಗ್ಗ? ಮೈಮೇಲೆ ಸ್ವದೇಶಿ ವಸ್ತ್ರ. ಬರೆದಿರುವುದು ವಿದೇಶಿ. ನಿಮ್ಮ ಭಾಷೆಯಲ್ಲಿ ಏನಾದರೂ ಬರೆಯಿರಿ' ಎಂದರು. 'ನೀವು ಇಂಗ್ಲಿಷಿನಲ್ಲಿ ಸೃಜನ ಸಾಹಿತ್ಯ ಸೃಷ್ಟಿ ಮಾಡಲಾರಿರಿ. ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಉತ್ತಮ ಸೃಜನ ಸಾಹಿತ್ಯ ಸೃಷ್ಟಿಯಾಗಬಲ್ಲುದು. ಕವಿತೆಯಲ್ಲಂತೂ ಉತ್ತಮ ಸೃಜನ ಸಾಹಿತ್ಯ ಯಾರಿಗೂ ಪರಭಾಷೆಯಲ್ಲಿ ಸಾಧ್ಯವಿಲ್ಲ' ಎಂದು ನಿಷ್ಠುರವಾಗಿ ಹೇಳಿ, ಕವನ ಸಂಗ್ರಹವನ್ನು ವಾಪಸು ಕುವೆಂಪು ಕೈಗಿತ್ತರು.

ಈ ಘಟನೆಯನ್ನು ಕುವೆಂಪು ಹೇಳುತ್ತಾ, 1924ನೇ ಜುಲೈ 2ನೇ ತಾರೀಖು ಬುಧವಾರದ ದಿನ ತಮ್ಮ ಜೀವನದಲ್ಲಿ, ವಿಶೇಷವಾಗಿ ಸಾಹಿತ್ಯ ಸಂಬಂಧವಾದ ಜೀವನದಲ್ಲಿ ಒಂದು ಸ್ಮರಣೀಯವಾದ ದಿನ ಎನ್ನುತ್ತಾರೆ. ಕಸಿನ್ಸ್‌ರವರ ಉಪದೇಶ ಚೆನ್ನಾಗಿಯೇ ಕೆಲಸ ಮಾಡಿತು. ಕನ್ನಡದಲ್ಲಿ ಬರೆಯುವ ಸ್ಫೂರ್ತಿಯ ಜೋರಿಗೆ ಸಿಕ್ಕು, ಒಂದೇ ತಿಂಗಳಲ್ಲಿ 67 ಕವನಗಳನ್ನು ರಚಿಸಿ, ತಮ್ಮ ಮೊದಲ ಕನ್ನಡ ಕವನ ಸಂಗ್ರಹ 'ಕೊಳಲು' ಕೃತಿಯನ್ನು ಪ್ರಕಟಿಸಿದರು. ಅಂದು ಕನ್ನಡದ ನವೋದಯದ ಮುಖ್ಯ ಪ್ರವಾಹದತ್ತ ತಿರುಗಿದ ಕುವೆಂಪುರವರು ಹಿಂತಿರುಗಿ ನೋಡಲೇ ಇಲ್ಲ. ವಿಶ್ವಪ್ರಜ್ಞೆಯ ಹರಿಕಾರರಾಗಿ ವಿಶ್ವ ಮಾನವತ್ವಕ್ಕೆ ಏರಿದ ಅವರಿಗೆ ನಮನ. ಅವರನ್ನು ರೂಪಿಸಿದ ಗುರುತ್ರಯರಿಗೂ ನಮನ.

ವಾಚಕರ ವಾಣಿ

ಏಕರೂಪದ ಶುಲ್ಕ ವ್ಯವಸ್ಥೆ ರೂಪಿಸಿ

ರಾಜ್ಯದ ಖಾಸಗಿ ವಿಶ್ವವಿದ್ಯಾಲಯಗಳು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ವಿಟಿಯು ನಿಗದಿಪಡಿಸಿದ ಶುಲ್ಕಕ್ಕಿಂತಲೂ ಹೆಚ್ಚು ಶುಲ್ಕ ವಸೂಲಿ ಮಾಡುತ್ತಿರುವುದು ಅನ್ಯಾಯ. ಇದರಿಂದ ವೃತ್ತಿಪರ ಶಿಕ್ಷಣದ ಆಶಯಕ್ಕೆ ಪೆಟ್ಟು ಬೀಳಲಿದೆ. ಸಿಇಟಿ ಮೂಲಕ ಸೀಟು ಹಂಚಿಕೆ ಉದ್ದೇಶವೇ ಮೂಲೆಗೆ ಸರಿಯಲಿದೆ. ಆದರೆ, ದುಬಾರಿ ಶುಲ್ಕ ವಸೂಲಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಮುಂದಾಗದಿರುವುದು ದುರದೃಷ್ಟಕರ. ರಾಜ್ಯದಲ್ಲಿ ನಾಯಿ ಕೊಡೆಯಂತೆ ತಲೆ ಎತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು ಶಿಕ್ಷಣದ ಮೂಲ ಉದ್ದೇಶವನ್ನೇ ಮರೆತು, ಹಣಗಳಿಸುವ ಏಕಮಾತ್ರ ಗುರಿ ಹೊಂದಿರುವುದು ಸಮಾಜಕ್ಕೆ ಮಾರಕ. ವಿದ್ಯಾರ್ಥಿಗಳ ನೋವು ಆಲಿಸಲು ಸರ್ಕಾರ ಮುಂದಾಗಬೇಕು. ಜೊತೆಗೆ, ಏಕರೂಪದ ಶುಲ್ಕ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಮಾನವೀಯತೆಯೇ ನಿಜ ಧರ್ಮ

'ಮಾನವೀಯತೆಯೇ ಮೊದಲಾಗಲಿ' ಎಂದು ಇತ್ತೀಚೆಗೆ ರಾಜಕೀಯ ಧುರೀಣರು, ಮಠಾಧೀಶರು ಸಾರ್ವಜನಿಕ ವೇದಿಕೆಗಳಲ್ಲಿ ಹೇಳುವುದು ಸರ್ವೇಸಾಮಾನ್ಯ. ಈ ಹಿತವಚನವು ಅವರ ಧರ್ಮ, ಜಾತಿಗಷ್ಟೆ ಸೀಮಿತಗೊಳ್ಳುತ್ತಿದೆ. ಇತರೆ ಧರ್ಮ ಮತ್ತು ಜಾತಿಯವರಿಗೆ ಇದು ಅನ್ವಯಿಸುವುದಿಲ್ಲವೇ? ಮನುಷ್ಯ ತನ್ನ ಧರ್ಮ, ಜಾತಿಯನ್ನಷ್ಟೆ ಮೇಲೆತ್ತುವುದಾದರೆ 'ಮಾನವೀಯತೆ' ಏಕೆ ಬೇಕು?

ಪುಟ್ಟಮಾದಯ್ಯ ಎಚ್.ಎಂ., ಮೈಸೂರು

ಆಹಾ... ಎಂತಹ ಘೋಷಣೆ!

ಜನಸಂಖ್ಯೆಗೆ ಅನುಗುಣವಾಗಿ ಹೊಸ ಮದ್ಯದಂಗಡಿಗಳಿಗೆ ಪರವಾನಗಿ ನೀಡುವುದಾಗಿ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಘೋಷಿಸಿದ್ದಾರೆ. ಆಹಾ... ಎಂತಹ ಘೋಷಣೆ ಇದು. ಮದ್ಯದಂಗಡಿಗಳು ಇರಬೇಕಾದದ್ದು ಜನಸಂಖ್ಯೆಗೆ ಅನುಗುಣವಾಗಿ ಅಲ್ಲ, ಕುಡುಕರ ಸಂಖ್ಯೆಗೆ ಅನುಗುಣವಾಗಿ! ಜನಸಂಖ್ಯೆಗೆ ಅನುಗುಣವಾಗಿ ಶಾಲಾ– ಕಾಲೇಜು, ಆಸ್ಪತ್ರೆ, ಆಂಬುಲೆನ್ಸ್, ಸರ್ಕಾರಿ ಬಸ್, ಉದ್ಯಾನ, ವಾಚನಾಲಯ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ, ಇಂದಿರಾ ಕ್ಯಾಂಟೀನ್, ಜನೌಷಧ ಕೇಂದ್ರಗಳು ಇರಬೇಕೇ ಹೊರತು ಮದ್ಯದಂಗಡಿಗಳಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಗೌರವ ಕೇಳಿ ಪಡೆಯುವ ಅಗತ್ಯವಿದೆಯೇ?

'ಗುರುವಿಗೆ ಗೌರವ ಕ್ಷೀಣಿಸುತ್ತಿದೆಯೆ?' ಲೇಖನದಲ್ಲಿ (ಲೇ: ಅರವಿಂದ ಚೊಕ್ಕಾಡಿ, ಪ್ರ.ವಾ., ಸೆಪ್ಟೆಂಬರ್ 4) ಶಿಕ್ಷಕರಿಗೆ ಕಡಿಮೆಯಾಗುತ್ತಿರುವ ಗೌರವದ ಬಗ್ಗೆ ವಿಶ್ಲೇಷಿಸಲಾಗಿದೆ. ನಾನು ಮೂರೂವರೆ ದಶಕ ಕಾಲ ಶಿಕ್ಷಕನಾಗಿ ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ನಿಕಟ ಸಂಪರ್ಕ ಹೊಂದಿದ್ದೆ. ಸಮಾಜದ ಉನ್ನತ ದರ್ಜೆಯ ವ್ಯಕ್ತಿಗಳ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದು. ಈ ಮಾತನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ, ಶಿಕ್ಷಕರ ಪ್ರಭಾವದಿಂದ ನಿರ್ಮಿತವಾದ ಸುಶಿಕ್ಷಿತ ಸಮಾಜವು ಅವರಿಗೆ ಸೂಕ್ತ ಗೌರವವನ್ನು ಸ್ವಯಂಪ್ರೇರಣೆಯಿಂದ ನೀಡಬೇಕೇ ಹೊರತು ಶಿಕ್ಷಕನಾದವನು ಕೇಳಿ ಪಡೆಯುವಂತಾಗಬಾರದು. ಹಾಗೆ ಆದಲ್ಲಿ ಶಿಕ್ಷಣದ ನೈಜ ಅರ್ಥಕ್ಕೆ ಬೆಲೆ ಇರಲಾರದು.

ಅನಿಲಕುಮಾರ ಮುಗಳಿ, ಧಾರವಾಡ

ತತ್ವರಹಿತ ರಾಜಕಾರಣಕ್ಕೆ ನಿದರ್ಶನ

ಹರಿಹರ ಶಾಸಕ ಬಿ.ಪಿ. ಹರೀಶ್ ಅವರು, ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಮತ್ತೊಂದೆಡೆ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಅವರು, ಪತ್ರಕರ್ತೆಯೊಬ್ಬರು ಕೇಳಿದ ಪ್ರಶ್ನೆಗೆ ನೀಡಿರುವ ಉತ್ತರ ಚರ್ಚೆಗೆ ಗ್ರಾಸವಾಗಿದೆ (ಪ್ರ.ವಾ., ಸೆಪ್ಟೆಂಬರ್ 4). ಈ ಬೆಳವಣಿಗೆಯನ್ನು ನೋಡಿದರೆ ರಾಜ್ಯದಲ್ಲಿ ಸಜ್ಜನಿಕೆಯ ರಾಜಕಾರಣಿಗಳು ಕಾಣೆಯಾಗಿದ್ದಾರೆಯೇ ಎಂಬ ಆತಂಕ ಜನಸಾಮಾನ್ಯರಿಗೆ ಕಾಡುತ್ತದೆ.

ಸರ್ಕಾರಿ ನೌಕರರು, ಪತ್ರಕರ್ತರು ಮತ್ತು ಸಮಾಜ ಸೇವಕರು ಯಾರೊಬ್ಬರ ಗುಲಾಮರಲ್ಲ ಎಂಬ ಸತ್ಯ ರಾಜಕಾರಣಿಗಳಿಗೆ ಅರಿವಾಗಬೇಕಿದೆ. ಮೌಲ್ಯಗಳ ಬಗ್ಗೆ ಮಕ್ಕಳಿಗಿಂತ ಮೊದಲು ರಾಜಕಾರಣಿಗಳಿಗೆ ಕಲಿಸಬೇಕಾದ ತುರ್ತಿದೆ. ಜನಪ್ರತಿನಿಧಿಗಳು ಸೌಜನ್ಯವಾಗಿ ವರ್ತಿಸಬೇಕೆ ಹೊರತು ದೌರ್ಜನ್ಯದ ಮಾತುಗಳನ್ನು ಆಡುವುದು ಶೋಭೆ ತರುವುದಿಲ್ಲ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ರೋಸ್ಟರ್ ಬಿಂದು ರಚನೆಯಲ್ಲಿ ಅನ್ಯಾಯ

ಹಿಂದಿನ ಸರ್ಕಾರವು 2022ರ ಡಿಸೆಂಬರ್ 28ರಂದು ರೋಸ್ಟರ್ ಬಿಂದುಗಳನ್ನು 100 ಬಿಂದುಗಳಿಗೆ ನಿಗದಿಪಡಿಸಿ ಆದೇಶ ಹೊರಡಿಸಿತ್ತು. ಈ ಆದೇಶದಲ್ಲಿ ರೋಸ್ಟರ್ ಬಿಂದು 1, 7, 14, 21, 25, 27, 34, 40, 47, 54, 60, 67, 73, 76, 80, 87 ಮತ್ತು 93ನೇ ಬಿಂದುಗಳನ್ನು ಪರಿಶಿಷ್ಟ ಜಾತಿಗೆ ನಿಗದಿಪಡಿಸಿತ್ತು. ಒಳ ಮೀಸಲಾತಿ ಘೋಷಣೆಯ ಬಳಿಕ ಸರ್ಕಾರವು ರೋಸ್ಟರ್ ಬಿಂದುಗಳನ್ನು ಮರು ನಿಗದಿಪಡಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಹಳ ಅನ್ಯಾಯವಾಗುವ ರೀತಿಯಲ್ಲಿ ರೋಸ್ಟರ್ ಬಿಂದು ರಚಿಸಲಾಗಿದೆ. ಪ್ರಸ್ತುತ 1, 9, 15, 23, 27, 33, 41, 46, 49, 53, 59, 67, 75, 81, 89, 93 ಮತ್ತು 96ನೇ ಬಿಂದುಗಳನ್ನು ನಿಗದಿಪಡಿಸಲಾಗಿದೆ. ಇದರ ಹಿಂದೆ ಈ ಸಮುದಾಯಗಳಿಗೆ ಉದ್ಯೋಗ ಮತ್ತು ಬಡ್ತಿ ಮೀಸಲಾತಿ ದೊರೆಯದಂತೆ ಮಾಡುವ ಹಾಗೂ ಮುಖ್ಯವಾಹಿನಿಗೆ ಬರುವುದನ್ನು ತಡೆಗಟ್ಟುವ ಷಡ್ಯಂತ್ರ ಅಡಗಿರುವುದು ಸ್ಪಷ್ಟ. ಮುಖ್ಯಮಂತ್ರಿ ಅವರು, ಇದನ್ನು ಸರಿಪಡಿಸಲು ಕ್ರಮವಹಿಸಬೇಕಿದೆ.

ಶ್ರೀನಿವಾಸ ಡಿ. ಮಣಗಳ್ಳಿ, ಕಲಬುರಗಿ

ಚುರುಮುರಿ

ಬ್ರೈನ್ ಮ್ಯಾಪಿಂಗ್!

• ಬಿ.ಎನ್. ಮಲ್ಲೇಶ್

'ಮಾನ್ಯ ಬ್ರೇಕಿಂಗ್ ನ್ಯೂಸ್ ಟಿ.ವಿ ಪತ್ರಕರ್ತ ತೆಪರೇಸಿಯವರೇ ನಿನ್ನೆ ಹರಟೆಕಟ್ಟೆಗೆ ಯಾಕೆ ಬರಲಿಲ್ಲ? ಕ್ಲಿಪಿಂಗ್ ಇಂಟ್ರೊ ಮಾಡಾಕೆ ಚೀನಾಕ್ಕೇನಾದ್ರು ಹೋಗಿದ್ರಾ?' ಹರಟೆಕಟ್ಟೆಯಲ್ಲಿ ಗುಡ್ಡೆ ನಾಟಕೀಯವಾಗಿ ಕೇಳಿದ.

'ನಿನ್ನೆಲ್ಲಿ, ನಿನ್ನೆ ನಮ್ ಟಿ.ವಿ ಆಫೀಸಲ್ಲಿ ಬ್ರೈನ್ ಮ್ಯಾಪಿಂಗ್ ಇತ್ತು ಕಣಲೆ, ಅದ್ಕೆ ಬರ್ಲಿಲ್ಲ' ಎಂದ ತೆಪರೇಸಿ.

'ಏನು? ಬ್ರೈನ್ ಮ್ಯಾಪಿಂಗಾ? ಯಾರಿಗೆ?'

'ಎಲ್ಲ ಪಕ್ಷದ ರಾಜಕಾರಣಿಗಳಿಗೂ ಬ್ರೈನ್ ಮ್ಯಾಪಿಂಗ್ ಇಟ್ಕಂಡಿದ್ವಿ ಕಣಲೆ, ಸ್ಪೆಷಲ್ ಎಪಿಸೋಡು, 'ನಮ್ಮಲ್ಲೇ ಮೊದಲು' ಅಂತ...'

'ಹೌದಾ? ಎಲ್ರು ಬಂದಿದ್ರಾ? ಡಾಕ್ಟ್ರನು ಕರೆಸಿದ್ರಾ?'

'ಎಲ್ಲ ಪಕ್ಷದೋರೂ ಬಂದಿದ್ರು. ಡಾಕ್ಟ್ರು ಎಲ್ರಿಗೂ ಬ್ರೈನ್ ಮ್ಯಾಪಿಂಗ್ ಮಾಡಾಕೆ ಅವರ ತೆಲಿ ಸ್ಕ್ಯಾನ್ ಮಾಡ್ತಿದ್ದಂಗೆ ಶಾಕ್ ಆಗೋದ್ರು...'

'ಶಾಕ್ ಆಗೋದ್ರಾ? ಯಾಕೆ? ಯಾರಿಗೂ ಒಳಗೆ ಮಿದುಳು ಇರಲಿಲ್ವಂತಾ?'

'ಹಂಗಲ್ಲ, ಎಲ್ಲಾ ಪಕ್ಷದವರ ಮಿದುಳೂ ಒಂದೇ ತರ ಕಂಡವಂತೆ. ಒಂದೇ ಮ್ಯಾಪು, ಒಂದೇ ಸ್ಕೆಚ್ಚು!'

'ಸ್ಕೆಚ್ಚಾ? ಏನದು?'

'ವಿರೋಧಿಗಳನ್ನ ಹೆಂಗೆ ಮಟ್ಟ ಹಾಕಬೇಕು, ತಾನು ಹೆಂಗೆ ಕುರ್ಚಿ ಹಿಡೀಬೇಕು ಅನ್ನೋ ಸ್ಕೆಚ್ಚು...'

'ವಿರೋಧಿಗಳು ಅಂದ್ರೆ ವಿರೋಧ ಪಕ್ಷದೋರಾ?' ಮಂಜಮ್ಮ ಕೇಳಿದಳು.

'ಅಲ್ಲ, ಅವರ ಪಕ್ಷದಲ್ಲೇ ಇರೋ ಅವರ ವಿರೋಧಿಗಳು...'

'ರಾಜಕಾರಣದಲ್ಲಿ ಈಗ ನಡೀತಿರೋದೂ ಅದೇ ಬಿಡು.. ಅದಿರ್ಲಿ, ರಾಜಕಾರಣಿಗಳ ಬ್ರೈನ್ ಒಳಗೆ ಬೇರೇನೂ ಕಾಣಿಸ್ಲಿಲ್ವಂತಾ?'

'ಎಲ್ಲರ ಬ್ರೈನ್‌ನಲ್ಲೂ ಅವರ ಒಂದೊಂದೇ ಕಾಲು ಕಂಡವಂತೆ..'

'ಒಂದೊಂದೇ ಕಾಲಾ? ಮತ್ತೆ ಇನ್ನೊಂದು?'

'ಅದನ್ನ ಅವರು ಗುಟ್ಟಾಗಿ ಬೇರೆ ಬೇರೆ ಪಕ್ಷಗಳಲ್ಲಿ ಇಟ್ಟಿರಬೇಕು, ಡಾಕ್ಟರಿಗೆ ಕಾಣಿಸ್ಲಿಲ್ಲಂತೆ..'

'ಯಪ್ಪಾ, ಹೀಗೂ ಉಂಟೆ?' ಎಂದ ಕೊಟ್ರ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಹಿಂಸೆ ಸುಲಭವಾಗಿ ನಗದಾಗಬಲ್ಲ ವಸ್ತು

ಹಿಂಸೆ ಇಲ್ಲದ ಜಾಗವನ್ನು, ಹಿಂಸೆ ಇಲ್ಲದ ಮನಸ್ಸನ್ನು ಪ್ರಸ್ತುತ ಗುರ್ತಿಸಲು ಸಾಧ್ಯವೆ? ಸಮಾಜದ ಎಲ್ಲ ಹಂತಗಳಲ್ಲೂ ಹಿಂಸೆ ಆಳವಾಗಿ ಬೇರುಬಿಟ್ಟಿದೆ.

• ನಡಹಳ್ಳಿ ವಸಂತ್

'ಗೆಲುವಿನ ಸೂತ್ರ: ಹಿಂಸೆಯ ಮುಖ್ಯಪಾತ್ರ' ಲೇಖನದಲ್ಲಿ (ಲೇ: ವಿಶಾಖ ಎನ್., ಪ್ರ.ವಾ., ಸೆಪ್ಟೆಂಬರ್ 1) ಇವತ್ತಿನ ಚಲನಚಿತ್ರಗಳು ಹಿಂಸೆಯನ್ನು ಹೇಗೆ ಯಶಸ್ಸಿನ ಸೂತ್ರವಾಗಿ ಬಳಸುತ್ತಿವೆ ಎನ್ನುವುದರ ಪ್ರತಿಪಾದನೆ ಸಮರ್ಪಕವಾಗಿದೆ. ಹೀಗಾಗುತ್ತಿರುವುದು ಕೇವಲ ಆಕಸ್ಮಿಕವಲ್ಲ ಅಥವಾ ಆಶ್ಚರ್ಯಕರವೂ ಆಗಬೇಕಾಗಿಲ್ಲ. ಇವತ್ತು ಚಲನಚಿತ್ರಗಳನ್ನು ಕಲಾ ಮಾಧ್ಯಮಕ್ಕಿಂತ ಹೆಚ್ಚಾಗಿ ಒಂದು ಉದ್ಯಮ ಎಂದು ಗುರುತಿಸಿದ ಮೇಲೆ ಲಾಭವನ್ನು ನಿರೀಕ್ಷಿಸುವುದು ಅದರ ಸಹಜ ಗುಣವಾಗಬೇಕಲ್ಲವೇ? ಆದರೆ, ಒಟ್ಟಾರೆ ಸಮಾಜವಾಗಿ ನಾವೆಲ್ಲಾ ಯೋಚಿಸಬೇಕಾಗಿರುವುದು– ಹಿಂಸೆ ಸುಲಭವಾಗಿ ಮಾರಾಟಗೊಳ್ಳುವ ಸ್ಥಿತಿಯನ್ನು ನಾವು ಹೇಗೆ ತಲುಪಿದ್ದೇವೆ ಎನ್ನುವ ಕುರಿತಾಗಿ.

ಸುತ್ತಲಿನ ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕುದಿಯುತ್ತಿರುವ ಹಿಂಸೆಯ ಮೂಲಗಳನ್ನು ನಮ್ಮೆಲ್ಲರಲ್ಲೂ ಗುರುತಿಸಲು ಸಾಧ್ಯ. ಇವತ್ತು ಅಸಮಾನತೆ ಎಲ್ಲಾ ಹಂತಗಳಲ್ಲಿ ತಾಂಡವವಾಡುತ್ತಿದೆ. ಜಾತಿ, ಉಪಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆ, ಆರ್ಥಿಕತೆ, ಲಿಂಗ ಅಸಮಾನತೆ, ವಿದ್ಯೆಯ ಅವಕಾಶಗಳು, ನಗರಿಗರು ಮತ್ತು ಹಳ್ಳಿಗರು, ಹೀಗೆ ಎಲ್ಲಾ ಹಂತಗಳಲ್ಲಿಯೂ ಅಸಮಾನತೆ ಇದೆ. ಪಕ್ಷಭೇದವಿಲ್ಲದೆ ಎಲ್ಲಾ ಆಡಳಿತ ವ್ಯವಸ್ಥೆಗಳು ಈ ಅಸಮಾನತೆಗಳನ್ನು ನಿವಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ.

ಚುನಾವಣಾ ಪ್ರಣಾಳಿಕೆಯ ಹೇಳಿಕೆಗಳು ಐದು ವರ್ಷ ನರಳಿ, ಮುಂದಿನ ಚುನಾವಣೆಯಲ್ಲಿ ಹೊಸ ನುಡಿಗಟ್ಟಿನಲ್ಲಿ ಕಂಗೊಳಿಸುತ್ತವೆ. ಆರ್ಥಿಕ ಅಸಮಾನತೆಯಂತೂ ಹೆಚ್ಚುತ್ತಲೇ ಇದೆ. ಸರ್ಕಾರಗಳ ಆರ್ಥಿಕ ನೀತಿಗಳು ಸಂಪತ್ತಿನ ಕೇಂದ್ರೀಕರಣಕ್ಕೆ ಒತ್ತು ನೀಡುತ್ತಿರುವುದು ಇವತ್ತು ಗುಟ್ಟಾಗಿ ನಡೆಯದೆ ಅಭಿವೃದ್ಧಿ, ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿದೆ.

ಅಸಮಾನತೆಯ ಕೆಳಹಂತದಲ್ಲಿರುವವರು ತಮ್ಮೊಳಗೆ ಮೂಡುವ ಹತಾಶೆ, ಅಸಹಾಯಕತೆಗಳನ್ನು ಎಷ್ಟೆಂದು ಸಹಿಸಲು ಸಾಧ್ಯ? ಇಂತಹ ಹತಾಶೆ, ಅಸಹಾಯಕತೆಗಳು ಅವರ ಮನಸ್ಸಿನಲ್ಲಿ ಹಿಂಸೆಯನ್ನು ಪ್ರಚೋದಿಸುವುದು ಸಹಜ. ಆದರೆ, ಅಂತಹ ಹಿಂಸೆಯನ್ನು ವ್ಯಕ್ತರೂಪಕ್ಕೆ ತಂದಾಗ ಆಗುವ ಪರಿಣಾಮಗಳ ಅರಿವು ಹೆಚ್ಚಿನ ಜನರಲ್ಲಿ ಇರುತ್ತದೆ. ಕೆಲವರು ಹತಾಶೆ, ಅಸಹಾಯಕತೆಗಳನ್ನು ತಾತ್ಕಾಲಿಕವಾಗಿ ನೆನಪಿನ ಭಿತ್ತಿಯಿಂದ ಹೊರತಳ್ಳಲು ನಶೆಯ ವಸ್ತುಗಳಿಗೆ ಮೊರೆ ಹೋಗಬಹುದು. ಉಳಿದವರಿಗೆ ಅನ್ಯಾಯದ ವಿರುದ್ಧ ರಕ್ತಸಿಕ್ತ ಹೋರಾಟ ನಡೆಸುವ ಚಲನಚಿತ್ರಗಳ ನಾಯಕರು ತಮ್ಮ ನೈಜ ಅಭಿವ್ಯಕ್ತಿಯ ರೂಪವಾಗಿ ಮುದ ನೀಡುತ್ತಾರೆ. ವಾಸ್ತವದಲ್ಲಿ ಸಿಗಲಾಗದ ಸಾಮಾಜಿಕ ನ್ಯಾಯವನ್ನು ಪರದೆಯ ಮೇಲೆ ಆನಂದಿಸುತ್ತಾರೆ.

ಬಾಲ್ಯದಲ್ಲಿ ಹಳ್ಳಿಯ ಟೆಂಟ್‌ಗಳಲ್ಲಿ ಸಿನಿಮಾ ನೋಡುವಾಗ ಅತ್ಯಾಚಾರ ಮಾಡಲು ಯತ್ನಿಸಿದ ವಜ್ರಮುನಿಯನ್ನು, ರಾಜ್‌ಕುಮಾರ್ ಹಿಡಿದು ಚಚ್ಚುವಾಗ ಪ್ರೇಕ್ಷಕರು 'ಹಾಕು ಅವನಿಗೆ, ಬಿಡಬೇಡ, ಇನ್ನೂ ಹಾಕು' ಎಂದು ಜೋರಾಗಿ ಕೂಗುತ್ತಿದ್ದ ಸಂದರ್ಭಗಳು ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಇವತ್ತೂ ಕೂಡ ನಾಯಕ ಕ್ರೂರಿಗಳನ್ನು ಸದೆಬಡಿಯುತ್ತಿರುವಾಗ ಚಿತ್ರಮಂದಿರದಲ್ಲಿ ಪ್ರೇಕ್ಷಕರು ಉದ್ವೇಗದ ನಡುವೆಯೂ ಒಂದು ರೀತಿಯ ಬಿಡುಗಡೆಯ ನಿಟ್ಟುಸಿರು ಬಿಡುತ್ತಿರುವುದನ್ನು ಗಮನಿಸಿದ್ದೇನೆ.

ಎಲ್‌ಕೆಜಿ ಪ್ರವೇಶ ಪರೀಕ್ಷೆಯಿಂದ ಹಿಡಿದು ಪ್ರತಿ ಹಂತದಲ್ಲಿಯೂ ಇವತ್ತು ಬದುಕು ಸ್ಪರ್ಧಾತ್ಮಕವಾಗಿದೆ. ಇದು ಮೇಲುನೋಟಕ್ಕೆ ಅನಿವಾರ್ಯ ಎನ್ನಿಸಬಹುದು. ಆದರೆ, ಸ್ಪರ್ಧೆಯಲ್ಲಿ ಹಿಂದುಳಿದವರು ಏನಾಗುತ್ತಿದ್ದಾರೆ ಎಂದು ಸಮಾಜ ನೋಡುತ್ತಲೇ ಇಲ್ಲವಲ್ಲ. ಸ್ಪರ್ಧೆಯಲ್ಲಿ ಗೆದ್ದವರನ್ನು 'ಸಾಧಕರು' ಎಂದು ವೈಭವೀಕರಿಸುತ್ತಾ ಅವರೊಳಗೆ ಅನಗತ್ಯ ಹೆಚ್ಚುಗಾರಿಕೆಯನ್ನು ಮತ್ತು ಹಿಂದೆ ಬಿದ್ದವರ ಮನಸ್ಸಿನಲ್ಲಿ ಕೀಳರಿಮೆಯನ್ನು ತುಂಬುತ್ತಿದ್ದೇವೆ. ಸ್ಪರ್ಧೆಯಲ್ಲಿ ಮುಂದಿರುವವರು ಅದಕ್ಕೆ ತಾವು ಜನ್ಮಜಾತ ಹಕ್ಕುದಾರರು ಎನ್ನುವಂತೆ ವರ್ತಿಸುತ್ತಿದ್ದಾರೆ. ಸ್ಪರ್ಧೆಯಲ್ಲಿ ಹಿಂದೆ ಬಿದ್ದವರಿಗೆ ಸಹಾಯ ಮಾಡಿ, ಸಾಧ್ಯವಿರುವಷ್ಟು ಅವರನ್ನೂ ಮೇಲೆತ್ತಿ ಆತ್ಮಸ್ಥೈರ್ಯ ತುಂಬುವುದು ತಮ್ಮ ಜವಾಬ್ದಾರಿ ಎಂಬ ಅರಿವನ್ನು ಸಾಧಕರಿಗೆ ಮೂಡಿಸುವುದು ನಮ್ಮ ಶೈಕ್ಷಣಿಕ ವ್ಯವಸ್ಥೆ, ಸರ್ಕಾರ ಹಾಗೂ ಸಮಾಜದ ಜವಾಬ್ದಾರಿ ಆಗಬೇಕಲ್ಲವೇ? ಹಾಗೆ ಮಾಡದೆ ಹಿಂದೆ ಬಿದ್ದವರನ್ನು ಹೆಚ್ಚು ಹೆಚ್ಚು ನರಳಿಸುವುದು ಅವಮಾನಿಸುವುದರಿಂದ ಅವರೊಳಗೆ ಹಿಂಸೆ ಕೆರಳುವುದನ್ನು ತಪ್ಪಿಸುವುದು ಅಸಾಧ್ಯ.

ಇವತ್ತಿನ ಮಕ್ಕಳಲ್ಲಿ ಸರ್ವಮಾನ್ಯವಾಗಿರುವ ವಿಡಿಯೊ ಗೇಮ್‌ಗಳಲ್ಲಿ ಹಿಂಸೆಯೇ ಮೂಲಧಾತು. ಇಂತಹ ವಿಡಿಯೊ ಗೇಮ್‌ಗಳನ್ನು ವಯಸ್ಕರು ಕೂಡ ಆನಂದಿಸುವುದು ಸರ್ವೇಸಾಮಾನ್ಯ. ನಮ್ಮ ರಾಜಕೀಯ ನಾಯಕರು ಬಳಸುವ ಭಾಷೆಯಲ್ಲಿ ಕೂಡ 'ಹೊಡಿ ಬಡಿ ಕಡಿ'ಗಳೇ ಕೇಳಿಬರುತ್ತವೆ. ಮಾತೆತ್ತಿದ್ದರೆ ಎಫ್‌ಐಆರ್, ಗಲ್ಲುಶಿಕ್ಷೆ, ಗಡೀಪಾರುಗಳಿಗೆ ಒತ್ತಾಯಿಸಲಾಗುತ್ತದೆ. 'ಕ್ರಿಯೆಗೆ ಪ್ರತಿಕ್ರಿಯೆ' ಎಂದು ಹಿಂಸೆಯನ್ನು ಸಮರ್ಥಿಸಲಾಗುತ್ತಿದೆ.

ಧಾರ್ಮಿಕ ನಾಯಕರ ಭಾಷೆಯಲ್ಲಿ ವ್ಯಕ್ತವಾಗುವ ಹಿಂಸೆ ಕೂಡ ಅವರ ಮನದಾಳದಲ್ಲಿ ಇರುವುದೇ ಎನ್ನುವುದು ನಿಸ್ಸಂದೇಹ. ಸಾಮಾಜಿಕ ಮಾಧ್ಯಮಗಳಲ್ಲಿ ಕೇಳಿಬರುವ ಹಿಂಸೆಯು ನಾಜಿ ಹತ್ಯಾಕಾಂಡದ ಶಬ್ದರೂಪದಂತಿರುತ್ತದೆ. ಮಹಿಳೆಯರ ಮೇಲಿನ ಅತ್ಯಾಚಾರವನ್ನು ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚುವುದು ನಮ್ಮ ಸಮಾಜದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವ ಎಲ್ಲಾ ರೀತಿಯ ಹಿಂಸೆಯ ಅತ್ಯಂತ ಕೆಳಹಂತವಿರಬಹುದೇ?

ಭಾರತದ ಪುಣ್ಯಭೂಮಿ ಹಿಂಸೆಗೆ ಇಷ್ಟು ಫಲವತ್ತಾಗಿರುವಾಗ ಫಸಲುಣ್ಣುವವರನ್ನು ತಡೆಯುವುದಾದರೂ ಹೇಗೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಿಎಸ್‌ಟಿ ಇಳಿಕೆ ತಗ್ಗೀತೇ ಜನರ ಹೊರೆ?

ತೆರಿಗೆ ಕಡಿತ: ಯಾವುದು, ಎಷ್ಟು?



● * ₹2,500ಕ್ಕಿಂತ ಕಡಿಮೆ ಬೆಲೆಯವು ● ** ಹೋಟೆಲ್ ಕೊಠಡಿಗಳ ಬಾಡಿಗೆ ಶುಲ್ಕ ₹7,500ವರೆಗೆ

ದುಬಾರಿ



1. ಕಾರ್ಬೋನೇಟೆಡ್, ಏರೇಟೆಡ್ ಪಾನೀಯ

- ಕೋಕಾ ಕೋಲಾ, ಪೆಪ್ಸಿ ಸೇರಿದಂತೆ ಇತರ ಕಾರ್ಬೋನೇಟೆಡ್, ಕೆಫೀನ್‌ಯುಕ್ತ ಪಾನೀಯಗಳ ಮೇಲಿನ ಜಿಎಸ್‌ಟಿಯನ್ನು ಶೇ 28ರಿಂದ ಶೇ 40ಕ್ಕೆ ಹೆಚ್ಚಿಸಲಾಗಿದೆ
- ಇತರ ಆಲ್ಕೋಹಾಲ್‌ಯೇತರ ಪಾನೀಯಗಳ ಮೇಲಿನ ತೆರಿಗೆಯನ್ನು ಶೇ 18ರಿಂದ ಶೇ 40ಕ್ಕೆ ಹೆಚ್ಚಿಸಲಾಗಿದೆ
- ರಾಸಾಯನಿಕ ಕ್ರಿಯೆಗೆ ಒಳಪಡಿಸಿದ (ಏರೇಟೆಡ್) ನೀರು ಸೇರಿದಂತೆ ಸಕ್ಕರೆ ಅಂಶ ಸೇರಿಸಿದ/ಇತರೆ ಸ್ವೀಟನರ್ ವಸ್ತುಗಳು ಅಥವಾ ಸುವಾಸಿತ ಪಾನೀಯಗಳ ಮೇಲಿನ ಜಿಎಸ್‌ಟಿಯನ್ನು ಶೇ 40ಕ್ಕೆ ಏರಿಸಲಾಗಿದೆ

2. ತಂಬಾಕು ಉತ್ಪನ್ನಗಳು: ಸದ್ಯ ತಂಬಾಕಿನ ಉತ್ಪನ್ನಗಳಿಗೆ ಶೇ 28ರಷ್ಟು ಜಿಎಸ್‌ಟಿ ಮತ್ತು ಪರಿಹಾರ ಸೆಸ್ ಇದೆ. ಕೋವಿಡ್–19 ಸಮಯದಲ್ಲಿ ರಾಜ್ಯಗಳಿಗೆ ಆಗಿರುವ ನಷ್ಟವನ್ನು ತುಂಬುವುದಕ್ಕಾಗಿ ಪಡೆದಿರುವ ಸಾಲವನ್ನು ಮರುಪಾವತಿ ಮಾಡುವವರೆಗೆ ಹಾಲಿ ತೆರಿಗೆಯೇ ಮುಂದುವರಿಯಲಿದೆ

3. ವಿರಾಮ ಚಟುವಟಿಕೆಗಳು: ರೇಸ್ ಕ್ಲಬ್, ಗುತ್ತಿಗೆ ಮತ್ತು ಬಾಡಿಗೆ ಸೇವೆ, ಕ್ಯಾಸಿನೊ/ಕುದುರೆ ರೇಸ್/ಐಪಿಎಲ್ ಟಿಕೆಟ್ ಮೇಲಿನ ಜಿಎಸ್‌ಟಿಯನ್ನು ಶೇ 28ರಿಂದ ಶೇ 40ಕ್ಕೆ ಹೆಚ್ಚಿಸಲಾಗಿದೆ

ರೈತರಿಗೆ ಅನುಕೂಲ

ಕೃಷಿ, ತೋಟಗಾರಿಕೆಗೆ ಸಂಬಂಧಿಸಿದ ಯಂತ್ರೋಪಕರಣಗಳು ಹಾಗೂ ಇನ್ನಿತರ ವಸ್ತುಗಳ ಮೇಲಿನ ತೆರಿಗೆಯನ್ನು ಶೇ 18 ಮತ್ತು ಶೇ 12ರಿಂದ ಶೇ 5ಕ್ಕೆ ಇಳಿಸಿರುವುದರಿಂದ ರೈತರಿಗೆ ಅನುಕೂಲವಾಗಲಿದೆ.

ಟ್ರ್ಯಾಕ್ಟರ್ ಟೈರ್, ಬಿಡಿ ಭಾಗಗಳ ಮೇಲಿನ ತೆರಿಗೆಯನ್ನು ಶೇ 18ರಿಂದ ಶೇ 5ಕ್ಕೆ ಇಳಿಸಲಾಗಿದೆ. ಟ್ರ್ಯಾಕ್ಟರ್, ಡೀಸೆಲ್ ಎಂಜಿನ್‌ಗಳು ಸೇರಿದಂತೆ ಇತರೆ ಉಪಕರಣಗಳು, ನಿರ್ದಿಷ್ಟ ಜೈವಿಕ–ಕೀಟನಾಶಕಗಳು, ಸೂಕ್ಷ್ಮಪೋಷಕಾಂಶಗಳು, ಹನಿ ನೀರಾವರಿ, ತುಂತುರು ನೀರಾವರಿ ವ್ಯವಸ್ಥೆಗೆ ಬಳಸುವ ವಸ್ತುಗಳ ಮೇಲಿನ ಜಿಎಸ್‌ಟಿ ಶೇ 12ರಿಂದ 5ಕ್ಕೆ ಇಳಿದಿದೆ. ರಸಗೊಬ್ಬರಗಳ ತಯಾರಿಕೆಯಲ್ಲಿ ಬಳಸುವ ಸಲ್ಫ್ಯೂರಿಕ್ ಆ್ಯಸಿಡ್, ನೈಟ್ರಿಕ್ ಆ್ಯಸಿಡ್ ಮತ್ತು ಅಮೋನಿಯಗಳ ಮೇಲಿನ ತೆರಿಗೆಯನ್ನು ಶೇ 18ರಿಂದ 5ಕ್ಕೆ ಇಳಿಸಲಾಗಿದೆ. ಇದರಿಂದಾಗಿ ರಸಗೊಬ್ಬರಗಳ ಬೆಲೆಯಲ್ಲಿ ಇಳಿಕೆಯಾಗ ಬಹುದು ಎಂದು ಅಂದಾಜಿಸಲಾಗಿದೆ.

ದೇಶದ ಜನರ ಬಹುದಿನಗಳ ಬೇಡಿಕೆಗೆ ಕೇಂದ್ರ ಸರ್ಕಾರ ಕೊನೆಗೂ ಸ್ಪಂದಿಸಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಂತಗಳನ್ನು ಕಡಿಮೆ ಮಾಡುವುದರ ಜೊತೆಗೆ, ಹಲವು ವಸ್ತುಗಳ ಮೇಲಿನ ಜಿಎಸ್‌ಟಿ ದರವನ್ನು ಗಣನೀಯವಾಗಿ ಕಡಿತಗೊಳಿಸುವ ನಿರ್ಧಾರವನ್ನು ಜಿಎಸ್‌ಟಿ ಮಂಡಳಿ ಕೈಗೊಂಡಿದೆ. ಇದೇ 22ರಿಂದ ಹೊಸ ತೆರಿಗೆಗಳು ಅನ್ವಯವಾಗಲಿವೆ. ಜನರ ಜೀವನವನ್ನು ಸುಧಾರಿಸಲು ಮತ್ತು ಆತ್ಮನಿರ್ಭರ ಭಾರತ ನಿರ್ಮಾಣಕ್ಕಾಗಿ ಈ ಸುಧಾರಣೆ ತರಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ತೆರಿಗೆ ಕಡಿತದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಎಂದು ಸರ್ಕಾರ ಕಂಪನಿಗಳಿಗೆ ತಿಳಿಸಿದೆ. ವಿವಿಧ ವಲಯಗಳ ಕಂಪನಿಗಳು ಕೂಡ ಜಿಎಸ್‌ಟಿ ಪರಿಷ್ಕರಣೆಯ ಕುರಿತಾಗಿ ಸಕಾರಾತ್ಮಕವಾಗಿ ಸ್ಪಂದಿಸಿವೆ. ಜನರು ಕೂಡ ತಮ್ಮ ಜೇಬಿನ ಮೇಲೆ ಬಿದ್ದಿರುವ ಹೊರೆ ಕೊಂಚವಾದರೂ ಕಡಿಮೆಯಾಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ

ಪ್ರಜಾವಾಣಿ ವಾರ್ತೆ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಗಳನ್ನು ತರಲಾಗುತ್ತದೆ ಎಂಬ ಘೋಷಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ದಿನ ದೆಹಲಿಯ ಐತಿಹಾಸಿಕ ಕೆಂಪುಕೋಟೆಯಲ್ಲಿ ಮಾಡಿದ ಭಾಷಣದಲ್ಲಿ ಪ್ರಕಟಿಸಿದ್ದರು. ಜಿಎಸ್‌ಟಿ ವ್ಯವಸ್ಥೆಯಲ್ಲಿನ ಸುಧಾರಣೆಗಳು ದೇಶವಾಸಿಗಳಿಗೆ ದೀಪಾವಳಿಯ ಉಡುಗೊರೆ ರೂಪದಲ್ಲಿ ಇರಲಿವೆ ಎಂದು ಅವರು ಹೇಳಿದ್ದರು. ಈಗ ಆ ಉಡುಗೊರೆಗಳಿಗೆ ಅಧಿಕೃತ ರೂಪ ಸಿಕ್ಕಿದೆ.

ನಿತ್ಯ ಬಳಕೆಯ ಹತ್ತು ಹಲವು ಉತ್ಪನ್ನಗಳು, ಸೇವೆಗಳ ಮೇಲಿನ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ತೆಗೆದುಕೊಂಡಿದೆ. ಈ ತೀರ್ಮಾನಗಳು ಇದೇ ತಿಂಗಳ 22ರಿಂದಲೇ ಜಾರಿಗೆ ಬರಲಿವೆ. ಅಂದರೆ, ಗ್ರಾಹಕರಿಗೆ ದೀಪಾವಳಿಯಿಂದ ಅಲ್ಲ, ನವರಾತ್ರಿಯಿಂದಲೇ ಉಡುಗೊರೆ ಸಿಗಲಿದೆ. ಈ ಕೊಡುಗೆಯ ಲಾಭ ತಮ್ಮ ಜೇಬಿನ ಮೇಲಿನ ಹೊರೆ ಕಡಿಮೆ ಮಾಡಬಹುದು ಎಂಬ ನಿರೀಕ್ಷೆಯಲ್ಲಿ ದೇಶದ ಜನರಿದ್ದಾರೆ.

‘ಜಿಎಸ್‌ಟಿ ಸುಧಾರಣೆಯು ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು ಮಾಡಲಿದೆ. ಬೇಡಿಕೆಯಲ್ಲಿನ ಹೆಚ್ಚಳವು ದೇಶದ ಜಿಡಿಪಿ ಬೆಳವಣಿಗೆ ದರವನ್ನು ಮುಂದಿನ ನಾಲ್ಕರಿಂದ ಆರು ತ್ರೈಮಾಸಿಕಗಳ ಅವಧಿಯಲ್ಲಿ ಶೇ 1.2ರವರೆಗೆ ಹೆಚ್ಚಿಸುವ ಶಕ್ತಿ ಹೊಂದಿದೆ. ಅಮೆರಿಕವು ಭಾರತದ ಸರಕುಗಳ ಮೇಲೆ ಹೇರಿರುವ ಭಾರಿ ಪ್ರಮಾಣದ ತೆರಿಗೆಯಿಂದ ಆಗಿರುವ ಸಮಸ್ಯೆಯನ್ನು ನಿಭಾಯಿಸಲು ಜಿಎಸ್‌ಟಿ ಸುಧಾರಣೆಗಳು ಅವಕಾಶ ಕಲ್ಪಿಸಿಕೊಡಲಿವೆ’ ಎಂದು ಪ್ರಭುದಾಸ್ ಲೀಲಾಧರ್ ಬ್ರೋಕರೇಜ್ ಸಂಸ್ಥೆ ಅಂದಾಜು ಮಾಡಿದೆ.

ಎಫ್‌ಎಂಸಿಜಿ ವಲಯ ಏನು ಹೇಳಿದೆ?: ಹಬ್ಬಗಳ ಋತು ಹತ್ತಿರವಾಗಿರುವ ಈ ಹೊತ್ತಿನಲ್ಲಿ ಜಿಎಸ್‌ಟಿ ಮಂಡಳಿ ತೆಗೆದುಕೊಂಡಿರುವ ಈ ತೀರ್ಮಾನವನ್ನು ದೇಶದ ಎಫ್‌ಎಂಸಿಜಿ (ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳು) ವಲಯವು ಸ್ವಾಗತಿಸಿದೆ. ಎಫ್‌ಎಂಸಿಜಿ ಉತ್ಪನ್ನಗಳ ಬೆಲೆಯಲ್ಲಿ ಶೇ 10ರವರೆಗೆ ಇಳಿಕೆ ಆಗಬಹುದು, ಇಡೀ ವಲಯವು ಶೇ 3ರವರೆಗೆ ಬೆಳವಣಿಗೆ ಕಾಣಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

‘ನಿತ್ಯ ಬಳಕೆಯ ಶಾಂಪೂ, ಸೋಪು, ಟೂತ್‌ಪೇಸ್ಟ್ ಇನ್ನಷ್ಟು ಅಗ್ಗವಾಗುವುದಲ್ಲದೆ, ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳ ಆಗುವುದಕ್ಕೂ ಈಗಿನ ತೀರ್ಮಾನವು ಕಾರಣವಾಗಲಿದೆ. ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿ ಬೇಡಿಕೆಯು ಹೆಚ್ಚಾಗಲಿದೆ’ ಎಂದು ಡಾಬರ್ ಕಂಪನಿಯ ಸಿಇಒ ಮೋಹಿತ್ ಮಲ್ಹೋತ್ರಾ ಅಭಿಪ್ರಾಯಪಟ್ಟಿದ್ದಾರೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ಪೂರ್ಣ ಪ್ರಮಾಣದಲ್ಲಿ ವರ್ಗಾಯಿಸಲು ಕಂಪನಿಯು ಬದ್ಧವಾಗಿ ಇರುವುದಾಗಿ ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್‌ನ ಸಿಎಫ್‌ಒ ಆಸಿಫ್ ಮಲಬಾರಿ ಹೇಳಿದ್ದಾರೆ. ಜಿಎಸ್‌ಟಿ ಮಂಡಳಿಯ ತೀರ್ಮಾನವು ಮುಂದಿನ ಎರಡು ತ್ರೈಮಾಸಿಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಬೇಡಿಕೆಯ ಪ್ರಮಾಣವನ್ನು ಶೇ 10ರವರೆಗೆ ಹೆಚ್ಚು ಮಾಡಲಿದೆ ಎಂದು ಅಖಿಲ ಭಾರತ ಗ್ರಾಹಕ ಬಳಕೆ ಉತ್ಪನ್ನಗಳ ವಿತರಕರ ಒಕ್ಕೂಟ (ಎಐಸಿಪಿಡಿಎಫ್) ಅಂದಾಜು ಮಾಡಿದೆ.

ತೆರಿಗೆ ಇಳಿಕೆಯ ನಂತರ ಎಫ್‌ಎಂಸಿಜಿ ಕಂಪನಿಗಳು ಜನಪ್ರಿಯ ಬೆಲೆ ಶ್ರೇಣಿಯ ಪೊಟ್ಟಣಗಳಲ್ಲಿ ಮಾರಾಟ ಮಾಡುವ ಉತ್ಪನ್ನಗಳ ತೂಕವನ್ನು ತುಸು ಹೆಚ್ಚಿಸುವ ಸಾಧ್ಯತೆ ಇದೆ. ಅಲ್ಲದೆ ಕಂಪನಿಗಳು ಕೆಲವು ದೊಡ್ಡ ಪೊಟ್ಟಣಗಳಲ್ಲಿ ಮಾರಾಟವಾಗುವ ಉತ್ಪನ್ನಗಳ ಬೆಲೆಯನ್ನು ಇಳಿಕೆ ಮಾಡುವ ಸಾಧ್ಯತೆಯೂ ಇದೆ ಎಂದು ಕಂಪನಿಗಳ ಪ್ರತಿನಿಧಿಗಳು ಹೇಳಿದ್ದಾರೆ. ಆದರೆ, ಈಗಾಗಲೇ ವಿತರಕರ ಬಳಿ ತಲುಪಿರುವ ಹಾಗೂ ಬಹುಕಾಲ ಕೆಡದೆ ಉಳಿಯುವ ಉತ್ಪನ್ನಗಳ ಬೆಲೆಯನ್ನು ಹೇಗೆ ತಗ್ಗಿಸುವುದು ಎಂಬ ವಿಚಾರದಲ್ಲಿ ಕಂಪನಿಗಳಿಗೆ ಸ್ಪಷ್ಟತೆ ಸಿಗುತ್ತಿಲ್ಲ.

ವಾಹನ ಉದ್ಯಮದ ಸ್ವಾಗತ: ನಿರ್ದಿಷ್ಟ ವರ್ಗಗಳಿಗೆ ಸೇರಿದ ವಾಹನಗಳ ಮೇಲಿನ ತೆರಿಗೆ ತಗ್ಗಿಸುವ ತೀರ್ಮಾನವು ಮೊದಲ ಬಾರಿಗೆ ವಾಹನ ಖರೀದಿಸುವವರಿಗೆ, ಮಧ್ಯಮ ಆದಾಯ ಹೊಂದಿರುವ ಕುಟುಂಬಗಳಿಗೆ ಅನುಕೂಲ ಮಾಡಿಕೊಡುತ್ತದೆ ಎಂದು ವಾಹನ ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ.

ತೆರಿಗೆ ಇಳಿಕೆ ಕಾರಣದಿಂದಾಗಿ ಆರಂಭಿಕ ಹಂತದ ಕಾರುಗಳು ಅಗ್ಗವಾಗಲಿವೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘದ (ಎಸ್‌ಐಎಎಂ) ಅಧ್ಯಕ್ಷ ಶೈಲೇಶ್ ಚಂದ್ರ ಹೇಳಿದ್ದಾರೆ. ಜಿಎಸ್‌ಟಿ ಮಂಡಳಿಯ ತೀರ್ಮಾನವು ದ್ವಿಚಕ್ರ ವಾಹನ ವಲಯಕ್ಕೂ ಪೂರಕವಾಗಿದೆ ಎಂದು ಟಿವಿಎಸ್ ಮೋಟರ್ ಕಂಪನಿಯ ಅಧ್ಯಕ್ಷ ಸುದರ್ಶನ್ ವೇಣು ಹೇಳಿದ್ದಾರೆ.

ಔಷಧಗಳ ಬೆಲೆ ಇಳಿಕೆ: ಜೀವರಕ್ಷಕ ಹಾಗೂ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಔಷಧಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿರಿಸಲಾಗಿದೆ. ಇದರಿಂದಾಗಿ ರೋಗಿಗಳಿಗೆ ನೇರ ಪ್ರಯೋಜನ ಲಭಿಸಲಿದೆ ಎಂದು ಔಷಧ ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ. ಹಲವು ಔಷಧಗಳ ಮೇಲಿನ ತೆರಿಗೆ ಶೇ 12ರಷ್ಟು ಇದ್ದಿದ್ದನ್ನು ಶೇ 5ಕ್ಕೆ ತಗ್ಗಿಸಲಾಗಿದೆ. ಇದರಿಂದಾಗಿ ಒಟ್ಟಾರೆ ಚಿಕಿತ್ಸಾ ವೆಚ್ಚವು ಕಡಿಮೆ ಆಗುವ ನಿರೀಕ್ಷೆ ಇದೆ. ಆರೋಗ್ಯ ವಿಮೆ ಹಾಗೂ ಜೀವ ವಿಮೆಯ ಮೇಲೆ ಶೂನ್ಯ ಜಿಎಸ್‌ಟಿ ನಿಗದಿ ಮಾಡಿರುವ ಕ್ರಮವು ಬಹಳ ಒಳ್ಳೆಯದು ಎಂದು ಅಪೋಲೊ ಹೆಲ್ತ್ ಕಂಪನಿಯ ಕಾರ್ಯಕಾರಿ ಅಧ್ಯಕ್ಷೆ ಶೋಭನಾ ಕಾಮಿನೇನಿ ಹೇಳಿದ್ದಾರೆ.

ಆದರೆ, ತೆರಿಗೆ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂಬ ಕೇಂದ್ರ ಸರ್ಕಾರದ ಪ್ರಸ್ತಾವ ಮತ್ತು ಕಡಿಮೆ ಮಾಡುವ ಜಿಎಸ್‌ಟಿ ಮಂಡಳಿಯ ತೀರ್ಮಾನದ ಪ್ರಯೋಜನವು, ತೆರಿಗೆ ಇಳಿಕೆಯ ಲಾಭವನ್ನು ಕಂಪನಿಗಳು ಗ್ರಾಹಕರಿಗೆ ವರ್ಗಾಯಿಸುವುದರ ಮೇಲೆ ನಿಂತಿದೆ.

ಆಧಾರ: ಪಿಟಿಐ, ಪ್ರಭುದಾಸ್ ಲೀಲಾಧರ್ ವರದಿ

ಇನ್ನಷ್ಟು ಸುಧಾರಣೆ ಬೇಕು



ನಾವು ಈಗ ಕದನ ಕಣ ಪ್ರವೇಶಿಸಿದ್ದೇವೆ... ಹೆಚ್ಚಿನ ಹಾಗೂ ತ್ವರಿತವಾದ ಸುಧಾರಣಾ ಕ್ರಮಗಳು ಬೇಡಿಕೆಯನ್ನು ಮತ್ತು ಹೂಡಿಕೆಯನ್ನು ಹೆಚ್ಚಿಸಲು ಇರುವ ಖಚಿತ ಮಾರ್ಗೋಪಾಯಗಳು. ಇವು ಅರ್ಥ ವ್ಯವಸ್ಥೆಯನ್ನು ಹಿಗ್ಗಿಸುತ್ತವೆ, ಜಗತ್ತಿನಲ್ಲಿ ಭಾರತದ ದನಿ ಇನ್ನಷ್ಟು ಗಟ್ಟಿಯಾಗಿ ಕೇಳುವಂತೆ ಮಾಡುತ್ತವೆ. ಆದರೆ, ಇನ್ನಷ್ಟು ಸುಧಾರಣೆಗಳ ಅಗತ್ಯ ಇದೆ

ಆನಂದ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ ಸಮೂಹದ ಅಧ್ಯಕ್ಷ

ಆರ್ಥಿಕತೆಗೆ ಉತ್ತೇಜನ

ಹಣಕಾಸು ಮತ್ತು ವಿತ್ತೀಯ ನೀತಿಗಳು ಒಂದಕ್ಕೊಂದು ಪೂರಕವಾಗಿ ಸಾಗುತ್ತಿವೆ. ಆರ್‌ಬಿಐ ರೆಪೊ ದರ ತಗ್ಗಿಸಿರುವುದು ಹಾಗೂ ಈಗ ಜಿಎಸ್‌ಟಿ ದರವನ್ನು ಸರ್ಕಾರ ಇಳಿಕೆ ಮಾಡಿರುವುದು ದೇಶದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲಿವೆ. ರೆಪೊ ದರ ಇಳಿಕೆಯ ಪ್ರಯೋಜನವು ವರ್ಗಾವಣೆ ಕಂಡಂತೆಲ್ಲ, ಮಾರುಕಟ್ಟೆಯಲ್ಲಿ ಬೇಡಿಕೆಯು ಸಹಜವಾಗಿಯೇ ಹೆಚ್ಚಳ ಕಾಣಲಿದೆ

ಸದಾಫ್ ಸಯೀದ್, ಮುತ್ತೂಟ್ ಮೈಕ್ರೊಫೈನಾನ್ಸ್‌ನ ಸಿಇಒ

ಐಷಾರಾಮಿ ಕಾರುಗಳೂ ಅಗ್ಗ

ಜಿಎಸ್‌ಟಿ ಇಳಿಕೆಯಿಂದ ಸಣ್ಣ ಕಾರುಗಳ ಬೆಲೆಯು ₹1 ಲಕ್ಷದವರೆಗೆ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ. ಅಲ್ಲದೆ, ಮಧ್ಯಮ ಹಾಗೂ ಐಷಾರಾಮಿ ವರ್ಗದ ವಾಹನಗಳ ಮೇಲಿನ ಜಿಎಸ್‌ಟಿಯನ್ನು ಶೇ 40ಕ್ಕೆ ಏರಿಸಲಾಗಿದ್ದರೂ ಅವುಗಳಿಗೆ ಸೆಸ್ ಇಲ್ಲದಿರುವ ಕಾರಣಕ್ಕೆ ಆ ವಾಹನಗಳ ಬೆಲೆ ಕೂಡ ಕಡಿಮೆ ಆಗುವ ನಿರೀಕ್ಷೆ ಇದೆ.

ಪ್ರಸ್ತುತ ಐಷಾರಾಮಿ ಕಾರುಗಳಿಗೆ ಶೇ 28ರಷ್ಟು ಜಿಎಸ್‌ಟಿಯ ಜೊತೆಗೆ ಶೇ 17ರಿಂದ ಶೇ 22ರವರೆಗೆ ಸೆಸ್ ವಿಧಿಸಲಾಗುತ್ತಿದೆ. ಇದರಿಂದ ಒಟ್ಟಾರೆ ಕಾರುಗಳ ಮೇಲೆ ಶೇ 45–ಶೇ 50ರಷ್ಟು ತೆರಿಗೆ ಬಿದ್ದಂತಾಗುತ್ತಿತ್ತು. ಶೇ 28 ಜಿಎಸ್‌ಟಿಯನ್ನು ಶೇ 40ಕ್ಕೆ ಏರಿಸಿದ್ದರೂ ಹೆಚ್ಚುವರಿ ಸೆಸ್ ಅನ್ನು ಕೈಬಿಡಲಾಗಿದೆ. ಹಾಗಾಗಿ, ಖರೀದಿದಾರರು ಶೇ 40ರಷ್ಟು ತೆರಿಗೆ ಪಾವತಿ ಮಾಡಿದರೆ ಸಾಕು. ಶೇ 5ರಿಂದ ಶೇ 10ರಷ್ಟು ತೆರಿಗೆ ಉಳಿತಾಯವಾಗಲಿದೆ. 1,200 ಸಿಸಿಗಿಂತ ಹೆಚ್ಚು ಸಾಮರ್ಥ್ಯದ ಎಂಜಿನ್ ಹೊಂದಿರುವ ಎಲ್ಲ ಕಾರುಗಳು, ಎಸ್‌ಯುವಿಗಳಿಗೂ ಇದು ಅನ್ವಯವಾಗಲಿದೆ.

‘ಹೆಚ್ಚುವರಿಯಾಗಿ ಸೆಸ್ ವಿಧಿಸದೆ, ಐಷಾರಾಮಿ ಕಾರುಗಳ ಮೇಲೆ ಶೇ 40ರಷ್ಟು ತೆರಿಗೆ ನಿಗದಿ ಮಾಡಿರುವುದು ಒಳ್ಳೆಯ ವಿಚಾರ’ ಎಂದು ಬಿಎಂಡಬ್ಲ್ಯು ಗ್ರೂಪ್ ಇಂಡಿಯಾ ಅಧ್ಯಕ್ಷ ಹಾಗೂ ಸಿಇಒ ಹರ್ದೀಪ್ ಸಿಂಗ್ ಬ್ರಾರ್ ಹೇಳಿದ್ದಾರೆ.

ಆದರೆ, 350 ಸಿ.ಸಿ.ಗಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯದ ದ್ವಿಚಕ್ರ ವಾಹನಗಳ ಮೇಲೆ ಶೇ 40ರಷ್ಟು ತೆರಿಗೆ ವಿಧಿಸುವುದರಿಂದ ಮಧ್ಯಮ ಹಾಗೂ ಐಷಾರಾಮಿ ವರ್ಗದ ದ್ವಿಚಕ್ರ ವಾಹನ ಮಾದರಿಗಳ ಮಾರಾಟದ ಮೇಲೆ ಕೆಟ್ಟ ಪರಿಣಾಮ ಆಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿನ ಬದಲಾವಣೆಗಳಿಂದಾಗಿ ಟ್ರಕ್, ಬಸ್ಸುಗಳ ಬೆಲೆ ಕೂಡ ಕಡಿಮೆ ಆಗಲಿದೆ ಎಂದು ಅಶೋಕ್ ಲೇಲ್ಯಾಂಡ್‌ನ ಸಿಇಒ ಶೇನು ಅಗರ್ವಾಲ್ ಹೇಳಿದ್ದಾರೆ.

ಆರ್‌ಎಐ ಆಕ್ಷೇಪ

₹2,500ಕ್ಕಿಂತ ಹೆಚ್ಚಿನ ಬೆಲೆಯ ಉಡುಪುಗಳಿಗೆ ತೆರಿಗೆ ಶೇ 12ರಷ್ಟು ಇದ್ದಿದ್ದನ್ನು ಶೇ 18ಕ್ಕೆ ಹೆಚ್ಚಿಸಿರುವ ಕ್ರಮಕ್ಕೆ ಭಾರತೀಯ ರಿಟೇಲರ್‌ಗಳ ಸಂಘದಿಂದ (ಆರ್‌ಎಐ) ಆಕ್ಷೇಪ ವ್ಯಕ್ತವಾಗಿದೆ. ಈ ಕ್ರಮದಿಂದಾಗಿ ಮಧ್ಯಮ ವರ್ಗದವರಿಗೆ ತೊಂದರೆ ಆಗಲಿದೆ ಎಂದು ಅದು ಹೇಳಿದೆ.

₹2,500ಕ್ಕಿಂತ ಹೆಚ್ಚಿನ ಬೆಲೆಯ ಉಡುಪುಗಳನ್ನು ಕೂಡ ಜನಸಾಮಾನ್ಯರು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುತ್ತಾರೆ. ಈ ಬೆಲೆಯ ಉಡುಪುಗಳು ಹಾಗೂ ಪಾದರಕ್ಷೆಗಳಿಗೆ ಶೇ 18ರಷ್ಟು ತೆರಿಗೆ ವಿಧಿಸುವುದರಿಂದ ಮಧ್ಯಮ ವರ್ಗಕ್ಕೆ ತೊಂದರೆ ಆಗಿ, ಸಂಘಟಿತ ರಿಟೇಲ್ ವಲಯಕ್ಕೆ ಧಕ್ಕೆ ಉಂಟಾಗಲಿದೆ ಎಂದು ಆರ್‌ಎಐ ಹೇಳಿಕೆ ತಿಳಿಸಿದೆ.

ಕರುಣೆ, ಸಹಾನುಭೂತಿಯೇ ಮನುಷ್ಯನ ಲಕ್ಷಣ

ರೇಣುಕಾ ನಿಡಗುಂದಿ

ಒಮ್ಮೆ ಒಬ್ಬ ವ್ಯಕ್ತಿ ವಯಸ್ಸಾದ ಝೆನ್ ಗುರುವಿನ ಬಳಿಗೆ ಬಂದು ತನ್ನ ಜೀವನದ ಸಮಸ್ಯೆಗಳು ಮತ್ತು ನೋವುಗಳ ಬಗ್ಗೆ ವಿವರಿಸಿದ. ವೃದ್ಧ ಗುರು ಆ ಮನುಷ್ಯನ ಮಾತನ್ನು ಎಚ್ಚರಿಕೆಯಿಂದ ಆಲಿಸಿ ಅವನಿಗೆ ಒಂದು ಹಿಡಿ ಉಪ್ಪನ್ನು ಕೊಟ್ಟರು. ಆಗ ಆ ವ್ಯಕ್ತಿಗೆ ಗೊಂದಲ ಉಂಟಾಯಿತು. ಕಷ್ಟ ಹೇಳಿಕೊಂಡರೆ ಇವರು ಉಪ್ಪು ಕೊಡುತ್ತಾರಲ್ಲ. ಈ ಮಾಂತ್ರಿಕ ಉಪ್ಪು ತನ್ನ ಜೀವನದ ಎಲ್ಲಾ ನೋವು ಮತ್ತು ಸಂಕಟಗಳನ್ನು ತೊಳೆಯುತ್ತದೆಯೇ ಎಂದು ಆತ ಆಶ್ಚರ್ಯಪಟ್ಟನು. ನಂತರ ಗುರುಗಳು ಅವನಿಗೆ ಒಂದು ಲೋಟ ನೀರಿಗೆ ಒಂದು ಹಿಡಿ ಉಪ್ಪನ್ನು ಹಾಕಿ ಕುಡಿಯಲು ಸೂಚಿಸಿದರು. ವ್ಯಕ್ತಿಯು ಗುರುವು ಹೇಳಿದಂತೆಯೇ ಮಾಡಿದನು. ‘ಅದರ ರುಚಿ ಹೇಗಿದೆ’ ಎಂದು ಗುರು ಕುತೂಹಲದಿಂದ ಕೇಳಿದರು. ‘ಅಸಹ್ಯಕರ, ಸ್ವಲ್ಪವೂ ಚೆನ್ನಾಗಿಲ್ಲ’ ಆತ ಉಪ್ಪು ನೀರನ್ನು ಉಗುಳುತ್ತಾ ಹೇಳಿದನು.

ಆತನ ಪ್ರತಿಕ್ರಿಯೆಯನ್ನು ನೋಡಿ ಗುರು ನಕ್ಕರು. ನಂತರ ಅವರು ಅಲ್ಲೇ ಇದ್ದ ಯುವಕನಿಗೆ ಅದೇ ಉಪ್ಪನ್ನು ಹತ್ತಿರದ ಸರೋವರದಲ್ಲಿ ಹಾಕಲು ಹೇಳಿದರು. ಯುವಕ ಮತ್ತು ವ್ಯಕ್ತಿ ಇಬ್ಬರೂ ಹತ್ತಿರದ ಸರೋವರಕ್ಕೆ ನಡೆದರು, ಯುವಕ ಉಪ್ಪನ್ನು ಸರೋವರಕ್ಕೆ ಸುರಿದನು. ‘ಈಗ ಸರೋವರದ ನೀರನ್ನು ಕುಡಿಯಿರಿ’ ಎಂದು ಗುರು ಇಬ್ಬರಿಗೂ ಸೂಚಿಸಿದರು. ಆ ಯುವಕ ಯಾವುದೇ ತೊಂದರೆಯಿಲ್ಲದೆ ಸರೋವರದ ನೀರನ್ನು ಕುಡಿದನು. ‘ಹೇಗನಿಸುತ್ತಿದೆ’ ಎಂದು ಗುರು ಕೇಳಿದರು. ಆಗ ಮೊದಲಿನ ವ್ಯಕ್ತಿ ಬಾಯಾರಿಕೆಯಿಂದ ಸರೋವರದ ತಂಪಾದ ನೀರನ್ನು ಸಂಪೂರ್ಣವಾಗಿ ಆನಂದಿಸಿದನು. ‘ಇದು ಚೆನ್ನಾಗಿದೆ. ಆದರೆ ನನಗೆ ಉಪ್ಪು ರುಚಿ ಗೊತ್ತಾಗುತ್ತಿಲ್ಲ’ ಎಂದು ಯುವಕ ಉತ್ತರಿಸಿದ.

ನಂತರ ಗುರುಗಳು ತೊಂದರೆಗೀಡಾದ ವ್ಯಕ್ತಿಯ ಪಕ್ಕದಲ್ಲಿ ಕುಳಿತು, ಅವನ ಕೈಗಳನ್ನು ಹಿಡಿದು, ‘ಜೀವನದಲ್ಲಿ ನೋವು ಶುದ್ಧ ಉಪ್ಪಿನಂತೆ. ಅದು ಹಾಗೆಯೇ ಇರುತ್ತದೆ. ಆದರೆ ನಾವು ಅನುಭವಿಸುವ ಪ್ರಮಾಣ ಅಥವಾ ನಮ್ಮ ಸಂಕಟವು ನಾವು ಅದನ್ನು ಹಾಕುವ ಪಾತ್ರೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ, ನೀವು ನೋವಿನಲ್ಲಿರುವಾಗ, ನೀವು ನಿಮ್ಮ ಇಂದ್ರಿಯಗಳನ್ನು ವಿಸ್ತರಿಸಬಹುದು. ಕರುಣೆ ಮತ್ತು ಸಹಾನುಭೂತಿಯಿಂದ ನಿಮ್ಮ ಹೃದಯವನ್ನು ದೊಡ್ಡದಾಗಿಸಿ. ಲೋಟದಂತೆ ಇರುವುದನ್ನು ನಿಲ್ಲಿಸಿ ಮತ್ತು ಸರೋವರದಂತೆ ಇರಲು ಪ್ರಯತ್ನಿಸಿ. ಆಗ ನಿಮ್ಮ ಜೀವನದಲ್ಲಿನ ತೊಂದರೆಗಳು ನಿಮಗೆ ಹೆಚ್ಚು ದುಃಖವನ್ನು ಉಂಟುಮಾಡುವುದಿಲ್ಲ’ ಎಂದರು.

ಅದಕ್ಕೇ ದಾಸರು, ‘ಈಸಬೇಕು ಇದ್ದು ಜಯಿಸಬೇಕು’ ಎಂದು ಹಾಡಿದ್ದಾರೆ. ಪ್ರತಿಯೊಬ್ಬ ಮನುಷ್ಯನಿಗೂ ಕಷ್ಟಗಳು ಎದುರಾಗುತ್ತವೆ. ಅದರಲ್ಲೇ ಮುಳುಗಿ ಅಳುತ್ತ ಕುಳಿತರೆ ಪ್ರಯೋಜನವಿಲ್ಲ. ಸುತ್ತಲೂ ಕಣ್ಣಾಡಿಸಿ ನಮಗಿಂತಲೂ ಹೆಚ್ಚು ದುಃಖದಲ್ಲಿ ಇರುವವರು ಬಹಳಷ್ಟಿದ್ದಾರೆ. ನಾವು ನೊಂದವರಿಗೆ ಕರುಣೆ, ಸಹಾನುಭೂತಿಯನ್ನು ತೋರಿದಾಗ, ಅವರ ಕಷ್ಟಗಳಲ್ಲಿ ನಿಮ್ಮೊಂದಿಗಿದ್ದೇವೆ ಎಂದು ಸಂತೈಸಿದಾಗ ಸಿಗುವ ಸಂತೋಷ ಪದಗಳಿಗೆ ಸಿಗುವಂಥದ್ದಲ್ಲ. ಪ್ರೀತಿ, ಕರುಣೆಗಳೇ ನಮ್ಮನ್ನು ಮನುಷ್ಯರನ್ನಾಗಿಸುತ್ತವೆ.

ಪದಬಂಧ 6155

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬರವಿದ್ದಾಗ ನೋಡಿದ ಆಕಾಶ (3)
3.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
5.ಕಚಕ್ಕನೆ ಕತ್ತರಿಸಿರುವ ತಲೆಗೂದಲು (2)
6.ನೂಲುವ ಸಾಧನವಿಲ್ಲಿ ಉಲ್ಟಾ ಕಾಣುತ್ತಿದೆ (2)
7.ರಾಜ್ಯದ ಚುನಾಯಿತ ಶಾಸಕರ ಮಂಡಲಿ (5)
8.ಮಜದಲ್ಲಿರುವ ಚಕ್ರವರ್ತಿ! (4)
11.ಕರ್ನಾಟಕ ಸಂಗೀತ ಪದ್ಧತಿಯ ಪಿತಾಮಹ ಎಂದು ಹೆಸರಾಗಿರುವ ದಾಸರು (4)
13.ರೇಷ್ಮೆನಗರವೆಂದು ಖ್ಯಾತಿ ಗಳಿಸಿದ ಜಿಲ್ಲೆ (5)
16.ಬುದ್ಧಿವಂತನಿಲ್ಲಿ ತಿರುಗಿದ್ದಾನಲ್ಲಾ (2)
17.ತಮಾಲ ವೃಕ್ಷವನ್ನು ಹೀಗೂ ಕರೆವರು (2)
18.ಪದ್ಯವಲ್ಲದುದು ಇದು! (2)
19.ಹರಿವಾಣದ ಹತ್ತಿರ ಕಾಣಿಸಿದ ಜಿಂಕೆ (3)

ಮೇಲಿಂದ ಕೆಳಕ್ಕೆ

2.ಶ್ರೀಕೃಷ್ಣನ ಹಿರಿಯಣ್ಣ (4)
4.ಅವಸರವಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (3)
5.ದೇವಾಲಯದ ಗೋಪುರದ ತುದಿ (3)
7.ಗುಮ್ಮಟಗಳ ನಗರಿ ಎಂದು ಹೆಸರು ಪಡೆದ ಜಿಲ್ಲೆ (5)
9.ಭೂಲೋಕದ ಅಮೃತ (2)
10.ನಾಲ್ಕು ಆಗಮಗಳಲ್ಲಿ ಒಂದು (2)
12.ಯುದ್ಧದ ನಗಾರಿ (4)
14.ಮೈಸೂರಿನೊಡನೆ ಬೆಸೆದಿರುವ ಘಮ ಘಮಿಸುವ ಹೂ (3)
15.ರಾಷ್ಟ್ರಧ್ವಜವನ್ನು ತಯಾರಿಸುವ ಧಾರವಾಡ ಜಿಲ್ಲೆಯ ಊರು (3)



6154ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಯೋಗ 3.ಗರ್ಗರ
6.ರಮಣಿ 7.ಸಿಬ್ಬಂದಿ
8.ಕರಗ 9.ಚಿಂತೆ 10.ಬಸದಿ
12.ತೀರ 16.ವಿನಂತಿ
17.ಬಳಗ 18.ನನಸು
19.ತಿಗರಿ 20.ತಟಾಕ

ಮೇಲಿಂದ ಕೆಳಕ್ಕೆ:
1.ವಿಲೋಕನ 2.ಗರಗಸ
3.ಗಣಿತ 4.ರಸಿಕತೆ
5.ಮುದಿ ತನ 9.ಚಿಂದಿ
10.ಬರ 11.ಉಸಾಬರಿ
12.ತೀವ್ರಗತಿ 13.ರವಿಸುತ
14.ಅತಿರೇಕ 15.ವಾನರಿ

ಸುಡೊಕು 6539

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				1			6	
	2			5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

6538 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಸೆಪ್ಟೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತ್ರಯೋದಶಿ ಗಂ. 27-14 **ನಕ್ಷತ್ರ:** ಶ್ರವಣ ಗಂ. 23-39 **ಯೋಗ:** ಶೋಭನ ಗಂ. 13-53 **ಕರಣ:** ಕೌಲವ ಗಂ. 15-46 ಸಿಂಹ ಮಾಸದ 19 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-36, **ಮುಸ್ಲಿಂ ದಿನಾಂಕ:** 12 ರಬಿಉಲ್ಲಾವಲ್, **ದಿನ ವಿಶೇಷ:** ತಿರು ಓಣಂ ದಿನ, ಈದ್-ಎ-ಮಿಲಾದ್, **ಅದೃಷ್ಟ ಸಂಖ್ಯೆ:** 3, 8

ಮೇಷ: ಸ್ನೇಹಿತನ ಮೇಲಿದ್ದ ಸಂಶಯ, ಅಪನಂಬಿಕೆಯ ಮನಸ್ಥಿತಿಗೆ ಪುಷ್ಟಿ ಸಿಗುವ ಸನ್ನಿವೇಶಗಳು ನಡೆಯಲಿವೆ. ರೈಲ್ವೆ ಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಳವಾಗುವ ಸಾಧ್ಯತೆಗಳಿವೆ. ತರಕಾರಿ ಬೆಳೆಗಾರರಿಗೆ ದುಪ್ಪಟ್ಟು ಲಾಭಕರ.

ವೃಷಭ: ಹೆಚ್ಚಿನ ಅಧ್ಯಯನಕ್ಕೆ ಮನೆಯವರಿಂದ ಉತ್ತೇಜನ ದೊರೆಯುತ್ತದೆ. ತಂದೆ ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರಿ. ಭೀತಿಗಳಿಂದ ಹೊರಬರುವ ಪ್ರಯತ್ನ ನಡೆಸಿ. ಸುಬ್ರಹ್ಮಣ್ಯನ ಸೇವೆ ಮಾಡುವುದರಿಂದ ಶುಭ.

ಮಿಥುನ: ವೈವಾಹಿಕ ಮಾತುಕತೆಗಳಲ್ಲಿ ಹಿತಕರ ಬೆಳವಣಿಗೆ ಇರುವುದು. ಪುತ್ರರೊಡನೆ ಕೆಲಸದ ಬಗ್ಗೆ ಸಮಾಲೋಚನೆಯನ್ನು ನಡೆಸಿ. ಜವಳಿ ವ್ಯಾಪಾರಿಗಳಿಗೆ ಆದಾಯದಲ್ಲಿ ಕೊರತೆ ಕಾಣಬಹುದು.

ಕರ್ಕಾಟಕ: ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಜ್ಞಾನಾರ್ಜನೆಯಾಗುತ್ತದೆ. ಜಾಣ್ಮೆಯಿಂದ ವ್ಯವಹರಿಸುವ ಫಲವಾಗಿ ಸಮಾಜದಲ್ಲಿ ಗೌರವ ಪಡೆಯುವಿರಿ. ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಿದೆ.

ಸಿಂಹ: ಯಶಸ್ಸಿನ ಮೇಲೆ ಗಮನವಹಿಸುವುದಕ್ಕಿಂತ ಪರಿಶ್ರಮದ ಮೇಲೂ ಗಮನಹರಿಸಿ. ಪತಿ-ಪತ್ನಿಯರಲ್ಲಿ ಆದಷ್ಟು ತಾಳ್ಮೆ, ಸಮಾಧಾನ ಇರುವುದು ಒಳ್ಳೆಯದು. ಅಬಕಾರಿ ಗುತ್ತಿಗೆದಾರರಿಗೆ ಉತ್ತಮ ಆದಾಯವಿರುವುದು.

ಕನ್ಯಾ: ಅತಿ ಸೋಮಾರಿತನವು ಆವರಿಸಿಕೊಳ್ಳಲಿದೆ. ಅಭಿವೃದ್ಧಿಗೆ ಅಡೆತಡೆಗಳು ಉಂಟಾಗಬಹುದು. ಹೊಸ ಮಾರ್ಗವನ್ನು ಕಾರ್ಯರೂಪಕ್ಕೆ ತರುವುದರಿಂದ ಕಾರ್ಯದಲ್ಲಿ ಜಯ ದೊರೆಯುವುದು.

ತುಲಾ: ಮನೆಯಲ್ಲಿ ದೊಡ್ಡವರಾದ್ದರಿಂದ ಹೆಚ್ಚಿನ ಕಾರ್ಯಭಾರ ಮತ್ತು ಸೌಲಭ್ಯಗಳನ್ನು ಪಡೆಯುವಿರಿ. ತೆರೆಮರೆಯ ಸಂಧಾನದ ಮಾತುಕತೆಗಳು ಯಶಸ್ವಿಯಾಗಲಿವೆ. ಆಲೋಚಿಸಿದ ದಾರಿಯಲ್ಲಿಯೇ ಸಾಗುವುದು ಉತ್ತಮ.

ವೃಶ್ಚಿಕ: ಮನೆಯ ಸಮೀಪದಲ್ಲಿರುವ ಸ್ಥಳದಲ್ಲಿ ನಡೆಯುವ ಕಾರ್ಯಕ್ರಮಾದಿಗಳ ವ್ಯವಸ್ಥೆಯ ಜವಾಬ್ದಾರಿ ನಿಮ್ಮದಾಗಬಹುದು. ತೆರಿಗೆ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ಧನು: ಷೇರು ಖರೀದಿ ಅಥವಾ ನಿವೇಶನಗಳಿಗೆ ಮುಂಗಡ ಪಾವತಿ ಮಾಡುವ ಮುನ್ನ ಹತ್ತು ಬಾರಿ ಆಲೋಚಿಸಿ, ನಂತರದಲ್ಲಿ ತೀರ್ಮಾನಕ್ಕೆ ಬನ್ನಿ. ನೀರಿಗೆ ಸಂಬಂಧಪಟ್ಟ ಅಪಾಯಗಳು ಸಂಭವಿಸುವ ಸಾಧ್ಯತೆ ಇರುವುದು.

ಮಕರ: ಇತರರನ್ನು ನೋಯಿಸಲೆಂದು ಮಾತನಾಡಿದ್ದರೂ ಇತರರ ಬೇಸರಕ್ಕೆ ಕಾರಣವಾಗಬಹುದು. ಮನದ ಆಸೆ ಪೂರೈಸಿಕೊಳ್ಳಲು ಹಣ ಖರ್ಚು ಮಾಡುವಿರಿ. ತಲೆ ನೋವು ಕಾಣಿಸಿಕೊಳ್ಳಬಹುದು.

ಕುಂಭ: ಇತರರ ಬಗ್ಗೆ ಅನುಕಂಪ ತೋರುವ ನೀವು, ನಿಮ್ಮ ಬಗ್ಗೆಯೂ ಗಮನವಿರಿಸಿಕೊಳ್ಳಬೇಕೆಂದು ಮರೆಯದಿರಿ. ಅನುಭವವೇ ಇಲ್ಲದೆ ಮಾಡಿದ ಅಡುಗೆ ತೃಪ್ತಕರವಾಗಿರುತ್ತದೆ. ಮಕ್ಕಳೊಂದಿಗೆ ಉತ್ತಮ ಸಮಯ ಕಳೆಯುವಿರಿ.

ಮೀನ: ನಿರಂತರ ಸೇವೆಗಾಗಿ ಮಕ್ಕಳ ಪ್ರತಿಜ್ಞೆಗಳು ಬಹಳ ಹೆಮ್ಮೆ ಪಡುವಂತೆ ಮಾಡುತ್ತವೆ. ಕಂಪನಿಯ ಹೊಸ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಹೆಗ್ಗಳಿಕೆ ನಿಮ್ಮದಾಗಲಿದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,715
ಇಂದಿನ ಅಂತ್ಯ:	24,734
ದಿನದ ಗರಿಷ್ಠ:	24,980
▲	19

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹565

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹300-695
ದ್ವಿತಳಿ (ಬಿ.ವಿ)	₹451-855

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹184
ಗುಡ್ ಲಾಟ್	₹169

ಜಿಎಸ್‌ಟಿ: ಷೇರುಪೇಟೆ ಅಲ್ಪ ಏರಿಕೆ

ಲಾಭ ಗಳಿಕೆಯ ವಹಿವಾಟಿನಿಂದಾಗಿ ಏರಿಕೆ ಉಳಿಸಿಕೊಳ್ಳದ ಸೂಚ್ಯಂಕ



ಮುಂಬೈ (ಪಿಟಿಐ): ಜಿಎಸ್‌ಟಿ ದರ ಪರಿಷ್ಕರಣೆಯ ತೀರ್ಮಾನವು ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಏರಿಕೆ ಕಾಣುವಂತೆ ಮಾಡಿದೆ.

ಆದರೆ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇನ್ಫೊಸಿಸ್ ಕಂಪನಿಯ ಷೇರುಗಳನ್ನು ಹೂಡಿಕೆದಾರರು ಲಾಭ ಗಳಿಕೆಗಾಗಿ ಮಾರಾಟ ಮಾಡಲು ಮುಂದಾಗಿದ್ದರಿಂದ ಆರಂಭಿಕ ವಹಿವಾಟಿನಲ್ಲಿ ದಾಖಲಿಸಿದ್ದ ಗರಿಷ್ಠ ಮಟ್ಟವನ್ನು ಉಳಿಸಿಕೊಳ್ಳಲಾಗದೆ ಸೂಚ್ಯಂಕಗಳು ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 150 ಅಂಶ ಹೆಚ್ಚಳವಾಗಿ, 80,718ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 888 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 19 ಅಂಶ ಏರಿಕೆಯಾಗಿ, 24,734ಕ್ಕೆ ಕೊನೆಗೊಂಡಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫೈನಾನ್ಸ್, ಟ್ರೆಂಟ್, ಐಟಿಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯವು ಏರಿಕೆ ಕಂಡಿದೆ. ಮಾರುತಿ ಸುಜುಕಿ ಇಂಡಿಯಾ, ಭಾರತ್ ಎಲೆಕ್ಟ್ರಾನಿಕ್ಸ್, ಎಚ್‌ಸಿಎಲ್ ಟೆಕ್, ಎನ್‌ಟಿಪಿಸಿ, ಪವರ್ ಗ್ರಿಡ್, ಇನ್ಫೊಸಿಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯವು ಇಳಿಕೆ ಕಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.08ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರಲ್ ದರವು 66.87 ಡಾಲರ್ ಆಗಿದೆ.

'ಸೆಪ್ಟೆಂಬರ್ 22ರಂದು ಜಾರಿಯಾಗಲಿರುವ ಜಿಎಸ್‌ಟಿ ದರಗಳ ಸರಳೀಕರಣವು ವಾಹನೋದ್ಯಮದ ವಲಯಕ್ಕೆ ಸಕಾರಾತ್ಮಕ ಅಂಶವಾಗಿದೆ. ಹಬ್ಬದ ಋತುವಿನ ಆರಂಭದೊಂದಿಗೆ ವಿಳಂಬವಾದ ಮಾರಾಟದ ಬಗ್ಗೆ ಇರುವ ಕಳವಳವನ್ನು ಇದು ಬಗೆಹರಿಸುತ್ತದೆ' ಎಂದು ಚಾಯ್ಸ್ 'ಇನ್‌ಸ್ಟಿಟ್ಯೂಷನಲ್ ಈಕ್ವಿಟೀಸ್'ನ ಆಟೊ ಅನಲಿಸ್ಟ್ ವಿಶ್ಲೇಷಕ ಹಿತೇಶ್ ಛೇಡಾ ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ, ಮತ್ತು ಹಾಂಗ್ ಕಾಂಗ್ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹1,666 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹2,495 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಕಡುಗತ್ತಲ ಯುಗದಲ್ಲಿ ಸದ್ವಚನ ಸಾರಿದ ಶಿಕ್ಷಕ ಪೈಗಂಬರ್

• ಎಂ.ಎ. ಇಸ್ಮಾಯಿಲ್ ನಈಮಿ

ವಿದ್ಯುದ್ದೀಪಗಳ ಚಿತ್ತಾರ... ಈದ್ ಮಿಲಾದ್ ಅಂಗವಾಗಿ ಕಲಬುರಗಿಯ ಖಾಜಾ ಬಂದಾನವಾಜ್ ದರ್ಗಾ ರಸ್ತೆಯನ್ನು ವಿದ್ಯುದ್ದೀಪಗಳಿಂದ ಸಿಂಗರಿಸಲಾಗಿದ್ದು, ಗುರುವಾರ ರಾತ್ರಿ ಮಕ್ಕಳಿಬ್ಬರು ಬಲೂನು ಹೆಗಲೇರಿಸಿಕೊಂಡು ಹೊರಟ ಕ್ಷಣ... –ಚಿತ್ರ: ತಾಜುದ್ದೀನ್ ಆಜಾದ್

ಇಂದು ಈದ್ ಮಿಲಾದ್

ಪ್ರವಾದಿ ಮುಹಮ್ಮದ್ ಪೈಗಂಬರರ ಸಾವಿರದ ಐನೂರನೇ ಜನ್ಮದಿನಾಚರಣೆಯು ಈ ಬಾರಿ ಶಿಕ್ಷಕರ ದಿನದಂದೇ ಬಂದಿದೆ. ಪೈಗಂಬರರು ಓರ್ವ ಶಿಕ್ಷಕರಾಗಿದ್ದರು ಎಂಬುವುದನ್ನು ಕುರಾನ್ ಸ್ಪಷ್ಟಪಡಿಸಿದೆ. 'ನಿಮ್ಮಲ್ಲೇ ಓರ್ವರನ್ನು ನಾವು ಸಂದೇಶವಾಹಕರಾಗಿ ಕಳುಹಿಸುತ್ತೇವೆ. ಅವರು ನಮ್ಮ ಸದ್ವಚನಗಳನ್ನು ನಿಮಗೆ ಓದಿ ಕೊಡುತ್ತಾರೆ. ನಿಮ್ಮನ್ನು ಶುಚಿಗೊಳಿಸುತ್ತಾರೆ. ನಿಮಗೆ ದಿವ್ಯಗ್ರಂಥವನ್ನೂ ತತ್ವಜ್ಞಾನವನ್ನೂ ಕಲಿಸುತ್ತಾರೆ. ನಿಮಗೆ ಗೊತ್ತಿರದ ವಿಚಾರಗಳನ್ನು ತಿಳಿಯಪಡಿಸುತ್ತಾರೆ'. (ಸೂರಾ ಅಲ್ ಬಖರ-151)

ಕಡುಗತ್ತಲ ಯುಗವೆಂದು ಇತಿಹಾಸಕಾರರಿಂದ ಬಣ್ಣಿಸಲ್ಪಟ್ಟ ಆರನೇ ಶತಮಾನದಲ್ಲಿ ಮಾನವೀಯತೆಯ ದೀವಿಗೆ ಬೆಳಗಲು ಅವರ ಬೋಧನಾ ಶೈಲಿಯು ಕಾರಣವಾಗಿತ್ತು. ಕೇವಲ ಇಪ್ಪತ್ತಮೂರು ವರ್ಷಗಳ ತಮ್ಮ ಬೋಧನೆಯಲ್ಲಿ ಅನಾಗರಿಕ ಸಮಾಜವೊಂದನ್ನು ಪರಿಷ್ಕರಿಸಿ, ಎಲ್ಲರಿಂದಲೂ ಅಂಗೀಕಾರ ಲಭಿಸಿದ ಅಪರೂಪದ ಶಿಕ್ಷಕ ಅವರು.

ತಮ್ಮ ಬಳಿಗೆ ಮೊದಲ ಬಾರಿಗೆ ಬರುವ ವಿದ್ಯಾರ್ಥಿಗಳಲ್ಲಿ ಇರುವ ಆತಂಕ, ತಳಮಳ ಮತ್ತು ಸಂಕೋಚ ಹೋಗಲಾಡಿಸಲು ಪೈಗಂಬರರು ಅವರನ್ನು ಹೃದಯಪೂರ್ವಕವಾಗಿ ಸ್ವಾಗತಿಸಿ ಮನ ಗೆಲ್ಲುತ್ತಿದ್ದರು. ಇದೇ ರೀತಿ ಮಾಡಿ ಎಂದು ತಮ್ಮ ಅನುಚರರಿಗೂ ಆದೇಶಿಸುತ್ತಿದ್ದರು. ಶಿಷ್ಯರ ಕುತೂಹಲ ಕೆರಳಿಸಲು ಮೊದಲು ಸಂಕ್ಷಿಪ್ತವಾಗಿ ಹೇಳಿ ನಂತರ ಅದರ ವಿವರಣೆಯನ್ನು ನೀಡುತ್ತಿದ್ದರು. ಕೇಳುಗರ ಗಮನ ಸೆಳೆಯಲು, ಅವರಲ್ಲಿ ಕುತೂಹಲ ಮೂಡಿಸಲು ಪ್ರಶ್ನೆಗಳನ್ನು ಕೇಳಿ, ಅವರನ್ನು ಯೋಚಿಸುವಂತೆ ಮಾಡುತ್ತಿದ್ದರು. ನಂತರ ಅವುಗಳಿಗೆ ಉತ್ತರಿಸುತ್ತಿದ್ದರು. ಉಪಮೆಗಳ ಮೂಲಕ ಬೋಧನೆ ಮಾಡುವುದು ಅವರ ಮತ್ತೊಂದು ಶೈಲಿ. ಅವರ ಹೆಚ್ಚಿನ ಬೋಧನೆಗಳು ಉಪಮೆಗಳ ಮೂಲಕವೇ ಇವೆ. ಅವರು ಬಳಸಿದ ಉಪಮೆಗಳ ಬಗ್ಗೆಯೇ ಹಲವು ಗ್ರಂಥಗಳು ರಚನೆಯಾಗಿವೆ.

ನೆರೆದಿರುವವರ ಪ್ರಶ್ನೆಗೆ ಮೊದಲು ಉತ್ತರಿಸಿ ನಂತರ ಪ್ರಾತ್ಯಕ್ಷಿಕೆ ನೀಡುತ್ತಿದ್ದರು. ಒಮ್ಮೆ ಯಾರೋ 'ವುದೂ' (ಅಂಗಾಂಗ ಶುದ್ಧೀಕರಣ) ಮಾಡುವ ವಿಧಾನದ ಬಗ್ಗೆ ಅವರನ್ನು ಕೇಳಿದರು. ಈ ವೇಳೆ ನೀರನ್ನು ತರಿಸಿ ಅದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟದ್ದರಲ್ಲದೆ, ಕ್ರಮಬದ್ಧವಾಗಿ ಹೇಳಿಕೊಟ್ಟದ್ದರು. ಪೈಗಂಬರರು ಕೂಡ ತಮ್ಮ ಮುಂದೆ ಇರುವ ಜನರಲ್ಲಿ ಗೊಂದಲ ಮೂಡಿಸುವ ಜಟಿಲ ಹಾಗೂ ಕ್ಲಿಷ್ಟಕರ ವಿಚಾರಗಳನ್ನು ಮಂಡಿಸುತ್ತಿರಲಿಲ್ಲ. ಅವರ ಮಾತುಗಳು ಅತ್ಯಂತ ಸ್ಪಷ್ಟ ಮತ್ತು ನಿಖರವಾಗಿರುತ್ತಿದ್ದವು. ಕೆಲವು ಮುಖ್ಯ ವಿಚಾರಗಳನ್ನು ಅವರು ಮೂರು ಬಾರಿ ಹೇಳುತ್ತಿದ್ದರು. ಅದಾಗ್ಯೂ ಅವರ ಮಾತುಗಳು ಹೇಗೆ ಸ್ಪಷ್ಟವಾಗಿರುತ್ತಿದ್ದವೆಂದರೆ ಅವರಾಡುವ ಮಾತುಗಳ ಪದಗಳನ್ನು ಎಣಿಸಿ ಹೇಳಬಹುದಿತ್ತು.

ಅವರ ಬೋಧನೆಯಲ್ಲಿ ಹಾಸ್ಯ, ಸೃಜನಶೀಲತೆ ಹಾಗೂ ನಾವೀನ್ಯ ಇರುತ್ತಿತ್ತು. ಮನೆ ಭಾಷೆಯಾಗಿದ್ದಿರಿಂದ ಅರೇಬಿಕ್‌ನಲ್ಲಿ ಅಗಾಧ ಪಾಂಡಿತ್ಯವೂ ಇತ್ತು. ಮುಹಮ್ಮದರ ಬಳಿ ಕೆಲವೊಮ್ಮೆ ಮಹಿಳೆಯರೂ ಸಂದೇಹಗಳನ್ನು ನಿವಾರಿಸಲು ಪ್ರಶ್ನೆಗಳನ್ನು ಕೇಳುತ್ತಿದ್ದರು. ಒಂದು ವೇಳೆ ಉತ್ತರಿಸಲು ಸಂಕೋಚ ಪಡುವ ಸಂಗತಿಗಳು ಇದ್ದರೆ ನೇರವಾಗಿ ಹೇಳದೆ ಸೂಚ್ಯವಾಗಿ ಹೇಳುತ್ತಿದ್ದರು. ಶಿಷ್ಯರು ಕೇಳುವ ಪ್ರಶ್ನೆಗೆ ಶಾಂತ ಚಿತ್ತರಾಗಿ ಮುಹಮ್ಮದರು ಉತ್ತರಿಸುತ್ತಿದ್ದರು. ಎಷ್ಟೇ ಬಾರಿ ಪುನರಾವರ್ತಿಸಿ ಕೇಳಿದರೂ ಅವರ ಮುಖದಲ್ಲಿನ ಭಾವಗಳು ಬದಲಾಗುತ್ತಿರಲಿಲ್ಲ. ಸಮಯಪ್ರಜ್ಞೆಯುಳ್ಳ ವ್ಯಕ್ತಿಯಾಗಿದ್ದರು ಅವರು ಕೇಳುಗರಿಗೆ ಬೇಸರವಾಗದಂತೆ ತಮ್ಮ ಭಾಷಣಗಳನ್ನು ಚಿಕ್ಕದಾಗಿ ಮತ್ತು ಸ್ಪಷ್ಟವಾಗಿ ಹೇಳುತ್ತಿದ್ದರು. ಶಿಷ್ಯರ ಒಳ್ಳೆಯ ಕೆಲಸಗಳನ್ನು ಮೆಚ್ಚಿ ಪ್ರಶಂಸಿಸುತ್ತಿದ್ದರು. ಮೆಚ್ಚುಗೆ ನೀಡುವುದು ಅವರ ಪ್ರೇರಕ ತಂತ್ರಗಳಲ್ಲಿ ಒಂದಾಗಿತ್ತು.

ಪ್ರವಾದಿಯವರ ಬೋಧನೆಯಲ್ಲಿ ಸೃಜನಶೀಲತೆ ಇತ್ತು. ಯುದ್ಧದಲ್ಲಿ ಸೆರೆ ಸಿಕ್ಕ ಕೈದಿಗಳಿಗೆ ತಮ್ಮ ಶಿಷ್ಯಂದಿರ ಮೂಲಕ ಅಕ್ಷರ ಕಲಿಸುತ್ತಿದ್ದರು. ಅಕ್ಷರ ಕಲಿತವರನ್ನು ಬಂಧ ಮುಕ್ತಗೊಳಿಸುತ್ತಿದ್ದರು. ಅವರ ಕಾಲದ ಸಾಂಪ್ರದಾಯಿಕ ಗಾದೆಗಳನ್ನು ತಮ್ಮ ವಿಷಯಾಧಾರಿತವಾಗಿ ಮಾರ್ಪಡಿಸಿ ಜನರ ಮುಂದಿಡುತ್ತಿದ್ದರು. ಮದೀನಾದಲ್ಲಿರುವ ಮಸೀದಿಯನ್ನು ಕೇಂದ್ರ ಶೈಕ್ಷಣಿಕ ಸಂಸ್ಥೆಯನ್ನಾಗಿ ಮಾಡಿದ್ದರು. ಮಸೀದಿಯ ಒಂದು ಭಾಗವನ್ನು ಬಡವರು ಮತ್ತು ಅಗತ್ಯವಿರುವವರು ಉಳಿಯಲು ಮತ್ತು ಕಲಿಯುವವರಿಗೆ ಮೀಸಲಿಟ್ಟದ್ದರು. ಜನರನ್ನು ಸಾಕ್ಷರರನ್ನಾಗಿ ಮಾಡಿ ಸಾಮಾಜಿಕ ಅನಿಷ್ಟಗಳನ್ನು ಪರಿಹರಿಸಬಹುದು ಎಂದು ಪ್ರವಾದಿ ದೃಢವಾಗಿ ನಂಬಿದ್ದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಮುಂಬೈ ಧಾರಣೆ (ಶೇಂಗಾ) 04-09-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (1385)
ಒಂದು ವಾರದ ಡೆಲಿವರಿ	1375 (1380)
ಪಾಮ್ ವಾರದ ಡೆಲಿವರಿ	1278 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,05,800 (1,05,800)
ಬೆಳ್ಳಿ ಕೆ.ಜಿಗೆ	1,22,600 (1,23,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1370 (1375)
ಸೋಯಾ (ರಿಫೈನ್ಡ್)	₹1280 (1290)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲಿನ್	₹1280 (1285)

ಅಪ್ಸರಾಗೆ 'ಡಾಲಿ' ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ಸರಾ ಪೆನ್ಸಿಲ್ ಮಾಲೀಕತ್ವ ಹೊಂದಿರುವ ಹಿಂದೂಸ್ತಾನ್ ಪೆನ್ಸಿಲ್, ಬಣ್ಣದ ಪೆನ್ಸಿಲ್ ಬಳಸಿ ಚಿತ್ರ ಬಿಡಿಸುವ 'ಡಾಲಿ' ಹೆಸರಿನ ನಾಯಿಯನ್ನು ತನ್ನ ರಾಯಭಾರಿಯನ್ನಾಗಿ ನೇಮಕ ಮಾಡಿಕೊಂಡಿದೆ!

ಈ ರೀತಿ ನಾಯಿಯನ್ನು ರಾಯಭಾರಿಯಾಗಿ ನೇಮಕ ಮಾಡಿಕೊಂಡ ಮೊದಲ ಕಂಪನಿ ಇದಾಗಿದೆ. ಅಪ್ಸರಾದ ಹೊಸ ಕನೆಕ್ಟ್ ಬ್ರಷ್ ಪೆನ್‌ಗಳ ಬಿಡುಗಡೆಯೊಂದಿಗೆ 'ಡಾಲಿ' ಜೊತೆಗಿನ ಕಂಪನಿಯ ಸಂಬಂಧವು ಶುರುವಾಗಿದೆ. 'ಡಾಲಿ'ಯು ತನ್ನ ಬಾಯಿಯಲ್ಲಿ ಬ್ರಷ್ ಪೆನ್ ಇಟ್ಟುಕೊಂಡು ಚಿತ್ರವನ್ನು ಬಿಡಿಸುತ್ತದೆ ಎಂದು ಕಂಪನಿ ಹೇಳಿದೆ.

'ನಮ್ಮ ಉತ್ಪನ್ನಗಳು ಲಕ್ಷಾಂತರ ಮಕ್ಕಳ ಮೊದಲ ಚಿತ್ರಗಳು ಮತ್ತು ಡೂಡಲ್‌ನ ಭಾಗವಾಗಿವೆ. ಡಾಲಿಯೊಂದಿಗೆ ಪಾಲುದಾರಿಕೆ ಹೊಂದುವುದು ಪರಿಪೂರ್ಣ ಜೋಡಿಯಂತೆ ಅನಿಸುತ್ತಿದೆ. ಸೃಜನಶೀಲತೆ ಎಲ್ಲರಿಗೂ ಎಂಬ ನಮ್ಮ ನಂಬಿಕೆಯನ್ನು ಅದು ಸಾಕಾರಗೊಳಿಸುತ್ತದೆ' ಎಂದು ಹಿಂದೂಸ್ತಾನ್ ಪೆನ್ಸಿಲ್ಸ್‌ನ ಮಾರ್ಕೆಟಿಂಗ್ ಮುಖ್ಯಸ್ಥೆ ಐಶ್ವರ್ಯಾ ಹೇಳಿದ್ದಾರೆ.

'ಆಟವಾಗಿ ಪ್ರಾರಂಭವಾದದ್ದು, ಡಾಲಿಯ ಸ್ವಯಂ ಅಭಿವ್ಯಕ್ತಿಯ ರೂಪವಾಯಿತು. ನಾಯಿ ಮರಿಯಿಂದ ರಾಯಭಾರಿ ನಾಯಿಯವರೆಗಿನ ಪ್ರಯಾಣವು ನಮ್ಮ ಹೆಮ್ಮೆಯನ್ನು ಹೆಚ್ಚಿಸುತ್ತದೆ' ಎಂದು ಡಾಲಿಯ ಪೋಷಕರು ಹೇಳಿದ್ದಾರೆ.

ಅಡಿಕೆ ಧಾರಣೆ

ಸಾಗರ		ಸರಕು	57400-93996	ಚಾಲಿ	38729-44108
ಬಿಳಿಗೋಟು	18369-27299	**ಸಿದ್ದಾಪುರ**		ಕೆಂಪುಗೋಟು	23599-25109
ಚಾಲಿ	28999-39299	ಬಿಳಿಗೋಟು	24900-31500	ರಾಶಿ	44899-49299
ಕೋಕ	9269-24599	ಚಾಲಿ	36500-42949	**ಯಲ್ಲಾಪುರ**	
ಕೆಂಪುಗೋಟು	27699-36989	ಕೋಕ	19600-26219	ಬಿಳಿಗೋಟು	18109-34389
ರಾಶಿ	42569-60229	ಕೆಂಪುಗೋಟು	30149-30149	ಚಾಲಿ	35009-44299
ಸಿಪ್ಪೆಗೋಟು	12000-20265	ರಾಶಿ	43499-48099	ಕೋಕ	10009-20090
ಶಿವಮೊಗ್ಗ		ತಟ್ಟಿಬೆಟ್ಟೆ	28088-32289	ಕೆಂಪುಗೋಟು	17099-27269
ಬೆಟ್ಟೆ	56319-65640	**ಶಿರಸಿ**		ರಾಶಿ	40666-56259
ಗೊರಬಲು	19509-37699	ಬೆಟ್ಟೆ	30696-37700	ತಟ್ಟಿಬೆಟ್ಟೆ	31506-38419
ರಾಶಿ	44669-60599	ಬಿಳಿಗೋಟು	23899-35299		

ವೈಕುಂಠ ಸಮಾರಾಧನೆ

ಎಂ. ವೇಮಣ್ಣ

ಇವರು ದಿ: 27-08-2025ರ ಬುಧವಾರ ದೈವಾಧೀನರಾದರು. ತತ್ಸಂಬಂಧ ಪುಣ್ಯಾಹ್ನ ದಿ: 06-09-2025ನೇ ಶನಿವಾರ ಸಮಯ 12:30ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಕುಟುಂಬ ವರ್ಗದವರು

ಉತ್ತರ ಕ್ರಿಯಾದಿ ಭೂ ಶಾಂತಿ ಆಹ್ವಾನ ಪತ್ರಿಕೆ

(ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ದಿ. ಅನಂತಪ್ಪನವರ ಮಗ)

ಸಹಕಾರ ನಗರ, ಬೆಂಗಳೂರು

ಶ್ರೀ ಎ.ಎನ್. ಮೂರ್ತಿ

ಸಾದಹಳ್ಳಿ ಬಂಡೆ ಮಾಲೀಕರು

ದಿನಾಂಕ: 27-08-2025ನೇ ಶುಕ್ರವಾರ ಅವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಉತ್ತರ ಕ್ರಿಯಾದಿ ಭೂ ಶಾಂತಿ ಕಾರ್ಯವನ್ನು ದಿನಾಂಕ: 06-09-2025ರ ಶನಿವಾರ ಬೆಳಗ್ಗೆ 10.00 ಘಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುತ್ತೇವೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ. ಭೋಜನ: ಮಧ್ಯಾಹ್ನ 12.00 ಘಂಟೆಗೆ

ಇಂತಿ ದುಃಖತಪ್ತರು:

ಶ್ರೀಮತಿ ಲಲಿತ ಮೂರ್ತಿ ಹಾಗೂ ಮಕ್ಕಳು ಹಾಗೂ ಕುಟುಂಬಸ್ಥರು

ಬೆಳ್ಳಿಗೆ ಐಚ್ಛಿಕ ಹಾಲ್‌ಮಾರ್ಕ್

ನವದೆಹಲಿ (ಪಿಟಿಐ): ಬೆಳ್ಳಿಯ ಆಭರಣಗಳು ಹಾಗೂ ವಸ್ತುಗಳಿಗೆ ಸೆಪ್ಟೆಂಬರ್ 1ರಿಂದ ಅನ್ವಯ ಆಗುವಂತೆ ಐಚ್ಛಿಕ ಹಾಲ್‌ಮಾರ್ಕಿಂಗ್ ನಿಯಮವನ್ನು ಜಾರಿಗೆ ತಂದಿರುವುದಾಗಿ ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ಹೊಸ ವ್ಯವಸ್ಥೆಯ ಅಡಿಯಲ್ಲಿ ಗ್ರಾಹಕರು ಬೆಳ್ಳಿಯ ವಸ್ತುವು ಯಾವ ಬಗೆಯದ್ದು, ಶುದ್ಧತೆಯು ಯಾವ ಪ್ರಮಾಣದ್ದು, ಹಾಲ್‌ಮಾರ್ಕ್‌ನ ದಿನಾಂಕ ಮುಂತಾದ ವಿವರಗಳನ್ನು ಬಿಐಎಸ್ ಕೇರ್ ಮೊಬೈಲ್ ಆ್ಯಪ್ ಮೂಲಕ ತಿಳಿದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

₹12 ಲಕ್ಷ ಕೋಟಿ ಹೂಡಿಕೆ ಪ್ರಸ್ತಾವ ಸ್ವೀಕರಿಸಿದ ರಾಜ್ಯ

ಬೆಂಗಳೂರು (ಪಿಟಿಐ): 2021–22ನೇ ಹಣಕಾಸು ವರ್ಷದಿಂದ 2024–25ನೇ ಹಣಕಾಸು ವರ್ಷದವರೆಗಿನ ಅವಧಿಯಲ್ಲಿ ರಾಜ್ಯವು ಒಟ್ಟು ₹12 ಲಕ್ಷ ಕೋಟಿಗಿಂತ ಹೆಚ್ಚಿನ ಹೊಸ ಹೂಡಿಕೆ ಪ್ರಸ್ತಾವಗಳನ್ನು ಸ್ವೀಕರಿಸಿದೆ.

ರಾಜ್ಯದಲ್ಲಿರುವ ಪ್ರಗತಿಪರವಾದ ಹೂಡಿಕೆ ವಾತಾವರಣ ಇದಕ್ಕೆ ಕಾರಣ ಎಂದು ಎಂಎಸ್‌ಎಂಇ ರಫ್ತು ಉತ್ತೇಜನಾ ಮಂಡಳಿ ನಡೆಸಿರುವ ಅಧ್ಯಯನವು ಹೇಳಿದೆ.

ರಾಜ್ಯದಲ್ಲಿನ ಹೂಡಿಕೆ ವಾತಾವರಣ, ಮಹತ್ವದ ಮೂಲಸೌಕರ್ಯ ಯೋಜನೆಗಳು, ಮುನ್ನೋಟವಿರುವ ನೀತಿಗಳು, ರಾಜ್ಯದಲ್ಲಿನ ಪ್ರತಿಭೆಯು ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು (ಎಫ್‌ಡಿಐ) ಆಕರ್ಷಿಸುತ್ತದೆ ಎಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಈ ಅವಧಿಯಲ್ಲಿ ₹12 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಹೊಸ ಹೂಡಿಕೆ ಯೋಜನೆಗಳನ್ನು ಘೋಷಿಸಲಾಗಿದೆ. ಈ ಪೈಕಿ ₹1.40 ಲಕ್ಷ ಕೋಟಿ ಮೌಲ್ಯದ ಯೋಜನೆಗಳ ಅನುಷ್ಠಾನವು ಪೂರ್ಣಗೊಂಡಿದೆ. ₹9.49 ಲಕ್ಷ ಕೋಟಿ ಮೌಲ್ಯದ ವಿವಿಧ ಯೋಜನೆಗಳು ಅನುಷ್ಠಾನದ ಬೇರೆ ಬೇರೆ ಹಂತಗಳಲ್ಲಿ ಇವೆ' ಎಂದು ಮಂಡಳಿಯ ಅಧ್ಯಕ್ಷ ಡಿ.ಎಸ್. ರಾವತ್ ಹೇಳಿದ್ದಾರೆ.

ರಾಜ್ಯದ ಎಂಎಸ್‌ಎಂಇ ವಲಯವು ಬೆಳವಣಿಗೆಯನ್ನು ದಾಖಲಿಸುತ್ತಿದೆ. ರಾಜ್ಯದಲ್ಲಿ ಎಂಎಸ್‌ಎಂಇ ವಲಯದ 8.5 ಲಕ್ಷಕ್ಕಿಂತ ಹೆಚ್ಚು ಘಟಕಗಳಿವೆ. ಇವು ಸರಿಸುಮಾರು 70 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿವೆ ಎಂದು ಹೇಳಿದೆ.

ಗ್ರಾಹಕರಿಗೆ ನೇರವಾಗಿ ಸಾಲ ಪರವಾನಗಿ ಪಡೆದ ಅಮೆಜಾನ್

ಮುಂಬೈ (ರಾಯಿಟರ್ಸ್): ಬೆಂಗಳೂರು ಮೂಲದ ಬ್ಯಾಂಕೇತರ ಹಣಕಾಸು ಕಂಪನಿ ಆಕ್ಸಿಯೊ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಜಾಗತಿಕ ಇ-ಕಾಮರ್ಸ್ ಕಂಪನಿ ಅಮೆಜಾನ್ ಗುರುವಾರ ತಿಳಿಸಿದೆ. ಅಲ್ಲದೆ, ದೇಶದಲ್ಲಿ ನೇರವಾಗಿ ಗ್ರಾಹಕರಿಗೆ ಸಾಲ ನೀಡುವ ಪರವಾನಗಿ ಪಡೆಯಲಾಗಿದೆ ಎಂದು ತಿಳಿಸಿದೆ.

ಆಕ್ಸಿಯೊ 12 ವರ್ಷದ ಹಳೆಯದಾದ ಫಿನ್‌ಟೆಕ್ ಕಂಪನಿಯಾಗಿದೆ. ಸಣ್ಣ ಗ್ರಾಹಕರು ಮತ್ತು ಸಣ್ಣ ಉದ್ದಿಮೆಗಳಿಗೆ ಸಾಲವನ್ನು ನೀಡುತ್ತದೆ.

2018ರಿಂದ ಅಮೆಜಾನ್, ಆಕ್ಸಿಯೊ ಜೊತೆಗೆ ಒಪ್ಪಂದ ಮಾಡಿಕೊಂಡು ಸಾಲವನ್ನು ನೀಡುತ್ತಿತ್ತು. ಕಳೆದ ಡಿಸೆಂಬರ್‌ನಿಂದ ಸ್ವಾಧೀನ ಪ್ರಕ್ರಿಯೆ ಮಾತುಕತೆ ನಡೆಯುತ್ತಿತ್ತು. ಜೂನ್‌ನಲ್ಲಿ ಆರ್‌ಬಿಐ ಒಪ್ಪಂದಕ್ಕೆ ಅನುಮೋದಿಸಿದೆ ಎಂದು ಅಮೆಜಾನ್‌ನ ಉಪಾಧ್ಯಕ್ಷ ಮಹೇಂದ್ರ ನೆರೂರ್ಕರ್ ಹೇಳಿದ್ದಾರೆ.

ಆಕ್ಸಿಯೊ ಸ್ವಾಧೀನದಿಂದ ಅಮೆಜಾನ್ ತನ್ನ ವೇದಿಕೆಯ ಮೂಲಕ ಗ್ರಾಹಕರಿಗೆ ಮತ್ತು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ವಿವಿಧ ರೀತಿಯ ಸಾಲವನ್ನು ನೀಡಲು ಯೋಜಿಸಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಫ್ಲಿಪ್‌ಕಾರ್ಟ್ ಸೇರಿದಂತೆ ಬಹುತೇಕ ಇ-ಕಾಮರ್ಸ್ ಕಂಪನಿಗಳು ಬ್ಯಾಂಕ್ ಮತ್ತು ಬ್ಯಾಂಕೇತರ ಸಂಸ್ಥೆಗಳ ಜೊತೆ ಪಾಲುದಾರಿಕೆ ಮಾಡಿಕೊಂಡು ಸಾಲ ನೀಡುತ್ತವೆ. ಆದರೆ, ಅಮೆಜಾನ್ ಈಗ ನೇರವಾಗಿ ಸಾಲ ನೀಡುವ ಪರವಾನಗಿ ಪಡೆದಿದೆ.

'ಆರ್ಥಿಕತೆಗೆ ಡಬಲ್ ಡೋಸ್'

ಪ್ರಜಾವಾಣಿ ವಾರ್ತೆ

ನರೇಂದ್ರ ಮೋದಿ

ನವದೆಹಲಿ: 'ಸರಕು ಸೇವಾ ತೆರಿಗೆಯ (ಜಿಎಸ್‌ಟಿ) ಸರಳೀಕರಣವು ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ಆರ್ಥಿಕ ಸುಧಾರಣೆಗಳ ಡಬಲ್ ಡೋಸ್ ಆಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.

ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪುರಸ್ಕೃತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಸ್ವದೇಶಿ ಉತ್ಪನ್ನಗಳನ್ನು ಉತ್ತೇಜಿಸುವ ಅಭಿಯಾನವನ್ನು ಮುನ್ನಡೆಸುವಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ಎಲ್ಲ ವರ್ಗದವರು, ಬಡವರು, ಮಧ್ಯಮ ವರ್ಗದವರು, ಮಹಿಳೆಯರು, ವಿದ್ಯಾರ್ಥಿಗಳು, ರೈತರು ಹಾಗೂ ಯುವ ಪೀಳಿಗೆಯು ತೆರಿಗೆ ಕಡಿತದ ಪ್ರಯೋಜನವನ್ನು ಪಡೆಯಲಿದ್ದಾರೆ' ಎಂದು ಹೇಳಿದರು.

'ಜಿಎಸ್‌ಟಿ 2.0ನಿಂದ ದೇಶದ ಬೆಳವಣಿಗೆ ದ್ವಿಗುಣವಾಗಿದೆ. ಜಿಎಸ್‌ಟಿ ಸುಧಾರಣೆಗಳ ಮೂಲಕ ಭಾರತದ ರೋಮಾಂಚಕ ಆರ್ಥಿಕತೆಗೆ ಹೊಸ ಐದು ರತ್ನಗಳನ್ನು (ಪಂಚರತ್ನ) ಸೇರಿಸಲಾಗಿದೆ' ಎಂದು ತಿಳಿಸಿದರು.

'2014ರಲ್ಲಿ ಅಧಿಕಾರಕ್ಕೆ ಬರುವ ಮುನ್ನ ದಿನ ಬಳಕೆ ವಸ್ತುಗಳ ಮೇಲೆ ಅಧಿಕ ತೆರಿಗೆ ವಿಧಿಸಲಾಗಿತ್ತು. ಅಡುಗೆ ಪಾತ್ರೆಗಳು, ಕೃಷಿ ಉಪಕರಣಗಳು, ಔಷಧ, ಜೀವವಿಮೆ ಹೀಗೆ ವಿವಿಧ ವಸ್ತುಗಳ ಮೇಲೆ ಕಾಂಗ್ರೆಸ್ ಸರ್ಕಾರವು ವಿವಿಧ ತೆರಿಗೆ ವಿಧಿಸಿತ್ತು' ಎಂದು ಟೀಕಿಸಿದರು.

ರಾಜತಾಂತ್ರಿಕತೆ ಮೀರಿದ ಸಂಬಂಧ

'ಭಾರತ ಹಾಗೂ ಸಿಂಗಪುರ ನಡುವಿನ ಸಂಬಂಧ ರಾಜತಾಂತ್ರಿಕತೆ ಮೀರಿದ್ದಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ದ್ವಿಪಕ್ಷೀಯ ಸಂಬಂಧ ವಿಸ್ತರಣೆ ಸಂಬಂಧ ನವದೆಹಲಿಗೆ ಬಂದಿಳಿದ ಸಿಂಗಪುರ ಪ್ರಧಾನಿ ಲಾರೆನ್ಸ್ ವಾಂಗ್ ಮುಂದೆ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ಧಾರಣೆ (ಶೇ 99.9 ಪರಿಶುದ್ಧತೆ) ₹1 ಸಾವಿರ ಕಡಿಮೆಯಾಗಿ, ₹1,06,070ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹1,05,200 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹500 ಕಡಿಮೆಯಾಗಿದ್ದು, ₹1,25,600ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಲಾಭ ಗಳಿಕೆಗಾಗಿ ವ್ಯಾಪಾರಿಗಳು ಚಿನ್ನದ ಮಾರಾಟಕ್ಕೆ ಮುಂದಾಗಿದ್ದರಿಂದ ಹಳದಿ ಲೋಹದ ದರ ಇಳಿಕೆ ಆಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಸುಂಕ ಪ್ರಕರಣ ತ್ವರಿತವಾಗಿ ಕೈಗೆತ್ತಿಕೊಳ್ಳಿ'

ವಾಷಿಂಗ್ಟನ್ (ಎಪಿ): ಅಮೆರಿಕ ಸರ್ಕಾರವು ಹೆಚ್ಚು ಸುಂಕ ವಿಧಿಸಿರುವುದು ಕಾನೂನುಬಾಹಿರ ಎಂದು ಇಲ್ಲಿನ ಫೆಡರಲ್ ನ್ಯಾಯಾಲಯವು ನಿಷೇಧ ಹೇರಿರುವ ಬೆನ್ನಲ್ಲೇ, ಈ ವಿಚಾರವನ್ನು ಟ್ರಂಪ್ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

'ಫೆಡರಲ್ ಕಾನೂನಿನ ಅಡಿಯಲ್ಲಿ ಆಮದು ವಸ್ತುಗಳ ಮೇಲೆ ಸುಂಕ ಹೇರಲು ಅಧ್ಯಕ್ಷರು ಅಧಿಕಾರ ಹೊಂದಿದ್ದಾರೆ' ಎಂದು ಸುಪ್ರೀಂ ಕೋರ್ಟ್‌ಗೆ ಟ್ರಂಪ್ ಸರ್ಕಾರವು ತಿಳಿಸಿದೆ.

ಟ್ರಂಪ್ ಅವರು ಹೆಚ್ಚಿನ ಸುಂಕ ವಿಧಿಸಿರುವುದು ತುರ್ತು ಅಧಿಕಾರ ಕಾನೂನಿನ ದುರ್ಬಳಕೆಯಾಗಿದೆ. ಇದನ್ನು ರದ್ದುಮಾಡಬೇಕು ಎಂದು ಫೆಡರಲ್ ನ್ಯಾಯಾಲಯವು ತಿಳಿಸಿತ್ತು. ಹೊಸ ಬೆಳವಣಿಗೆಯಲ್ಲಿ ಟ್ರಂಪ್ ಆಡಳಿತವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಈ ಪ್ರಕರಣವನ್ನು ಆದಷ್ಟು ಬೇಗ ನ್ಯಾಯಮೂರ್ತಿಗಳು ಪರಿಗಣಿಸಿ, ನವೆಂಬರ್‌ನಲ್ಲಿಯೇ ವಿಚಾರಣೆ ಆರಂಭಿಸಬೇಕು' ಎಂದು ಸಾಲಿಸಿಟರ್ ಜನರಲ್ ಡಿ.ಜಾನ್ ಸೌರ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡಿದರು.

ಅನಿಯಂತ್ರಿತ ಸುಂಕ-ಆತಂಕಕಾರಿ (ನ್ಯೂಯಾರ್ಕ್ ವರದಿ): 'ಭಾರತದ ಮೇಲೆ ಡೊನಾಲ್ಡ್ ಟ್ರಂಪ್ ಸರ್ಕಾರವು ಅನಿಯಂತ್ರಿತ ಸುಂಕ ಹೇರುವ ಮೂಲಕ ಭಾರತದೊಂದಿಗೆ ಸಂಬಂಧಕ್ಕೆ ಭಂಗ ತಂದುಕೊಳ್ಳುವ ಆತಂಕ ಎದುರಾಗಿದೆ' ಎಂದು ಅಮೆರಿಕದ ಸಂಸದ ಗ್ರೆಗೊರಿ ಮೀಕ್ಸ್ ತಿಳಿಸಿದ್ದಾರೆ.

ಮೀಕ್ಸ್ ಅವರು ಡೆಮಾಕ್ರಟ್ಸ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯ ಶ್ರೇಯಾಂಕ ಸದಸ್ಯರಾಗಿದ್ದಾರೆ.

ಅಮೆರಿಕದ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಜೊತೆಗೆ ಸಭೆ ನಡೆಸಿದ ಬಳಿಕ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಭಾರತ ಹಾಗೂ ಅಮೆರಿಕ ಜೊತೆಗಿನ ಸಂಬಂಧದ ಕುರಿತು ನಿರಂತರ ಬೆಂಬಲವಿದೆ. 'ಕ್ವಾಡ್' ಮೂಲಕ ಕಳೆದ 25 ವರ್ಷಗಳಿಂದ ಉಭಯ ದೇಶಗಳ ನಡುವಿನ ಸಂಬಂಧವು ಮತ್ತಷ್ಟು ಗಟ್ಟಿಯಾಗಿದೆ' ಎಂದು ಮೀಕ್ಸ್ ಅವರು ಕ್ವಾತ್ರಾ ಅವರಿಗೆ ತಿಳಿಸಿದ್ದಾರೆ' ಎಂದು ಡೆಮಾಕ್ರಟ್ಸ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯು ತಿಳಿಸಿದೆ.

'ಮೀಕ್ಸ್ ಅವರ ನಾಯಕತ್ವದ ಅಡಿಯಲ್ಲಿ ಅಮೆರಿಕ ಹಾಗೂ ಭಾರತದ ಸಂಬಂಧಕ್ಕೆ ನಿರಂತರ ಸಲಹೆ ಹಾಗೂ ಧೃಡವಾದ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಕ್ವಾತ್ರಾ ತಿಳಿಸಿದ್ದಾರೆ.

ಪರಸ್ಪರ ಹಿತಾಸಕ್ತಿಯ ವಿಶಾಲ ಸಮಸ್ಯೆಗಳು ಸೇರಿದಂತೆ ವ್ಯಾಪಾರ, ಇಂಧನ ಹಾಗೂ ಇಂಡೋ–ಫೆಸಿಫಿಕ್ ವಿಷಯಗಳಿಗೆ ಸಂಬಂಧಿಸಿ ನಾವು ಮಾತುಕತೆ ನಡೆಸಿದೆವು' ಎಂದು ಅವರು ಹೇಳಿದ್ದಾರೆ.

'ರಾಜ್ಯಗಳಿಗೆ ವಿಶೇಷ ಪರಿಹಾರ ನೀಡಿ'

'ಜಿಎಸ್‌ಟಿ 2.0'ಗೆ ಕಾಯುವಿಕೆ ಮುಂದುವರಿಯಲಿದೆ: ಕಾಂಗ್ರೆಸ್

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದರಗಳನ್ನು ಪರಿಷ್ಕರಿಸುವ ಮಹತ್ವದ ನಿರ್ಧಾರವನ್ನು ಜಿಎಸ್‌ಟಿ ಮಂಡಳಿ ಕೈಗೊಂಡಿದೆ. ಆದರೆ, ಕಾಂಗ್ರೆಸ್ ಪಕ್ಷ ತೆರಿಗೆ ವ್ಯವಸ್ಥೆಯಲ್ಲಿ ಇನ್ನಷ್ಟು ಬದಲಾವಣೆಯ ಅಗತ್ಯವಿದೆ ಎಂದಿದೆ.

ಇದೀಗ ಆಗಿರುವ ಪರಿಷ್ಕರಣೆಯನ್ನು 'ಜಿಎಸ್‌ಟಿ 1.5' ಎಂದು ಕರೆದಿರುವ ಕಾಂಗ್ರೆಸ್, ನಿಜವಾದ 'ಜಿಎಸ್‌ಟಿ 2.0'ಗೆ ಕಾಯುವಿಕೆ ಮುಂದುವರಿದಿದೆ ಎಂದು ಹೇಳಿದೆ. ಜಿಎಸ್‌ಟಿ ವ್ಯವಸ್ಥೆಯನ್ನು ಸರಳಗೊಳಿಸಬೇಕು ಎಂದು ಪಕ್ಷವು ಹಲವು ವರ್ಷಗಳಿಂದ ಒತ್ತಾಯಿಸುತ್ತಲೇ ಬಂದಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಹೇಳಿದ್ದಾರೆ.

ಜಿಎಸ್‌ಟಿ ದರ ಪರಿಷ್ಕರಣೆಯು ರಾಜ್ಯಗಳ ವರಮಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಆದ್ದರಿಂದ ರಾಜ್ಯಗಳ ಆರ್ಥಿಕ ಹಿತಾಸಕ್ತಿ ರಕ್ಷಣೆಗಾಗಿ 2024–25 ಅನ್ನು ಆರಂಭಿಕ ವರ್ಷವಾಗಿ ಪರಿಗಣಿಸಿ 5 ವರ್ಷಗಳಿಗೆ ವಿಶೇಷ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

'ಸರಳ ಮತ್ತು ಜನಸಾಮಾನ್ಯರಿಗೆ ಹೊರೆಯಾಗದಂತಹ ತೆರಿಗೆ ವ್ಯವಸ್ಥೆ ಬೇಕು ಎಂದು ಕಾಂಗ್ರೆಸ್ ಪಕ್ಷ ತನ್ನ 2019 ಮತ್ತು 2024ರ ಚುನಾವಣಾ ಪ್ರಣಾಳಿಕೆಯಲ್ಲಿ ಒತ್ತಾಯಿಸಿತ್ತು. ಎಂಎಸ್‌ಎಂಇ ಮತ್ತು ಸಣ್ಣ ವ್ಯಾಪಾರಿಗಳನ್ನು ಸಂಕಷ್ಟಕ್ಕೆ ದೂಡಿರುವ ಜಿಎಸ್‌ಟಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗೆ ಆಗ್ರಹಿಸಿತ್ತು' ಎಂದು ಹೇಳಿದ್ದಾರೆ.

'2011ರಲ್ಲಿ ಅಂದಿನ ಹಣಕಾಸು ಸಚಿವ ಪ್ರಣವ್ ಮುಖರ್ಜಿ ಅವರು ಜಿಎಸ್‌ಟಿ ಮಸೂದೆ ತಂದಾಗ ಬಿಜೆಪಿಯವರು ವಿರೋಧಿಸಿದ್ದರು. ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೂ ಜಿಎಸ್‌ಟಿಯನ್ನು ಬಲವಾಗಿ ವಿರೋಧಿಸಿದ್ದರು' ಎಂದಿದ್ದಾರೆ.

'ಇಂದು ಅದೇ ಬಿಜೆಪಿ, ಜನಸಾಮಾನ್ಯರ ಮೇಲೆ ತೆರಿಗೆ ಹೊರೆ ಹಾಕಿ ದಾಖಲೆಯ ಜಿಎಸ್‌ಟಿ ಸಂಗ್ರಹಿಸಲಾಗಿದೆ ಎಂದು ಹೇಳಿಕೊಳ್ಳುತ್ತಿದೆ. ದೇಶದ ಇತಿಹಾಸದಲ್ಲಿ ರೈತರ ಮೇಲೆ ತೆರಿಗೆ ವಿಧಿಸಿದ್ದು ಇದೇ ಮೊದಲು. ಮೋದಿ ಸರ್ಕಾರ ಕೃಷಿ ಕ್ಷೇತ್ರದ ಕನಿಷ್ಠ 36 ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿದೆ' ಎಂದು ಟೀಕಿಸಿದ್ದಾರೆ.

'ಬಿಜೆಪಿ ಸರ್ಕಾರವು ಹಾಲು, ಮೊಸರು, ಹಿಟ್ಟು, ಧಾನ್ಯಗಳು, ಶಾಲಾ ಮಕ್ಕಳು ಬಳಸುವ ಪೆನ್ಸಿಲ್, ಪುಸ್ತಕಗಳ ಮೇಲೂ ತೆರಿಗೆ ವಿಧಿಸಿದೆ. ಅದಕ್ಕಾಗಿಯೇ ನಾವು ಬಿಜೆಪಿಯ ಈ ಜಿಎಸ್‌ಟಿಯನ್ನು 'ಗಬ್ಬರ್ ಸಿಂಗ್ ತೆರಿಗೆ' ಎಂದು ಕರೆದಿದ್ದೆವು' ಎಂದು ಖರ್ಗೆ ಹೇಳಿದ್ದಾರೆ.

> ತಾನು ಎಂಟು ವರ್ಷಗಳಿಂದ ನಡೆದು ಬಂದ ಹಾದಿ ತಪ್ಪಾಗಿದೆ ಎಂಬುದನ್ನು ಅರಿತುಕೊಂಡು ಸರ್ಕಾರ 'ಯು ಟರ್ನ್' ತೆಗೆದುಕೊಂಡಿರುವುದು ನನಗೆ ಸಂತಸ ಉಂಟುಮಾಡಿದೆ
>
> **ಪಿ.ಚಿದಂಬರಂ,** ಕಾಂಗ್ರೆಸ್ ನಾಯಕ

> ವರಮಾನ ನಷ್ಟ ಸರಿದೂಗಿಸಲು ಪರಿಹಾರ ನೀಡುವ ವ್ಯವಸ್ಥೆಯನ್ನು ಇನ್ನೂ ಐದು ವರ್ಷ ಮುಂದುವರಿಸಲು ರಾಜ್ಯಗಳು ಇಟ್ಟಿರುವ ಬೇಡಿಕೆ ಈಡೇರಿಲ್ಲ
>
> **ಜೈರಾಮ್ ರಮೇಶ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

> ಮೋದಿ ಸರ್ಕಾರವು ಎಂಟು ವರ್ಷಗಳ ವಿಳಂಬದ ನಂತರ, ಜಿಎಸ್‌ಟಿ ಕುರಿತಂತೆ ಗಾಢ ನಿದ್ರೆಯಿಂದ ಎಚ್ಚರಗೊಂಡು ದರ ಪರಿಷ್ಕರಣೆಯ ಬಗ್ಗೆ ಮಾತನಾಡಿರುವುದು ಒಳ್ಳೆಯ ಬೆಳವಣಿಗೆ
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಸಿಹಿ ತಿಂಡಿ ಜತೆ ಮಿಕ್ಸ್ಚರ್ ಸಹ ಅಸುರಕ್ಷಿತ!

ಒಂದನೇ ಪುಟದಿಂದ...

2014ರ ಫೆಬ್ರವರಿ ತಿಂಗಳಿಂದ ಈ ವಿಶೇಷ ಅಭಿಯಾನ ಪ್ರಾರಂಭವಾಗಿದೆ. 2025ರ ಮೇ ಅಂತ್ಯದ ವೇಳೆಗೆ 19 ಬಗೆಯ ತಿನಿಸು ಹಾಗೂ ಪಾನೀಯಗಳ 3,787 ಮಾದರಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಈ ಮಾದರಿಗಳನ್ನು ಬೀದಿ ಬದಿ ಆಹಾರದ ಮಳಿಗೆಗಳು ಹಾಗೂ ಹೋಟೆಲ್‌ಗಳಿಂದ ಸಂಗ್ರಹಿಸಲಾಗಿತ್ತು. ಇವುಗಳಲ್ಲಿ 374 ಮಾದರಿಗಳು ಅಸುರಕ್ಷಿತವೆಂಬ ವರದಿಗಳು ಬಂದಿವೆ.

ಮೊಕದ್ದಮೆ ದಾಖಲು: ಜಿಲೇಬಿ, ಕೇಕ್, ಖೋವಾ, ಚಟ್ನಿಗಳು, ಸಾಸ್‌ಗಳು, ಕಬಾಬ್ ಸೇರಿ ವಿವಿಧ ಆಹಾರ ಮಾದರಿ ಗಳ ಜತೆಗೆ, ಶರಬತ್ತು, ಐಸ್‌ಕ್ರೀಂ, ಹಣ್ಣಿನ ಜ್ಯೂಸ್‌ಗಳು, ತಂಪು ಪಾನೀಯಗಳ ಮಾದರಿಗಳನ್ನೂ ಸಂಗ್ರಹಿಸಿ, ವಿಶ್ಲೇಷಣೆ ಮಾಡಲಾಗಿದೆ. ಆಹಾರ ಮಾದರಿಗಳ ವಿಶ್ಲೇಷಣಾ ವರದಿಗಳ ಅನ್ವಯ, ಆಹಾರ ಉದ್ದಿಮೆದಾರರಿಗೆ ಎಚ್ಚರಿಕೆ ನೀಡಿ ಅರಿವು ಮೂಡಿಸಲಾಗುತ್ತಿದೆ. ಇಲಾಖೆ ಮಾಹಿತಿ ಪ್ರಕಾರ, ಈ ವಿಶ್ಲೇಷಣಾ ವರದಿ ಆಧರಿಸಿ 68 ಪ್ರಕರಣಗಳಲ್ಲಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನೂ ದಾಖಲಿಸಲಾಗಿದೆ.

ಈಗಾಗಲೇ ಗೋಬಿ ಮಂಚೂರಿ ಮತ್ತು ಕಬಾಬ್‌ಗಳಲ್ಲಿ ಕೃತಕ ಬಣ್ಣಗಳ ಬಳಕೆಯನ್ನು ನಿರ್ಬಂಧಿಸಿ ಆದೇಶ ಹೊರಡಿಸಲಾಗಿದೆ. ಬಾಂಬೆ ಮಿಠಾಯಿಗೆ (ಕಾಟನ್ ಕ್ಯಾಂಡಿ) ನಿಷೇಧಿತ ಹಾಗೂ ಕ್ಯಾನ್ಸರ್‌ಕಾರಕ 'ರೊಡಮೈನ್ ಬಿ' ಬಣ್ಣ ಬಳಕೆ ಮಾಡುತ್ತಿರುವುದು ಪ್ರಯೋಗಾಲಯದ ವಿಶ್ಲೇಷಣೆಯಿಂದ ದೃಢಪಟ್ಟಿತ್ತು. ಆದ್ದರಿಂದ ಇಲಾಖೆಯು ಬಾಂಬೆ ಮಿಠಾಯಿಗಳಿಗೆ ಸಹ ಕೃತಕ ಬಣ್ಣ ಬಳಕೆ ನಿರ್ಬಂಧಿಸಿ, ಆದೇಶ ಹೊರಡಿಸಿದೆ.

'ಆಹಾರ ಪದಾರ್ಥಗಳ ಬಳಕೆಗೆ ಅನುಮೋದನೆ ನೀಡಿರದ ಬಣ್ಣ ಬಳಸಿದಲ್ಲಿ ಅಥವಾ ಅನುಮೋದಿತ ಕೃತಕ ಬಣ್ಣಗಳನ್ನು ನಿಗದಿತ ಪ್ರಮಾಣಕ್ಕಿಂತ ಅಧಿಕ ಬಳಸಿದಲ್ಲಿ, ಅಂತಹ ಆಹಾರ ಮಾದರಿಗಳನ್ನು ಪ್ರಯೋಗಾಲಯದ ವಿಶ್ಲೇಷಣೆ ಅನುಸಾರ ಅಸುರಕ್ಷಿತ ವೆಂದು ಪರಿಗಣಿಸಲಾಗುತ್ತಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಶೇಷ ಅಭಿಯಾನದಲ್ಲಿ ಸಂಗ್ರಹಿಸಿದ ಮಾದರಿ

ತಿನಿಸು–ಪಾನೀಯ	ಸಂಗ್ರಹಿಸಿದ ಮಾದರಿ ಸಂಖ್ಯೆ	ಅಸುರಕ್ಷಿತ ಮಾದರಿ ಸಂಖ್ಯೆ
ಬಾಂಬೆ ಮಿಠಾಯಿ	61	24
ಶುಗರ್ ಕ್ಯಾಂಡಿ	135	05
ಮೈಸೂರು ಪಾಕ್	191	24
ತಂಪು ಪಾನೀಯ/ ಜ್ಯೂಸ್	207	01
ಐಸ್‌ಕ್ರೀಂ	175	01
ಕಬಾಬ್	314	86
ಸಾಸ್	160	33
ಚಟ್ನಿ	147	13
ಗೋಬಿ ಮಂಚೂರಿ	210	30
ಕೇಕ್	898	19
ಖೋವಾ	100	00
ಸ್ವೀಟ್ಸ್	606	24
ಕರಿದ ಹಸಿರು ಬಟಾಣಿ	114	69
ಖಾರಾ ಮಿಕ್ಸ್ಚರ್	162	43
ಶರಬತ್ತು	143	00
ಜಿಲೇಬಿ	164	02

CONNECT

ಸ್ಪಂದನ ಚಾರಿಟಬಲ್ ಟ್ರಸ್ಟ್ (ರಿ)

ತಿಮ್ಮಲಾಪುರ ರಸ್ತೆ, ದೂಪದಹಳ್ಳಿ, ಕೊಟ್ಟೂರು ತಾಲೂಕು, ವಿಜಯನಗರ ಜಿಲ್ಲೆ–583134 ಮೊ : 9448394686, 7483388919.

E-Mail Id: Naalkudinadabaduku@gmail.com

ಆಶ್ರಯ ಕೇಂದ್ರ

ಹಲವಾರು ವರ್ಷಗಳಿಂದ ನಮ್ಮ ಸಂಸ್ಥೆಯು ಸಾಮಾಜಿಕ ಜವಾಬ್ದಾರಿ ಹೊತ್ತು ಅನಾಥರಿಗೆ, ವಯೋವೃದ್ಧರಿಗೆ, ಅಂಗವಿಕಲರಿಗೆ (ವಿಕಲಚೇತನ) ನಿಶ್ಯಕ್ತರಿಗೆ ಹಾಗೂ ಹಾಸಿಗೆ ಹಿಡಿದಿರುವ ರೋಗಿಗಳಿಗೆ ನಿಲುಕುವ ಆಶ್ರಯ ತಾಣವಾಗಿದೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ದೂರವಾಣಿಗಳಿಗೆ ಸಂಪರ್ಕಿಸಲು ಕೋರಲಾಗಿದೆ

7483388919, 9448394686

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Situation Required

HYDERABAD, KPHB: A family needs an experienced lady baby caretaker(age 20-26 yrs, unmarried). Good salary, food, accommodation provided. Direct, no consultancy Ph:9966794999

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

FLIPKART AMAZON ಕಂಪನಿಗೆ OFFICE ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ (18K to 45K) 7th, 10th, ANY DEGREE CONTACT: 8971776882/ 9980832209

ಪ್ರವಾಸ

Travel

ಭಾರತೀಯ ರೈಲ್ವೆ

ಶಿವ ಸಾಯಿ ಯಾತ್ರಾ

ನವ ಬೃಂದಾವನ, ಮಂತ್ರಾಲಯ ಪಂಢರಪುರ, ತ್ರ್ಯಂಬಕೇಶ್ವರ ಭೀಮಾಶಂಕರ,ಗೃಷ್ಣೇಶ್ವರ ಶ್ರೀಶೈಲಂ,ಮತ್ತು ಶಿರಡಿ

02.10.25 | 3AC Rs, 37000 | 11 ದಿವಸ ರೈಲಿನಲ್ಲಿ ಪ್ರಯಾಣ - ವಸತಿ - ಊಟ

93550 21516 WWW.TOURTIMES.IN

ಕುಕಿ ಸಂಘಟನೆ ಜತೆ ಕೇಂದ್ರ ಒಪ್ಪಂದ

ಮಣಿಪುರದಲ್ಲಿ ಶಾಶ್ವತ ಶಾಂತಿ, ಸ್ಥಿರತೆ ಸ್ಥಾಪನೆಗೆ ತ್ರಿಪಕ್ಷೀಯ ಸಭೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಶಾಶ್ವತ ಶಾಂತಿ ಮತ್ತು ಸ್ಥಿರತೆ ಸ್ಥಾಪಿಸುವುದೂ ಸೇರಿದಂತೆ ಹಲವು ನಿಯಮಗಳ ಕುರಿತ ಒಪ್ಪಂದಕ್ಕೆ ಕೇಂದ್ರ ಸರ್ಕಾರ ಹಾಗೂ ಎರಡು ಪ್ರಮುಖ ಕುಕಿ ಸಂಘಟನೆಗಳು ಗುರುವಾರ ಸಹಿ ಹಾಕಿದವು.

‘ಕುಕಿ ರಾಷ್ಟ್ರೀಯ ಸಂಘಟಣೆ (ಕೆಎನ್‌ಒ) ಮತ್ತು ಯುನೈಟೆಡ್ ಪೀಪಲ್ಸ್ ಫ್ರಂಟ್ (ಯುಪಿಎಫ್) ಕಾರ್ಯಾಚರಣೆ ನಿಗ್ರಹ (ಎಸ್‌ಒಒ) ಒಪ್ಪಂದಕ್ಕೆ ಸಹಿ ಹಾಕಿವೆ. ಇದು ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ನಡೆಯುತ್ತಿರುವ ಪ್ರಯತ್ನಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಕೆಲ ದಿನಗಳಿಂದ ಗೃಹ ಸಚಿವಾಲಯದ ಅಧಿಕಾರಿಗಳು ಮತ್ತು ಕುಕಿ ಗುಂಪುಗಳ ನಿಯೋಗದ ನಡುವೆ ನಡೆದ ಸರಣಿ ಸಭೆಗಳ ಬಳಿಕ ಈ ಒಪ್ಪಂದ ನಡೆದಿದೆ ಎಂದು ಗೃಹ ಸಚಿವಾಲಯ ಬಿಡುಗಡೆ ಮಾಡಿದ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಇಂದು ದೆಹಲಿಯಲ್ಲಿ ಗೃಹ ಸಚಿವಾಲಯ, ಮಣಿಪುರ ಸರ್ಕಾರ, ಕೆಎನ್‌ಒ ಮತ್ತು ಯುಪಿಎಫ್ ಪ್ರತಿನಿಧಿಗಳ ನಡುವೆ ತ್ರಿಪಕ್ಷೀಯ ಸಭೆ ನಡೆಯಿತು. ಒಪ್ಪಂದಕ್ಕೆ ಸಹಿ ಹಾಕಿದ ದಿನದಿಂದ ಒಂದು ವರ್ಷದ ಅವಧಿಗೆ ಜಾರಿಗೆ ಬರುವಂತೆ ನಿಯಮಗಳು ಮತ್ತು ಷರತ್ತುಗಳ ಅನ್ವಯ ಎಲ್ಲ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಒಪ್ಪಂದಕ್ಕೆ ಸಹಿ ಹಾಕಲಾಗಿದೆ’ ಎಂದು ಗೃಹ ಸಚಿವಾಲಯ ತಿಳಿಸಿದೆ.

ಮಣಿಪುರದ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಮತ್ತು ಮಾತುಕತೆಯ ಮೂಲಕ ಶಾಶ್ವತ ಶಾಂತಿ ಮತ್ತು ಸ್ಥಿರತೆಯನ್ನು ತರಲು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಸಂಘರ್ಷ ಪೀಡಿತ ಪ್ರದೇಶಗಳಿಂದ ಏಳು ಶಿಬಿರಗಳನ್ನು ಸ್ಥಳಾಂತರಿಸಬೇಕು. ನಿರಾಶ್ರಿತರ ಶಿಬಿರಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಹತ್ತಿರದ ಸಿಆರ್‌ಪಿಎಫ್ ಮತ್ತು ಬಿಎಸ್‌ಎಫ್ ಶಿಬಿರಗಳಿಗೆ ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸಬೇಕು. ವಿದೇಶಿ ಪ್ರಜೆಗಳನ್ನು ಪಟ್ಟಿಯಿಂದ ತೆಗೆದುಹಾಕುವುದು ಮತ್ತು ಸಂಘಟನೆಯ ಸದಸ್ಯರನ್ನು ಭದ್ರತಾ ಪಡೆಗಳ ಕಟ್ಟುನಿಟ್ಟಿನ ತನಿಖೆಗೆ ಒಳಪಡಿಸಲು ಕೆಎನ್‌ಒ ಮತ್ತು ಯುಪಿಎಫ್ ಒಪ್ಪಿಕೊಂಡಿವೆ.

2008ರಲ್ಲಿ ಮೊದಲ ಬಾರಿಗೆ ಎಸ್‌ಒಒ ಒಪ್ಪಂದ ನಡೆದಿತ್ತು. ಬಳಿಕ ಅದನ್ನು ನಿಗದಿತ ಅವಧಿಗೆ ನವೀಕರಿಸಲಾಗುತ್ತಿತ್ತು. ಆದರೆ, ಜನಾಂಗೀಯ ಕಲಹದಿಂದಾಗಿ ಫೆಬ್ರುವರಿ 2024ರಿಂದ ಈ ಒಪ್ಪಂದ ಮುಂದುವರಿದಿರಲಿಲ್ಲ.

ಮೋದಿ ಭೇಟಿ ಸಾಧ್ಯತೆ: ಡ್ರೋನ್ ಹಾರಾಟ ನಿಷೇಧ

ಪ್ರಧಾನಿ ನರೇಂದ್ರ ಮೋದಿಯವರು ಈ ತಿಂಗಳ ಕೊನೆಯಲ್ಲಿ ಮಣಿಪುರಕ್ಕೆ ಭೇಟಿ ನೀಡಲಿರುವ ಸಾಧ್ಯತೆ ಇರುವುದರಿಂದ ‘ಚುರಾಚಾಂದಪುರ’ ಜಿಲ್ಲೆಯಲ್ಲಿ ಡ್ರೋನ್ ಹಾರಾಟವನ್ನು ನಿಷೇಧಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ವಿವಿಐಪಿ ಭೇಟಿ ಸಂದರ್ಭದಲ್ಲಿ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲೆಯಲ್ಲಿ ‘ನೋ ಡ್ರೋನ್ ಝೋನ್’ (ಡ್ರೋನ್ ಹಾರಾಟ ನಿಷೇಧಿತ ವಲಯ) ಘೋಷಿಸಲಾಗಿದೆ. ಡ್ರೋನ್‌ಗಳು, ಯುಎವಿ ಹಾಗೂ ಬಲೂನ್‌ಗಳು ಸೇರಿದಂತೆ ಯಾವುದೇ ರೀತಿಯ ವಾಯುಯಾನ ಸಾಧನಗಳನ್ನು ಹಾರಿಸುವುದನ್ನು ನಿಷೇಧಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಧರುಣ್ ಕುಮಾರ್ ಅವರು ಆದೇಶ ಹೊರಡಿಸಿದ್ದಾರೆ.

ರೈಲು ಯೋಜನೆ ಉದ್ಘಾಟನೆಗೆ ಮಿಜೋರಾಂಗೆ ಭೇಟಿ ನೀಡಲಿರುವ ಮೋದಿ ಅವರು, ಆ ಬಳಿಕ ಮಣಿಪುರಕ್ಕೆ ಸೆ.13ರಂದು ಬರುವ ಸಾಧ್ಯತೆ ಇದೆ ಎಂದು ಐಜ್ವಾಲ್‌ನ ಅಧಿಕಾರಿಗಳು ಹೇಳಿದ್ದಾರೆ. ಮಣಿಪುರಕ್ಕೆ ಮೋದಿ ಅವರು ಭೇಟಿ ನೀಡುವ ಕುರಿತು ಬಿಜೆಪಿ ಅಥವಾ ಸರ್ಕಾರದಿಂದ ಯಾವುದೇ ಅಧಿಕೃತ ಮಾಹಿತಿ ಇಲ್ಲ.

ಕೆಜೆಡ್‌ಸಿ ಜೊತೆಗೂ ಒಪ್ಪಂದ

ಕೇಂದ್ರ ಸರ್ಕಾರ ಮತ್ತು ಮಣಿಪುರ ಆಡಳಿತವು ನಾಗರಿಕ ಗುಂಪು ಕುಕಿ-ಜೋ ಕೌನ್ಸಿಲ್ (ಕೆಜೆಡ್‌ಸಿ) ಸಂಘಟನೆಯೊಂದಿಗೂ ಹೊಸ ಒಪ್ಪಂದ ಮಾಡಿಕೊಂಡಿವೆ. ‘ಮಣಿಪುರದ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಿಕೊಳ್ಳಲು, ಬಂಡುಕೋರರ ನೆಲೆಗಳನ್ನು ಸ್ಥಳಾಂತರಿಸಲು, ಮಣಿಪುರದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ-02 ಅನ್ನು ಪ್ರಯಾಣಿಕರು ಮತ್ತು ಅಗತ್ಯ ವಸ್ತುಗಳ ಸಂಚಾರಕ್ಕೆ ಮುಕ್ತಗೊಳಿಸಲು. ಸರ್ಕಾರ ನಿಯೋಜಿಸಿರುವ ಭದ್ರತಾ ಪಡೆಗಳೊಂದಿಗೆ ಸಹಕರಿಸಲು ಕೆಜೆಡ್‌ಸಿ ಬದ್ಧವಾಗಿದೆ’ ಎಂದು ಗೃಹ ಸಚಿವಾಲಯ ಹೇಳಿದೆ.

ಬಿಜೆಪಿಯ 5 ಶಾಸಕರ ಅಮಾನತು

ಬಂಗಾಳಿ ವಲಸಿಗರ ದೌರ್ಜನ್ಯ ಖಂಡಿಸಿ ಗೊತ್ತುವಳಿ ಮಂಡನೆ

ಕೋಲ್ಕತ್ತ (ಪಿಟಿಐ): ಬಂಗಾಳಿ ಮಾತನಾಡುವ ವಲಸಿಗರ ಮೇಲಿನ ದೌರ್ಜನ್ಯ ಖಂಡಿಸಿ ತೆಗೆದುಕೊಂಡ ಗೊತ್ತುವಳಿಯು ಗುರುವಾರ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ನಿರ್ಣಯದ ಮೇಲಿನ ಚರ್ಚೆಯ ವೇಳೆ ಆಡಳಿತ ಪಕ್ಷ ಟಿಎಂಸಿ ಮತ್ತು ವಿರೋಧ ಪಕ್ಷ ಬಿಜೆಪಿಯ ಶಾಸಕರ ನಡುವೆ ಸಂಘರ್ಷದ ಸನ್ನಿವೇಶ ಸೃಷ್ಟಿಸಿತು. ಗೊತ್ತುವಳಿ ವಿರೋಧಿಸಿ ಗದ್ದಲ ಮುಂದುವರಿಸಿದ ಬಿಜೆಪಿಯ ಐವರು ಶಾಸಕರನ್ನು ಸ್ಪೀಕರ್ ಅಮಾನತುಗೊಳಿಸಿದರು.

ಬಿಜೆಪಿಯ ಮುಖ್ಯ ಸಚೇತಕ ಶಂಕರ್ ಘೋಷ್, ಶಾಸಕರಾದ ಅಗ್ನಿಮಿತ್ರ ಪಾಲ್, ಮಿಹಿರ್ ಗೋಸ್ವಾಮಿ, ಬಂಕಿಮ್ ಘೋಷ್, ಅಶೋಕ್ ದಿಂಡಾ ಅವರನ್ನು ಸ್ಪೀಕರ್ ಬಿಮನ್ ಬ್ಯಾನರ್ಜಿ ಅಮಾನತುಗೊಳಿಸಿದರು. ಸದನದಿಂದ ಹೊರಗೆ ಹೋಗಲು ನಿರಾಕರಿಸಿದ ಶಂಕರ್ ಘೋಷ್ ಅವರನ್ನು ಮಾರ್ಷಲ್‌ಗಳು ಬಲವಂತಾಗಿ ಎತ್ತಿಕೊಂಡು ಹೊರಗೆ ಹಾಕಿದರು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಿರ್ಣಯದ ಬಗ್ಗೆ ಮಾತನಾಡಲು ಎದ್ದು ನಿಂತಾಗ, ಬಿಜೆಪಿ ಸದಸ್ಯರು ಭಾರಿ ಗದ್ದಲ ಎಬ್ಬಿಸಿ, ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು. ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರನ್ನು ಸೆ.2ರಂದು ಅಮಾನತುಗೊಳಿಸಿದ್ದು ಯಾಕೆ ಎಂದು ಪ್ರಶ್ನಿಸಿ, ಚರ್ಚೆಗೆ ಅಡ್ಡಿಪಡಿಸಿದರು.

ಟಿಸಿಎಂ ಶಾಸಕರೂ ಘೋಷಣೆ ಕೂಗಲು ಆರಂಭಿಸಿದರು. ಎಷ್ಟೇ ಗದ್ದಲ ಮುಂದುವರಿದರೂ ಸ್ಪೀಕರ್ ಕಲಾಪವನ್ನು ಮುಂದೂಡಲಿಲ್ಲ. ದ್ವನಿವರ್ಧಕದಿಂದ ಪ್ರಕ್ರಿಯೆಗಳನ್ನು ಮುಂದುವರಿಸಿದರು. ತಮ್ಮತ್ತ ನೀರಿನ ಬಾಟಲಿಗಳನ್ನು ಎಸೆಯಲಾಯಿತು ಎಂದು ಬಿಜೆಪಿ ಶಾಸಕರು ದೂರಿದರು.

ಮುಖ್ಯಮಂತ್ರಿ ಭಾಷಣ ಮುಗಿಯುತ್ತಿದ್ದಂತೆ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಬೆನ್ನಲ್ಲೇ, ಧ್ವನಿ ಮತದ ಮೂಲಕ ನಿರ್ಣಯವನ್ನು ಅಂಗೀಕರಿಸಲಾಯಿತು.

‘ಟಿಎಂಸಿಯ ಮೊಸಳೆ ಕಣ್ಣೀರು’

‘ಹಲವು ರಾಜ್ಯಗಳಲ್ಲಿ ಬಂಗಾಳಿ ಮಾತನಾಡುವ ವಲಸಿಗರ ಮೇಲೆ ದೌರ್ಜನ್ಯ ನಡೆಯುತ್ತಿದೆ’ ಎಂದು ನಿರ್ಣಯ ಅಂಗೀಕರಿಸುವುದರ ಹಿಂದಿನ ಕಾರಣವೇನು ಎಂದು ಬಿಜೆಪಿ ಪ್ರಶ್ನಿಸಿದೆ. ಆಡಳಿತ ಪಕ್ಷವು ಈ ವಿಚಾರದಲ್ಲಿ ಮೊಸಳೆ ಕಣ್ಣೀರು ಸುರಿಸುತ್ತಿದೆ ಎಂದು ಬಿಜೆಪಿ ಶಾಸಕ ಅಗ್ನಿಮಿತ್ರ ಪಾಲ್ ದೂರಿದ್ದಾರೆ.

ಬಿಜೆಪಿ ಶಾಸಕರು ಉದ್ದೇಶಪೂರ್ವಕವಾಗಿಯೇ ಬಂಗಾಳಿ ವಲಸಿಗರ ವಿರುದ್ಧದ ದೌರ್ಜನ್ಯ ಖಂಡನೆ ನಿರ್ಣಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಸತ್ಯ ಹೊರಬರುವುದು ಅವರಿಗೆ ಬೇಕಿಲ್ಲ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸಂಕ್ಷಿಪ್ತ ಸುದ್ದಿ

ಠಾಣೆಯಲ್ಲಿಲ್ಲ ಸಿ.ಸಿ.ಟಿ.ವಿ: ಸ್ವಯಂ ಪ್ರೇರಿತ ಪ್ರಕರಣ

ನವದೆಹಲಿ (ಪಿಟಿಐ): ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮಾಡದೇ ಇರುವುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಗುರುವಾರ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಪೊಲೀಸ್ ವಶದಲ್ಲಿರುವವರ ಸಾವಿನ ಸಂಖ್ಯೆ ಹೆಚ್ಚಳವಾಗುತ್ತಿರುವುದನ್ನು ಗಮನಿಸಿ ಈ ಪ್ರಕರಣ ದಾಖಲಿಸಿದೆ.

ಕಳೆದ 8–9 ತಿಂಗಳಲ್ಲಿ ಪೊಲೀಸರ ವಶದಲ್ಲಿರುವಾಗಲೇ 11 ಮಂದಿ ಮೃತಪಟ್ಟಿದ್ದಾರೆಂದು ಹಿಂದಿ ಪತ್ರಿಕೆಯೊಂದು ವರದಿ ಮಾಡಿತ್ತು. ಬೆನ್ನಲ್ಲೇ ನ್ಯಾಯಮೂರ್ತಿ ವಿಕ್ರಮ್ ನಾಥ್ ಹಾಗೂ ನ್ಯಾ.ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಈ ಸ್ವಯಂ ಪ್ರೇರಿತ ದೂರು ದಾಖಲಿಸಲು ಆದೇಶಿಸಿದೆ.

2020ರನಲ್ಲೇ ಎಲ್ಲ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ಕೋರ್ಟ್ ಆದೇಶಿಸಿತ್ತು.

ಶಾಬಿರ್ ಜಾಮೀನು: ಎನ್‌ಐಎಗೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಕಾಶ್ಮೀರದ ಪ್ರತ್ಯೇಕತಾವಾದಿ ಶಾಬಿರ್ ಅಹಮದ್ ಶಾ ಅವರ ಜಾಮೀನು ಅರ್ಜಿ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಸುಪ್ರೀಂ ಕೋರ್ಟ್ ಗುರುವಾರ ನೋಟಿಸ್ ನೀಡಿದೆ.

ಇದೇ ಪ್ರಕರಣ ಸಂಬಂಧ ದೆಹಲಿ ಹೈಕೋರ್ಟ್ ಶಾ ಅವರಿಗೆ ಜಾಮೀನು ನೀಡಲು ನಿರಾಕರಿಸಿತ್ತು. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಶಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ತೀವ್ರ ಆರೋಗ್ಯ ಸಮಸ್ಯೆಯ ಕಾರಣ ನೀಡಿ ಶಾ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನಿಗೆ ಮನವಿ ಮಾಡಿದ್ದಾರೆ. ಅರ್ಜಿಯ ವಿಚಾರಣೆಯನ್ನು ಎರಡು ವಾರಗಳಿಗೆ ಸುಪ್ರೀಂ ಕೋರ್ಟ್ ಮುಂದೂಡಿತು.

ದನ ಕೊಂದ ಶಂಕೆ: ದಲಿತ ವ್ಯಕ್ತಿಯ ಹತ್ಯೆ

ಭುವನೇಶ್ವರ (ಪಿಟಿಐ): ದನ ಕೊಂದ ಆರೋಪದ ಮೇಲೆ 35 ವರ್ಷದ ದಲಿತ ವ್ಯಕ್ತಿಯ ಮೇಲೆ ಗುಂಪೊಂದು ಹಲ್ಲೆ ನಡೆಸಿದ್ದು, ಅವರು ಮೃತಪಟ್ಟಿದ್ದಾರೆ. ಹಲ್ಲೆಗೆ ಒಳಗಾದ ಮತ್ತೊಬ್ಬ ವ್ಯಕ್ತಿ ತೀವ್ರವಾಗಿ ಗಾಯಗೊಂಡಿದ್ದಾರೆ.

‘ಒಡಿಶಾದ ದೇವಗಢ ಜಿಲ್ಲೆಯ ರಿಯಾಮಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕುಂದೈಜುರಿ ಗ್ರಾಮದಲ್ಲಿ ಬುಧವಾರ ಈ ಘಟನೆ ನಡೆದಿದ್ದು, ಆರು ಮಂದಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಕಿಶೋರ್ ಚಮ್ಮಾರ್, ಅವರ ಸಹವರ್ತಿ ಗೌತಮ್ ನಾಯಕ್ ಎಂದು ಗುರುತಿಸಲಾಗಿದೆ. ಇಬ್ಬರೂ ನೆರೆಯ ಗ್ರಾಮಸ್ಥರಾಗಿದ್ದು, ಹಸುವಿನ ಚರ್ಮ ತೆಗೆಯುವ ಕೆಲಸ ಮಾಡುತ್ತಿದ್ದರು.

‘ಗ್ರಾಮದ ಸಮೀಪದ ಕಾಡಿನಲ್ಲಿ ಇಬ್ಬರೂ ಹಸುವಿನ ಮಾಂಸ ಕಡಿಯುತ್ತಿದ್ದುದನ್ನು ಗ್ರಾಮಸ್ಥರು ಗಮನಿಸಿದ್ದಾರೆ. ಸ್ಥಳದಲ್ಲಿಯೇ ಅದರ ತಲೆಯೂ ಸಿಕ್ಕಿತ್ತು. ದನ ಸತ್ತ ಬಳಿಕವೇ ಅದರ ಮಾಂಸವನ್ನು ಕತ್ತರಿಸುತ್ತಿರುವುದಾಗಿ ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾರೆ. ಆದರೂ, ಗುಂಪೊಂದು ಏಕಾಏಕಿ ದಾಳಿ ನಡೆಸಿದ್ದು, ಕಿಶೋರ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗೌತಮ್ ಗಾಯಗೊಂಡಿದ್ದು, ಅಲ್ಲಿಂದ ಪರಾರಿಯಾಗಿದ್ದಾರೆ’ ಎಂದು ದೇವಗಢ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. ‘ಪ್ರಕರಣದ ಸಂಬಂಧ ಆರು ಮಂದಿಯನ್ನು ಬಂಧಿಸಲಾಗಿದೆ’ ಎಂದು ಹೇಳಿದ್ದಾರೆ.

ಗಡ್ಕರಿ ಪುತ್ರರಿಗೆ ಲಾಭ: ‘ಕೈ’ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಇಬ್ಬರು ಪುತ್ರರು ಎಥೆನಾಲ್ ಮಿಶ್ರಣ ನೀತಿಯಿಂದ ಆರ್ಥಿಕವಾಗಿ ಲಾಭ ಗಳಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ನಿತಿನ್ ಗಡ್ಕರಿ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ, ಗಡ್ಕರಿ ಅವರಿಗೆ ಸಂಬಂಧಿಸಿದ ‘ಹಿತಾಸಕ್ತಿ ಸಂಘರ್ಷ’ದ ಬಗ್ಗೆ ಲೋಕಪಾಲ ತನಿಖೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲು ಹಾಕಿದರು.

‘ಎಥೆನಾಲ್ ಉತ್ಪಾದನೆ ಹೆಚ್ಚಿಸಲು ಗಡ್ಕರಿ ಅವರು 2014ರಿಂದಲೂ ಲಾಬಿ ಮಾಡುತ್ತಿದ್ದಾರೆ. ಮರ ಆಧಾರಿತ ಉತ್ಪನ್ನಗಳು ಮತ್ತು ತ್ಯಾಜ್ಯದಿಂದ ಎಥೆನಾಲ್ ಉತ್ಪಾದಿಸುವ ಐದು ಘಟಕಗಳನ್ನು ಸರ್ಕಾರ ಸ್ಥಾಪಿಸಲಿದೆ ಎಂದು ಅವರು 2018ರಲ್ಲಿ ಘೋಷಿಸಿದ್ದರು. ಮಾತ್ರವಲ್ಲ, ಎಥೆನಾಲ್ ಮಿಶ್ರಿತ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಕ್ರಮವಾಗಿ ₹55 ಹಾಗೂ ₹50ಕ್ಕೆ ಮಾರಾಟ ಮಾಡಲಾಗುವುದು ಎಂದಿದ್ದರು’ ಎಂಬುದಾಗಿ ಖೇರಾ ತಿಳಿಸಿದರು.

‘ಆದಾಗ್ಯೂ, ಒಟ್ಟು ಉತ್ಪಾದನೆಯಾಗುತ್ತಿರುವ 672 ಕೋಟಿ ಲೀಟರ್ ಎಥೆನಾಲ್‌ನಲ್ಲಿ ಶೇ 56.75ರಷ್ಟು ಕಬ್ಬಿನಿಂದ ಮತ್ತು ಶೇ 38.08ರಷ್ಟು ಆಹಾರ ಧಾನ್ಯಗಳಿಂದ ಉತ್ಪಾದಿಸಲಾಗುತ್ತಿದೆ. ಒಂದೇ ಒಂದು ಲೀಟರ್ ಕೂಡ ತ್ಯಾಜ್ಯದಿಂದ ಉತ್ಪಾದಿಸಲಾಗುತ್ತಿಲ್ಲ’ ಎಂದು ದೂರಿದರು.

‘ಕಬ್ಬಿನಿಂದ ಉತ್ಪಾದಿಸುವ ಎಥೆನಾಲ್‌ಗೆ ಏಕೆ ಪ್ರಚಾರ ನೀಡಲಾಗುತ್ತಿದೆ? ಏಕೆಂದರೆ, ಗಡ್ಕರಿ, ಅವರ ಆಪ್ತರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಲ್ಲಿ ವ್ಯವಹಾರ ಹಿತಾಸಕ್ತಿಗಳನ್ನು ಹೊಂದಿದ್ದಾರೆ’ ಎಂದರು.

‘ನಿತಿನ್ ಗಡ್ಕರಿ ಒಡೆತನದ ಸಿಯಾನ್ ಅಗ್ರೋ ಇಂಡಸ್ಟ್ರೀಸ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಸಾರಂಗ್ ಗಡ್ಕರಿ ನಿರ್ದೇಶಕರಾಗಿರುವ ಮಾನಸ್ ಅಗ್ರೋ ಇಂಡಸ್ಟ್ರೀಸ್ ಕಂಪನಿಗಳು ಎಥೆನಾಲ್ ಪೂರೈಕೆ ಮಾಡುತ್ತಿವೆ ಎಂದರು.

‘ಇ20 ಪೆಟ್ರೋಲ್ ಬಳಕೆಯನ್ನು ಉತ್ತೇಜಿಸುವುದರ ಹಿಂದೆ ಗಡ್ಕರಿ ಮತ್ತು ಅವರ ಪುತ್ರರ ಕಂಪನಿಗಳಿಗೆ ಲಾಭ ತರುವ ಉದ್ದೇಶ ಅಡಗಿದೆಯೇ, ಈ ಬಗ್ಗೆ ಪ್ರಧಾನಿ ಮೋದಿ ಅವರು ಲೋಕಪಾಲ ತನಿಖೆ ಮಾಡಲು ಧೈರ್ಯ ತೋರುವರೇ’ ಎಂದು ಖೇರಾ ಪ್ರಶ್ನಿಸಿದರು.

ಕಂಪನಿ ಆದಾಯ ಹೆಚ್ಚಳ

‘ಸಿಯಾನ್ ಆಗ್ರೋದ ಆದಾಯವು ₹18 ಕೋಟಿಯಿಂದ (2024ರ ಜೂನ್) ₹523 ಕೋಟಿಗೆ (2025ರ ಜೂನ್) ಜಿಗಿದಿದೆ. ಈ ಕಂಪನಿಯ ಷೇರಿನ ಮೌಲ್ಯ ₹37.55ರಿಂದ (2025ರ ಜನವರಿ) ₹638ಕ್ಕೆ (2025ರ ಆಗಸ್ಟ್) ಏರಿಕೆಯಾಗಿದೆ’ ಎಂದು ಪವನ್ ಖೇರಾ ತಿಳಿಸಿದರು.

ಎಥೆನಾಲ್ ಮಿಶ್ರಣ

ಶಿಶು ಮರಣ ಪ್ರಮಾಣ ಶೇ 37ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಶಿಶುಗಳ ಮರಣ ಪ್ರಮಾಣದಲ್ಲಿ (ಐಎಂಆರ್) ಗಣನೀಯ ಇಳಿಕೆ ದಾಖಲಾಗಿದೆ. 2013ಕ್ಕೆ ಹೋಲಿಸಿದರೆ 2023ರಲ್ಲಿ ಶಿಶುಗಳ ಮರಣ ಪ್ರಮಾಣವು ದಾಖಲೆಯ ಶೇ 37ರಷ್ಟು ಕಡಿಮೆಯಾಗಿದೆ.

ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಬಿಡುಗಡೆಗೊಳಿಸಿರುವ 2023ರ ಮಾದರಿ ನೋಂದಣಿ ವರದಿಯಲ್ಲಿ ಈ ವಿವರಗಳನ್ನು ನೀಡಲಾಗಿದೆ. ಒಂದು ವರ್ಷದಲ್ಲಿ ಜನಿಸಿದ ಪ್ರತಿ ಸಾವಿರ ಮಗುವಿನ ಪೈಕಿ ಮರಣ ಹೊಂದಿದ ಮಕ್ಕಳ ಸಂಖ್ಯೆಯನ್ನು ಪರಿಗಣಿಸಿ ಈ ದತ್ತಾಂಶ ನಿಗದಿಪಡಿಸಲಾಗುತ್ತದೆ.

2013ರಲ್ಲಿ ಶೇ 40ಕ್ಕೆ ತಲುಪಿದ್ದ ಶಿಶುಗಳ ಮರಣ ಪ್ರಮಾಣವು 2023ರ ವೇಳೆಗೆ 25ಕ್ಕೆ ಇಳಿಕೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಅಲ್ಲದೇ, 1971ಕ್ಕೆ ಹೋಲಿಸಿದರೆ ಶಿಶುಗಳ ಮರಣ ಪ್ರಮಾಣವು 2023ರ ವೇಳೆಗೆ ಬರೋಬ್ಬರಿ ಶೇ 80ರಷ್ಟು ಇಳಿಕೆಯಾಗಿದೆ. 1971ರಲ್ಲಿ ಶಿಶುಗಳ ಮರಣ ಸಂಖ್ಯೆಯು 129 ಆಗಿತ್ತು ಎಂದೂ ವರದಿ ಉಲ್ಲೇಖಿಸಿದೆ.

ನಕ್ಸಲರ ಜತೆ ಗುಂಡಿನ ಚಕಮಕಿ ಭದ್ರತಾ ಸಿಬ್ಬಂದಿ ಸಾವು

ರಾಂಚಿ (ಪಿಟಿಐ): ಜಾರ್ಖಂಡ್‌ನ ಪಲಮು ಜಿಲ್ಲೆಯಲ್ಲಿ ಭದ್ರತಾ ಪಡೆ ಹಾಗೂ ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಘಟನೆಯಲ್ಲಿ ಭದ್ರತಾ ಪಡೆಯ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಸಿಪಿಐ-ಮಾವೋವಾದಿಯಿಂದ ಬೇರ್ಪಟ್ಟಿರುವ ನಿಷೇಧಿತ ತೃತೀಯ ಸಮ್ಮೇಳನ್ ಪ್ರಸ್ತುತಿ ಸಮಿತಿಯ (ಟಿಎಸ್‌ಪಿಸಿ) ನಕ್ಸಲರು ಹಾಗೂ ಭದ್ರತಾ ಸಿಬ್ಬಂದಿ ನಡುವೆ ಕೆದಾಲ್ ಎಂಬ ಗ್ರಾಮದಲ್ಲಿ ರಾತ್ರಿ 12.30ರ ಸುಮಾರಿಗೆ ಗುಂಡಿನ ಚಕಮಕಿ ನಡೆದಿತ್ತು ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಮೃತ ಸಿಬ್ಬಂದಿಯನ್ನು ಕಾನ್‌ಸ್ಟೆಬಲ್‌ಗಳಾದ ಸಂತಾನ್ ಮೆಹ್ತಾ, ಸುನಿಲ್ ರಾಮ್ ಎಂದು ಗುರುತಿಸಲಾಗಿದೆ. ಗಾಯಗೊಂಡಿರುವ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪಲಮು ಡಿಐಜಿ ನೌಶದ್ ಆಲಂ ಹೇಳಿದ್ದಾರೆ.

ಟಿಎಸ್‌ಪಿಸಿ ಸಂಘಟನೆಯ ಕಮಾಂಡರ್ ಶಶಿಕಾಂತ್ ಗಂಜು ಹಾಗೂ ಆತನ ಸಹಚರರು ಕೆದಾಲ್ ಗ್ರಾಮದಲ್ಲಿ ಅಡಗಿದ್ದಾರೆಂಬ ಮಾಹಿತಿಯ ಮೇರೆಗೆ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು.

ಈ ವೇಳೆ ಭದ್ರತಾ ಸಿಬ್ಬಂದಿ ಮೇಲೆ ಗುಂಡುಹಾರಿಸಿ ನಕ್ಸಲರು ಪರಾರಿಯಾಗಿದ್ದಾರೆ, ಶೋಧ ಮುಂದುವರಿಯುತ್ತಿದೆ ಎಂದು ಎಸ್‌ಪಿ ರೀಶ್ಮಾ ರಮೇಶನ್ ತಿಳಿಸಿದ್ದಾರೆ.

ವಿಮಾನಕ್ಕೆ ಹದ್ದು ಡಿಕ್ಕಿ: ಸಂಚಾರ ರದ್ದು

ವಿಜಯವಾಡ (ಪಿಟಿಐ): ವಿಜಯವಾಡದಿಂದ ಬೆಂಗಳೂರಿಗೆ ಬರುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಕ್ಕೆ ಹದ್ದು ಡಿಕ್ಕಿ ಹೊಡೆದ ಕಾರಣ ಸಂಚಾರವನ್ನು ರದ್ದುಗೊಳಿಸಲಾಯಿತು.

‘ಗುರುವಾರ ಟೇಕ್ ಆಫ್ ಆಗುವ ವೇಳೆ ರನ್‌ವೇಯಲ್ಲಿ ವಿಮಾನದ ‘ಮೂಗಿ’ಗೆ ಹದ್ದು ಡಿಕ್ಕಿ ಹೊಡೆಯಿತು. ಹೀಗಾಗಿ ಸಂಚಾರ ರದ್ದುಗೊಳಿಸಬೇಕಾಯಿತು’ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಅನುದಾನ ಕಡಿತ ರದ್ದು

ಬಾಸ್ಟನ್ (ಎಪಿ): ಹಾರ್ವರ್ಡ್ ವಿಶ್ವವಿದ್ಯಾಲಯದ ₹22,909 ಕೋಟಿ ಸಂಶೋಧನಾ ಅನುದಾನವನ್ನು ಕಡಿತಗೊಳಿಸಿರುವ ಟ್ರಂಪ್ ಸರ್ಕಾರದ ನಿರ್ಣಯವನ್ನು ಹಿಂಪಡೆಯುವಂತೆ ಇಲ್ಲಿನ ಫೆಡರಲ್ ನ್ಯಾಯಾಲಯ ಬುಧವಾರ ಆದೇಶಿಸಿದೆ.

‘ಹಾರ್ವರ್ಡ್ ವಿಶ್ವವಿದ್ಯಾಲಯದ ಆಡಳಿತ ನೀತಿಗಳಲ್ಲಿ ಬದಲಾವಣೆ ತರಬೇಕೆಂಬ ಟ್ರಂಪ್ ಬೇಡಿಕೆಯನ್ನು ಹಾರ್ವರ್ಡ್ ತಿರಸ್ಕಾರಿಸಿದ್ದಕ್ಕಾಗಿ, ಪ್ರತೀಕಾರವಾಗಿ ಸರ್ಕಾರವು ಅನುದಾನ ಕಡಿತಗೊಳಿಸಿದೆ. ಇದು ಕಾನೂನುಬಾಹಿರ’ ಎಂದು ಅಮೆರಿಕದ ಜಿಲ್ಲಾ ನ್ಯಾಯಾಧೀಶರು ಹೇಳಿದ್ದಾರೆ.

ಸಮಿತಿಯಲ್ಲಿ ಸೇರದಿರಲು ಹಲವು ಪಕ್ಷಗಳ ನಿರ್ಧಾರ

ಜೆಪಿಸಿ ರಚನೆ; ಮತ್ತಷ್ಟು ವಿಳಂಬ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಂಧನಕ್ಕೆ ಒಳಗಾಗಿ 30 ದಿನ ಜೈಲಿನಲ್ಲಿದ್ದರೆ ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರನ್ನು ಪದಚ್ಯುತಿಗೊಳಿಸುವುದಕ್ಕೆ ಅನುವು ಮಾಡಿಕೊಡುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಎರಡು ವಾರಗಳು ಕಳೆದಿವೆ. ಆದರೆ ಮಸೂದೆಯನ್ನು ಪರಿಶೀಲಿಸಲಿರುವ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಸದಸ್ಯರ ಹೆಸರು ಇನ್ನೂ ಅಂತಿಮಗೊಂಡಿಲ್ಲ.

ವಕ್ಫ್ (ತಿದ್ದುಪಡಿ) ಮಸೂದೆ–2024 ಮತ್ತು ‘ಒಂದು ರಾಷ್ಟ್ರ–ಒಂದು ಚುನಾವಣೆ’ಗೆ ಸಂಬಂಧಿಸಿದ ಮಸೂದೆಗಳ ಪರಿಶೀಲನೆಗೆ ಜೆಪಿಸಿ ರಚನೆ ಪ್ರಕ್ರಿಯೆ ತ್ವರಿತವಾಗಿ ನಡೆದಿತ್ತು. ಆದರೆ ಈ ಮಸೂದೆಯ ವಿಚಾರದಲ್ಲಿ ಜೆಪಿಸಿ ರಚನೆ ವಿಳಂಬವಾಗಿದೆ.

ಪ್ರಧಾನಿ, ಮುಖ್ಯಮಂತ್ರಿ ಮತ್ತು ಸಚಿವರನ್ನು ಹುದ್ದೆಯಿಂದ ಪದಚ್ಯುತಿಗೊಳಿಸಲು ಸಾಧ್ಯವಾಗುವಂತಹ ಮೂರು ಮಸೂದೆಗಳನ್ನು ಗೃಹ ಸಚಿವ ಅಮಿತ್ ಶಾ ಅವರು ಆಗಸ್ಟ್ 20ರಂದು ಲೋಕಸಭೆಯಲ್ಲಿ ಮಂಡಿಸಿದ್ದರು. ಸಂವಿಧಾನ (130ನೇ ತಿದ್ದುಪಡಿ) ಮಸೂದೆ 2025, ಕೇಂದ್ರಾಡಳಿತ ಸರ್ಕಾರ ತಿದ್ದುಪಡಿ ಮಸೂದೆ, ಜಮ್ಮು ಮತ್ತು ಕಾಶ್ಮೀರ ಪುನರ್‌ರಚನೆ ತಿದ್ದುಪಡಿ ಮಸೂದೆ–2025 ಗಳನ್ನು ಪರಿಶೀಲನೆಗೆ ಜೆಪಿಸಿಗೆ ಒಪ್ಪಿಸಲಾಗಿದೆ ಎಂದು ಶಾ ಹೇಳಿದ್ದರು.

ತೃಣಮೂಲ ಕಾಂಗ್ರೆಸ್ (ಟಿಎಂಸಿ), ಸಮಾಜವಾದಿ ಪಾರ್ಟಿ (ಎಸ್‌ಪಿ), ಎಎಪಿ ಮತ್ತು ಶಿವಸೇನಾ (ಯುಬಿಟಿ) ಪಕ್ಷಗಳು ಜೆಪಿಸಿ ಸೇರುವುದಿಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿವೆ. ಈ ಮಸೂದೆ ‘ರಾಜಕೀಯ ಅಸ್ತ್ರ’ವಾಗಿ ಬಳಕೆಯಾಗಬಹುದು ಎಂಬುದು ಈ ಪಕ್ಷಗಳ ಆರೋಪ.

ಜೆಪಿಸಿ ಸೇರುವ ಕುರಿತು ಕಾಂಗ್ರೆಸ್ ಪಕ್ಷ ಇದುವರೆಗೂ ಲೋಕಸಭಾ ಸಚಿವಾಲಯಕ್ಕೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ. ಸಮಿತಿ ಸೇರುವ ಬಗ್ಗೆ ಪಕ್ಷದೊಳಗೆ ಹಾಗೂ ‘ಇಂಡಿಯಾ’ ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯ ಇದೆ. ತನ್ನ ನಿರ್ಧಾರವನ್ನು ಇನ್ನೂ ಬಹಿರಂಗಪಡಿಸದಿರುವ ಆರ್‌ಜೆಡಿಗೆ ಕೂಡ ಸಮಿತಿಗೆ ಸೇರುವ ಇಷ್ಟವಿಲ್ಲ.

ಸಮಿತಿಗೆ ಸೇರಬೇಕೆ ಅಥವಾ ಬೇಡವೇ ಎಂಬ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ಖಚಿತಪಡಿಸಿವೆ. ಪರ–ವಿರೋಧದ ವಾದಗಳನ್ನು ಆಲಿಸಿದ ಬಳಿಕವೇ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಪಕ್ಷದ ಹೈಕಮಾಂಡ್ ನಿರ್ಧರಿಸಿದೆ.

ಸಮಿತಿಗೆ ಸೇರುವುದರಿಂದ ‘ಇಂಡಿಯಾ’ ಮೈತ್ರಿಕೂಟದ ಇತರ ಪಾಲುದಾರರನ್ನು ಕಡೆಗಣಿಸಿದಂತೆ ಆಗುತ್ತದೆ ಎಂಬ ಆತಂಕವೂ ಪಕ್ಷವನ್ನು ಕಾಡುತ್ತಿದೆ. ‘ಪಕ್ಷದೊಳಗೆ ಚರ್ಚೆ ಮುಂದುವರಿದಿದ್ದು, ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಆಗಸ್ಟ್ 20ರಂದು ಮಸೂದೆ ಮಂಡಿಸಿದ್ದ ಅಮಿತ್ ಶಾ
- ಪರ–ವಿರೋಧ ಚರ್ಚೆಯ ಬಳಿಕ ಅಂತಿಮ ನಿರ್ಧಾರ: ಕಾಂಗ್ರೆಸ್
- ಸಮಿತಿ ಸೇರದಿರಲು ಟಿಎಂಸಿ, ಎಸ್‌ಪಿ, ಎಎಪಿ ತೀರ್ಮಾನ

ಪೊಂಗ ಭರ್ತಿ: ತುಂಬಿದ ಯಮುನೆ

ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮುವಿನಲ್ಲಿ ಮಳೆ ಮುಂದುವರಿದಿದೆ. ಪಂಜಾಬ್‌ನಲ್ಲಿ ಸತಲುಜ್ ನದಿಗೆ ಕಟ್ಟಲಾಗಿರುವ ಬಾಕ್ರಾ ಅಣೆಕಟ್ಟು ತುಂಬಲು ಕೆಲವೇ ಅಡಿಗಳಿವೆ. ಬಿಯಾಸ್ ನದಿಗೆ ಕಟ್ಟಲಾಗಿರುವ ಪೊಂಗ ಅಣೆಕಟ್ಟನಲ್ಲಿ ಗರಿಷ್ಠ ಸಾಮರ್ಥ್ಯ ಮೀರಿ ನೀರು ತುಂಬಿದೆ. ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಈ ನದಿಗಳಿಗೆ ಅಂಟಿಕೊಂಡಿರುವ ಗ್ರಾಮಗಳು, ತಗ್ಗು ಪ್ರದೇಶಗಳ ಜನರಿಗೆ ಆಡಳಿತ ಸೂಚಿಸಿದೆ. ಇನ್ನೊಂದೆಡೆ, ದೆಹಲಿಯಲ್ಲಿ ಯಮುನಾ ನದಿ ಉಕ್ಕಿ ಹರಿಯುತ್ತಿದ್ದು, ನಿರಾಶ್ರಿತ ಶಿಬಿರಗಳಿಗೂ ನೀರು ನುಗ್ಗಿದ್ದು ಜನರು ಪರದಾಡುವಂತಾಗಿದೆ. ಹಿಮಾಚಲ ಪ್ರದೇಶದಲ್ಲಿ ಭೂಕುಸಿತ ಮುಂದುವರಿದಿದೆ. ಈ ಎಲ್ಲ ಕಡೆಗಳಲ್ಲಿಯೂ ರಕ್ಷಣಾ ಕಾರ್ಯ, ಪರಿಹಾರ ಕಾರ್ಯವನ್ನು ಮುಂದುವರಿಸಲಾಗಿದೆ. ‘ಮುಂದಿನ 3–4 ದಿನಗಳಲ್ಲಿ ಗುಜರಾತ್, ಮಧ್ಯ ಪ್ರದೇಶ ಮತ್ತು ರಾಜಸ್ಥಾನದ ಕೆಲ ಭಾಗಗಳಲ್ಲಿ ಭಾರಿ ಮಳೆಯಾಗಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ

ದೆಹಲಿಯಲ್ಲಿ ಯಮುನಾ ನದಿಯು ಅಪಾಯಮಟ್ಟ ಮೀರಿ ಹರಿಯುತ್ತಿದೆ –ಪಿಟಿಐ ಚಿತ್ರ

ದೆಹಲಿ

10,048 ನಿರಾಶ್ರಿತ ಶಿಬಿರಗಳಲ್ಲಿ ಇರುವವರ ಸಂಖ್ಯೆ

ಯಮುನಾ ನದಿಯ ನೀರಿನ ಮಟ್ಟವು 207.46 ಮೀಟರ್ ತಲುಪಿದೆ. ಮುಖ್ಯಮಂತ್ರಿ, ಸಂಪುಟದ ಸಚಿವರು ಸೇರಿದಂತೆ ಪ್ರಮುಖ ಅಧಿಕಾರಿಗಳ ಮನೆಗಳಿರುವ ಪ್ರದೇಶಕ್ಕೂ ಪ್ರವಾಹದ ನೀರು ನುಗ್ಗಿದೆ. ವಾಸುದೇವ್ ಘಾಟ್, ನಿಗಮ್‌ಬೋಧ್ ಘಾಟ್ ಒಳಗೂ ನೀರು ಹರಿದಿದೆ. ಮಯೂರ ವಿಹಾರದಲ್ಲಿ ನಿರಾಶ್ರಿತ ಶಿಬಿರಗಳೂ ಪ್ರವಾಹಕ್ಕೆ ತುತ್ತಾಗಿವೆ. ಇಲ್ಲಿನ ಜನರು ಮತ್ತೊಮ್ಮೆ ನಿರಾಶ್ರಿತರಾಗಿದ್ದಾರೆ. ಯಮುನೆಯು ಉಕ್ಕಿ ಹರಿಯುತ್ತಿರುವುದರಿಂದ ದೆಹಲಿಯ ಸಂಚಾರ ವ್ಯವಸ್ಥೆಗೆ ಅಡಚಣೆಯಾಗಿದೆ

ಪಂಜಾಬ್

ಸತಲುಜ್, ರಾವಿ ಮತ್ತು ಬಿಯಾಸ್ ನದಿಗಳು ಉಕ್ಕಿ ಹರಿಯುತ್ತಿವೆ. ಈ ಕಾರಣದಿಂದ ಪಂಜಾಬ್‌ನ ಎಲ್ಲ 23 ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ. ಇದರೊಂದಿಗೆ, ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿಯೂ ಭಾರಿ ಮಳೆಯಾಗುತ್ತಿದೆ. ಇದು ಕೂಡ ಪಂಜಾಬ್‌ನಲ್ಲಿ ಪ್ರವಾಹ ಉಂಟಾಗಲು ಕಾರಣವಾಗಿದೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು.

37 ಮಳೆಯಿಂದಾಗಿ ಇಲ್ಲಿಯವರೆಗೆ ಮೃತಪಟ್ಟಿರುವವರ ಸಂಖ್ಯೆ

3.55 ಲಕ್ಷ, ಪ್ರವಾಹದಿಂದಾಗಿ ನಿರಾಶ್ರಿತರಾಗಿರುವವರ ಸಂಖ್ಯೆ

ಬಾಕ್ರಾ ಅಣೆಕಟ್ಟು

1,678.97 ಅಡಿ ಗುರುವಾರದ ನೀರಿನ ಮಟ್ಟ

1,680 ಅಡಿ ಅಣೆಕಟ್ಟಿನ ಗರಿಷ್ಠ ನೀರಿನ ಮಟ್ಟ

ಪೊಂಗ ಅಣೆಕಟ್ಟು

1,394.51 ಅಡಿ ಗುರುವಾರದ ನೀರಿನ ಮಟ್ಟ

1,390 ಅಡಿ ಅಣೆಕಟ್ಟಿನ ಗರಿಷ್ಠ ನೀರಿನ ಮಟ್ಟ

1.75 ಲಕ್ಷ ಹೆಕ್ಟೇರ್ ಪ್ರವಾಹದಿಂದ ಹಾನಿಯಾಗಿರುವ ಕೃಷಿ ಭೂಮಿ

ರಾಜ್ಯ ಸರ್ಕಾರಗಳಿಗೆ ‘ಸುಪ್ರೀಂ’ ನೋಟಿಸ್

‘ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಭೂಕುಸಿತ ಮತ್ತು ಪ್ರವಾಹದ ಘಟನೆಗಳನ್ನು ನೋಡುತ್ತಿದ್ದೇವೆ. ಪ್ರವಾಹದ ನೀರು ಹರಿಯುವ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಮರದ ದಿಮ್ಮಿಗಳು ಹರಿದುಹೋಗಿದ್ದು ಮಾಧ್ಯಮ ವರದಿಗಳ ಮೂಲಕ ತಿಳಿಯಿತು. ಮರಗಳನ್ನು ಅಕ್ರಮವಾಗಿ ಕಡಿಯಲಾಗಿದೆ ಎಂದು ಕಾಣುತ್ತಿದೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಹೇಳಿದರು.

ಕೇಂದ್ರ ಸರ್ಕಾರ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ವೈಪರಿತ್ಯ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್ ಹಾಗೂ ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಈ ಬಗ್ಗೆ ನೋಟಿಸ್ ನೀಡಿದೆ.

‘ಅಭಿವೃದ್ಧಿ ಮತ್ತು ಪರಿಸರವನ್ನು ಸರಿದೂಗಿಸಿಕೊಂಡು ಹೋಗಬೇಕು’ ಎಂದು ಸಿಜೆಐ ಸೇರಿ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ಅಭಿಪ್ರಾಯಪಟ್ಟಿತು.

ಭಾರತ–ಪಾಕ್ ಗಡಿ: ಬೇಲಿಗೆ ಹಾನಿ

ಭಾರಿ ಮಳೆ ಹಾಗೂ ಪ್ರವಾಹದ ಕಾರಣದಿಂದ ಜಮ್ಮು ಮತ್ತು ಪಂಜಾಬ್ ರಾಜ್ಯಗಳಲ್ಲಿರುವ ಭಾರತ–ಪಾಕಿಸ್ತಾನದ ಅಂತರರಾಷ್ಟ್ರೀಯ ಗಡಿಗೆ ಅಳವಡಿಸಲಾಗಿರುವ ಬೇಲಿಗೆ ಹಾನಿಯಾಗಿದೆ. ಪ್ರವಾಹದ ಕಾರಣ ಬಿಎಸ್‌ಎಫ್‌ನ 90 ಪೋಸ್ಟ್‌ಗಳು ಮುಳುಗಿವೆ.

‘ಪಂಜಾಬ್‌ನಲ್ಲಿರುವ 80 ಕಿ.ಮೀ. ಮತ್ತು ಜಮ್ಮುವಿನಲ್ಲಿರುವ 30 ಕಿ.ಮೀ. ದೂರದ ಬೇಲಿಗೆ ಹಾನಿಯಾಗಿದೆ. ಈ ಪ್ರದೇಶಗಳಲ್ಲಿ ಒಂದೋ ಬೇಲಿಯು ಮುಳುಗಿದೆ, ಇಲ್ಲವೇ ಕಿತ್ತು ಬಂದಿದೆ ಅಥವಾ ಡೊಂಕಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಬೇಲಿಯನ್ನು ಸರಿಪಡಿಸುವ ಕಾರ್ಯ ಆರಂಭಗೊಂಡಿದೆ. ಬೇಲಿಗೆ ಹಾನಿಯಾಗಿರುವಲ್ಲಿ ಡ್ರೋನ್ ಮೂಲಕ ಕಣ್ಗಾವಲು ಇರಿಸಲಾಗಿದೆ. ದೊಡ್ಡ ದೊಡ್ಡ ಸರ್ಚ್‌ಲೈಟ್ಸ್‌ಗಳನ್ನು ಅಳವಡಿಸಲಾಗಿದೆ. ಬೋಟ್‌ಗಳ ಮೂಲಕ ಗಸ್ತು ತಿರುಗಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಅಮೃತ ವಿಶ್ವವಿದ್ಯಾಪೀಠ: ‘ಸುಸ್ಥಿರ ಮತ್ತು ಸ್ಥಿತಿಸ್ಥಾಪಕ ಭವಿಷ್ಯ’ದ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಡಾ. ಟಿಮ್ ಕರ್ಟಿಸ್

ಉತ್ತಮ ಭವಿಷ್ಯ ನಿರ್ಮಾಣಕ್ಕೆ ಶಿಕ್ಷಣವೇ ಶಕ್ತಿ

ಅಮೃತಪುರಿ: ‘ಶಿಕ್ಷಣವು ಪ್ರತಿಯೊಬ್ಬ ಮನುಷ್ಯನ ಮೂಲಭೂತ ಹಕ್ಕು ಮಾತ್ರವಲ್ಲದೆ ಉತ್ತಮ ಭವಿಷ್ಯವನ್ನು ನಿರ್ಮಿಸುವ ಶಕ್ತಿಯೂ ಆಗಿದೆ’ ಎಂದು ಯುನೆಸ್ಕೋ ದೆಹಲಿ ಕಚೇರಿಯ ನಿರ್ದೇಶಕ ಮತ್ತು ಭಾರತ, ಭೂತಾನ್, ಶ್ರೀಲಂಕಾ ಮತ್ತು ಮಾಲ್ದೀವ್ಸ್ ಪ್ರತಿನಿಧಿ ಡಾ. ಟಿಮ್ ಕರ್ಟಿಸ್ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಇತ್ತೀಚಿಗೆ ಅಮೃತ ವಿಶ್ವ ವಿದ್ಯಾಪೀಠದ ಅಮೃತಪುರಿ ಕ್ಯಾಂಪಸ್‌ನಲ್ಲಿ ನಡೆದ ‘ಸುಸ್ಥಿರ ಮತ್ತು ಸ್ಥಿತಿಸ್ಥಾಪಕ ಭವಿಷ್ಯ’ದ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನ (ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ಸಸ್ಟೈನಬಲ್ ಆ್ಯಂಡ್ ರೆಸಿಲಿಯಂಟ್ ಫ್ಯೂಚರ್ಸ್–25)ವನ್ನು ಉದ್ದೇಶಿಸಿ ಮಾತನಾಡಿದರು.

ಶಿಕ್ಷಣದ ಶಕ್ತಿಯನ್ನು ಬಳಸಿಕೊಳ್ಳಲು ಯುನೆಸ್ಕೋ ವಿಶ್ವಾದ್ಯಂತ ಅನೇಕ ಪಾಲುದಾರರೊಂದಿಗೆ ಸಹಕರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅಮೃತ ವಿಶ್ವವಿದ್ಯಾಲಯದಂತಹ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವುದು ಆದರ್ಶಪ್ರಾಯ ಎನಿಸುತ್ತದೆ ಎಂದು ಡಾ. ಕರ್ಟಿಸ್ ಹೇಳಿದರು. ಈ ದೀರ್ಘಕಾಲದ ಸಹಯೋಗವು ಯುನೆಸ್ಕೋವನ್ನು ಅಮೃತಾದೊಂದಿಗೆ ಹಲವು ವರ್ಷಗಳ ಕಾಲ ಕೆಲಸ ಮಾಡಲು ಅನುವು ಮಾಡಿಕೊಟ್ಟಂತಾಗಿದೆ ಎಂದರು.

ಅಧಿವೇಶನದಲ್ಲಿ ಕರ್ನಾಟಕದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ದಾಸ್‌ಗುಪ್ತ, ನಬಾರ್ಡ್ ಅಧ್ಯಕ್ಷ ಕೆ.ವಿ. ಶಾಜಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಅಮೃತ ಸ್ಕೂಲ್ ಫಾರ್ ಸಸ್ಟೈನಬಲ್ ಫ್ಯೂಚರ್ಸ್, ಯುನೆಸ್ಕೋ ಚೇರ್ ಆನ್ ಎಕ್ಸ್‌ಪೀರಿಯೆನ್ಷಿಯಲ್ ಲರ್ನಿಂಗ್ ಫಾರ್ ಸಸ್ಟೈನಬಲ್ ಇನ್ನೋವೇಶನ್ ಆ್ಯಂಡ್ ಡೆವಲಪ್‌ಮೆಂಟ್ ಮತ್ತು ಇಂಟರ್‌ನ್ಯಾಷನಲ್ ನೆಟ್‌ವರ್ಕ್ ಫಾರ್ ಸಸ್ಟೈನಬಲ್ ಇನ್ನೋವೇಶನ್ ಆ್ಯಂಡ್ ರೆಸಿಲಿಯಂಟ್ ಫ್ಯೂಚರ್ಸ್ ಜಂಟಿಯಾಗಿ ಆಯೋಜಿಸಿದ್ದ ಈ ಅಂತರರಾಷ್ಟ್ರೀಯ ಸಮ್ಮೇಳನ ಹವಾಮಾನ, ಪರಿಸರ ಪುನಃಸ್ಥಾಪನೆ ಮತ್ತು ಸುಸ್ಥಿರತೆಯಂತಹ ನಾನಾ ವಿಷಯಗಳು ಒಳಗೊಂಡಿದ್ದವು.

3 ಡಿಜಿಟಲ್ ಪ್ಲಾಟ್‌ಫಾರ್ಮ್

ಸಮ್ಮೇಳನದಲ್ಲಿ ಮೂರು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಸಹ ಪ್ರಾರಂಭಿಸಲಾಯಿತು. ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಬಲೀಕರಣದಿಂದ ಸುಸ್ಥಿರತೆ ಮತ್ತು ಸ್ಥಿತಿಸ್ಥಾಪಕತ್ವ (SREE) ಪ್ಲಾಟ್‌ಫಾರ್ಮ್ ಒಳಗೊಂಡಿದೆ.

ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಪೂರ್ಣಾಮೃತಾನಂದಪುರಿ ಅವರು ಆಶೀರ್ವಚನ ನೀಡಿದರು. ಡಾ. ಪಿ. ಅಜಿತ್ ಕುಮಾರ್ (ರಿಜಿಸ್ಟ್ರಾರ್), ಡಾ. ಮನೀಷಾ ವಿ. ರಮೇಶ್ (ಪ್ರೊವೊಸ್ಟ್), ಡಾ. ಬಿಪಿನ್ ಜಿ. ನಾಯರ್ (ಡೀನ್, ಅಮೃತ ಸ್ಕೂಲ್ ಆಫ್ ಬಯೋಟೆಕ್ನಾಲಜಿ), ಮತ್ತು ಡಾ. ಎಂ. ರವಿಶಂಕರ್ (ಪ್ರಾಂಶುಪಾಲರು, ಅಮೃತ ಸ್ಕೂಲ್ ಫಾರ್ ಸಸ್ಟೈನಬಲ್ ಫ್ಯೂಚರ್ಸ್) ಸೇರಿದಂತೆ ಇತರ ಗಣ್ಯರು ಭಾಗವಹಿಸಿದ್ದರು.

ತಜ್ಞರ ಉಪನ್ಯಾಸ, ಹ್ಯಾಕಥಾನ್, ವಿಚಾರ ಸಂಕಿರಣಗಳು ನಡೆದವು.

ಡಾ. ಟಿಮ್ ಕರ್ಟಿಸ್ ಅವರು ಸ್ವಾಮಿ ಪೂರ್ಣಾಮೃತಾನಂದ ಪುರಿ ಮತ್ತು ಡಾ. ಪಿ. ಅಜಿತ್ ಕುಮಾರ್ ಅವರಿಂದ ಸ್ಮರಣಿಕೆ ಸ್ವೀಕರಿಸುತ್ತಿರುವುದು

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಆದೀಶ್ವರ್®
ಎಲೆಕ್ಟ್ರೋ ವರ್ಲ್ಡ್

gadget for every budget!

BIG screen ENTERTAINMENT

SONY 98 4K HDR MINI LED
Dolby VISION·ATMOS | Google TV | Accoustic Multi-Audio+ | 4K Ultra HD | Sony Pictures Core
EMI ₹19,900/-
INSTANT CASH BACK UPTO ₹25,000/- ON YOUR CREDIT CARD EMI | LOW DOWNPAYMENT LOW EMI

LG 77 OLED evo TV
- Brighter picture powered by Brightness Booster
- Additional screen sizes perfect for gaming
- GeForce Now cloud gaming + easy-access gaming controls
- Cinematic picture and sound with Dolby Atmos® & Vision®
- Updated smart TV interface with Hands-Free Voice Recognition

EMI ₹6,999/-
INSTANT CASH BACK UPTO ₹8,000/- ON YOUR CREDIT CARD EMI | LOW DOWNPAYMENT LOW EMI

LG 86 4K UHD AI TV
- Filmmaker Mode™
- Lg 86" 4k Uhd
- Breathtaking Color And Detail With 4k Hdr10 Pro
- Enhanced Picture And Sound Quality With The Alpha 5 Ai Processor 4k Gen7
- Cinema-worthy Visuals And Sound With Filmmaker Mode

EMI ₹6,999/-
INSTANT CASH BACK UPTO ₹15,000/- ON YOUR CREDIT CARD EMI | LOW DOWNPAYMENT LOW EMI

Haier 85 QLED TV
Google TV | Dolby VISION·ATMOS | Quantum Dot | Micro Dimming | Dolby ATMOS
EMI ₹6,994/-
INSTANT CASH BACK UPTO ₹20,000/- ON YOUR CREDIT CARD EMI | LOW DOWNPAYMENT LOW EMI

LG SIDE BY SIDE REFRIGERATOR 650 Ltr.
- AI ThinQ
- Wi-Fi Convertible
- Door Cooling+™
- HygieneFresh+™
- Multi Air Flow
- Smart Diagnosis™
- Wine Rack
- Door Cooling
- Black Mirror Finish

INSTANT CASH BACK UPTO ₹15,000/- ON YOUR CREDIT CARD EMI | EMI ₹3,999/-

Haier 3 DOOR VOGUE SIDE BY SIDE REFRIGERATOR BLACK WHITE GLASS 3 STAR 598 Ltr.
- Smart Sense
- Jumbo Ice Maker
- Digital Control Monitor
- Expert Inverter Technology

INSTANT CASH BACK UPTO ₹7,000/- ON YOUR CREDIT CARD EMI | EMI ₹2,994/-

Godrej EON VELVET OPERA ROSE SIDE BY SIDE REFRIGERATOR 600 Ltr.
- Smart Convertible Zones with Digital Touch Panel
- Frost Free Inverter

INSTANT CASH BACK UPTO ₹6,000/- ON YOUR CREDIT CARD EMI | EMI ₹2,525/-

LG CBU REFRIGERATOR SMART INVERTER COMPRESSOR (WI-FI) 506 Ltr.
- AI ThinQ™
- Hygiene Fresh+
- Door Cooling+
- Digital Display
- Smart Inverter Compressor
- Smart Diagnosis

INSTANT CASH BACK UPTO ₹7,000/- ON YOUR CREDIT CARD EMI | EMI ₹2,499/-

Whirlpool INTELLIFRESH Pro 327 Ltr.
- India's Fastest Convertible Refrigerator
- Convert Freezer to Fridge in ~10 mins
- Exquisite Glass Finishes
- 10-in-1 Convertible Modes
- Upto 15 days of freshness in fridge and freezer
- Upto 2X longer Vitamin Preservation with 6th Sense Nutrilock Technology
- Upto 50% Energy Saving with Mini Ref Mode

INSTANT CASH BACK UPTO ₹5,000/- ON YOUR CREDIT CARD EMI | EMI ₹2,990/-

Haier BMR REFRIGERATOR 445 Ltr. BIGGER Capacity
- Jhukna Mat
- 14 In 1 Convertable
- Triple Inverter Technology
- 2x Bigger Vegetable Box
- Twist Ice Maker

INSTANT CASH BACK UPTO ₹4,000/- ON YOUR CREDIT CARD EMI | EMI ₹1,994/-

LG BOTTOM FREEZER REFRIGERATOR 340 Ltr.
- Wi-Fi Convertible
- LG ThinQTM
- Door Cooling+TM & Multi Air Flow
- 3 star - Energy Efficient
- Smart Diagnosis™
- Bottle Rack

INSTANT CASH BACK UPTO ₹7,000/- ON YOUR CREDIT CARD EMI | EMI ₹1,999/-

Godrej | Haier VC COOLER & DEEP FREEZER
EMI ₹2,499/- ONWARDS

LG FRONT LOAD WASHER DRYER 12/7 KG
- AI Direct Drive™- Intelligent & Convenient Fabric Care
- Direct Drive Motor- Less vibration, less noise
- 6 Motion Direct Drive- Optimal wash for different fabrics
- TurboWash 360˚
- Steam+ - Reduce allergens & wrinkles with steam+ cycles

INSTANT CASH BACK UPTO ₹7,000/- ON YOUR CREDIT CARD EMI | EMI ₹3,999/-

Haier FRONT LOAD WASHING MACHINE. (WI-FI) 11.0 KG
- Super Drum -525
- Direct Motion Motor Refresh

INSTANT CASH BACK UPTO ₹9,000/- ON YOUR CREDIT CARD EMI | EMI ₹1,994/-

Whirlpool 360 BLOOMWASH TOPLOAD WASHING MACHINE WITH IN-BUILT HEATER 10.0 KG
- Removes Up to 50 Tough Stains and Up to 48 hours Old Stains with in-built heater
- 360 Bloomwash Technology
- Catalytic Soak
- Power Dry Technology
- Hard Water Wash

IN-BUILT HEATER
INSTANT CASH BACK UPTO ₹3,000/- ON YOUR CREDIT CARD EMI | EMI ₹2,999/-

LG | IFB DISHWASHER
- 14 Place Setting
- 16 Place Setting

INSTANT CASH BACK UPTO ₹3,000/- ON YOUR CREDIT CARD EMI | EMI ₹3,290/- ONWARDS

BUY ANY SMART PHONE & GET

SAMSUNG | ONEPLUS | mi | realme | vivo | oppo

INSTANT CASHBACK Debit & Credit card | 0 DOWN PAYMENT Paper Finance* | ASSURED GIFT On Every Phone

PRICE INCLUSIVE OF BANK OFFERS*
BAJAJ FINSERV | IDFC FIRST Bank | TVS CREDIT | HDB FINANCIAL SERVICES

60 DAYS BREAK FREE Buy Back @50%
60 DAYS RISK FREE Buy Back @80%
60 DAYS SAFETY SHIELD

ಬೆಂಗಳೂರು

ನೂತನ **ಉಲ್ಲಾಳ್ ಮುಖ್ಯ ರಸ್ತೆ** ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್ Ph : 9686680760 / 9686680842

ನೂತನ **ಬಾಗಲೂರು** ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕೇಲೇಜ್ ಹತ್ತಿರ Ph : 080-35712968 /35712969 9731306702

ಬಿಡದಿ ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು–ಮೈಸೂರು ಹೆದ್ದಾರಿ 7702203254

ಕೋಣನಕುಂಟೆ ಸೌಧಾಮಣಿ ಚೌಲ್ಟ್ರಿ ಹತ್ತಿರ ಪೋಲೀಸ್ ಸ್ಟೇಷನ್ ಪಕ್ಕ Ph :9731306531

ಬೇಗೂರು ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604

ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು 9731307264 080-23559977

ಹೊಸಕೋಟೆ ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767

ಹೆಣ್ಣೂರು ಮುಖ್ಯ ರಸ್ತೆ. ಡಿಮಾರ್ಟ್ ಎದುರು 080-48651500/48505043 9731306571

ಮಹದೇವಪುರ ವೈಟ್‌ಫೀಲ್ಡ್ ಮೈನ್ ರೋಡ್ ಬ್ರಾಂಡ್ ಫ್ಯಾಕ್ಟರಿ ಹತ್ತಿರ 080-48148975, 9148151731

ಉತ್ತರಹಳ್ಳಿ ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575

ವೈಟ್ ಫೀಲ್ಡ್ ಉಡುಪಿ ಡೆಲಿಕೆಸಿ ಹೋಟೇಲ್ ಸಮೀಪ ರಾಮಗೊಂಡನಹಳ್ಳಿ. 080-40984677 9513499851

ಯಲಹಂಕ ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702

ಹೆಬ್ಬಗೋಡಿ ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯಾಕಾನ್ ಎದುರು. 9731307257 080-27849941

ರಾಜಾಜಿನಗರ ಪ್ರೀಮಿಯಮ್ ಸ್ಟೋರ್ ಕೇಕ್ ಪ್ಯಾಲೆಸ್ ಹತ್ತಿರ 41610910, 9731306537

ತನಿಸಂದ್ರ ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747

ವಿಜಯನಗರ ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631

ಪೀಣ್ಯ ಟಿ–ದಾಸರಹಳ್ಳಿ ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306572 28393199/4199

ಮತ್ತಿಕೆರೆ ಬಾಂಬೆ ಡೈಯಿಂಗ್ ರಸ್ತೆ. 080-40974968 Ph :9731306641

ಹೆಚ್.ಎಸ್.ಆರ್. ಲೇಔಟ್ 1ನೇ ಸೆಕ್ಟರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550

ಬನಶಂಕರಿ ಬಿಗ್ ಬಜಾರ್ ಎದುರು Ph :9731306606 080-26691262/63

ಜಯನಗರ 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306617

ಚಂದ್ರ ಲೇಔಟ್ ವಾಟರ್ ಟ್ಯಾಂಕ್ ಹತ್ತಿರ 9731306558, 080 41503359

ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616

ಮಾರತಹಳ್ಳಿ ಪಾರ್ಕ್ ಪ್ಲಾಜಾ ಎದುರು 080-42200050 9731306703

ಕೆಂಗೇರಿ, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634

ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766

ಸುಂಕದಕಟ್ಟೆ ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ, 9686680764 23288940/942

ರಾಜಾಜಿನಗರ ಡಯಾಕಾನ್ ಹಾಸ್ಪಿಟಲ್ ಎದುರು. Ph :9731306570 080-23134692

ವಿದ್ಯಾರಣ್ಯಪುರ ಬಿಡಬ್ಲ್ಯೂಎಸ್‌ಎಸ್‌ಬಿ ಎದುರು. 41721897/1861 9731306614

ಹೆಗ್ಗನಹಳ್ಳಿ ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080-28366565/66

ಹೆಚ್.ಆರ್.ಬಿ.ಆರ್. ಲೇಔಟ್ ಸೂರ್ಯ ಪ್ಲಾಜಾ, ಜಾಯಲುಕ್ಕಾಸ್ ಎದುರು ಕಮ್ಮನಹಳ್ಳಿ ಮುಖ್ಯ ರಸ್ತೆ 41687449, 9731306596 25450871

ರಾಮಮೂರ್ತಿನಗರ ಮೋರ್ ಎದುರು 41638612/13 8861007307

ಪುಟ್ಟೇನಹಳ್ಳಿ ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080-40954615/16

ಹುಳಿಮಾವು ಶಿವ ಸಾಗರ ಹೋಟೇಲ್ ಸಮೀಪ. 080-26483425 9731306625

LG SHOPPE **ಮಾರತಹಳ್ಳಿ** 42197907/08 8861002259

LG SHOPPE **ರಾಜಾಜಿನಗರ** Ph : 9731306671

LG SHOPPE **ರಾಜರಾಜೇಶ್ವರಿನಗರ** 9591997261

Regd. Off: **M/s ADISHWAR INDIA LIMITED**, #85, 59th Cross, 4th Block, Rajaji Nagar, Bangalore - 560010. Tel: 080-40733999, CIN: U51909KA1997PLC021681

• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, Free Gifts depends on Brands & Selective Models • Products shown here are only indicative • Exchange Rates are subject to evaluation • Offers valid till stocks last • Products available without the offers also • Spot finance is available from Bajaj Finance • Terms & Conditions apply • Finance at the sole discretion of the financiers • Offers not applicable on Sony & Samsung.

HELPLINE 080 - 408 33 999

Shop Online @ www.adishwarestore.com
For Trade Enquiry sales@adzen.co.in

|| वंदे श्री ऋषभं वीरं ||

SEVA · KNOWLEDGE · ECONOMIC EMPOWERMENT · JITO

ನಮಸ್ಕಾರ ಬೆಂಗಳೂರು

Get Ready

JITO LADIES | JITO KKG ZONE | JITO BENGALURU NORTH

JITO CONNECT

Title Sponsor
NIRMAL JEWELLERS SANJAYNAGAR

ಇಂದು ಅದ್ದೂರಿ ಉದ್ಘಾಟನೆ
5ನೇ ಸೆಪ್ಟೆಂಬರ್ 2025
ಬೆಳಗ್ಗೆ 9.00 ಗಂಟೆಯಿಂದ

ಜೀತೋ ಝೇವರ ಎಕ್ಸಪೋ ಮತ್ತು ದಿ ಬ್ರೈಡಲ್ ಸ್ಟೋರಿ

—By JITO

Grace | Glamour | Gharana

A Celebration of Timeless Jewellery & Bridal Extravaganza

Food Sponsor: S.K.Jewels — Temple & Traditional Jewellery, Bengaluru
Co-Sponsor: V plus Genuine Parts | COOL COLORS CASUALS | Peetex
Associate Sponsor: Kraftors by Sharp Ply | Bengaluru Cafe
Powered by: DRESSCODE
Associate Sponsor: Happilo
Media Partner: NEWS
Logistic Partner: SEQUEL

100 + ಮಾರಾಟಗಾರರು	ದಿನಾಂಕ : 5,6,7, ಸೆಪ್ಟೆಂಬರ್ 2025	ಸ್ಥಳ: ತ್ರಿಪುರವಾಸಿನಿ, ಗೇಟ್ ನಂ. 2, ಅರಮನೆ ಮೈದಾನ, ಬೆಂಗಳೂರು	ಬೆಳಗ್ಗೆ 10:00 ರಿಂದ ಪ್ರವೇಶ ಉಚಿತ

Bridal Collection
Wedding Outfits | Couture | Sarees, Designer Lehengas

Jewellery & Gems
- Gold
- Diamond,
- Polki
- Kundan,
- Gemstones
- Silver Collections

Groom Collection
Sherwanis | Suits
Indo-Western Wear

Wedding Services
- Decoration
- Photography
- Event Management
- Invitation Card
- Makeup Artist
- Beauty essential

DAILY LUCKY DRAW
Gold chain | Diamind ring | BUMPER PRIZE
Surprise Gifts for first 1000 visitors every day
Scan to Register
* T&C Apply
*Images are for representation purpose only

FOR FREE REGISTRATION GIVE MISS CALL : 97800 10544

EXHIBITORS

NIRMAL JEWELLERS SANJAYNAGAR, DRESSCODE, S.K.Jewels, Aabushan, ARJUNAA VARA JEWELLERS, ANANYA JEWELS, The Original Abharan, BNR, DESIRE JEWELS, GHARENU, MADANJI MEGHRAJ, MOH BY MANPASAND, MILESTONE PRECIOUS CREATIONS LLP, MOTI JEWEL PALACE, M P Diamonds, NAVRATHAN, Navrathan & Sons, PKB PANCHKESARI BADERA, praveen jewels, RAJI, SAROKI, KEVALI, Silvorium, Sri Krishna, KOHIRA, Vishwas Jewels (P) Ltd, SWARNA MAHAL, VARAA SHREE, vrajlakshmi, SHANTHI JEWELLERS, SIPANI'S, SU JEWELLERS, VITRAG JEWELS, NAKSH, saptosi JEWELLERS, ZEVRAAT, TRIVENI SILVER PALACE, Garv Silver Jewellery, AURIKA, Kraftors, DAZZLES, ROSHNI BOUTIQUE, GROOM CONCEPTS, DRAPES & DAZZLES, MARWADI JODI, Needle Story, Asma, JAIPUR GEMS, kunvarani, Ratan THE MAN STORE, GALA, MK, HARSHINI, UNIQA, Decurra, Mahadev Mathaji Caterers, indralokk, Dhruva, Raj Lucky Cards, Meghna Israni Photos, Chelsea Madison, and many more...

Open for all — ಸರ್ವರಿಗೂ ಆದರದ ಸ್ವಾಗತ

ಜೀತೋ ಬೆಂಗಳೂರು ನಾರ್ಥ್ ಚಾಪ್ಟರ್ ಫೌಂಡೇಶನ್
85, 1st Floor, 59th Cross, 4th Block, Rajajinagar, Bangalore - 560010
Mob: 99025 69865, E-mail: bangalorenorth@jito.org, Website: jitobangalorenorth.org

ಉತ್ತರ ವಲಯ ಕಾಡಿದ ಜಗದೀಶನ್

ದುಲೀಪ್ ಟ್ರೋಫಿ ಸೆಮಿಫೈನಲ್ ಹಣಾಹಣಿ: ದಕ್ಷಿಣ ವಲಯ ಉತ್ತಮ ಮೊತ್ತ

• ಗಿರೀಶ ದೊಡ್ಡಮನಿ

ಬೆಂಗಳೂರು: ತಮಿಳುನಾಡಿನ ಕೊಯಮತ್ತೂರಿನ ನಾರಾಯಣ ಜಗದೀಶನ್ ಗುರುವಾರ ತಮಗೆ ಲಭಿಸಿದ 'ಅವಕಾಶ'ವನ್ನು ಅಜೇಯ ಶತಕವನ್ನಾಗಿ ಪರಿವರ್ತಿಸಿದರು.

ಬೆಂಗಳೂರು ಹೊರವಲಯದ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನ (ಎ) ದಲ್ಲಿ ಆರಂಭವಾದ ದುಲೀಪ್ ಟ್ರೋಫಿ ಸೆಮಿಫೈನಲ್‌ನಲ್ಲಿ ಜಗದೀಶನ್ ಅವರದ್ದೇ ಆಟ. ಆರಂಭದಲ್ಲಿ ತಾಳ್ಮೆ ನಂತರದಲ್ಲಿ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಬೌಲರ್‌ಗಳನ್ನು ಕಾಡಿದರು. ಅವರ ಚೆಂದದ ಬ್ಯಾಟಿಂಗ್ ಬಲದಿಂದ ದಕ್ಷಿಣ ವಲಯ ತಂಡವು ಉತ್ತರ ವಲಯದ ಎದುರು ಮೊದಲ ದಿನದಾಟದ ಅಂತ್ಯಕ್ಕೆ 81 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 297 ರನ್ ಗಳಿಸಿತು.

ಋತುರಾಜ್ ಗಾಯಕವಾಡ್ ಬ್ಯಾಟಿಂಗ್ ವೈಖರಿ

> **ಗಾಯಗೊಂಡಿದ್ದ ಸಂದರ್ಭದಲ್ಲಿ ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆದೆ. ಚೇತರಿಕೆಯ ಹಂತದಲ್ಲಿ ಆಟದ ಲಯ ತಪ್ಪದಂತೆ ಅಭ್ಯಾಸ ಮಾಡುತ್ತಿದ್ದೆ. ಹೀಗಾಗಿ ದೇಶಿ ಋತುವಿನ ಆರಂಭ ಚೆನ್ನಾಗಿ ಮಾಡಲು ಸಾಧ್ಯವಾಯಿತು.**
> **ಋತುರಾಜ್ ಗಾಯಕವಾಡ್**
> ಪಶ್ಚಿಮ ವಲಯದ ಬ್ಯಾಟರ್

ಆರಂಭಿಕ ಬ್ಯಾಟರ್ ಜಗದೀಶನ್ ಅವರಿಗೆ ಅದೃಷ್ಟವೂ ಜೊತೆಗೂಡಿತು. ಭಾರತ ಟೆಸ್ಟ್ ತಂಡದಲ್ಲಿ ಈಚೆಗೆ ಪದಾರ್ಪಣೆ ಮಾಡಿದ್ದ ವೇಗಿ ಅನ್ಷುಲ್ ಕಾಂಬೋಜ್ ಹಾಕಿದ 11ನೇ ಓವರ್‌ನಲ್ಲಿ ಜಗದೀಶನ್ ಬ್ಯಾಟ್ ಸವರಿದ ಚೆಂಡು ವಿಕೆಟ್‌ಕೀಪರ್ ಕನ್ಹಯ್ಯಾ ವಾಧ್ವಾನ್ ಅವರ ಕೈಸೆರೆಯಾಗಿತ್ತು. ಆದರೆ ಅನ್ಷುಲ್, ನೋಬಾಲ್ ಹಾಕಿದ್ದು ವಿಡಿಯೊ ಪರಿಶೀಲನೆಯಲ್ಲಿ ಖಚಿತವಾಯಿತು. ಇದರ ನಂತರ ಜಗದೀಶನ್ ಇಡೀ ದಿನ ಬೌಲರ್‌ಗಳನ್ನು ಕಾಡಿದರು. ಅವರು 124 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನಂತರದ 50 ರನ್‌ಗಳಲ್ಲಿ 60 ಎಸೆತಗಳಲ್ಲಿ ಹೊಡೆದು ಶತಕದ ಗಡಿ ದಾಟಿದರು.

ವಿಕೆಟ್‌ಕೀಪರ್– ಬ್ಯಾಟರ್ ಜಗದೀಶನ್ ಅವರಿಗೆ ಎರಡು ತಿಂಗಳು ಹಿಂದಷ್ಟೇ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಆಡುತ್ತಿದ್ದ ಭಾರತ ತಂಡದಿಂದ 'ಬೊಚ್ಚಲ ಕರೆ' ಬಂದಿತ್ತು. ಆ ಸರಣಿಯ ನಾಲ್ಕನೇ ಟೆಸ್ಟ್‌ನಲ್ಲಿ ವಿಕೆಟ್‌ಕೀಪರ್ ರಿಷಭ್ ಪಂತ್ ಗಾಯಗೊಂಡಿದ್ದರಿಂದ 29 ವರ್ಷದ ಜಗದೀಶನ್ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿತ್ತು. ಸರಣಿಯ ಕೊನೆ ಪಂದ್ಯದಲ್ಲಿ ಅವರಿಗೆ ಕಣಕ್ಕಿಳಿಯುವ ಅವಕಾಶವೇನೂ ಸಿಗಲಿಲ್ಲ. ಆದರೆ ಭಾರತ ತಂಡದೊಂದಿಗೆ ಕಳೆದ ಆ ದಿನಗಳು ಜಗದೀಶನ್ ಅವರಲ್ಲಿ ಭರವಸೆ ಮೂಡಿಸಿರುವುದು ಸುಳ್ಳಲ್ಲ.

ಶತಕ ದಾಖಲಿಸಿದ ಸಂಭ್ರಮದಲ್ಲಿ ನಾರಾಯಣ ಜಗದೀಶನ್ –ಪಿಟಿಐ ಚಿತ್ರಗಳು

ಬುಧವಾರ ರಾತ್ರಿ ಮಳೆಯಾಗಿದ್ದ-ರಿಂದ ಮೈದಾನದ ಹೊರಾಂಗಣವು ತೇವವಾಗಿತ್ತು. ಅದರಿಂದಾಗಿ ಗುರುವಾರ ದಿನದಾಟವು ಅರ್ಧಗಂಟೆ ತಡವಾಗಿ ಆರಂಭವಾಯಿತು. ಟಾಸ್ ಗೆದ್ದ ಉತ್ತರ ವಲಯದ ನಾಯಕ ಅಂಕಿತ್ ಕುಮಾರ್ ಬೌಲಿಂಗ್ ಆಯ್ಕೆ ಮಾಡಿ ಅಚ್ಚರಿ ಮೂಡಿಸಿದರು. ಬ್ಯಾಟರ್‌ಗಳಿಗೆ ನೆರವಾಗುವಂತಿದ್ದ ಪಿಚ್‌ನಲ್ಲಿ ದಕ್ಷಿಣ ವಲಯದ ಆಟಗಾರರು ಲಾಭ ಪಡೆದರು.

ಅವರು ತನ್ಮಯ್ ಅಗರವಾಲ್ (43; 101ಎ) ಅವರೊಂದಿಗೆ ಊಟದ ವಿರಾಮದ ವೇಳೆಗೆ ವಿಕೆಟ್ ನಷ್ಟವಿಲ್ಲದೇ 79 ರನ್ ಸೇರಿಸಿದರು. ವಿರಾಮದ ನಂತರದ ಅವಧಿಯಲ್ಲಿ ಸ್ಪಿನ್ನರ್ ನಿಶಾಂತ್ ಸಿಂಧು ಎಸೆತದಲ್ಲಿ ತನ್ಮಯ್ ಕ್ಲೀನ್ ಬೌಲ್ಡ್ ಆದರು. ಜೊತೆಯಾಟ (103 ರನ್) ಮುರಿಯಿತು.

ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರು ಜಗದೀಶನ್ ಜೊತೆಗೂಡಿ ರನ್‌ಗಳನ್ನು ಕಲೆಹಾಕಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 128 ರನ್ (169ಎಸೆತ) ಗಳಿಸಿದರು. ಚಹಾ ವಿರಾಮಕ್ಕೂ ಸ್ವಲ್ಪ ಮುನ್ನ ಅನ್ಷುಲ್ ಎಸೆತವನ್ನು ಆಡುವ ಭರದಲ್ಲಿ ದೇವದತ್ತ, ವಿಕೆಟ್‌ಕೀಪರ್‌ಗೆ ಕ್ಯಾಚ್ ಆದರು. ಮೋಹಿತ್ ಕಾಳೆ 15 ರನ್ ಗಳಿಸಿ ನಿರ್ಗಮಿಸಿದರು. ಆದರೆ ಜಗದೀಶನ್ ಬೌಲರ್‌ಗಳಿಗೆ ಸಿಂಹಸ್ವಪ್ನವಾದರು.

ಸಂಕ್ಷಿಪ್ತ ಸ್ಕೋರು: ಸೆಮಿಫೈನಲ್ 1– ಮೊದಲ ಇನಿಂಗ್ಸ್: ದಕ್ಷಿಣ ವಲಯ: 81 ಓವರ್‌ಗಳಲ್ಲಿ 3ಕ್ಕೆ297 (ತನ್ಮಯ್ ಅಗರವಾಲ್ 43, ಎನ್. ಜಗದೀಶನ್ ಬ್ಯಾಟಿಂಗ್ 148, ದೇವದತ್ತ ಪಡಿಕ್ಕಲ್ 57, ಮೊಹಮ್ಮದ್ ಅಜರುದ್ದೀನ್ ಬ್ಯಾಟಿಂಗ್ 11, ನಿಶಾಂತ್ ಸಿಂಧು 59ಕ್ಕೆ2, ಅನ್ಷುಲ್ ಕಾಂಬೋಜ್ 47ಕ್ಕೆ1) ವಿರುದ್ಧ ಉತ್ತರ ವಲಯ.

ಸೆಮಿಫೈನಲ್ 2–ಪಶ್ಚಿಮ ವಲಯ: 87 ಓವರ್‌ಗಳಲ್ಲಿ 6ಕ್ಕೆ363 (ಆರ್ಯ ದೇಸಾಯಿ 39, ಋತುರಾಜ್ ಗಾಯಕವಾಡ್ 184, ಶ್ರೇಯಸ್ ಅಯ್ಯರ್ 25, ತನುಷ್ ಕೋಟ್ಯಾನ್ ಬ್ಯಾಟಿಂಗ್ 65, ಶಾರ್ದೂಲ್ ಠಾಕೂರ್ ಬ್ಯಾಟಿಂಗ್ 24, ಖಲೀಲ್ ಅಹಮದ್ 70ಕ್ಕೆ2, ಸಾರಾಂಶ್ ಜೈನ್ 109ಕ್ಕೆ2) ವಿರುದ್ಧ ಕೇಂದ್ರ ವಲಯ.

ಋತುರಾಜ್ ಶತಕ ಪಶ್ಚಿಮ ಬೃಹತ್ ಮೊತ್ತ

ದುಲೀಪ್ ಟ್ರೋಫಿ ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಎಲ್ಲರ ಕಣ್ಣು ಪಶ್ಚಿಮ ವಲಯ ತಂಡದ ಶ್ರೇಯಸ್ ಅಯ್ಯರ್ ಅವರ ಮೇಲಿತ್ತು. ಆದರೆ ಆ ಪಂದ್ಯದಲ್ಲಿ ಮಿಂಚಿದ್ದು ಮಾತ್ರ ಋತುರಾಜ್ ಗಾಯಕವಾಡ್ ಅವರು.

ಟಾಸ್ ಗೆದ್ದ ಪಶ್ಚಿಮ ವಲಯ ತಂಡದ ನಾಯಕ ಶಾರ್ದೂಲ್ ಠಾಕೂರ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ 10 ರನ್‌ಗಳಾಗುವಷ್ಟರಲ್ಲಿ ಇಬ್ಬರೂ ಆರಂಭಿಕರಾದ ಯಶಸ್ವಿ ಜೈಸ್ವಾಲ್ (4) ಮತ್ತು ಹಾರ್ವಿಕ್ ದೇಸಾಯಿ (1) ಪೆವಿಲಿಯನ್ ಸೇರಿದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಋತುರಾಜ್ (184; 206 ಎ, 4X25, 6X1) ಅಮೋಘ ಶತಕ ಬಾರಿಸಿದರು. ದಿನದಾಟದ ಮುಕ್ತಾಯಕ್ಕೆ ತಂಡವು 87 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 363 ರನ್‌ಗಳ ದೊಡ್ಡ ಮೊತ್ತ ಪೇರಿಸಿತು. ಶ್ರೇಯಸ್ 28 ಎಸೆತಗಳಲ್ಲಿ 25 ರನ್ ಗಳಿಸಿದರು. ಇನಿಂಗ್ಸ್ ಕೊನೆಯಲ್ಲಿ ಮಿಂಚಿದ ತನುಷ್ ಕೋಟ್ಯಾನ್ (ಬ್ಯಾಟಿಂಗ್ 65) ಮತ್ತು ಶಾರ್ದೂಲ್ (ಬ್ಯಾಟಿಂಗ್ 24) ಕ್ರೀಸ್‌ನಲ್ಲಿದ್ದಾರೆ.

ಭಾಟಿಯಾ ಬದಲು ಉಮಾಗೆ ಅವಕಾಶ

ನವದೆಹಲಿ (ಪಿಟಿಐ): ಯಸ್ತಿಕಾ ಭಾಟಿಯಾ ಗಾಯಾಳಾದ ಕಾರಣ ವಿಕೆಟ್ ಕೀಪರ್- ಬ್ಯಾಟರ್ ಉಮಾ ಚೆಟ್ರಿ ಅವರನ್ನು ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ ಮತ್ತು ಮಹಿಳಾ ವಿಶ್ವಕಪ್‌ಗೆ ಭಾರತ ತಂಡಕ್ಕೆ ಸೇರಿಸಲಾಗಿದೆ. ವಿಶಾಖಪಟ್ಟಣದಲ್ಲಿ ನಡೆದ ಪೂರ್ವಸಿದ್ಧತಾ ಶಿಬಿರದ ವೇಳೆ ಭಾಟಿಯಾ ಎಡ ಮೊಣಕಾಲಿಗೆ ಗಾಯವಾಗಿದೆ ಎಂದು ಬಿಸಿಸಿಐ ತಿಳಿಸಿದೆ.

ಸರ್ಕಾರದಿಂದ ಐತಿಹಾಸಿಕ ಜಿ ಎಸ್ ಟಿ ಸುಧಾರಣೆ!

ಏಷ್ಯಾ ಕಪ್: ಭಾರತಕ್ಕೆ ಮಣಿದ ಮಲೇಷ್ಯಾ

ರಾಜಗೀರ್ (ಪಿಟಿಐ): ದೃಢಸಂಕಲ್ಪದಿಂದ ಆಡಿದ ಭಾರತ ತಂಡ, ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್ ಫೋರ್ ಹಂತದ ಎರಡನೇ ಪಂದ್ಯದಲ್ಲಿ ಗುರುವಾರ ಸೊಗಸಾದ ಪ್ರದರ್ಶನ ನೀಡಿ ಮಲೇಷ್ಯಾ ತಂಡವನ್ನು 4–1 ಗೋಲುಗಳಿಂದ ಸೋಲಿಸಿತು.

ಈ ಗೆಲುವಿನಿಂದ ಭಾರತ ತಂಡ ಸೂಪರ್ ಫೋರ್ ಹಂತದ 2 ಪಂದ್ಯಗಳಿಂದ 4 ಪಾಯಿಂಟ್ಸ್ ಪಡೆದು ಅಗ್ರಸ್ಥಾನಕ್ಕೇರಿತು. ಚೀನಾ ಮತ್ತು ಮಲೇಷ್ಯಾ ತಲಾ ಮೂರು ಪಾಯಿಂಟ್ಸ್ ಪಡೆದಿವೆ. ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾ ಒಂದು ಪಾಯಿಂಟ್ ಪಡೆದಿದ್ದು ಕೊನೆಯ ಸ್ಥಾನದಲ್ಲಿದೆ.

ಮನ್‌ಪ್ರೀತ್ ಸಿಂಗ್ (17ನೇ ನಿಮಿಷ), ಸುಖಜೀತ್ ಸಿಂಗ್ (19ನೇ ನಿಮಿಷ), ಶಿಲಾನಂದ ಲಾಕ್ರಾ (24ನೇ ನಿಮಿಷ) ಮತ್ತು ವಿವೇಕ್ ಸಾಗರ ಪ್ರಸಾದ್ (38ನೇ ನಿಮಿಷ) ಅವರು ಆತಿಥೇಯ ತಂಡದ ಪರ ಗೋಲುಗಳನ್ನು ಗಳಿಸಿದರು.

ಎರಡನೇ ನಿಮಿಷವೇ ಶಫೀಕ್ ಹಸನ್ ಗೋಲು ಹೊಡೆದು ಬಾಂಗ್ಲಾ ತಂಡಕ್ಕೆ ಮುನ್ನಡೆ ಒದಗಿಸಿದರು. ಈ ಆಘಾತದಿಂದ ಕ್ರಮೇಣ ಚೇತರಿಸಿಕೊಂಡ ಭಾರತ ಲಯ ಕಂಡುಕೊಂಡಿತು. ಮೊದಲಾರ್ಧದಲ್ಲೇ ಎರಡು ನಿಮಿಷಗಳ ಅಂತರದಲ್ಲಿ ಎರಡು ಗೋಲುಗಳನ್ನು ಗಳಿಸಿ ಮುನ್ನಡೆ ಸಂಪಾದಿಸಿತು. ಲಾಕ್ರಾ ಗಳಿಸಿದ ಗೋಲಿನಿಂದ ವಿರಾಮದ ವೇಳೆಗೆ ಭಾರತ 3–1 ಮುನ್ನಡೆ ಪಡೆಯಿತು. ವಿರಾಮದ ನಂತರ ಭಾರತ ಎದುರಾಳಿಗಳ ಮೇಲೆ ಒತ್ತಡ ತೀವ್ರಗೊಳಿಸಿತು. 38ನೇ ನಿಮಿಷ ಪೆನಾಲ್ಟಿ ಕಾರ್ನರ್‌ನಲ್ಲಿ ವಿವೇಕ ಸಾಗರ್ ಗಳಿಸಿದ ಗೋಲಿನಿಂದ ಭಾರತದ ಗೆಲುವಿನ ಅಂತರ ಇನ್ನಷ್ಟು ಹಿಗ್ಗಿತು.

ಭಾರತ ಬುಧವಾರ ನಡೆದ ಸೂಪರ್ ಫೋರ್ ಹಂತದ ಮೊದಲ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಎದುರು ಹಿನ್ನಡೆಯಿಂದ ಚೇತರಿಸಿ 2–2 ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿತ್ತು. ಆತಿಥೇಯ ತಂಡವು, ಶನಿವಾರ ನಡೆಯುವ ತನ್ನ ಕೊನೆಯ ಸೂಪರ್ ಫೋರ್ ಪಂದ್ಯದಲ್ಲಿ ಚೀನಾ ತಂಡವನ್ನು ಎದುರಿಸಲಿದೆ.

ಬಾಂಗ್ಲಾದೇಶಕ್ಕೆ ಜಯ: ಬಾಂಗ್ಲಾದೇಶ ತಂಡವು ಐದು ಮತ್ತು ಆರನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ 5–1 ಗೋಲುಗಳಿಂದ ಕಜಾಕಸ್ತಾನ ತಂಡವನ್ನು ಮಣಿಸಿತು.

ಗೋಲು ಗಳಿಸಿದ ಖುಷಿಯಲ್ಲಿ ಭಾರತ ತಂಡದ ಆಟಗಾರರು ಪಿಟಿಐ ಚಿತ್ರ

ಕೊರಿಯಾಕ್ಕೆ ಚೀನಾ ಆಘಾತ

ಚೀನಾ ತಂಡ ದಿನದ ಮೊದಲ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಶಿಸ್ತುಬದ್ಧ ಆಟವಾಡಿ ಐದು ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ ತಂಡಕ್ಕೆ 3–0 ಗೋಲುಗಳಿಂದ ಆಘಾತ ನೀಡಿತು.

ಚೀನಾ ಪರ ಬೆನ್ಹೈ ಚೆಂಗ್ (13, 43ನೇ ನಿಮಿಷ), ಜೀಶೆಂಗ್ ಗಾವೊ (43ನೇ ನಿಮಿಷ) ಗೋಲು ಗಳಿಸಿದರು. ಇದು ಚೀನಾಕ್ಕೆ ಮೊದಲ ಜಯ. ಬುಧವಾರ ನಡೆದ ಪಂದ್ಯದಲ್ಲಿ ಮಲೇಷ್ಯಾಕ್ಕೆ ಮಣಿದಿತ್ತು.

ಚಿಟಿಕೆ ಸುದ್ದಿ

ವಿಶ್ವ ಬಾಕ್ಸಿಂಗ್: ಪವನ್ ಶುಭಾರಂಭ

ಲಿವರ್‌ಪೂಲ್ (ಪಿಟಿಐ): ಯುವ ಬಾಕ್ಸರ್ ಪವನ್ ಬಾರ್ತ್ವಾಲ್ ಅವರು ಗುರುವಾರ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 55 ಕೆಜಿ ವಿಭಾಗದ ಮೊದಲ ಸುತ್ತಿನಲ್ಲಿ ಗೆಲುವಿನೊಂದಿಗೆ ಭಾರತದ ಅಭಿಯಾನಕ್ಕೆ ಚಾಲನೆ ನೀಡಿದರು.

ವಿಶ್ವ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಬಾರಿ ಸ್ಪರ್ಧಿ-ಸುತ್ತಿರುವ 22 ವರ್ಷದ ಪವನ್ 3–2 ಅಂತರದಿಂದ ಬ್ರೆಜಿಲ್‌ನ ಮೈಕೆಲ್ ಡಗ್ಲಾಸ್ ಡಿಸಿಲ್ವ ಅವರನ್ನು ಹಿಮ್ಮೆಟ್ಟಿಸಿದರು.

ಮಹಿಳೆಯರ 54 ಕೆಜಿ ವಿಭಾಗದಲ್ಲಿ ಸಾಕ್ಷಿ ಚೌಧರಿ ಮೊದಲ ಸುತ್ತಿನಲ್ಲಿ ಉಕ್ರೇನ್‌ನ ವಿಕ್ಟೋರಿಯಾ ಶ್ಕೆಯುಲ್ ವಿರುದ್ಧ ಆರ್‌ಎಸ್‌ಸಿ ಆಧಾರದಲ್ಲಿ ಗೆಲುವು ಸಾಧಿಸಿದರು.

ಭಾರತದ ಒಟ್ಟು 20 ಬಾಕ್ಸರ್‌ಗಳು ಸ್ಪರ್ಧಾ ಕಣದಲ್ಲಿದ್ದಾರೆ.

ಫುಟ್‌ಬಾಲ್: ಭಾರತಕ್ಕೆ ಮಣಿದ ಬಹರೇನ್

ದೋಹಾ (ಪಿಟಿಐ): ಭಾರತದ ತಂಡವು ಇಲ್ಲಿ ನಡೆದ ಎಎಫ್‌ಸಿ 23 ವರ್ಷದೊಳಗಿನವರ ಪುರುಷರ ಏಷ್ಯನ್ ಕಪ್ 2026 ಕ್ವಾಲಿಫೈಯರ್ ಪಂದ್ಯದಲ್ಲಿ 2–0 ಗೋಲುಗಳಿಂದ ಬಹರೇನ್ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಬುಧವಾರ ನಡೆದ ಎಚ್ ಗುಂಪಿನ ಮೊದಲ ಪಂದ್ಯದಲ್ಲಿ ಭಾರತದ ಪರ ಮುಹಮ್ಮದ್ ಸುಹೈಲ್ (32ನೇ ನಿಮಿಷ) ಮತ್ತು ಚಿಂಗಂಗ್‌ಬಮ್ ಶಿವಲ್ಡೊ ಸಿಂಗ್ (90 + 5ನೇ) ಗೋಲು ದಾಖಲಿಸಿದರು.

ಈ ಗೆಲುವಿನೊಂದಿಗೆ ಭಾರತ ತಂಡವು 3 ಅಂಕ ಗಳಿಸಿ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿವೆ. ಕತಾರ್ 13–0 ಯಿಂದ ಬ್ರೂನಿ ತಂಡವನ್ನು ಮಣಿಸಿ ಅಗ್ರಸ್ಥಾನದಲ್ಲಿದೆ. ಭಾರತ ಇದೇ 6ರಂದು ಕತಾರ್ ವಿರುದ್ಧ, 9ರಂದು ಬ್ರೂನಿ ವಿರುದ್ಧ ಸೆಣಸಲಿದೆ.

ಭಾರತ– ಅಫ್ಗನ್ ಪಂದ್ಯ ಡ್ರಾ

ಹಿಸೋರ್ (ತಾಜಿಕಿಸ್ತಾನ), (ಪಿಟಿಐ): ಭಾರತ ತಂಡದವರು ಪಾಲಿಗೆ ಬಂದ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಲು ವಿಫಲರಾದರು. ಹೀಗಾಗಿ ಗುರುವಾರ ನಡೆದ ಸಿಎಎಫ್‌ಎ ನೇಷನ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಳ್ಳಬೇಕಾಯಿತು.

ಭಾರತ 'ಬಿ' ಗುಂಪಿನಲ್ಲಿ 3 ಪಂದ್ಯಗಳಿಂದ 4 ಪಾಯಿಂಟ್ಸ್ ಕಲೆಹಾಕಿತು. ಇದಕ್ಕೆ ಮೊದಲಿನ ಪಂದ್ಯಗಳಲ್ಲಿ ತಾಜಿಕಿಸ್ತಾನ ವಿರುದ್ಧ ಜಯಗಳಿಸಿದ ಭಾರತ, ಇರಾನ್‌ಗೆ ಸೋತಿತ್ತು. ಇರಾನ್– ತಾಜಿಕಿಸ್ತಾನ ನಡುವಣ ಪಂದ್ಯವೂ 2–2 ಗೋಲುಗಳಿಂದ ಡ್ರಾ ಗೊಂಡಿತು. ಅಗ್ರಸ್ಥಾನದೊಂದಿಗೆ ಇರಾನ್ ಫೈನಲ್ ಪ್ರವೇಶಿಸಿತು. ಭಾರತ ಮತ್ತು ತಾಜಿಕಿಸ್ತಾನ ತಂಡಗಳು ಮೂರನೇ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ.

ಅಲ್ಪಮೊತ್ತಕ್ಕೆ ಕುಸಿದ ಕೆಎಸ್‌ಸಿಎ ಕೋಲ್ಟ್ಸ

ಪ್ರಜಾವಾಣಿ ವಾರ್ತೆ

ಮೈಸೂರು: ದಿವೇಶ್ ಶರ್ಮಾ ಹ್ಯಾಟ್ರಿಕ್ ಬೌಲಿಂಗ್ ದಾಳಿಗೆ (42ಕ್ಕೆ 3) ನಲುಗಿದ ಕೆಎಸ್‌ಸಿಎ ಕೋಲ್ಟ್ಸ ತಂಡವು ಗುರುವಾರ ಇಲ್ಲಿ ಆರಂಭಗೊಂಡ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಎದುರು 140 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು. ದಿನದಾಟದ ಅಂತ್ಯಕ್ಕೆ ಹಿಮಾಚಲ ಪ್ರದೇಶ 1 ವಿಕೆಟ್‌ಗೆ 134 ರನ್ ಗಳಿಸಿ ಸುಸ್ಥಿತಿಯಲ್ಲಿದೆ.

ಇಲ್ಲಿನ ಎಸ್‌ಜೆಸಿಇ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕೋಲ್ಟ್ಸ ಆರಂಭದಿಂದಲೂ ತಿಣುಕಾಡಿತು. ಪಂದ್ಯದ 38ನೇ ಓವರ್‌ನಲ್ಲಿ ಹಿಮಾಚಲ ವೇಗಿ ದಿವೇಶ್ ಶರ್ಮ ಆಘಾತ ನೀಡಿದರು. ಉತ್ತಮವಾಗಿ ಆಡುತ್ತಿದ್ದ ಕೋಲ್ಟ್ಸ ನಾಯಕ ಅನೀಶ್ವರ್ ಗೌತಮ್ (33) ಮೂರನೇ ಎಸೆತದಲ್ಲಿ ಬೌಲ್ಡ್ ಆದರೆ, ಮರು ಎಸೆತದಲ್ಲಿ ಮೊಹ್ಸಿನ್ ಖಾನ್ (0) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಂತರದ ಎಸೆತದಲ್ಲಿ ಶಿಖರ್ ಶೆಟ್ಟಿ (0) ಕ್ಯಾಚಿತ್ತು ನಿರ್ಗಮಿಸಿದರು. ವಿಪಿನ್ ಶರ್ಮ ಹಾಗೂ ಅರ್ಪಿತ್ ಗುಲೇರಿಯ ತಲಾ 3 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಕೆಎಸ್‌ಸಿಎ ಕೋಲ್ಟ್ಸ: 41 ಓವರ್‌ಗಳಲ್ಲಿ 140 (ಅನೀಶ್ವರ್ ಗೌತಮ್ 33, ಮೊನಿಷ್ ರೆಡ್ಡಿ 23, ಕೆ.ಪಿ. ಕಾರ್ತಿಕೇಯ 17, ಎನ್, ಸಮರ್ಥ್ 17. ಅರ್ಪಿತ್ ಗುಲೇರಿಯ 21ಕ್ಕೆ 3, ದಿವೇಶ್ ಶರ್ಮಾ 42ಕ್ಕೆ 3, ವಿಪಿನ್ ಶರ್ಮಾ 54ಕ್ಕೆ 3). ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 39 ಓವರ್‌ಗಳಲ್ಲಿ 1 ವಿಕೆಟ್‌ಗೆ 134 (ಅಂಕುಶ್ ಬೈನ್ಸ್ ಔಟಾಗದೇ 76, ಸಿದ್ಧಾಂತ್ ಪುರೋಹಿತ್ ಔಟಾಗದೇ 52. ಎನ್. ಸಮರ್ಥ್ 37ಕ್ಕೆ 1)

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಆಂಧ್ರ ಕ್ರಿಕೆಟ್ ಸಂಸ್ಥೆ: 83.5 ಓವರ್‌ಗಳಲ್ಲಿ 257 (ರೇವಂತ್ ರೆಡ್ಡಿ 101, ಸಂದೀಪ್ 64. ನಿನಾದ್ ರಥ್ವ 92ಕ್ಕೆ 5. ಅತೀತ್ ಶೇಟ್ 49ಕ್ಕೆ 3). ಬರೋಡ ಕ್ರಿಕೆಟ್ ಸಂಸ್ಥೆ: 6 ಓವರ್‌ಗಳಲ್ಲಿ 1 ವಿಕೆಟ್‌ಗೆ 20.

ಹ್ಯಾಟ್ರಿಕ್ ವಿಕೆಟ್ ಪಡೆದ ದಿವೇಶ್ ಶರ್ಮಾ
ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕಿಣಿ ಸ್ಪೋರ್ಟ್ಸ್ ಕ್ರೀಡಾಂಗಣ: ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: 85.4 ಓವರ್‌ಗಳಲ್ಲಿ 7 ವಿಕೆಟ್‌ಗೆ 211 (ನಿಕಿನ್ ಜೋಸ್ 81, ತುಷಾರ್ ಸಿಂಗ್ 42, ಸಮಿತ್ ದ್ರಾವಿಡ್ 45; ಜಪಜ್ಞಾ ಭಟ್ 32ಕ್ಕೆ 3, ದೃಶಾಂತ್ ಸೋನಿ 55ಕ್ಕೆ 2, ಹೇಮಾಂಗ್ ಪಟೇಲ್ 43ಕ್ಕೆ 2) ಗುಜರಾತ್ ಕ್ರಿಕೆಟ್ ಸಂಸ್ಥೆ ವಿರುದ್ಧ.

ಐಎಎಫ್ ಕ್ರೀಡಾಂಗಣ: ಛತ್ತೀಸಗಡ ರಾಜ್ಯ ಕ್ರಿಕೆಟ್ ಸಂಘ: 68.1 ಓವರ್‌ಗಳಲ್ಲಿ 6 ವಿಕೆಟ್‌ಗೆ 187 (ಪ್ರತೀಕ್ ಯಾದವ್ 36, ಶಶಾಂಕ್ 27, ಶಶಾಂಕ್ ಚಂದ್ರಶೇಖರ್ 39, ಸಹಬಾನ್ ಖಾನ್ ಔಟಾಗದೇ 47) ಕೆಎಸ್‌ಸಿಎ ಇಲೆವೆನ್ ವಿರುದ್ಧ.

ಜಿಎಸ್‌ಟಿ: ತುಟ್ಟಿಯಾಗಲಿರುವ ಐಪಿಎಲ್ ಟಿಕೆಟ್

ನವದೆಹಲಿ (ಪಿಟಿಐ): ಮುಂದಿನ ಆವೃತ್ತಿಯಿಂದ ಐಪಿಎಲ್ ಪಂದ್ಯ ವೀಕ್ಷಿಸಲು ಹೋಗುವವರು ಟಿಕೆಟ್‌ಗೆ ಹೆಚ್ಚಿನ ಹಣ ತೆರ ಬೇಕಾಗುತ್ತದೆ. ಸರ್ಕಾರ, ಇಂಥ ಪಂದ್ಯಗಳ ಟಿಕೆಟ್‌ಗೆ ವಿಧಿಸುವ ಜಿಎಸ್‌ಟಿಯನ್ನು ಶೇ 28 ರಿಂದ 40ರ ವ್ಯಾಪ್ತಿಗೆ ತಂದಿದೆ.

'ಕ್ಯಾಸಿನೊ, ರೇಸ್ ಕ್ಲಬ್‌ಗಳ ಪ್ರವೇಶ ಅಥವಾ ಐಪಿಎಲ್‌ನಂಥ ಕ್ರೀಡಾ ಕಾರ್ಯಕ್ರಮಗಳಿಗೆ ಪ್ರವೇಶದ ಟಿಕೆಟ್‌ಗಳ ಮೇಲೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಜೊತೆ ಶೇ 40 ಜಿಎಸ್‌ಟಿ ವಿಧಿಸಲಾಗುತ್ತಿದೆ. ಬುಧವಾರ ತಡರಾತ್ರಿ ಕೇಂದ್ರ ಹಣಕಾಸು ಸಚಿವಾಲಯ ಪ್ರಕಟಣೆ ಹೊರಡಿಸಿದೆ.

₹500 ಮೂಲದರದ ಟಿಕೆಟ್‌ಗೆ ಈ ಹಿಂದೆ ಶೇ 28 ಜಿಎಸ್‌ಟಿ ಸೇರಿ ₹640 ಆಗುತಿತ್ತು. ಈಗ ಶೇ 40 ಜಿಎಸ್‌ಟಿ ಹೇರಿಕೆಯಿಂದ ಟಿಕೆಟ್ ದರ ₹700 ಆಗಲಿದೆ. ಐಪಿಎಲ್ ಟಿಕೆಟ್‌ಗಳನ್ನು 'ಐಷಾರಾಮಿ ಸರಕು'ಗಳ ವ್ಯಾಪ್ತಿಗೆ ತರಲಾಗಿದೆ. ಆದರೆ ಅಂತರರಾಷ್ಟ್ರೀಯ ಪಂದ್ಯಗಳ ಟಿಕೆಟ್ ದರ ಕೊಂಚ ಅಗ್ಗವಾಗಲಿದೆ. ಇತರೆ ಕ್ರೀಡಾ ಚಟುವಟಿಕೆಯಡಿ ಬರುವುದರಿಂದ ಈ ಪಂದ್ಯಗಳ ಟಿಕೆಟ್ ಮೇಲೆ ಶೇ 18 ಜಿಎಸ್‌ಟಿ ಮಾತ್ರ ವಿಧಿಸಲಾಗುತ್ತದೆ.

ನಿವೃತ್ತಿ ಘೋಷಿಸಿದ ಅಮಿತ್ ಮಿಶ್ರಾ

ನವದೆಹಲಿ (ಪಿಟಿಐ): ಸುಮಾರು ಎರಡು ದಶಕಗಳ ವೃತ್ತಿಜೀವನದ ನಂತರ ಭಾರತ ತಂಡದ ಅನುಭವಿ ಲೆಗ್ ಸ್ಪಿನ್ನರ್ ಅಮಿತ್ ಮಿಶ್ರಾ ಅವರು ಎಲ್ಲಾ ಮಾದರಿಯ ಕ್ರಿಕೆಟ್‌ಗೆ ಗುರುವಾರ ವಿದಾಯ ಘೋಷಿಸಿದರು.

2017ರಲ್ಲಿ ಕೊನೆಯ ಬಾರಿ ಮಿಶ್ರಾ ಅವರು ಭಾರತ ತಂಡದಲ್ಲಿ ಆಡಿದ್ದರು. 2024ರ ಐಪಿಎಲ್‌ನಲ್ಲಿ ಹರಿಯಾಣದ ಬೌಲರ್ ಲಖನೌ ಸೂಪರ್ ಜೈಂಟ್ಸ್ ಪರ ಆಡಿದ್ದರು.

42 ವರ್ಷದ ಅಮಿತ್ ಭಾರತ ತಂಡದ ಪರ 22 ಟೆಸ್ಟ್, 36 ಏಕದಿನ ಮತ್ತು 10 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. 2008ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಪಂದ್ಯಕ್ಕೆ ಪದಾರ್ಪಣೆ ಮಾಡಿದ್ದ ಅವರು ಈ ಮಾದರಿಯಲ್ಲಿ 76 ವಿಕೆಟ್ ಗಳಿಸಿದ್ದಾರೆ. ಐದು ವರ್ಷಗಳ ಮೊದಲು ದಕ್ಷಿಣ ಆಫ್ರಿಕಾ ವಿರುದ್ಧ ಅವರು ಏಕದಿನ ತಂಡಕ್ಕೆ ನಾಂದಿ ಹಾಡಿದ್ದರು.

ಹರಭಜನ್ ಸಿಂಗ್ ಮತ್ತು ಅನಿಲ್ ಕುಂಬ್ಳೆ ನೆರಳಿನಲ್ಲಿ ಅವರು ಟೆಸ್ಟ್ ಪಂದ್ಯಕ್ಕೆ ಆಡಲು ಸಾಕಷ್ಟು ಕಾಯಬೇಕಾಯಿತು. ಮೊದಲ ಪಂದ್ಯದ ಮೊಲ ಇನಿಂಗ್ಸ್‌ನಲ್ಲೇ ಐದು ವಿಕೆಟ್ ಪಡೆದಿದ್ದರು. ಆದರೆ ನಂತರ ಸಾಂಪ್ರದಾಯಿಕ ಮಾದರಿಯಲ್ಲಿ ಐದು ವಿಕೆಟ್‌ಗಳ ಗೊಂಚಲ ಪಡೆಯಲಾಗಲಿಲ್ಲ.

ಅಶ್ವಿನ್ ಮತ್ತು ರವೀಂದ್ರ ಜಡೇಜ ಪ್ರವರ್ಧಮಾನಕ್ಕೆ ಬಂದ ನಂತರ ಅಮಿತ್ ರಾಷ್ಟ್ರೀಯ ತಂಡದಲ್ಲಿ ಅವಕಾಶಗಳು ದೂರವಾದವು. ಐಪಿಎಲ್‌ನಲ್ಲಿ ಮೂರು ಹ್ಯಾಟ್ರಿಕ್‌ಗಳನ್ನು ಪಡೆದ ಏಕೈಕ ಬೌಲರ್ ಎಂಬ ಗರಿಮೆ ಅವರದು.

ಚೆಸ್: ಗುಕೇಶ್, ವಿದಿತ್ ಶುಭಾರಂಭ

ಐಲ್ ಆಫ್ ಮ್ಯಾನ್: ಭಾರತದ ಗುಕೇಶ್, ವಿದಿತ್ ಗುಜರಾತಿ ಮತ್ತು ಅಭಿಮನ್ಯು ಪುರಾಣಿಕ್ ಅವರು ಗುರುವಾರ ಆರಂಭವಾದ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗೆಲುವಿನೊಡನೆ ಶುಭಾರಂಭ ಮಾಡಿದರು.

ಯುವ ಗ್ರ್ಯಾಂಡ್‌ಮಾಸ್ಟರ್‌ಗಳಾದ ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ ಅವರು ಎದುರಾಳಿಗಳ ಜೊತೆ ಮಾಡಿಕೊಳ್ಳಬೇಕಾಯಿತು.

ಗುಕೇಶ್ ಅವರು ಫ್ರಾನ್ಸ್‌ನ ಎಟಿನೆ ಬ್ಯಾಕ್ರಾಟ್ ವಿರುದ್ಧ, ವಿದಿತ್, ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ವಿರುದ್ಧ ಜಯಗಳಿಸಿದರು. ಅಭಿಮನ್ಯು, ಓಪನ್ ವಿಭಾಗದಲ್ಲಿ ಮೊದಲ ಬಾರಿ ಆಡಿದ ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರನ್ನು 51 ನಡೆಗಳಲ್ಲಿ ಮಣಿಸಿದರು.

ಪ್ರಜ್ಞಾನಂದ, ಜೆಫ್ರಿ ಷಿಯಾಂಗ್ ಜೊತೆ, ಅರ್ಜುನ್, ಮಾಕ್ಸಿಮ್ ಚಿಗೇವ್ ಜೊತೆ ಡ್ರಾ ಮಾಡಿಕೊಂಡರು. ನಿಹಾಲ್ ಸರಿನ್, ರಾಸ್ಮಸ್ ಸ್ವೇನ್ ಜೊತೆ ಪಾಯಿಂಟ್ ಹಂಚಿಕೊಂಡರು.

ಅಮೆರಿಕ ಓಪನ್: ಶ್ವಾಂಟೆಕ್ ಎದುರು ಗೆದ್ದು ಸೇಡು ತೀರಿಸಿದ ಅನಿಸಿಮೋವಾ

ಸೆಮಿಫೈನಲ್‌ಗೆ ಸಿನ್ನರ್, ಆಲಿಯಾಸೀಮ್

ನ್ಯೂಯಾರ್ಕ್ (ಎಎಫ್‌ಪಿ): ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಅಮೆರಿಕದ ಅಮಂಡಾ ಅನಿಸಿಮೋವಾ ಅವರು ಇಗಾ ಶ್ವಾಂಟೆಕ್ ಅವರನ್ನು ಮಹಿಳೆಯರ ಎಂಟರ ಘಟ್ಟದ ಪಂದ್ಯದಲ್ಲಿ ಮಣಿಸುವ ಮೂಲಕ ವಿಂಬಲ್ಡನ್ ಫೈನಲ್‌ನಲ್ಲಿ ಅನುಭವಿಸಿದ ಮುಖಭಂಗಕ್ಕೆ ಸೇಡು ತೀರಿಸಿಕೊಂಡರು.

ಗ್ರ್ಯಾನ್‌ಸ್ಲಾಮ್ ಇತಿಹಾಸದಲ್ಲೇ ಮೊದಲ ಬಾರಿ ಇಟಲಿಯನ್ನರು ಎದುರಾಳಿಗಳಾಗಿದ್ದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ 6–1, 6–4, 6–2 ರಿಂದ ಹತ್ತನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ ಅವರನ್ನು ಸೋಲಿಸಿದರು.

'ಆಟ ಅಮೋಘವಾಗಿತ್ತು. ನಾನು ಅತ್ಯುತ್ತಮ ರೀತಿಯಲ್ಲಿ ಪಂದ್ಯ ಆರಂಭಿಸಿದೆ' ಎಂದು 24 ವರ್ಷ ವಯಸ್ಸಿನ ಸಿನ್ನರ್ ಪ್ರತಿಕ್ರಿಯಿಸಿದರು. ಅವರು ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ 25ನೇ ಶ್ರೇಯಾಂಕದ ಫೆಲಿಕ್ಸ್ ಓಜೆ ಆಲಿಯಾಸೀಮ್ ಅವರನ್ನು ಎದುರಿಸಲಿದ್ದಾರೆ.

ಓಜೆ ಆಲಿಯಾಸೀಮ್ ಅವರು ಸಿನ್ನರ್ ಜೊತೆಗಿನ ಈ ಹಿಂದಿನ ಮೂರು ಮುಖಾಮುಖಿಗಳಲ್ಲಿ ಎರಡರಲ್ಲಿ ಜಯಗಳಿಸಿದ್ದಾರೆ. ಆದರೆ ಅಮೆರಿಕದ ಸಿನ್ಸಿನಾಟಿಯಲ್ಲಿ ಆಗಸ್ಟ್‌ನಲ್ಲಿ ನಡೆದ ಟೂರ್ನಿಯಲ್ಲಿ ಸಿನ್ನರ್, ಕೆನಡಾ ಆಟಗಾರನನ್ನು ಸದೆಬಡಿದಿದ್ದರು. 25 ವರ್ಷ ವಯಸ್ಸಿನ ಆಲಿಯಾಸೀಮ್ ತೀವ್ರ ಹೋರಾಟದ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಅವರನ್ನು 4–6, 7–6 (9–7), 7–5, 7–6 (7–4) ರಿಂದ ಸೋಲಿಸಿ ಎರಡನೇ ಬಾರಿ ಅಮೆರಿಕ ಓಪನ್ ಸೆಮಿಫೈನಲ್ ತಲುಪಿದರು. 2021ರಲ್ಲಿ ಕೆನಡಾದ ಆಟಗಾರ ಮೊದಲ ಬಾರಿ ನಾಲ್ಕರ ಘಟ್ಟ ತಲುಪಿದ್ದರು. 26 ವರ್ಷದ ಆಸ್ಟ್ರೇಲಿಯಾದ ಆಟಗಾರ ಈಗ ಗ್ರ್ಯಾನ್‌ಸ್ಲಾಮ್ ಕ್ವಾರ್ಟರ್‌ಫೈನಲ್‌ಗಳಲ್ಲಿ ಆರೂ ಬಾರಿ ಸೋತಂತಾಗಿದೆ.

ಪಂದ್ಯ ಗೆದ್ದ ಸಂದರ್ಭದಲ್ಲಿ ಫೆಲಿಕ್ಸ್ ಓಜೆ ಆಲಿಯಾಸೀಮ್ ಹರ್ಷಚಿತ್ತರಾಗಿದ್ದು ಹೀಗೆ... ಎಎಫ್‌ಪಿ ಚಿತ್ರ

ಅನಿಸಿಮೋವಾ ಸೇಡು: ಎರಡು ತಿಂಗಳ ಹಿಂದೆ ವಿಂಬಲ್ಡನ್ ಫೈನಲ್‌ನಲ್ಲಿ ಶ್ವಾಂಟೆಕ್ ಕೈಲಿ ಅನಿಸಿಮೋವಾ ಅವರು 6–0, 6–0 ಸೋಲನುಭವಿಸಿದ್ದರು. ಆದರೆ ಅಮೆರಿಕದ ಆಟಗಾರ್ತಿ ತವರಿನಲ್ಲಿ 6–4, 6–3 ರಿಂದ ಎರಡನೇ ಶ್ರೇಯಾಂಕದ ಪೋಲೆಂಡ್ ಆಟಗಾರ್ತಿಯನ್ನು ಸೋಲಿಸಿ ಪ್ರತೀಕಾರ ತೀರಿಸಿಕೊಂಡರು.

'ಈ ಹಂತಕ್ಕೆ ತಲುಪಿರುವುದು ಕನಸಿನಂತಾಗಿದೆ. ವಿಂಬಲ್ಡನ್‌ನಲ್ಲಿ ಆ ರೀತಿ ಸೋತು ಚೇತರಿಸಿರುವುದು ನನ್ನ ಪಾಲಿಗೆ ವಿಶೇಷವೆನಿಸಿದೆ' ಎಂದು 24 ವರ್ಷ ವಯಸ್ಸಿನ ಅಮಂಡಾ ಹೇಳಿದರು.

ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡತಿ ಶ್ವಾಂಟೆಕ್ ಬುಕ್ಕೀಗಳ ಪಾಲಿಗೆ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿಯಾಗಿ-ದ್ದರು. ವಿಂಬಲ್ಡನ್ ನಂತರ ಸಿನ್ಸಿನಾಟಿಯ-ಲ್ಲೂ ಪೋಲೆಂಡ್ ತಾರೆ ಜಯ ಗಳಿಸಿದ್ದರು.

ಶ್ವಾಂಟೆಕ್ ಮೊದಲ ಸೆಟ್‌ನ ಮೊದಲ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಆದರೆ ಎದಿರೇಟು ನೀಡಲು ಅಮಂಡಾ ತಡಮಾಡಲಿಲ್ಲ. ಎರಡನೇ ಸೆಟ್‌ನಲ್ಲೂ ಆರಂಭದ ಹಿನ್ನಡೆಯಿಂದ ಚೇತರಿಸಿಕೊಂಡರು. ಡಬಲ್‌ಫಾಲ್ಟ್ ನೊಡನೆ ಶ್ವಾಂಟೆಕ್ ಪಂದ್ಯ ಸೋತರು.

ಅನಿಸಿಮೋವಾ ಅವರ ಮುಂದಿನ ಎದುರಾಳಿ ಜಪಾನ್‌ನ ನವೋಮಿ ಒಸಾಕಾ. ಅವರು ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ 11ನೇ ಶ್ರೇಯಾಂಕದ ಕರೋಲಿನಾ ಮುಚೋವಾ (ಝೆಕ್ ರಿಪಬ್ಲಿಕ್) ಅವರನ್ನು 6–4, 7–6 (7–3) ರಿಂದ ಸೋಲಿಸಿದರು. 2023ರಲ್ಲಿ ಹೆಣ್ಣುಮಗುವಿಗೆ ತಾಯಿಯಾದ ನಂತರ ಪ್ರಮುಖ ಟೂರ್ನಿಯೊಂದರಲ್ಲಿ ಒಸಾಕಾ ಮೊದಲ ಸಲ ನಾಲ್ಕರ ಘಟ್ಟ ತಲುಪಿದ್ದಾರೆ.

2018 ಮತ್ತು 2020ರಲ್ಲಿ ಚಾಂಪಿಯನ್ ಆಗಿದ್ದ ಜಪಾನ್ ತಾರೆ 30 ವಿನ್ನರ್‌ಗಳನ್ನು ಸಿಡಿಸಿದರು.

ಒಸಾಕಾ ಹಿಂದಿನ ಎರಡು ಮುಖಾಮುಖಿಗಳಲ್ಲಿ– 2022ರ ಆಸ್ಟ್ರೇಲಿಯನ್ ಓಪನ್ ಮತ್ತು ಫ್ರೆಂಚ್ ಓಪನ್– ಅಮಂಡಾಗೆ ಮಣಿದಿದ್ದರು.

ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟ ಯುಕಿ ಭಾಂಬ್ರಿ

ನ್ಯೂಯಾರ್ಕ್ (ಪಿಟಿಐ): ಭಾರತದ ಯುಕಿ ಭಾಂಬ್ರಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್‌ಗೆ ಮುನ್ನಡೆದರು. ಅಮೆರಿಕ ಓಪನ್ ಪುರುಷರ ಡಬಲ್ಸ್‌ನಲ್ಲಿ ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೊತೆಗೂಡಿದ ಅವರು ಬುಧವಾರ ರಾತ್ರಿ 11ನೇ ಶ್ರೇಯಾಂಕದ ಎದುರಾಳಿಗಳ ಮೇಲೆ ಜಯಗಳಿಸಿದರು.

ಕೋರ್ಟ್ ನಂಬರ್ 17ರಲ್ಲಿ ಭಾಂಬ್ರಿ–ಮೈಕೆಲ್ ಜೋಡಿ 6–3, 6–7 (8), 6–3 ರಿಂದ ಕ್ರೊವೇಷ್ಯಾದ ಮೆಟ್ಟಿಕ್–ಅಮೆರಿಕದ ರಾಜೀವ್ ರಾಮ್ ಜೋಡಿಯನ್ನು ಸೋಲಿಸಿತು. ಇದಕ್ಕೆ ಮೊದಲು ಇಂಡೊ–ನ್ಯೂಜಿಲೆಂಡ್ ಜೋಡಿ 16ರ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಕೆವಿನ್ ಕ್ರಾವಿಟ್ಜ್–ಟಿಮ್ ಪುಯೆಟ್ಜ್ ಜೋಡಿಯನ್ನು ಮಣಿಸಿತ್ತು.

ಸೆಮಿಫೈನಲ್‌ನಲ್ಲಿ ಭಾಂಬ್ರಿ– ಮೈಕೆಲ್ ಜೋಡಿ ಆರನೇ ಶ್ರೇಯಾಂಕದ ಜೋ ಸ್ಯಾಲಿಸ್ಬರಿ– ನೀಲ್ ಸ್ಕುಪ್‌ಸ್ಕಿ (ಬ್ರಿಟನ್) ಜೋಡಿಯನ್ನು ಎದುರಿಸಲಿದೆ.

33 ವರ್ಷದ ಭಾಂಬ್ರಿ ಅವರಿಗೆ ಈ ಯಶಸ್ಸು ವೃತ್ತಿಜೀವನದ ಮಹತ್ವದ ಮೈಲಿಗಲ್ಲು ಆಯಿತು. ಗಾಯದ ಸಮಸ್ಯೆ ಎದುರಿಸಿದ್ದ ಮತ್ತು ಸಿಂಗಲ್ಸ್‌ನಿಂದ ಡಬಲ್ಸ್ ಆಟಗಾರನಾಗಿ ಪರಿವರ್ತನೆಗೊಂಡ ನಂತರ ಈ ವರ್ಷ ಅವರು ಸುಧಾರಿತ ಪ್ರದರ್ಶನ ನೀಡಿದ್ದಾರೆ. ಭಾಂಬ್ರಿ ಮೊದಲ ಬಾರಿ ಸೀನಿಯರ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಅತ್ಯುತ್ತಮ ಫಲಿತಾಂಶ ಗಳಿಸಿದ್ದಾರೆ.

ತೆಲುಗು ಟೈಟನ್ಸ್‌ಗೆ ಮೊದಲ ಜಯ

ವಿಶಾಖಪಟ್ಟಣ: ತೆಲುಗು ಟೈಟನ್ಸ್, ಗುರುವಾರ 37–32 ಪಾಯಿಂಟ್‌ಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು 5 ಪಾಯಿಂಟ್‌ಗಳಿಂದ ಸೋಲಿಸಿ ಪ್ರೊ ಕಬಡ್ಡಿ ಲೀಗ್‌ನ 12ನೇ ಆವೃತ್ತಿಯಲ್ಲಿ ಮೊದಲ ಗೆಲುವನ್ನು ದಾಖಲಿಸಿತು.

ಟೈಟನ್ಸ್ ಮೊದಲ ಎರಡು ಪಂದ್ಯಗಳಲ್ಲಿ ಸೋತಿತ್ತು. ನಾಯಕ ವಿಜಯ್ ಮಲಿಕ್ ಮತ್ತು ರೇಡರ್ ಭರತ್ ಹೂಡಾ ತಲಾ ಎಂಟು ಅಂಕ ಕಲೆಹಾಕಿದರೆ, ಅಜಿತ್ ಪವಾರ್ ಹೈಫೈವ್ ಗಳಿಸಿದರು. ಇದರಿಂದ ಟೈಟನ್ಸ್ ತಂಡ ಗೆದ್ದು ಎರಡು ಅಂಕ ಸಂಪಾದಿಸಿತು. ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ನಿತಿನ್ ಕುಮಾರ ಧನಕರ್ ಅವರ 13 ಪಾಯಿಂಟ್‌ಗಳ ಅಮೋಘ ಆಟ ಫಲ ನೀಡಲಿಲ್ಲ.

ಟೈಟನ್ಸ್ ತಂಡ ಆರಂಭದ ಕೆಲ ನಿಮಿಷ ರಕ್ಷಣೆ ಆಟವಾಡಿತು. ಎದುರಾಳಿ ರೇಡರ್‌ಗಳಿಗೆ ಹೆಚ್ಚಿನ ಅವಕಾಶ ನೀಡದೇ 7–5 ಮುನ್ನಡೆ ಪಡೆಯಿತು. ಹೂಡಾ ಯಶಸ್ವಿ ರೇಡ್‌ಗಳನ್ನು ನಡೆಸಿ ತಂಡಕ್ಕೆ ಮೇಲುಗೈ ಒದಗಿಸಿಕೊಟ್ಟರು. ಪ್ಯಾಂಥರ್ಸ್ ಕ್ರಮೇಣ ಚೇತರಿಸಿಕೊಂಡಿತು. ರಾವಲ್ ಅವರ ಸೂಪರ್ ಟ್ಯಾಕಲ್‌ನಲ್ಲಿ ಹೂಡಾ ಅವರನ್ನು ಕ್ಯಾಚ್ ಮಾಡಿದರು. ಇಷ್ಟಾದರೂ ಟೈಟನ್ಸ್ ವಿರಾಮದ ವೇಳೆಗೆ 16–9 ಮುನ್ನಡೆ ಕಟ್ಟಿಕೊಂಡಿತು.

ಉತ್ತರಾರ್ಧದಲ್ಲಿ ಪ್ಯಾಂಥರ್ಸ್ ಪ್ರತಿಹೋರಾಟಕ್ಕೆ ಯತ್ನಿಸಿತು. ನಿತಿನ್ ಧನಕರ್ ಅವರ ರೇಡ್‌ಗಳಿಂದಾಗಿ ಎರಡು ಬಾರಿಯ ಚಾಂಪಿಯನ್ ತಂಡ ಟೈಟನ್ಸ್‌ಗೆ ಆತಂಕ ಮೂಡಿಸಿತು. ಅಂತಿಮ ಕ್ವಾರ್ಟರ್‌ನಲ್ಲಿ ನಿತಿನ್ ಸೂಪರ್ ರೇಡ್ ನಡೆಸಿದರು. ಇದರಿಂದ ಟೈಟನ್ಸ್ ಮುನ್ನಡೆ ಒಂದು ಪಾಯಿಂಟ್‌ಗೆ ಇಳಿದಿತ್ತು. ಆದರೆ ಏಕಾಂಗಿಯಾಗಿ ಉಳಿದ ಹೂಡಾ ಸೂಪರ್ ರೇಡ್ ಮೂಲಕ ತಿರುಗೇಟು ನೀಡಿದರು. ಬೋನಸ್ ಪಾಯಿಂಟ್ ಸಹ ಪಡೆದರು. ಕೊನೆಯ ಹಂತದಲ್ಲಿ ವಿಜಯ್ ಅವರ ಸೂಪರ್ ರೇಡ್, ಟೈಟನ್ಸ್‌ಗೆ ಮೊದಲ ಗೆಲುವು ಖಾತರಿಪಡಿಸಿತು.

ತೆಲುಗು ಟೈಟನ್ಸ್ ತಂಡದ ರೇಡರ್ ಭರತ್ ಹೂಡಾ

ಇಂದಿನ ಪಂದ್ಯಗಳು: ಯು ಮುಂಬಾ–ಬೆಂಗಳೂರು ಬುಲ್ಸ್ (ರಾತ್ರಿ 8)
ಹರಿಯಾಣ ಸ್ಟೀಲರ್ಸ್–ಯು.ಪಿ. ಯೋಧಾಸ್ (ರಾತ್ರಿ 9)

ಟೈಬ್ರೇಕರ್‌ನಲ್ಲಿ ದಬಾಂಗ್‌ಗೆ ಜಯ: ಪುಣೇರಿಗೆ ಮೊದಲ ಸೋಲು

ರೋಚಕವಾಗಿದ್ದ ದಿನದ ಎರಡನೇ ಪಂದ್ಯದಲ್ಲಿ ಡೆಲ್ಲಿ ದಬಾಂಗ್ ತಂಡವು ಟೈಬ್ರೇಕರ್‌ನಲ್ಲಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿ ಸತತ ಎರಡನೇ ಗೆಲುವು ದಾಖಲಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳ ಸ್ಕೋರ್ 28–28ರಿಂದ ಸಮಬಲಗೊಂಡಿತ್ತು. ನಂತರ ನಡೆದ 'ಗೋಲ್ಡನ್ ರೇಡ್' ಟೈಬ್ರೇಕರ್‌ನಲ್ಲಿ 2–0 ಯಿಂದ ದಬಾಂಗ್ ಮೇಲುಗೈ ಸಾಧಿಸಿತು. ಈ ಆವೃತ್ತಿಯಲ್ಲಿ ಇದು ನಾಲ್ಕನೇ ಟೈಬ್ರೇಕರ್ ಆಗಿದೆ.

ಮೊದಲಾರ್ಧದಲ್ಲಿ 18–13ರಿಂದ ಮುನ್ನಡೆ ಸಾಧಿಸಿದ್ದ ದಬಾಂಗ್ ತಂಡಕ್ಕೆ ಉತ್ತರಾರ್ಧದಲ್ಲಿ ಪುಣೇರಿ ಪ್ರಬಲ ಪೈಪೋಟಿ ನೀಡಿ ಸಮಬಲ ಸಾಧಿಸಿತು. ಈ ಬಾರಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದ ಪುಣೇರಿ ತಂಡಕ್ಕೆ ಇದು ಮೊದಲ ಸೋಲಾಗಿದೆ. ದಬಾಂಗ್ ಪರ ಅಶು ಮಲಿಕ್ (10) ಸೂಪರ್ ಟೆನ್ ಸಾಧನೆ ಮಾಡಿದರು. ಅವರಿಗೆ ಟ್ಯಾಕಲ್‌ನಲ್ಲಿ ಫಜಲ್ ಅತ್ರಾಚಲಿ (5) ಸಾಥ್ ನೀಡಿದರು. ಪುಣೇರಿ ಪರ ಆದಿತ್ಯ ಶಿಂದೆ 7, ಅಸ್ಲಾಂ ಇನಾಮದಾರ್ 6 ಅಂಕ ಕಲೆ ಹಾಕಿದರು.

ಇ.ಡಿ ಎದುರು ಹಾಜರಾದ ಧವನ್

ನವದೆಹಲಿ (ಪಿಟಿಐ): ಅಕ್ರಮ ಬೆಟ್ಟಿಂಗ್ ಆ್ಯಪ್ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಶಿಖರ್ ಧವನ್ ಗುರುವಾರ ಜಾರಿ ನಿರ್ದೇಶನಾಲಯದ ಎದುರು ವಿಚಾರಣೆಗೆ ಹಾಜರಾದರು.

ನವದೆಹಲಿಯಲ್ಲಿರುವ ಇ.ಡಿ ಕಚೇರಿಗೆ ಬೆಳಿಗ್ಗೆ 11 ಗಂಟೆಗೆ ಭೇಟಿ ನೀಡಿದ ಅವರಿಂದ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆಗಳನ್ನು ದಾಖಲಿಸಿಕೊಂಡರು.

'1ಎಕ್ಸ್‌ಬೆಟ್' ಹೆಸರಿನ ಅಕ್ರಮ ಬೆಟ್ಟಿಂಗ್ ಆ್ಯಪ್ ಮತ್ತು ಈ ಆ್ಯಪ್ ಮೂಲಕ ನಡೆದಿರುವ ಹಣ ಅಕ್ರಮ ವರ್ಗಾವಣೆ ಕುರಿತು ಇ.ಡಿ ತನಿಖೆ ನಡೆಯುತ್ತಿದೆ. ಇದರಲ್ಲಿ ಶಿಖರ್ ಧವನ್ ಪಾತ್ರದ ಕುರಿತು ಇ.ಡಿ ವಿಚಾರಣೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.